ಗೈಡ್ ಶಿಕ್ಷಕಿಯರ ಮೂಲ ತರಬೇತಿ ಕೈಪಿಡಿ

Hand Book of Basic Course for Guide Captain

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

'ಶಾಂತಿ ಗೃಹ', ನಂ. 39, ಅರಮನೆ ರಸ್ತೆ, ಬೆಂಗಳೂರು 01

TRIOS of SCOUTING & GUIDING

First President
Agnes Baden Powell

Oompher of Scout & Guides
Olave Lady Baden Powell

Founder
Lord Baden Powell

Plan your Work, Work on your Plan

Always First, Next to None

Kick of 'IM' from Impossible, Everything is Possible

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಗೈಡ್ ಶಿಕ್ಷಕಿಯರ ಮೂಲ ತರಬೇತಿ ಕೈಪಿಡಿ

(ಪರಿಷ್ಕೃತ ಆವೃತ್ತಿ)

ಮೂಲ : ದಿ॥ ಎಸ್.ಕೆ. ಪ್ರಭಾ

ಬಿ.ಎಸ್ಸಿ., ಎಂ.ಎ., ಎಂಇಡ್., ಎಲ್.ಟಿ(ಜಿ)

ಪ್ರಕಾಶಕರು

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಗೈಡ್ ಕೇಂದ್ರ ಕಛೇರಿ

ನಂ.39, ಶಾಂತಿ ಗೃಹ, ಅರಮನೆ ರಸ್ತೆ, ಬೆಂಗಳೂರು–560 001

ಗೈಡ್ ಶಿಕ್ಷಕಿಯರ ಮೂಲ ತರಬೇತಿ ಕೈಪಿಡಿ –
Hand Book of Basic Course for Guide Captain -

ಸಂಪಾದಕರು	:	ಎಸ್.ಕೆ. ಪ್ರಭಾ, ಬಿ.ಎಸ್ಸಿ., ಎಂ.ಎ., ಎಂಇಡ್., ಎಲ್.ಟಿ(ಜಿ)
ಪ್ರಕಾಶಕರು	:	ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಗೈಡ್ ಕೇಂದ್ರ ಕಛೇರಿ ನಂ.39, ಶಾಂತಿ ಗೃಹ, ಅರಮನೆ ರಸ್ತೆ, ಬೆಂಗಳೂರು–560 001
ಮೊದಲನೇ ಮುದ್ರಣ	:	2013
ಎರಡನೇ ಮುದ್ರಣ	:	2023
ಬಳಸಿದ ಕಾಗದ	:	70 ಜಿ.ಎಸ್.ಎಂ. ಮ್ಯಾಪ್‌ಲಿಥೋ
ಪುಟಗಳು	:	172
ಪ್ರತಿಗಳು	:	1,000
ಬೆಲೆ	:	ರೂ.100/–
ಅಕ್ಷರ ಜೋಡಣೆ	:	ಪದ್ಮಶಾಲಿ ಕೆ.ವಿ. ರಾಘವೇಂದ್ರಕುಮಾರ್
ಮುಖ್ಯಪುಟ ವಿನ್ಯಾಸ	:	ಸುನೀಲ್ ಕುಮಾರ್
ಮುದ್ರಕರು	:	ಸತ್ಯಶ್ರೀ ಪ್ರಿಂಟಿಂಗ್ ಪ್ರೆಸ್ (ಪ್ರೈ) ಲಿ., ನಂ.16/1, 3ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು–560 026. ದೂ.: 080–24748811

ಆಶಯ ನುಡಿ

"ಪರಿಣಾಮಕಾರಿ ತರಬೇತಿ ಇದ್ದರೆ, ಪದವಿ ಶಿಕ್ಷಣದ ಕೊರತೆಯಿದ್ದರೂ ನಡೆಯುತ್ತದೆ" ಎಂಬ ಅನುಭವದ ಮಾತೊಂದಿದೆ. ಆದ್ದರಿಂದ ಸಾಮಾನ್ಯ ಶಿಕ್ಷಣಕ್ಕಿಂತ ತರಬೇತಿಗೆ ಮಹತ್ವದ ಸ್ಥಾನವಿದೆ. ಶಿಕ್ಷಣ ಜ್ಞಾನವೆನಿಸಿದರೆ, ತರಬೇತಿ ಪ್ರಜ್ಞಾನ ಎಂದರೆ ವಿಶೇಷ ಜ್ಞಾನ. ಸೈಧ್ಯಾಂತಿಕವೆನಿಸಿದರೆ, ತರಬೇತಿ ಪ್ರಾತ್ಯಾಕ್ಷಿಕ, ಯಾವುದೇ ಕಾರ್ಯ ನಿರ್ವಹಣೆಗೆ ಸೂಕ್ತ ಚಾತುರ್ಯತೆ ಅಗತ್ಯವಾಗುತ್ತದೆ. ಆ ಚಾತುರ್ಯವನ್ನು ಮೈಗೂಡಿಸುವ ಮಾಧ್ಯಮವೆಂದರೆ ತರಬೇತಿ.

ಅಂತಹ ತರಬೇತಿಗೆ ಸಂಬಂಧಿಸಿದ ಕೃತಿ ಈ ಕೈಪಿಡಿ. ಇದು ಸ್ಕೌಟ್-ಗೈಡ್ ಚಳವಳಿಯ ಗೈಡ್ ಶಿಕ್ಷಕಿಯರ ಮೂಲ ತರಬೇತಿಯ ಮಾರ್ಗದರ್ಶಕ ಸಾಹಿತ್ಯ. ಈ ಕೈಪಿಡಿಯ ಮೂಲ ಕರ್ತೃ ದಿ. ಎಸ್.ಕೆ. ಪ್ರಭಾ ಅವರು ಶಿಕ್ಷಣ ಇಲಾಖೆಯ ಸೇವೆಯ ಜೊತೆಗೆ, ಗೈಡ್ ಚಳವಳಿಯಲ್ಲಿ ಸುದೀರ್ಘ ಕ್ಷೇತ್ರಾನುಭವ ಪಡೆದಿದ್ದವರು. ಅವರೀಗ ಭೌತಿಕವಾಗಿ ನಮ್ಮನ್ನು ಅಗಲಿದ್ದರೂ, ಈ ಕೈಪಿಡಿಯ ರೂಪದಲ್ಲಿ ನಮ್ಮೊಡನೆಯೇ ಇದ್ದಾರೆನ್ನಬಹುದು.

ಯಾವುದೇ ತರಬೇತಿ ಸಂಬಂಧದ ಕೃತಿಗಳು, ಅನುಭವದ ಆಧಾರದ ಮೇಲೆ ಕಾಲ ಕಾಲಕ್ಕೆ ಪರಿಷ್ಕಾರಗೊಳ್ಳಬೇಕಾಗುತ್ತದೆ. ಅಂತೇ ನಮ್ಮ ಕರ್ನಾಟಕ ಸಂಸ್ಥೆಯು ಪ್ರಕಟಿಸಿರುವ ಪ್ರಸ್ತುತ ಆವೃತ್ತಿಯ ಪರಿಷ್ಕರಣ ಕಾರ್ಯದಲ್ಲಿ ಕ್ಷೇತ್ರಾನುಭವಿಗಳಾದ ಬಿ.ಡಿ. ಶಾಂತಾ, ದಿ. ಛಾಯಾ, ಬಿ.ವಿ. ರಾಮಲತಾ, ಕಮಲಾಕ್ಷೀ ಹೆಗ್ಗಡೆ, ಕೆ.ವಿ. ಶಾಮಲಾ ಮತ್ತು ಸಿ. ಮಂಜುಳಾ ಈ ಸೋದರಿಯರು ಶ್ರದ್ಧಾಸಕ್ತಿಯ ಸೇವೆ ಸಲ್ಲಿಸಿದ್ದಾರೆ. ಈ ಪರಿಸ್ಕೃತ ಆವೃತ್ತಿಗೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಮಾರ್ಗದರ್ಶಕ ಮುನ್ನುಡಿ ನೀಡಿದ್ದಾರೆ.

ಈ ಸಚಿತ್ರ ಕೈಪಿಡಿಯಲ್ಲಿ 5 ಭಾಗಗಳಿವೆ. ಮೊದಲ ಭಾಗದಲ್ಲಿ ತರಬೇತಿಯ ಅಗತ್ಯ ಪೂರ್ವ ಸಿದ್ಧತೆಗಳ ಬಗೆಗೆ ತಿಳಿಸಿದ್ದರೆ, ಎರಡನೆಯ ಭಾಗದಲ್ಲಿ ಗೈಡ್ ಚಳವಳಿಯ ಮೂಲ ಸಿದ್ಧಾಂತ, ಪ್ರವಚನ ವೇಳಾಪಟ್ಟಿ, ವಿವಿಧ ಪದ್ಧತಿಗಳು, ದಳ ಯೋಜನೆ ಇತ್ಯಾದಿಗಳ ವಿವರಣೆ ಇದೆ. ಮೂರನೆಯ ಭಾಗದಲ್ಲಿ ಜ್ಞಾನ, ಕೌಶಲ, ಪ್ರಾತ್ಯಾಕ್ಷಿಕೆಗಳು, ಶಿಬಿರವಾಸ, ಹೊರಸಂಚಾರಗಳನ್ನು ಪರಿಚಯಿಸಲಾಗಿದೆ. ನಾಲ್ಕನೆಯ ಭಾಗದಲ್ಲಿ ಆಟಗಳು, ಸಮಾರಂಭಗಳು, ಪ್ರಾರ್ಥನಾ ಸಭೆಗಳ ವ್ಯವಸ್ಥೆಯ ಮಾರ್ಗದರ್ಶನವಿದೆ. ಐದನೆಯ ಭಾಗದಲ್ಲಿ ಗೈಡ್ ಗೀತೆಗಳು, ಪ್ರಾರ್ಥನಾ ಗೀತೆಗಳು ಮತ್ತು ಮರಿಗಳ ಗೀತೆಗಳಿವೆ. ಹಾಗೆಯೇ ಕೃತಿಯ ಕೊನೆಯಲ್ಲಿ ಮೂಲ ತರಬೇತಿ, ಚಿತ್ರಾವಳಿ ಮತ್ತು ಪ್ರಾತ್ಯಕ್ಷಿಕೆ ರಸಪ್ರಶ್ನೆ ಮಾದರಿಗಳನ್ನು ಕೊಡಲಾಗಿದೆ.

ಗೈಡ್ ಶಿಕ್ಷಕಿಯರನ್ನು ತರಬೇತುಗೊಳಿಸಲು ಉಪಯುಕ್ತ ಮಾರ್ಗದರ್ಶನ ನೀಡುವ ಈ ಕೈಪಿಡಿಯನ್ನು ರೂಪಿಸಿದ ಎಲ್ಲ ಸೋದರಿಯರನ್ನು ಅಭಿನಂದಿಸುತ್ತೇನೆ. ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಚಳವಳಿಗೆ ಸಂಬಂಧಿಸಿದ ತರಬೇತಿಗೆ ಆದ್ಯ ಗಮನ ಕೊಟ್ಟು ಅದಕ್ಕೆ ಬೇಕಾದ ಸಾಹಿತ್ಯ ಕೃತಿಗಳನ್ನು ಪ್ರಕಟಿಸುತ್ತಿರುವುದು ಅತ್ಯಂತ ಉಚಿತವಾಗಿದೆ. ಚಳವಳಿಯ ಎಲ್ಲ ಬಂಧುಗಳೂ ಈ ಪ್ರಕಟನೆಗಳ ಪ್ರಯೋಜನ ಪಡೆದುಕೊಳ್ಳುವಂತಾಗಲಿ ಎಂದು ಆಶಿಸುತ್ತೇನೆ.

(ಗೊ.ರು. ಚೆನ್ನಬಸಪ್ಪ)
ಪ್ರಕಟಣಾ ಸಮಿತಿ

ಮುನ್ನುಡಿ

ಪ್ರಪಂಚದಾದ್ಯಂತ ವ್ಯಾಪಿಸಿರುವ ಏಕೈಕ ಚಳುವಳಿ ಎಂದರೆ ಅದು ಸ್ಕೌಟ್ಸ್ - ಗೈಡ್ಸ್ ಚಳುವಳಿ. ಇದು ಅತ್ಯಂತ ಬಲಿಷ್ಠ ಏಕ ಸಮವಸ್ತ್ರದ ಯುವ ಸಂಘಟನೆಯಾಗಿ ಹೊರಹೊಮ್ಮಿದೆ. ಈ ಚಳುವಳಿಯ ಧ್ಯೇಯ-ನೀತಿ-ನಿಯಮಗಳು, ತತ್ವಗಳು ಇಂದಿಗೂ ಪ್ರಸ್ತುತ ಮತ್ತು ಅನಿವಾರ್ಯ ಎನಿಸಿವೆ.

ಒಬ್ಬ ವ್ಯಕ್ತಿ ಅಥವಾ ಪ್ರಾಣಿಗೆ ನಿರ್ದಿಷ್ಟ ಕೌಶಲ್ಯ ಅಥವಾ ನಡವಳಿಕೆಯನ್ನು ಕಲಿಸುವ ಕ್ರಿಯೆಯೇ ತರಬೇತಿ. ಯಾವುದೇ ಉದ್ಯೋಗ, ವೃತ್ತಿ ಅಥವಾ ಶಿಕ್ಷಣದಲ್ಲಿ ಲಭಿಸುವ ಮೂಲಭೂತ ತರಬೇತಿಗಳು ಆರಂಭಿಕ ಸಾಮರ್ಥ್ಯವನ್ನು, ಸ್ವಯಂ ಪ್ರೇರಣೆಯನ್ನು ನೀಡುತ್ತವೆ. ಅದರಂತೆ **"ತರಬೇತಿ"** ನಮ್ಮ ಚಳುವಳಿಯ ತಿರುಳು.

ನಮ್ಮ ರಾಜ್ಯ ಜಂಟಿ ಕಾರ್ಯದರ್ಶಿಯಾಗಿ ಹಲವು ದಶಕಗಳ ಕಾಲ ಚಳವಳಿಗೆ ಮೌಲಿಕ ಸೇವೆ ಸಲ್ಲಿಸಿರುವ ದಿವಂಗತ ಶ್ರೀಮತಿ ಎಸ್.ಕೆ. ಪ್ರಭರವರು ಅವರ ಅನುಭವ ಹಾಗೂ ಪರಿಣಿತಿಗಳನ್ನು ಬಳಸಿಕೊಂಡು, **"ಗೈಡ್ ಶಿಕ್ಷಕಿಯರಿಗಾಗಿ ಮೂಲ ತರಬೇತಿ ಕೈಪಿಡಿ"**ಯೊಂದನ್ನು ಸಿದ್ಧಪಡಿಸಿದ್ದರು. ಗೈಡ್ ಚಳುವಳಿಯಲ್ಲಿ ವಿವಿಧ ರೀತಿಯ ತರಬೇತಿಗಳನ್ನು ಪಡೆದು, ದಳಗಳನ್ನು ಮುನ್ನಡೆಸುವ ಗೈಡ್ಸ್ ದಳಗಳ ಮುಖ್ಯಸ್ಥರಿಗೆ ಅವಶ್ಯಕವಾಗಿ ಬೇಕಾದ ಎಲ್ಲ ವಿವರಗಳನ್ನು ಈ ಕೈಪಿಡಿ ಒಳಗೊಂಡಿದೆ. 2013ರಲ್ಲಿ ಮೊದಲ ಮುದ್ರಣಗೊಂಡ, ಈ ಕೈಪಿಡಿ ಗೈಡ್ಸ್ ದಳಗಳ ಮುಖ್ಯಸ್ಥರಿಗೆ ಆಧಾರವಾಗಿದೆ. ಇದರ ಸದುಪಯೋಗವನ್ನು ನಮ್ಮ ಗೈಡ್ ದಳನಾಯಕಿಯರು ಬಳಸಿಕೊಂಡಿದ್ದಾರೆ.

10 ವರ್ಷಗಳ ನಂತರ ಈ ಕೈಪಿಡಿ ಮರು ಮುದ್ರಣಗೊಳ್ಳುತ್ತಿರುವುದು ಸಂತೋಷದ ವಿಚಾರ. ಬದಲಾಗುತ್ತಿರುವ ಕಾಲಘಟ್ಟಕ್ಕೆ ತಕ್ಕಂತೆ ನಮ್ಮ ತರಬೇತಿಗಳ ಮೂಲ ಅಸ್ತಿತ್ವವನ್ನು ಉಳಿಸಿಕೊಂಡು, ಗುಣಮಟ್ಟದ ತರಬೇತಿಗೆ ಬೇಕಾದ ಕೆಲವು ಸಕಾರಾತ್ಮಕವಾದ ತಿದ್ದುಪಡಿಗಳು ಮತ್ತು ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಇದು ಮುದ್ರಣಗೊಂಡಿದೆ. ಎಸ್.ಕೆ. ಪ್ರಭರವರ ಸಮಕಾಲೀನರಾಗಿದ್ದು, ಈಗಲೂ ನಮ್ಮ ನಡುವೆ ಕ್ರಿಯಾಶೀಲರಾಗಿರುವ ಶ್ರೀಮತಿ ಬಿ.ವಿ. ರಾಮಲತಾ ಮತ್ತು ಶ್ರೀಮತಿ ಬಿ.ಡಿ. ಶಾಂತಾರವರು ಈ ಕೈಪಿಡಿಯ ಮರುಮುದ್ರಣಕ್ಕೆ ಸಲಹೆ-ಸಹಕಾರವನ್ನು ಕೊಟ್ಟಿದ್ದಾರೆ. ಹಲವು ಹಿರಿಯ ನಾಯಕರು ಮಾರ್ಗದರ್ಶನ ಮಾಡಿದ್ದಾರೆ. ರಾಜ್ಯ ತರಬೇತಿ ಆಯುಕ್ತರು (ಗೈಡ್)ರವರು ಈ ಕಾರ್ಯಕ್ಕೆ ಕೈಜೋಡಿಸಿದ್ದಾರೆ. ಎಲ್ಲರಿಗೂ ಧನ್ಯವಾದಗಳು. ಸರಳತೆ, ಸ್ಪಷ್ಟತೆ ಮತ್ತು ಆಕರ್ಷಣೀಯವಾಗಿ ಮೂಡಿ ಬಂದಿರುವ ಈ ಕೈಪಿಡಿ ನಮ್ಮ ಗೈಡ್ ದಳ ನಾಯಕಿಯರಿಗೆ ಮತ್ತಷ್ಟು ಅನುಕೂಲವಾಗಲಿದೆ. ಈ ಮೂಲಕ ಚಳುವಳಿಯು ಬಲವರ್ಧನೆಗೊಳ್ಳುತ್ತದೆಂದು ಆಶಿಸುತ್ತೇನೆ.

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಗೈಡ್ ದಳ ನಾಯಕಿಯರ ಮೂಲ ತರಬೇತಿ ಕೈಪಿಡಿ
(Hand Book for Guide Captain Basic Course)

ಪ್ರಸ್ತಾವನೆ – (Introduction)

ತರಬೇತಿ ಅಥವಾ ಪ್ರಶಿಕ್ಷಣ ಯಾವುದೇ ಒಂದು ಚಳವಳಿಯ ತಿರುಳಾಗಿರುತ್ತದೆ. ಸಂಸ್ಥೆಯ ಆಶೋತ್ತರಗಳನ್ನು, ಕಾರ್ಯಕ್ರಮಗಳನ್ನು ಸದಸ್ಯರಲ್ಲಿ ಅಚ್ಚೊತ್ತುತ್ತದೆ. ಆದ್ದರಿಂದ ತರಬೇತಿ ಸಂಸ್ಥೆಯ ಮುಖ್ಯ ಅಂಗವಾಗುತ್ತದೆ. ತರಬೇತಿಯು ಜ್ಞಾನ ಕೌಶಲ ಪ್ರತ್ಯಕ್ಷ ಶಿಕ್ಷಣವನ್ನು ನೀಡುವುದಲ್ಲದೆ ಪ್ರಶಿಕ್ಷಣಾರ್ಥಿಗಳ ಮನೋಭಾವವನ್ನು ಮಾರ್ಪಡಿಸಿ ಚಳವಳಿಯಲ್ಲಿ ಒಲವು ಮೂಡಿಸಿ ಚಳವಳಿಗೆ ಬದ್ಧರನ್ನಾಗಿ ಮಾಡುವುದು. ಅದರಲ್ಲೂ 'ಮೂಲ ತರಬೇತಿ' ಈ ಪ್ರಕ್ರಿಯೆಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ.

ತರಬೇತಿ ಎಂದರೆ ಶಿಸ್ತಿನಿಂದ ಕೂಡಿದ ಪ್ರತ್ಯಕ್ಷ (Practical) ಶಿಕ್ಷಣ, ತರಬೇತಿಯಲ್ಲಿ ಪ್ರತಿಯೊಬ್ಬರೂ ಕಲಿತು ಪ್ರಭುತ್ವ ಮಟ್ಟವನ್ನು ತಲುಪುವಂತೆ ಮಾಡಬೇಕು. ಅಂದ ಮೇಲೆ ಪ್ರಶಿಕ್ಷಕರು ಪ್ರಭುತ್ವ ಮಟ್ಟವನ್ನು ಹೊಂದುವ ಗುರುತರ ಜವಾಬ್ದಾರಿಯನ್ನು ಹೊಂದಿರಬೇಕು.

ತರಬೇತಿ ಶಬ್ದವು ಸೈನ್ಯ ಮೂಲದಿಂದ ಚಳವಳಿಗೆ ಬಂದಿದೆ. ಚಳವಳಿಯ ಸಂಸ್ಥಾಪಕರಾದ ಸೈನಿಕ ಬೇಡನ್ ಪೊವೆಲ್ ಸ್ಕೌಟ್–ಗೈಡ್ ಶಾಂತಿ ಸೈನ್ಯ ಕಟ್ಟಲು ತರಬೇತಿಯನ್ನು ಹುಟ್ಟು ಹಾಕಿದರು. ತರಬೇತಿಗಳನ್ನು ಸಂಸ್ಥಾಪಕರು ರೂಪಿಸಿದ ಮೂಲ ಸಿದ್ಧಾಂತದ ಆಧಾರದ ಮೇಲೆ ಅದರ ಚೌಕಟ್ಟಿನಲ್ಲಿ ನೀಡಲಾಗುವುದು.

ತರಬೇತಿಯಲ್ಲಿ ವಿವಿಧ ಹಂತಗಳಿವೆ. ಮೂಲ ತರಬೇತಿ, ವಯಸ್ಕ ಮಹಿಳೆಯರು ಚಳವಳಿಯನ್ನು ಪ್ರವೇಶಿಸುವ ಮೊದಲ ಹಂತವಾಗಿದೆ. ಈ ತರಬೇತಿಯನ್ನು ನೀಡುವವರು ಗೈಡ್ ವಿಭಾಗದ ತರಬೇತಿ ನಾಯಕಿಯರು ಎಲ್.ಟಿ.(ಜಿ) ಹಾಗೂ ಸಹ ತರಬೇತಿ ನಾಯಕಿಯರು ಎ.ಎಲ್.ಟಿ.(ಜಿ). ಈ ತರಬೇತಿಯನ್ನು ಸಾಮಾನ್ಯವಾಗಿ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ನೀಡಲಾಗುತ್ತದೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಏಕರೀತಿಯ ಸೌಲಭ್ಯಗಳು ಇರುವುದಿಲ್ಲ. ಆದುದರಿಂದ ತರಬೇತಿಯ ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಲುವಾಗಿ ಅನುಭವಿ ತರಬೇತಿ ನಾಯಕಿಯರು ಮತ್ತು ಗೈಡ್ ಶಿಕ್ಷಕಿಯರು ಸೇರಿ (Guide Captain) ಗೈಡ್ ದಳ ನಾಯಕಿಯರ ಮೂಲ ತರಬೇತಿ ಕೈಪಿಡಿಯನ್ನು ರಚಿಸಿದ್ದೇವೆ.

ಕೈಪಿಡಿಯ ಉದ್ದೇಶ :

- ರಾಜ್ಯಾದ್ಯಂತ ಪ್ರಶಿಕ್ಷಣದಲ್ಲಿ ಏಕರೂಪತೆ.
- ತರಬೇತಿ ಗುಣಮಟ್ಟದ ಸುಧಾರಣೆ.
- ಸರಳ ಹಾಗೂ ಪ್ರಭಾವಪೂರ್ಣ ತರಬೇತಿ.
- ಸಮಕಾಲೀನ ತಂತ್ರಗಳ ಬಳಕೆ.
- ತರಬೇತಿಯಲ್ಲಿ ವೈವಿಧ್ಯತೆ.
- ವೈವಿಧ್ಯತೆಯಲ್ಲಿ ಏಕತೆ.

ಕೈಪಿಡಿಯು ಗೈಡ್ ವಿಭಾಗದ ಗೈಡ್ ಶಿಕ್ಷಕಿಯರ ಮೂಲ ತರಬೇತಿಯ ಸಮಗ್ರ ವಸ್ತುವಾಗಿದೆ. ಈ ಕೈಪಿಡಿಯಲ್ಲಿ ಹಿರಿಯ ತರಬೇತಿ ನಾಯಕಿಯರ ಅನುಭವಗಳು ಹಾಗೂ ನನ್ನ ಅನುಭವಗಳ ಪ್ರಯೋಗಗಳು ಅಡಕವಾಗಿವೆ. ಈ

ಕೈಪಿಡಿಯನ್ನು ತರಬೇತಿದಾರರು ಹಾಗೂ ಹಿರಿಯ ದಳನಾಯಕಿಯರ ಕಾರ್ಯಾಗಾರದಲ್ಲಿ ಪರಿಶೀಲಿಸಿದ ಮೇಲೆ ಇದಕ್ಕೆ ಅಂತಿಮ ರೂಪವನ್ನು ನೀಡಲಾಗಿದೆ. ಹಾಗೆಂದ ಮಾತ್ರಕ್ಕೆ ಇದು ಪರಿಪೂರ್ಣವೆಂದಲ್ಲ, ಅಂತಿಮವೆಂದಲ್ಲ. ಪ್ರತಿಯೊಬ್ಬರ ಸ್ವಂತಿಕೆ, ಸೃಜನಶೀಲತೆ, ಪ್ರಯೋಗಶೀಲತೆಗೆ ಸಾಕಷ್ಟು ಅವಕಾಶವಿದೆ.

ಕೈಪಿಡಿಯಲ್ಲಿ ಹಲವು ಚಟುವಟಿಕೆಗಳನ್ನು ಕೊಟ್ಟಿವೆ. ಇವೆಲ್ಲವನ್ನು ಒಮ್ಮೆಗೆ ಮಾಡಿಸಬೇಕೆಂದಲ್ಲ, ಸಮಯ ಸಂದರ್ಭಕ್ಕೆ ತಕ್ಕಂತೆ ಒಂದೆರಡು ಚಟುವಟಿಕೆಯನ್ನು ಮಾಡಿಸಬಹುದು. ಇದರಿಂದ ತರಬೇತಿ ಪುನರ್ಬಲಗೊಳ್ಳುತ್ತದೆ.

ಕೈಪಿಡಿ ತರಬೇತಿ ನಾಯಕಿಯರಿಗೆ ಸೀಮಿತವಾಗಿರದೆ ಗೈಡ್‌ಗಳಿಗೆ ತರಬೇತಿ ನೀಡುವಾಗ ದಳನಾಯಕಿಯರು ಇದನ್ನು ಆಧಾರ ಪುಸ್ತಕವಾಗಿ ಬಳಸಬಹುದು. ಸ್ಕೌಟ್-ಗೈಡ್‌ಗಳ ಅನೇಕ ಕಾರ್ಯಕ್ರಮಗಳು ಒಂದೇ ಆಗಿರುವುದರಿಂದ ಸ್ಕೌಟ್ ತರಬೇತುದಾರರು, ದಳನಾಯಕರು ಈ ಕೈಪಿಡಿ ಬಳಸಬಹುದು. ಈ ಪುಸ್ತಕ ಪ್ರಯೋಗಿಸಿ ಸಲಹೆ, ಸೂಚನೆ ನೀಡಿ, ಇದರಲ್ಲಿ ಕೊಟ್ಟಿರುವುದನ್ನು ಹೊರತುಪಡಿಸಿದ ಪ್ರಯೋಗಗಳು, ವಸ್ತುಗಳು ಇದ್ದರೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಅಥವಾ ಇ-ಮೇಲ್ ಮೂಲಕ ತಿಳಿಸಿ. ಪುಸ್ತಕವನ್ನು ಪುನರ್ ಮುದ್ರಿಸುವಾಗ ಅಳವಡಿಸಲಾಗುವುದು.

ಈ ಪುಸ್ತಕ ಪರಿಷ್ಕರಣೆ ಎರಡನೇ ಬಾರಿಗೆ ಪ್ರಕಟಿಸುತ್ತಿರುವ ಉದ್ದಕ್ಕೂ ಸಹಕರಿಸಿದ ಶ್ರೀಮತಿ ಬಿ.ಡಿ. ಶಾಂತ ಎಲ್.ಟಿ.(ಜಿ) ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಈ ಪುಸ್ತಕವನ್ನು ರಾಜ್ಯ ಗೈಡ್ ಸಂಸ್ಥೆಗೆ, ಪ್ರಕಟಣೆಗೆ ಪ್ರೋತ್ಸಾಹ ನೀಡಿದ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಗೈಡ್ ಆಯುಕ್ತೆ ಶ್ರೀಮತಿ ಗೀತಾ ನಟರಾಜ್, ಪ್ರಕಟಣಾ ಸಮಿತಿಯ ಅಧ್ಯಕ್ಷರು ಶ್ರೀ ಗೊ.ರು. ಚನ್ನಬಸಪ್ಪ, ರಾಜ್ಯ ತರಬೇತಿ ಆಯುಕ್ತೆ ಶ್ರೀಮತಿ ಕೆ.ವಿ. ಶ್ಯಾಮಲ, ರಾಜ್ಯ ಸಂಘಟನಾ ಆಯುಕ್ತೆ ಶ್ರೀಮತಿ ಸಿ. ಮಂಜುಳಾ, ರಾಜ್ಯ ಆಯುಕ್ತರು ಸ್ಕೌಟ್ ಶ್ರೀ ಎಂ.ಎ. ಖಾಲೀದ್, ಖಜಾಂಚಿ ಪ್ರಭುದೇವ ಚಿಗಟೇರಿ, ಜಂಟಿ ಕಾರ್ಯದರ್ಶಿ ಚಿನ್ನಸ್ವಾಮಿರೆಡ್ಡಿ ಮತ್ತು ಗೈಡ್ ತರಬೇತಿ ಬಳಗಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಯನ್ನು ಈ ನುಡಿನಮನದ ಮೂಲಕ ಸಲ್ಲಿಸುತ್ತೇನೆ. ಇದನ್ನು ಓದಿ ಬಳಸುವ ಎಲ್ಲರಿಗೂ ತರಬೇತಿ ತಂಡದ ಪರವಾಗಿ ಅಭಿನಂದಿಸುತ್ತೇನೆ.

ಸ್ಕೌಟ್-ಗೈಡ್ ಶುಭಾಶಯಗಳೊಂದಿಗೆ

ಎಸ್.ಕೆ. ಪ್ರಭಾ, ತ.ನಾ.(ಗೈ)

ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ
ಗೈಡ್ಸ್ ರಾಜ್ಯ ಕೇಂದ್ರ ಕಛೇರಿ
ನಂ.39, ಶಾಂತಿ ಗೃಹ,
ಅರಮನೆ ರಸ್ತೆ, ಬೆಂಗಳೂರು-560 001
E-mail :shanthigruha@scout.org.in

ಪರಿವಿಡಿ

ಆಶಯ ನುಡಿ -- 3

ಮುನ್ನುಡಿ -- 5

ಪ್ರಸ್ತಾವನೆ -- 7

ಗೈಡ್ ದಳ ನಾಯಕಿಯರ ಮೂಲ ತರಬೇತಿ ಕೈಪಿಡಿ ------------------------ 13

ಭಾಗ–1

1. ಗೈಡ್ ತರಬೇತಿ / ಪ್ರಶಿಕ್ಷಣ ------------------------------ 15
2. ಗೈಡ್ ತರಬೇತಿಯ ವಿಶಿಷ್ಟತೆಗಳು ------------------------------ 17
3. ಗೈಡ್ ಶಿಕ್ಷಕಿಯರ ಮೂಲ ತರಬೇತಿ ಪ್ರಸ್ತಾವನೆ ---------------------- 20
4. ತರಬೇತಿಯ ಪೂರ್ವ ಸಿದ್ಧತೆ ------------------------------ 21
5. ಪ್ರವಚನ ಪೂರ್ವ ಸಿದ್ಧತೆ------------------------------ 30

ಭಾಗ–2

ಪ್ರವಚನಗಳು -- 33

ಪ್ರವಚನ ವೇಳಾಪಟ್ಟಿ – ಒಂದು ಮಾದರಿ

ಪ್ರ 1. ಪ್ರಾರ್ಥನಾ ಗೀತೆ – ಧ್ವಜ ಗೀತೆ – ರಾಷ್ಟ್ರ ಗೀತೆ ----------------------37

ಪ್ರ 2. ಸ್ಕೌಟಿಂಗ್–ಗೈಡಿಂಗ್‌ನ ಸಾಮಾನ್ಯ ಮಾಹಿತಿ, ಮೂಲ ಬೆಳವಣಿಗೆ ಮತ್ತು ಉದ್ದೇಶ ---------42

ಪ್ರ 3. ಮೂಲ ಸಿದ್ಧಾಂತಗಳು ------------------------------48

ಪ್ರ 4. ಪ್ರತಿಜ್ಞೆ ಮತ್ತು ನಿಯಮ------------------------------ 55

ಪ್ರ 5. ಗೈಡ್ ವಂದನೆ, ಸಂಕೇತ–ಧ್ಯೇಯ, ಎಡಗೈ ಹಸ್ತಲಾಘವ–ಸತ್ಕಾರ್ಯ ---------------- 58

ಪ್ರ 6. ಅಷ್ಟಕ ಪದ್ಧತಿ ------------------------------ 60

ಪ್ರ 7. ಗುಂಪು ಪದ್ಧತಿ – ಸ್ಥಳೀಯ ಸಂಸ್ಥೆಯಿಂದ ರಾಜ್ಯ ಸಂಸ್ಥೆಯವರೆಗಿನ ಸಂಘಟನೆ ------------64

ಪ್ರ 8. ಗೈಡ್ಸ್ ವಿಭಾಗದ ವಿವರಗಳು ------------------------------70

ಪ್ರ 9. ಗೈಡ್ ಶಿಕ್ಷಕಿಯರ ಪ್ರಗತಿಪರ ತರಬೇತಿ ------------------------------ 71

ಪ್ರ 10. ಪದಕ ಪದ್ಧತಿ ------------------------------73

ಪ್ರ 11. ಪ್ರಥಮ ಸೋಪಾನದ ಅವಶ್ಯಕತೆಗಳು ------------------------------77

ಪ್ರ 12. ಕಾರ್ಯ ಯೋಜನೆ / ದಳ ಯೋಜನೆ ------------------------------ 83

ಪ್ರ 13. ದಳ ತೆರೆಯುವುದು ನಡೆಸುವುದು ಹೇಗೆ? ---------- 88
ಪ್ರ 14. ವಯೋಮಾನದ ಮನೋಧರ್ಮ ---------- 90
ಪ್ರ 15. ಮುಖ್ಯ ಶಿಕ್ಷಕರು / ಪ್ರಾಂಶುಪಾಲರು – ಪೋಷಕರು – ಸಾರ್ವಜನಿಕರು – ವಿದ್ಯಾ ಇಲಾಖೆ – ಸ್ಕೌಟ್–ಗೈಡ್ ಸಂಸ್ಥೆಗಳೊಡನೆ ಸಹಕಾರ ---------- 92
ಪ್ರ 16. ಗೈಡ್ ಶಿಕ್ಷಕಿಯರ ಜವಾಬ್ದಾರಿ ---------- 95

ಭಾಗ–3

ಜ್ಞಾನ–ಕೌಶಲ–ಪ್ರಾತ್ಯಕ್ಷಿಕೆ

ಪ್ರ 17. ಧ್ವಜಗಳು – ರಾಷ್ಟ್ರ, ಭಾರತ ಸ್ಕೌಟ್ ಮತ್ತು ಗೈಡ್ಸ್, ವಿಶ್ವ ಗೈಡ್ ---------- 97
ಪ್ರ 18. ಸಮವಸ್ತ್ರ ---------- 100
ಪ್ರ 19. ಹಗ್ಗ ಕೌಶಲ [ಗಂಟುಗಳು] ---------- 102
ಪ್ರ 20. ಪ್ರಥಮ ಚಿಕಿತ್ಸೆ ಭಾಗ–1 ---------- 109
ಪ್ರಥಮ ಚಿಕಿತ್ಸೆ ಭಾಗ–2 ---------- 114
ಪ್ರ 21. ಆರೋಗ್ಯದ ನಿಯಮಗಳು ---------- 117
ಪ್ರ 22. ಶಿಬಿರವಾಸ ---------- 122
ಪ್ರ 23. ನಕ್ಷಾ ಕೌಶಲ ಭಾಗ–1 : ದಿಕ್ಕು–ಸೂರ್ಯನಿಂದ ದಿಕ್ಕು–ದಿಕ್ಸೂಚಿ ---------- 125
ಭಾಗ–2 : ದಿಕ್ಕೋನ–ಹೆಜ್ಜೆ–ಮಾಪಕ–ಸ್ಥೂಲ ನಕ್ಷೆ ---------- 127
ಭಾಗ–3 : ನಕ್ಷತ್ರ ಪುಂಜಗಳು–ಉತ್ತರ ದಿಕ್ಕು ---------- 130
ಪ್ರ 24. ವನವಿದ್ಯಾ ಸಂಕೇತ ---------- 133
ಪ್ರ 25. ಹೈಕ್ / ಹೊರಸಂಚಾರ ---------- 135
ಪ್ರ 26. ಕರಕುಶಲತೆ ---------- 137
ಪ್ರ 27. ಉರುವಲು ಜೋಡಣೆ ---------- 138
ಪ್ರ 28. ಅಂದಾಜು ಅಳತೆ ---------- 141

ಭಾಗ–4

ಪ್ರ 29. ಆಟಗಳು ---------- 144
ಪ್ರ 30. ಆಜ್ಞಾಬದ್ಧ ಸಮಾರಂಭ (Ceremonials) ---------- 148
ಪ್ರ 31. ಗೈಡ್ ಸಮಾರಂಭಗಳು ---------- 153
- ದೀಕ್ಷಾ ಸಮಾರಂಭ ---------- 157
- ಸರ್ವಧರ್ಮ ಪ್ರಾರ್ಥನೆ ---------- 159
- ಚಿಂತನಾ ದಿನಾಚರಣೆ ---------- 160

ಭಾಗ–5

ಗೈಡ್ ಗೀತೆಗಳು

2. ಸರ್ವಧರ್ಮ ಪ್ರಾರ್ಥನೆ ---------- 161

3. Song on Guiding ---- 163
4. The Chief's Song ---- 163
5. Rounds ---- 164
6. Camp Fire Songs ---- 164
7. Grace – ಭೋಜನ ಸ್ತೋತ್ರ ---- 165
8. Song on promise ---- 165
9. ಮುಕ್ತಾಯ ಗೀತೆ ---- 166

ಗೈಡ್ ಶಿಕ್ಷಕಿಯರ ಮೂಲ ತರಬೇತಿ ರಸಪ್ರಶ್ನೆ ಮಾದರಿ ---- 167
ಚಿತ್ರಾವಳಿ ರಸಪ್ರಶ್ನೆ ---- 170
ಪ್ರಾತ್ಯಕ್ಷಿಕ ರಸಪ್ರಶ್ನೆ ---- 171
ಆಧಾರ ಪುಸ್ತಕಗಳು ---- 172

ಗಮನಿಸಿ : 'ಪ್ರ' ಎಂದರೆ ಪ್ರವಚನ.

ಗೈಡ್ ದಳ ನಾಯಕಿಯರ ಮೂಲ ತರಬೇತಿ ಕೈಪಿಡಿ
Introduction to the Movement

ಸ್ಕೌಟ್-ಗೈಡ್ ಚಳವಳಿಯು ಒಂದು ಅಂತರ್‌ರಾಷ್ಟ್ರೀಯ ಚಳವಳಿಯಾಗಿದೆ. ಜಾತಿ, ಮತ, ದೇಶ, ಭಾಷೆ, ಲಿಂಗ, ನ್ಯೂನ್ಯತೆ ಮತ್ತು ವಯೋಮಿತಿಗಳ ಭೇದವಿಲ್ಲದೆ 3 ವರ್ಷದಲ್ಲಿ ಸದಸ್ಯರಾಗಿ ಸೇರಿದವರು ಆಜೀವ ಪರ್ಯಂತ ಸದಸ್ಯರಾಗಿ ಮುಂದುವರೆಯಬಹುದು. "Once a guide is always a guide". ಇದು ರಾಜಕೀಯ ಮುಕ್ತ ಶಿಕ್ಷಣ ಪೂರಕ ಯುವ ಚಳವಳಿ, ಈ ಸ್ಕೌಟ್ ಚಳವಳಿಯ ಸಂಸ್ಥಾಪಕರಾದ **"ಲಾರ್ಡ್ ಬೇಡನ್ ಪೊವೆಲ್"** ರೂಪಿಸಿದ ಸಿದ್ಧಾಂತದ ಮತ್ತು ಕಾರ್ಯಕ್ರಮಗಳ ಅನುಸಾರ ಕೆಲವು ಮಾರ್ಪಾಟುಗಳೊಡನೆ ವಿಶ್ವದಾದ್ಯಂತ ಈ ಚಳವಳಿಯು ಬೆಳೆದು ಶತಮಾನೋತ್ಸವ ಆಚರಿಸಿದೆ. ಇಂಗ್ಲೆಂಡಿನ ಹೆಣ್ಣು ಮಕ್ಕಳು ಚಳವಳಿಯನ್ನು "ಗರ್ಲ್ ಸ್ಕೌಟ್" ಎಂದು ಪ್ರಾರಂಭಿಸಿದರು. ಬಿ.ಪಿ.ಯವರು ಇದಕ್ಕೆ ಮನ್ನಣೆ ನೀಡಿ ಇದನ್ನು "ಗರ್ಲ್ ಗೈಡ್" ಎಂದು ನಾಮಕರಣ ಮಾಡಿದರು. ಭಾರತದಲ್ಲಿ ಈ ಚಳವಳಿಯನ್ನು ಗರ್ಲ್ ಗೈಡ್ ಚಳವಳಿ ಎಂದು ಕರೆಯುತ್ತೇವೆ. ನಮ್ಮ ರಾಷ್ಟ್ರದಲ್ಲಿ ಇದು ಸ್ಕೌಟ್ ಚಳವಳಿಯೊಡನೆ ಜಂಟಿಯಾಗಿ **ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಾಗಿ** ಆಡಳಿತ ನಿರ್ವಹಿಸುತ್ತಿದೆಯಾದರೂ ಗೈಡ್ ಸಂಸ್ಥೆ ಸಂಘಟನೆ ಮತ್ತು ತರಬೇತಿಯನ್ನು ಸ್ವತಂತ್ರವಾಗಿ ನಡೆಸುತ್ತದೆ. ಆದರೆ ವಿಶ್ವಮಟ್ಟದಲ್ಲಿ ಬಾಲಕರ ಸ್ಕೌಟಿಂಗ್‌ನ ವಿಶ್ವ ಸಂಸ್ಥೆ "WOSM" ಎಂದೂ, ಬಾಲಕಿಯರ ಗೈಡಿಂಗ್‌ನ ವಿಶ್ವ ಸಂಸ್ಥೆ "WAGGGS" ಎಂದೂ ಪ್ರತ್ಯೇಕವಾಗಿವೆ. ಭಾರತ ಈ ಎರಡು ವಿಶ್ವ ಸಂಸ್ಥೆಯ ಮನ್ನಣೆ ಪಡೆದ **ದ್ವಿ-ಸದಸ್ಯ** ರಾಷ್ಟ್ರವಾಗಿದೆ.

ಈ ಚಳವಳಿಯ ಉದ್ದೇಶ, ಯುವತಿಯರನ್ನು ವ್ಯಕ್ತಿತ್ವ ವಿಕಸನದ ಮೂಲಕ "ಜವಾಬ್ದಾರಿಯುತ, ಆರೋಗ್ಯಕರ, ಆನಂದದಾಯಕ, ಉಪಯುಕ್ತ ಪ್ರಜೆಗಳನ್ನಾಗಿ" ಮಾಡುವುದಾಗಿದೆ.

ಇದರಲ್ಲಿ ಕಲಿಯುವುದೇನು? ಈ ಚಳವಳಿ ಬದುಕಿನ ಶಿಕ್ಷಣ ನೀಡುತ್ತದೆ. ಬದುಕುವ ಕೌಶಲವನ್ನು ಕಲಿಸುತ್ತದೆ. ತನ್ನ ಪರಿಸರಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯ, ಸಮಸ್ಯೆ, ಸವಾಲುಗಳನ್ನು ಎದುರಿಸುವ ಮನೋಬಲ, ಸಹಕಾರ, ಸಹಬಾಳ್ವೆ, ಸ್ನೇಹ, ಸೇವೆಯಂತಹ ಮೌಲ್ಯಗಳನ್ನು ಬೆಳೆಸುತ್ತದೆ. ಸ್ವತಃ ಬಿ.ಪಿ.ಯವರು ಪ್ರತಿ ವಿಶ್ವ ಸ್ಕೌಟ್ ಸಮಾವೇಶಗಳಲ್ಲಿ (ಜಾಂಬೂರಿ) ಯುವಕರಿಗೆ ಯುವನಾಯಕರಿಗೆ "ಸದ್ಭಾವನೆ, ವಿಶ್ವಭ್ರಾತೃತ್ವ ಮತ್ತು ವಿಶ್ವಶಾಂತಿಗಾಗಿ ಶ್ರಮಿಸಿ" ಎಂದು ಕರೆ ನೀಡುತ್ತಿದ್ದರು. ಅವರು ಸ್ಕೌಟ್‌ಗಳನ್ನು ಶಾಂತಿದೂತರೆಂದು ಪರಿಗಣಿಸಿದ್ದರು.

ಯುವಕರು ಇಂದು ಅರಾಜಕ ಸಮಾಜವನ್ನು ಅನುಸರಿಸುತ್ತಾ ದುರಾಸೆ, ಅತೃಪ್ತಿಯಿಂದಾಗಿ ದುಷ್ಕೃತ್ಯಗಳಲ್ಲಿ ಅಂದರೆ ಹಿಂಸಾಚಾರ, ಭಯೋತ್ಪಾದನೆಗಳಲ್ಲಿ ತೊಡಗುತ್ತಿದ್ದಾರೆ. ಇದಕ್ಕೆ ಕೆಲವು ಯುವತಿಯರೂ ಹೊರತಾಗಿಲ್ಲ. ಈ ಅಪಾಯಕಾರಿ ಮಾರ್ಗ ಅನುಸರಿಸದಂತೆ ಮಾಡಲು ಸ್ಕೌಟಿಂಗ್ - ಗೈಡಿಂಗ್ ಯುವ ಕಾರ್ಯಕ್ರಮಗಳನ್ನು ಹೊಂದಿರುವ **ನೈಜ ಚಿಕಿತ್ಸಾತ್ಮಕ ಚಳವಳಿಯಾಗಿದೆ.** ಬೇಡನ್ ಪೊವೆಲ್ಲರು "ಯುವಕರಿಗೆ ಬೇಕಾದ ಕಾರ್ಯಕ್ರಮವನ್ನು ಬೇಕಾದ ರೀತಿಯಲ್ಲಿ ನೀಡಿದ್ದಾರೆ." ಇದುವೇ ಈ ಶತಾಯುಷಿ ಚಳವಳಿಯ ಗುಟ್ಟು. ವಿಶೇಷವಾಗಿ ಹೇಳುವುದಾದರೆ ಗೈಡಿಂಗ್ ವಿಶ್ವದಲ್ಲೇ ಏಕಮಾತ್ರ ಬೃಹತ್ ಸಮವಸ್ತ್ರಧಾರಿ ಮಹಿಳಾ ಚಳವಳಿಯಾಗಿದೆ. ಈ ಚಳವಳಿ ಮಹಿಳೆಯರನ್ನು ಸಬಲಗೊಳಿಸಲು ಸಾಮಾಜಿಕ ಸ್ಥಾನಮಾನ ಪಡೆಯಲು ಸಮರ್ಥರನ್ನಾಗಿ ಮಾಡುತ್ತದೆ.

ಪ್ರತಿಯೊಬ್ಬರೂ ಜೀವಿಸಲು ಸಂಪಾದಿಸುತ್ತೇವೆ. ಸಂಪಾದನೆ ತೃಪ್ತಿಗಿಂತ ಗೊಂದಲವನ್ನು ಹೆಚ್ಚಿಸುತ್ತದೆ. ಇನ್ನೂ ಬೇಕು ಮತ್ತೂ ಬೇಕು ಎಂಬ ಸ್ವಾರ್ಥ ಹೆಚ್ಚಿಸುತ್ತದೆ. ಈ ಅನಿವಾರ್ಯತೆಯ ಚಿಂತೆಗಾಗಿ ಉಪಯೋಗ ಮಾಡುವ ಸಮಯವನ್ನು ನಾವು "ನಮಗೆ ಪುರುಸೋತ್ತಿಲ್ಲ ಎಂದು ಎಲ್ಲರೂ ಹೇಳುತ್ತೇವೆ". ಬೆಳಗಿನಿಂದ ರಾತ್ರಿಯವರೆಗೆ ಘಂಟೆ ಘಂಟೆಯ ದಿನಚರಿ ಬರೆದರೆ ನಾವು ಎಷ್ಟು ಕಾಲಹರಣ ಮಾಡಿದೆವು ಎಂಬುದರ ಅರಿವಾಗುತ್ತದೆ. ಶಿಕ್ಷಕರೆ, ಮಕ್ಕಳಿಗಾಗಿ ನಿಮ್ಮ ಸಮಯವನ್ನು ನೀಡಿ. ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುವ ಗೈಡಿಂಗ್ ಸೇವಾ ಕಾರ್ಯದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಶಿಕ್ಷಕರಾಗಿ ನಾವು ಮಾಡುತ್ತಿರುವುದೇ ಇದು, ಎನ್ನುವಿರಿ. ಅದರ ಜೊತೆಗೆ ಗೈಡಿಂಗ್‌ನ ಚಟವಟಿಕೆಗಳನ್ನು ಮಾಡಿದರೆ ಮಕ್ಕಳು ಉತ್ತಮ ಪ್ರಜೆಗಳಾಗುತ್ತಾರೆ. ಆಸಕ್ತಿಯಿಂದ ತರಬೇತಿ ಪಡೆಯಿರಿ, ಆಸಕ್ತಿಯಿಂದ ತರಬೇತಿ ನೀಡಿರಿ. ನೀವು ಇನ್ನೂ ಉತ್ತಮ ಶಿಕ್ಷಕರಾಗುತ್ತೀರಿ. ಶಿಕ್ಷಣದಲ್ಲಿನ ಮೌಲ್ಯಗಳ ಕೊರತೆಯನ್ನು ಇದರ ಮೂಲಕ ನೀಗಿಸಬಹುದು. ಇದು ನಿಮಗೆ ಆತ್ಮತೃಪ್ತಿ ನೀಡುತ್ತದೆ. ನಿಮ್ಮ ಈ ಸೇವೆ ಈಶ ಸೇವೆಯಾಗಿ, ಸಮಾಜ ಸ್ವೀಕರಿಸುತ್ತದೆ.

Rowan did his duty, kicking the IM out of the word Impossible.
Any fellow who acts like that is certain to get on.

Sketch by : B.P.

ಭಾಗ–1

1. ಗೈಡ್ ತರಬೇತಿ / ಪ್ರಶಿಕ್ಷಣ
(Guide Training)

ಪ್ರಶಿಕ್ಷಣ ಶಿಕ್ಷಣಕ್ಕಿಂತ ಭಿನ್ನವಾದುದು. ಇದು ಪ್ರಾತ್ಯಕ್ಷಿಕ ಶಿಕ್ಷಣ. ಕಲಿಕೆ ಕಡ್ಡಾಯ ಹಾಗೂ ನಿರ್ಬಂಧಿತ. ಪ್ರತಿ ವ್ಯಕ್ತಿಯು ಪ್ರಶಿಕ್ಷಣದಲ್ಲಿ ಪ್ರಭುತ್ವಮಟ್ಟ ಪಡೆಯಬೇಕು. ಇದರಲ್ಲಿ ಶಿಸ್ತು ಬಹುಮುಖ್ಯ ಪಾತ್ರವಹಿಸುತ್ತದೆ.

ಗೈಡ್ ಪ್ರಶಿಕ್ಷಕಿಯರು, 21 ವರ್ಷ ತುಂಬಿದ, ವಿಶೇಷ ಅನುಮತಿಯಿಂದ, 18 ವರ್ಷ ತುಂಬಿದ, ಓದು–ಬರಹ ಬಲ್ಲ / ಎಸ್.ಎಸ್.ಎಲ್.ಸಿ. ತತ್ಸಮ ವಿದ್ಯಾಭ್ಯಾಸ ಮಾಡಿದ ಮಹಿಳೆಯರಿಗೆ ತರಬೇತಿ ನೀಡಲಾಗುವುದು. ರಾಷ್ಟ್ರ ಸಂಸ್ಥೆಯು ಪ್ರಶಿಕ್ಷಕ ನಾಯಕರಿಗೆ ತರಬೇತಿ ನೀಡುತ್ತದೆ. ಪ್ರಶಿಕ್ಷಕರಿಗೆ ರಾಷ್ಟ್ರೀಯ ತರಬೇತಿ **ಕೇಂದ್ರ ಪಚ್‌ಮಡಿ**–ಮಧ್ಯಪ್ರದೇಶದಲ್ಲಿ ತರಬೇತಿ ನೀಡಲಾಗುತ್ತಿದೆ. ಪಚ್‌ಮಡಿ ಒಂದು ಬೆಟ್ಟ–ಗುಡ್ಡ, ಕಣಿವೆಗಳಿಂದ ಕೂಡಿದ ಗಿರಿಧಾಮ. ಹಿಮಾಲಯ ವುಡ್ ಬ್ಯಾಡ್ಜ್ ಪದವಿ ಪಡೆದ ನಂತರ ನಾಯಕತ್ವ ಮತ್ತು ವಿಷಯ ಕೌಶಲ ಪ್ರಭುತ್ವವನ್ನು ಗಮನಿಸಿ ಪೂರ್ವ ಸಹನಾಯಕಿ ತರಬೇತಿಗೆ (Pre-ALT) ಕಳುಹಿಸಲಾಗುತ್ತದೆ. ಇದರಲ್ಲಿ ಯಶಸ್ವಿಯಾದರೆ ಕ್ರಮವಾಗಿ ತರಬೇತಿ ಸಹನಾಯಕಿ ಎ.ಎಲ್.ಟಿ. ಹಾಗೂ ತರಬೇತಿ ನಾಯಕಿ ಎಲ್.ಟಿ. ತರಬೇತಿ ನೀಡಲಾಗುವುದು. ಇದರ ವಿವರ ಮುಂದೆ ನೀಡಲಾಗಿದೆ.

ತರಬೇತಿ ನಾಯಕಿಯರು ಚಳವಳಿಯನ್ನು ತಾಂತ್ರಿಕವಾಗಿ ಮುನ್ನಡೆಸುತ್ತಾರೆ. ಚಳವಳಿ ಗಣಾತ್ಮಕವಾಗಿ ಬೆಳೆಯಬೇಕಾದರೆ ಹೆಚ್ಚು ಹೆಚ್ಚು ದಳ ನಾಯಕಿಯರಿಗೆ ಗುಣಾತ್ಮಕವಾಗಿ ತರಬೇತಿ ನೀಡಬೇಕು. ಈ ತರಬೇತಿ ಪ್ರಭಾವಪೂರ್ಣ ಹಾಗು ಅರ್ಥಪೂರ್ಣ –ವಾಗಿರಬೇಕು. ದಳನಾಯಕಿಯರು ಗಣಾತ್ಮಕ ಗುಣಾತ್ಮಕವಾಗಿ ತಯಾರಾದರೆ, ಅವರಲ್ಲಿ ಚಳವಳಿಯ ಬಗ್ಗೆ ಒಲವು ಮೂಡಿದರೆ, ದಳ ತೆರೆಯುತ್ತಾರೆ. ಈ ದಳಗಳ ಮೂಲಕ ಗೈಡ್ ಸದಸ್ಯರ ಸಂಖ್ಯೆ ಹೆಚ್ಚಿ, ಚಳವಳಿ ಬೆಳೆಯಲು ಮತ್ತು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಅಂದ ಮೇಲೆ ಚಳವಳಿಯ ವ್ಯವಸ್ಥೆಯಲ್ಲಿ ಪ್ರಶಿಕ್ಷಕರ ಪಾತ್ರ ಬಹುಮುಖ ಹಾಗು ಬಹುಮುಖ್ಯ.

ಇಷ್ಟನ್ನಾದರೂ ಮಾಡೋಣ :

ಸಮಕಾಲೀನತೆಯತ್ತ ಹೆಜ್ಜೆ ಹಾಕೋಣ
ವರುಷಕ್ಕೆ ಎರಡಾದರೂ ತರಬೇತಿ ಮಾಡೋಣ
ಸಂತಸವಾದ ಅನುಭವ ನೀಡೋಣ
ಪ್ರಶಿಕ್ಷಣಾರ್ಥಿಗಳನ್ನು ಚಳವಳಿಯಲ್ಲಿ ಉಳಿಸೋಣ
ದಳ ತೆರೆಯಲು ಪ್ರೇರಣೆ ನೀಡೋಣ
ಪ್ರಗತಿಪರ ತರಬೇತಿ ಪಡೆಯಲು ಪ್ರೇರೇಪಿಸೋಣ
ಪ್ರಗತಿಪರ ತರಬೇತಿ ನೀಡಲು ಪ್ರೋತ್ಸಾಹಿಸೋಣ
ಸಂಸ್ಥೆಯ ಕಾರ್ಯಗಳಲ್ಲಿ ಕೈಜೋಡಿಸೋಣ
ಚಳವಳಿಯ ಅಭಿವೃದ್ಧಿಗಾಗಿ ಮುನ್ನಡೆಯೋಣ
ಹಿತೈಷಿಗಳನ್ನು ಚಳವಳಿಗೆ ಸೇರಿಸೋಣ
ಬೆಳೆಯೋಣ! ಬೆಳೆಸೋಣ!


ಆರು ಕ್ಷೇತ್ರಗಳ ಮೂಲಕ ತರಬೇತಿ
TRAINING THROUGH SIX AREA
ತರಬೇತಿಯ ಅವಶ್ಯಕತೆಗಳು
TRAINING NEEDS
Planning Skill
Implementing Skill
Guiding Techniques
Understanding Skill
Relationship Skill
Application Skill
ತರಬೇತಿ
TRAINING
Formal Training
Informal Training
Personal Support
Self Training
Training Assignment
Training Studies

2. ಗೈಡ್ ತರಬೇತಿಯ ವಿಶಿಷ್ಟತೆಗಳು
(Uniqueness in Guide Training)

ತರಬೇತಿಯಲ್ಲಿ ಕೇವಲ ವಿಷಯ ಪ್ರವಚನಗಳಲ್ಲದೇ ಸರ್ವತೋಮುಖ ಬೆಳವಣಿಗೆಗಾಗಿ, ವ್ಯಕ್ತಿವಿಕಸನಕ್ಕಾಗಿ ಕೆಲವು ಕಾರ್ಯಕ್ರಮಗಳನ್ನು ಅಳವಡಿಸಲಾಗಿದೆ. ಈ ಕಾರ್ಯಕ್ರಮಗಳು ಗೈಡ್ ತರಬೇತಿಯ ವಿಶಿಷ್ಟತೆಯಾಗಿದೆ.

* ಶಿಬಿರವಾಸ * ಪಟಾಲಂ ಪದ್ಧತಿ * ಧ್ವಜ ವಂದನೆ * ಶಿಬಿರಾಗ್ನಿ * ಆಟ-ವ್ಯಾಯಾಮ * ಚೇತೋಹಾರಿ * ಹೊರಾಂಗಣ ತರಬೇತಿ * ವಿರಾಮ ವೇಳೆಯ ಚಟುವಟಿಕೆ (STA) * ಸರ್ವಧರ್ಮ ಪ್ರಾರ್ಥನೆ * ಸಮವಸ್ತ್ರ * ಸದಸ್ಯತ್ವ * ದಿನಚರಿ ಪುಸ್ತಕ.

ಶಿಬಿರವಾಸ – (Camping) : "ಶಿಬಿರವಾಸ ಮಾಡದೇ ಪೂರ್ಣ ಪ್ರಮಾಣದ ಸ್ಕೌಟ್-ಗೈಡ್ ಆಗಲು ಸಾಧ್ಯವಿಲ್ಲ" – ಬಿ.ಪಿ. ಅಂದ ಮೇಲೆ ಶಿಬಿರವಾಸ ಒಂದು ಕಡ್ಡಾಯ ಕಾರ್ಯಕ್ರಮ. ಶಿಬಿರವಾಸದಿಂದ ಪ್ರಕೃತಿಯ ಮಡಿಲಲ್ಲಿ, ಗುಡಾರದಲ್ಲಿ ಬಿಡಾರ ಹೂಡಿ, ಒಟ್ಟಾಗಿ ಕಷ್ಟ-ಸುಖಗಳನ್ನು ಎದುರಿಸಿದಾಗ ನೈಜ ಮಾರ್ಗದಲ್ಲಿ ವ್ಯಕ್ತಿತ್ವ ವಿಕಾಸವಾಗುತ್ತದೆ. ಪ್ರತ್ಯಕ್ಷವಾಗಿ ಜೀವನದ ಅನುಭವಗಳನ್ನು ಪಡೆಯಲಾಗುತ್ತದೆ.

ಪಟಾಲಂ ಪದ್ಧತಿ – (Patrol System) : ಬಿ.ಪಿ.ಯವರು ಚಿಕ್ಕ ಗುಂಪಿನಲ್ಲಿ ತರಬೇತಿ ನೀಡುವ ವಿನೂತನ ಪದ್ಧತಿಯನ್ನು ರೂಪಿಸಿದರು. ಸಮಾನ ವಯಸ್ಸು ಮತ್ತು ಸಮಾನ ಮನೋಧರ್ಮ ಹೊಂದಿರುವ ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ಎಂಬ ಪ್ರಜಾಪ್ರಭುತ್ವ ತತ್ವದ ಆಧಾರದ ಮೇಲೆ ಪಟಾಲಂ ಪದ್ಧತಿಯನ್ನು ರೂಪಿಸಿದರು. ಇದರ ಮೂಲಕ ನಾಯಕತ್ವ ತರಬೇತಿ ನೀಡಲಾಗುವುದು. **ಪಟಾಲಂ ಸಭೆ (Patrol in council), ದಳದ ಗೌರವ ನ್ಯಾಯ ಸಭೆಯ (Court of honour)** ಮೂಲಕ ಗೈಡ್ ಶಿಕ್ಷಕಿಯರ ಮಾರ್ಗದರ್ಶನದಲ್ಲಿ ಮಕ್ಕಳು ದಳದ ಆಡಳಿತವನ್ನು ನಡೆಸುವರು. ಪ್ರಶಿಕ್ಷಕಿಯರು ದಳ ನಾಯಕಿಯರಿಗೆ ಗೈಡ್‌ಗಳ ತರಬೇತಿಯಲ್ಲಿ ಇದರ ಪ್ರತ್ಯಕ್ಷ ಅನುಭವವನ್ನು ಮತ್ತು ಮಹತ್ವವನ್ನು ನೀಡುವಂತೆ ಮನದಟ್ಟು ಮಾಡಬೇಕು. ಈ ಸಭೆಯನ್ನು ಶಿಬಿರದಲ್ಲಿ ಪ್ರತಿದಿನ ಕಡ್ಡಾಯವಾಗಿ ಮಾಡಬೇಕು.

ಧ್ವಜ ವಂದನೆ (Flag Ceremony) : ಎಲ್ಲಾ ಸಮಾರಂಭಗಳಲ್ಲಿ (ಸಮಾರಂಭ ಚಿಕ್ಕದಿರಲಿ, ದೊಡ್ಡದಿರಲಿ) ಪ್ರತಿದಿನ ಶಿಬಿರವಾಸದಲ್ಲಿ ಹಾಗು ದಳಸಭೆಗಳಲ್ಲಿ ಪ್ರಾರಂಭದಲ್ಲಿ ಧ್ವಜಾರೋಹಣ ಮಾಡಿ ಮುಕ್ತಾಯವನ್ನು ಧ್ವಜ ಅವರೋಹಣದಿಂದ ಮಾಡಬೇಕು. ಇದು ಈ ಚಳವಳಿಯ ಸಂಸ್ಕೃತಿ. ಧ್ವಜದ ಅಡಿಯಲ್ಲಿ ಸೇರಿದಾಗ ಪ್ರಾರ್ಥನಾಗೀತೆ ಮತ್ತು ಧ್ವಜಗೀತೆ ಒಟ್ಟಾಗಿ ಹಾಡುವಾಗ, ಧ್ವಜವನ್ನು ವಂದಿಸುವಾಗ ನಾವೆಲ್ಲಾ ಒಂದೇ ಎಂಬ ಭಾವನೆ ನಮ್ಮಲ್ಲಿ ಮೂಡುತ್ತದೆ. ಮೌಲ್ಯಗಳು ಪುನರಾವರ್ತನೆಯಾಗುತ್ತವೆ. ಚಳವಳಿಯ ಬಗೆಗಿನ ಬದ್ಧತೆ ಬೆಳೆಯುತ್ತದೆ. ಈ ಪವಿತ್ರ ವಾತಾವರಣದಲ್ಲಿ ಶಿಸ್ತು ಮೈಗೂಡುತ್ತದೆ. ಇವುಗಳನ್ನು ಶಿಸ್ತಾಗಿ ಮಾಡುವುದರಿಂದ ನೋಡುಗರಿಗೆ ಚಳವಳಿಯ ಬಗ್ಗೆ ಘನತೆ ಗೌರವ ಮೂಡುತ್ತದೆ.

ಶಿಬಿರಾಗ್ನಿ – (Camp Fire) : ಶಿಬಿರದಲ್ಲಿ, ಸಮಾವೇಶಗಳಲ್ಲಿ ಪ್ರತಿದಿನ ರಾತ್ರಿ 7 ಘಂಟೆಯ ನಂತರ ಶಿಬಿರದ ಮಧ್ಯೆ ಕಟ್ಟಿಗೆಗಳನ್ನು ಜೋಡಿಸಿ ಅಗ್ನಿಯನ್ನು ಬೆಳಗಿಸಿ ಶಿಬಿರಾರ್ಥಿಗಳು ಸುತ್ತಲೂ ಕುಳಿತು ಅಗ್ನಿಯ ಮುಂದೆ ಮನರಂಜನೆ, ನೀತಿ, ಮೌಲ್ಯಗಳನ್ನು ಒಳಗೊಂಡ ಕಾರ್ಯಕ್ರಮ ನೀಡುತ್ತಾರೆ. ಇದು ನಕ್ಕು ನಲಿಯುವ ಕಾರ್ಯಕ್ರಮ. ಲವಲವಿಕೆ ಮೂಡಿಸುವ ಕಾರ್ಯಕ್ರಮ. ಇದು "Fun with discipline" – "ಶಿಸ್ತಿನಿಂದ ಕೂಡಿದ ಮನರಂಜನೆ". ಎಲ್ಲಾ ಸ್ಕೌಟ್

ಮತ್ತು ಗೈಡ್ಸ್ ಸದಸ್ಯರ ಮನಸ್ಸಿನಲ್ಲಿ ಉಳಿಯುವ ಕಾರ್ಯಕ್ರಮ. ಇದರಲ್ಲಿ ಪ್ರಶಿಕ್ಷಣಾರ್ಥಿಗಳೆಲ್ಲರೂ ಭಾಗವಹಿಸುವುದು ಕಡ್ಡಾಯ. ಮೂಲ ತರಬೇತಿಯಲ್ಲಿ ಈ ಕಾರ್ಯಕ್ರಮ ಪ್ರಶಿಕ್ಷಣಾರ್ಥಿಗಳನ್ನು ಆಕರ್ಷಿಸುವಂತಿರಬೇಕು. ಈ ಕಾರ್ಯಕ್ರಮ ಸ್ಥಳದಲ್ಲೇ ಅಲ್ಪ ಸಮಯದಲ್ಲೇ ರೂಪಿಸಬೇಕು.

ಆಟ-ವ್ಯಾಯಾಮ – (Games and Exercise) : ಪ್ರವಚನ ಮಧ್ಯದಲ್ಲಿ, ದಿನದ ಕೊನೆಯಲ್ಲಿ ಆಟ ಆಡಿಸಲಾಗುವುದು. ಆಟ ಮನಸ್ಸಿಗೆ ಚೈತನ್ಯ, ದೇಹಕ್ಕೆ ಆರೋಗ್ಯ, ಬುದ್ಧಿಗೆ ಕೆಲಸ ನೀಡುತ್ತದೆ. ಬಿ.ಪಿ.ಯವರು ಸರ್ವಾಂಗಕ್ಕೂ ಷಟ್ಕ (Six) ವ್ಯಾಯಾಮ ರೂಪಿಸಿದ್ದಾರೆ. ತರಬೇತಿಯಲ್ಲಿ ಈ ಚಟುವಟಿಕೆಯನ್ನು ಬೆಳಿಗ್ಗೆ 6.30 ರಿಂದ 7.00 ರವರೆಗೆ ಮಾಡಿಸಲಾಗುವುದು. ಇದಕ್ಕೆ ಪರ್ಯಾಯವಾಗಿ ಸೂರ್ಯ ನಮಸ್ಕಾರ / ಯೋಗವನ್ನು ಮಾಡಿಸಬಹುದು. ಬೆಳಿಗ್ಗೆ ವ್ಯಾಯಾಮ ಮಾಡುವುದರಿಂದ ದಿನವೆಲ್ಲಾ ದೇಹ ಸುಸ್ಥಿತಿಯಲ್ಲಿ ಲವಲವಿಕೆಯಿಂದಿರುತ್ತದೆ.

ಚೇತೋಹಾರಿ – (Relax) : ಒಂದೇಸಮನೆ ಅಧಿಕೃತ ತರಗತಿಗಳಂತೆ ಪ್ರವಚನ ಮಾಡಿದರೆ ಪ್ರಶಿಕ್ಷಣಾರ್ಥಿಗಳು ಆಸಕ್ತಿ ಕಳೆದುಕೊಳ್ಳುತ್ತಾರೆ. ಅವರ ಆಸಕ್ತಿಯನ್ನು ಕಾಪಾಡಲು ಮಧ್ಯೆ ಮಧ್ಯೆ ಹಾಡು / ಅಭಿನಯ ಗೀತೆ / ಜೋಕ್ಸ್ / ಒಗಟು / ರಸಪ್ರಶ್ನೆ / ಚಿಕ್ಕಪುಟ್ಟ ಕರಕೌಶಲ / ಕೈಚಳಕ (Magic) / ವೈವಿಧ್ಯಮಯ ಚಪ್ಪಾಳೆ ಹೀಗೆ ವೈವಿಧ್ಯಮಯ ಚಟುವಟಿಕೆಗಳನ್ನು ಮಾಡಿಸುವುದು. ಇವುಗಳನ್ನು ಆರಂಭದಲ್ಲಿ ಅಥವಾ ಅಂತ್ಯದಲ್ಲಿ ಅವಶ್ಯಕತೆಗೆ ತಕ್ಕಂತೆ ಮಾಡಿಸಬಹುದು. ಇದರಿಂದ ಪ್ರವಚನ ಸ್ವೀಕರಿಸಲು ಮನಸ್ಸು ಹದಗೊಳ್ಳುತ್ತದೆ.

ಹೊರಾಂಗಣದಲ್ಲಿ ತರಬೇತಿ – (Outdoor Training) : ಸಾಧಾರಣವಾಗಿ ಕಾರ್ಯಕ್ರಮ, ಚಟುವಟಿಕೆ, ಪ್ರವಚನ ಎಲ್ಲವೂ ನಾಲ್ಕು ಗೋಡೆಗಳಿಂದ ಹೊರಗಡೆ ಅಂದರೆ ಹೊರಾಂಗಣದಲ್ಲಿ ನಡೆಸಲಾಗುವುದು. ಇದು ಹೊರಾಂಗಣದಲ್ಲಿ ನಡೆಯುವ ತರಬೇತಿ. ಇದರಿಂದ ಪ್ರಕೃತಿ ಸ್ನೇಹ ಬೆಳೆಯುತ್ತದೆ, ಆರೋಗ್ಯ ವೃದ್ಧಿಯಾಗುತ್ತದೆ, ಮನಸ್ಸು ಆಹ್ಲಾದಕರವಾಗಿರುತ್ತದೆ.

ವಿರಾಮ ವೇಳೆಯ ಚಟುವಟಿಕೆ – (Spare Time Activity) : ಪ್ರಶಿಕ್ಷಣಾರ್ಥಿಗಳು ವಿರಾಮ ವೇಳೆಯಲ್ಲಿ ಮಧ್ಯಾಹ್ನ 2 ರಿಂದ 2.30 ಘಂಟೆಯವರೆಗೆ ಈ ಚಟುವಟಿಕೆಗಳನ್ನು ಅವರು ಇದ್ದಲ್ಲೇ ಮಾಡುವರು. ಇದು ಅವರಲ್ಲಿ ಲವಲವಿಕೆ ಮೂಡಿಸುತ್ತದೆ. ಮಧ್ಯಾಹ್ನದ ತೂಕಡಿಕೆ ದೂರ ಮಾಡುತ್ತದೆ. ಈ ಚಟುವಟಿಕೆಗಳು ಇಂದಿನ ಅಥವಾ ಹಿಂದಿನ ಪ್ರವಚನ ಪೂರಕ ಚಟುವಟಿಕೆಯಾಗಿರುತ್ತದೆ. ಇದನ್ನು ವೈಯಕ್ತಿಕವಾಗಿ ಅಷ್ಟಕದಲ್ಲಿ ಮಾಡಬೇಕು. ಸಲಹೆಗಾರರು (Counsellors) / ಪ್ರಶಿಕ್ಷಕರೊಬ್ಬರು ಇದರ ಮೇಲ್ವಿಚಾರಣೆ ನಡೆಸುತ್ತಾರೆ. ಇದನ್ನು ಅವರ ದಿನಚರಿಯಲ್ಲಿ ದಾಖಲಿಸಿ ಪ್ರಶಿಕ್ಷಕರಿಂದ ಸಹಿ ಪಡೆಯಬೇಕು. ಪ್ರಶಿಕ್ಷಕರು ಹಿಂದಿನ ದಿನದ ಪ್ರಶಿಕ್ಷಕ ವರ್ಗದ ಸಭೆಯಲ್ಲಿ ನಾಳಿನ ಚಟುವಟಿಕೆಯನ್ನು ನಿರ್ಧರಿಸಬೇಕು. ಈ ಚಟುವಟಿಕೆಯ ವೈಯಕ್ತಿಕ ಮೌಲ್ಯಮಾಪನವನ್ನು ಪ್ರಶಿಕ್ಷಕರು ಸಮಗ್ರ ಮೌಲ್ಯಮಾಪನಕ್ಕಾಗಿ ದಾಖಲೆ ಇಡಬೇಕು. ಇದು ಮೂಲ ತರಬೇತಿಯಲ್ಲಿ ಕಡ್ಡಾಯವಲ್ಲ. ಆದರೆ ಪರಿಚಯಿಸುವುದು ಒಳ್ಳೆಯದು. ಮುಂದಿನ ತರಬೇತಿಗಳಲ್ಲಿ ಕಡ್ಡಾಯವಾಗಿರುತ್ತದೆ.

ಸರ್ವಧರ್ಮ ಪ್ರಾರ್ಥನೆ – (All faith Prayer) : ಈ ಚಟುವಟಿಕೆಯ ಉದ್ದೇಶ ಜಾತ್ಯತೀತ ರಾಷ್ಟ್ರವಾದ ಭಾರತದಲ್ಲಿ ಕೋಮುಸೌಹಾರ್ದತೆಯನ್ನು ಬೆಳೆಸುವುದಾಗಿದೆ. ಈ ಪ್ರಾರ್ಥನೆಯು ಮಾನಸಿಕ ಶಾಂತಿ ನೀಡುವುದಲ್ಲದೆ ವಿವಿಧ ಧರ್ಮಗಳ ಪ್ರಾರ್ಥನಾ ವಿಧಿಯನ್ನು ಪರಿಚಯಿಸುವುದು. "ದೇವನೊಬ್ಬ ನಾಮ ಹಲವು" ಎಂದು ಸಾರುವ ಸಾಮಾನ್ಯ ಭಕ್ತಿಗೀತೆಯನ್ನು ಹಾಡಿದಾಗ "ಧರ್ಮ ಹಲವು. ಆದರೆ ಮಾನವತೆ ಒಂದೇ" ಎಂದು ಕೋಮುಸೌಹಾರ್ದತೆ ಬೆಳೆಯುತ್ತದೆ. ಇದನ್ನು ಶಿಬಿರಗಳಲ್ಲಿ, ಸಮಾವೇಶಗಳಲ್ಲಿ ಮತ್ತು ಶಾಲಾ ದಳದಲ್ಲಿ ಮಾಡಲಾಗುವುದು. ಗಾಂಧೀ ಜಯಂತಿ, ಸ್ವಾತಂತ್ರ್ಯ ದಿನಾಚರಣೆ, ಪರೀಕ್ಷೆಯ ಮುನ್ನ ಪ್ರಾರ್ಥನಾ ಕೂಟವಾಗಿ, ಗೈಡ್ ದಳದ ದಿನಾಚರಣೆಯಲ್ಲಿ, ಸಮುದಾಯಗಳಲ್ಲಿ ಸಾರ್ವಜನಿಕವಾಗಿಯು ನಡೆಸಬಹುದು.

ಸಮವಸ್ತ್ರ – (Uniform) : ನಮ್ಮ ಸಮವಸ್ತ್ರ ಫ್ರಾಕ್ / ಸಲ್ವಾರ್ ಕಮೀಜ್ / ಮಿಡಿ / ಸೀರೆ–ಕುಪ್ಪಸ ಮಾದರಿಯ ಉಡಿಗೆ. ಕಡುನೀಲಿ ಆಕಾಶಬಣ್ಣ, ತಿಳಿನೀಲಿ ಆಕಾಶಬಣ್ಣ ಹಾಗೂ ಬಿಳಿಬಣ್ಣಗಳಿಂದ ಕೂಡಿದೆ. ಇವುಗಳ ಜೊತೆ ಸೊಂಟಪಟ್ಟಿ, ಕಂಠವಸ್ತ್ರ, ಕವುಂಗರ ಸಾಮಾನ್ಯ; ಷೂ–ಕಪ್ಪು ಬಣ್ಣ, ಸಾಕ್ಸ್–ಕಂದು ಬಣ್ಣ ಕಡ್ಡಾಯ. ಕೇಶವು ಅಚ್ಚುಕಟ್ಟಾಗಿ ಇರುವಂತೆ, ಹರಡದಂತೆ ಕಪ್ಪು ರಿಬ್ಬನ್ / ಕ್ಲಿಪ್‌ಗಳಿಂದ ಬಂಧಿಸಬೇಕು. ಸರಳ, ಕಡ್ಡಾಯ ಆಭರಣ ಮಾತ್ರ ಧರಿಸಬೇಕು. ಚಳವಳಿಯಲ್ಲಿ ಸಮವಸ್ತ್ರವು ಐಕ್ಯತಾ ಭಾವನೆ ಮೂಡಿಸುತ್ತದೆ. ಇದರ ಮೂಲಕ ನಮ್ಮ ಸದಸ್ಯತ್ವವನ್ನು ಗುರುತಿಸಿಕೊಳ್ಳುತ್ತೇವೆ.

ಸದಸ್ಯತ್ವ ಪದಕ – (Membership Badge) : ಸಮವಸ್ತ್ರ ಧರಿಸಿ ಪ್ರವೇಶ ಪರೀಕ್ಷೆಯ ಅರ್ಹತೆ ಪಡೆದು ಧ್ವಜದ ಕೆಳಗೆ ನಿಂತು ನಾಯಕಿಗೆ ವಚನ ನೀಡಿ. "ನಾನು ನನ್ನ ಕೈಲಾದಮಟ್ಟಿಗೆ ದೇವರಿಗೂ, ದೇಶಕ್ಕೂ ಕರ್ತವ್ಯ ಸಲ್ಲಿಸುತ್ತೇನೆಂದೂ, ಇತರರಿಗೆ ಸಹಾಯ ಮಾಡುತ್ತೇನೆಂದೂ, ಗೈಡ್ ನಿಯಮವನ್ನು ಪಾಲಿಸುತ್ತೇನೆಂದೂ, ನನ್ನ ಗೌರವ ಸಾಕ್ಷಿಯಾಗಿ ಪ್ರತಿಜ್ಞೆ ಮಾಡುತ್ತೇನೆ" ಎಂದು ವಚನ ನೀಡಿ, ನಾಯಕಿಯಿಂದ ಸದಸ್ಯತ್ವ ಪದಕ ಪಡೆಯುತ್ತೇವೆ. ಸದಸ್ಯತ್ವ ಸ್ಥಳೀಯ ಸಂಸ್ಥೆಯಿಂದ ವಿಶ್ವ ಗೈಡ್ ಸಂಸ್ಥೆಯವರೆಗೂ ಮಾನ್ಯವಾಗುತ್ತದೆ. ಇದಕ್ಕೆ ಕೇವಲ 5 ರೂಪಾಯಿ ಸದಸ್ಯತ್ವ ಶುಲ್ಕ ನೀಡುತ್ತೇವೆ.

ದಿನಚರಿ ಪುಸ್ತಕ – (Log Book) : ದಿನಚರಿ ಪುಸ್ತಕದಲ್ಲಿ ಗೈಡಿಂಗ್ ಚಟುವಟಿಕೆಗಳ ಸಂಕ್ಷಿಪ್ತ ವರದಿ, ಸೂಕ್ತವೆನಿಸಿದ್ದಲ್ಲಿ ಛಾಯಾ ಚಿತ್ರಗಳನ್ನು ಅಂಟಿಸಬಹುದು. ಚಿತ್ರ ಬಿಡಿಸಬಹುದು. ಮಾದರಿ, ಮುದ್ರಿತ ತುಣುಕು ಸಂಗ್ರಹಿಸಿದ್ದರೆ ಅಂಟಿಸುವುದು. ಈ ಮೂಲಕ ಪುಸ್ತಕವನ್ನು ನೋಡುಗರಿಗೆ ಓದುಗರಿಗೆ ಆಕರ್ಷಕವಾಗಿ ಮಾಡುವುದು. ಗೈಡ್ ಶಿಕ್ಷಕಿಯರು ಗೈಡ್ ದಳದ ದಿನಚರಿ ಇಡಬೇಕು. ಇದನ್ನು ಮುಖ್ಯ ಶಿಕ್ಷಕರಿಗೆ, ಪದಾಧಿಕಾರಿಗಳಿಗೆ, ಶಾಲೆಗೆ ಸಂಬಂಧಿಸಿದ ಅಧಿಕಾರಿಗಳಿಗೆ ತೋರಿಸುವುದು. ಇದರಿಂದ ಅವರಿಗೆ ನೀವು ಮಾಡುವ ಕೆಲಸದ ಬಗ್ಗೆ ಮಾಹಿತಿ ಇರುತ್ತದೆ. ಇದರ ಮೂಲಕ ನಿಮ್ಮ ಕಾರ್ಯದ ಗುಣಮಟ್ಟ ಪ್ರಕಟವಾಗುತ್ತದೆ. ಎಲ್ಲಕ್ಕೂ ಮಿಗಿಲಾಗಿ ಮುಂದೊಂದುದಿನ ಅದನ್ನು ನೋಡಿದಾಗ ಸಂತಸ, ತೃಪ್ತಿ ಸಿಗುತ್ತದೆ.

ಮಕ್ಕಳಿಗಾಗಿ ರಾಜ್ಯ ಸಂಸ್ಥೆ ದಿನಚರಿ ಪುಸ್ತಕವನ್ನು ಮಾರ್ಗದರ್ಶನ ಸಹಿತ ಪ್ರಕಟಿಸಿದೆ. ಭಾಗ–1 ಪ್ರವೇಶದಿಂದ ತೃತೀಯ ಸೋಪಾನದವರೆಗೆ, ಭಾಗ–2 ರಾಜ್ಯ ಪುರಸ್ಕಾರ ಹಾಗು ರಾಷ್ಟ್ರಪತಿ ಪುರಸ್ಕಾರ ಹೊಂದಿರುತ್ತದೆ. ದಳ ಪ್ರಾರಂಭಿಸಿದ ತಕ್ಷಣ ದಿನಚರಿ ಭಾಗ–1 ಮಕ್ಕಳಿಗೆ ಒದಗಿಸಿ. ಮಕ್ಕಳು ಕಾಲಕಾಲಕ್ಕೆ ದಿನಚರಿ ಬರೆಯಲಿ. ದಿನಚರಿಯನ್ನು ಆಗಾಗ್ಗೆ ಅವಲೋಕಿಸಿ ನೀವು ಸಹಿ ಮಾಡಬೇಕು.

3. ಗೈಡ್ ಶಿಕ್ಷಕಿಯರ ಮೂಲ ತರಬೇತಿ ಪ್ರಸ್ತಾವನೆ
(Introduction to Guide Captains Basic Course)

ಮೂಲ ತರಬೇತಿ ಹೆಸರೇ ಹೇಳುವಂತೆ ಇದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯನ್ನು ಪ್ರವೇಶಿಸುವ ಮೊದಲ ತರಬೇತಿ. 18 ವರ್ಷ ತುಂಬಿದ ಅಕ್ಷರಸ್ಥ / ಎಸ್.ಎಸ್.ಎಲ್.ಸಿ. / ತತ್ಸಮ ವಿದ್ಯಾರ್ಹತೆಯನ್ನು ಹಾಗೂ ಭಾರತೀಯ ಪೌರತ್ವವನ್ನು ಹೊಂದಿರುವ 12 ರಿಂದ 32 ಮಹಿಳೆಯರ ಗುಂಪಿಗೆ ನೀಡಲಾಗುವುದು.

ಬಿ.ಪಿ.ಯವರು ಚಾರಿತ್ರ್ಯಾಭಿವೃದ್ಧಿ, ಆರೋಗ್ಯಾಭಿವೃದ್ಧಿ, ಕರಕುಶಲ ಅಭಿವೃದ್ಧಿ ಮತ್ತು ಸೇವಾ ಕಾರ್ಯಗಳಲ್ಲಿ ತೊಡಗಿಸುವ ನಾಲ್ಕು ಆಧಾರಾಂಶಗಳ ಮೇಲೆ ಚಳವಳಿಯ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಈ ಕಾರ್ಯಕ್ರಮಗಳನ್ನು ಭಾರತೀಯ ಸಂಸ್ಕೃತಿ, ಸಂವಿಧಾನಕ್ಕೆ ಅನುಗಣವಾಗಿ ರಾಷ್ಟ್ರೀಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಹಿರಿಯರಿಗೆ "ತರಬೇತಿ ಯೋಜನೆ" (Scheme of Training) ಗೈಡ್‌ಗಳಿಗೆ "ಗುರಿ, ನೀತಿ, ನಿಯಮ ಸಂಘಟನೆ"ಯನ್ನು (APRO-III) ರೂಪಿಸಿದೆ. ಮೂಲ ತರಬೇತಿ ಮಾಡಿದವರು ಪ್ರವೇಶ, ಪ್ರಥಮ ಸೋಪಾನ ಮತ್ತು ದ್ವಿತೀಯ ಸೋಪಾನದ ಪದಕದವರೆಗೆ ಬಾಲಕಿಯರಿಗೆ ಗೈಡ್ ತರಬೇತಿ ನೀಡಬಹುದು.

ಪ್ರತಿಜ್ಞೆ ಮತ್ತು ನಿಯಮವನ್ನು ಜೀವನದುದ್ದಕ್ಕೂ ಅಳವಡಿಸಿಕೊಳ್ಳುವುದು. ಹೊರಾಂಗಣದಲ್ಲಿ ಕಲಿಯುವ, ಸೇವೆಯ ಮೂಲಕ ಕಲಿಯುವ, ಚಿಕ್ಕ ಗುಂಪಿನಲ್ಲಿ ಕೆಲಸ ಮಾಡುವ ಪ್ರಗತಿಪರ ವಿಧಾನಗಳಿಂದ ತರಬೇತಿ ನೀಡಲಾಗುವುದು.

ತರಬೇತಿ ಪ್ರಭಾವಪೂರ್ಣ, ಸ್ನೇಹಮಯವಾಗಿದ್ದರೆ, ಆಕರ್ಷಕವಾಗಿದ್ದರೆ, ನೂತನ ಸದಸ್ಯರು ದೀಕ್ಷೆ ಪಡೆದು, ದಳ ತೆರೆದು ನಡೆಸುತ್ತಾ ಚಳವಳಿಯ ಸದಸ್ಯರಾಗಿ ಮುಂದುವರೆಯುವರು. ಹಾಗೂ ಚಳವಳಿಯ ಗುಣಾತ್ಮಕ ಮತ್ತು ಗಣಾತ್ಮಕ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಕಾರಣರಾಗುವರು.

ಮೂಲ ತರಬೇತಿ ಉದ್ದೇಶ

ಪಡೆಯಿರಿ ಮೂಲ ತರಬೇತಿಯನು
ನೀಡಿರಿ ಬಾಲೆಯರಿಗೆ ತರಬೇತಿಯನು
ಹೊಂದಿರಿ ತರಬೇತಿ ನೈಪುಣ್ಯತೆಯನು
ಗಳಿಸಿರಿ "ಗೈಡರ್" ಉಪನಾಮವನು ॥1॥

ಶಿಬಿರದ ನಿಯಮ ಪರಿಪಾಲನೆ
ದೈನಂದಿನ ಕಾರ್ಯಕ್ರಮ ನಿರ್ವಹಣೆ
ದಿನದ ಕರ್ತವ್ಯಕ್ಕೆ ಚ್ಯುತಿ ತಾರದಿರಿ
ಶಿಬಿರ ಸದುದ್ದೇಶವ ಸಫಲಗೊಳಿಸಿರಿ ॥2॥

ಏಳು ದಿನಗಳ ಸತತ ತರಬೇತಿ ಇದು
ವ್ಯಕ್ತಿಯ ವರ್ತನೆ ಬದಲಿಸಬಹುದು
ಏಳೇಳು ಜನ್ಮದ ಪುಣ್ಯವೆನಿಸದಿರದು
ಗೆಳೆತನ ಪ್ರೀತಿ ಪ್ರೇಮ ಪರಸ್ಪರ ಪುಟಿವುದು ॥3॥

– ಪಿ.ಸಿ. ಮಂಗಳೂರು ಎಲ್.ಟಿ. (ಗೈ)

4. ತರಬೇತಿಯ ಪೂರ್ವ ಸಿದ್ಧತೆ
(Pre-Prepartation for Training)

ಪ್ರಶಿಕ್ಷಕರು ಈ ಕೆಳಗಿನ ವ್ಯವಸ್ಥೆಗಳು ಸಮಂಜಸವಾಗಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು. ಇಲ್ಲವಾದಲ್ಲಿ ಸಂಘಟಕರ ಜೊತೆ ವಿಚಾರಮಾಡಿ ಸುಧಾರಿಸಲು ಪ್ರಯತ್ನಿಸಬೇಕು.

- ಪರಿಸರ, ತಂಗುವ ವ್ಯವಸ್ಥೆ, ಊಟೋಪಚಾರ, ನೀರು, ವಿದ್ಯುತ್, ವೈದ್ಯಕೀಯ ಸೌಲಭ್ಯ, ಶೌಚ, ಸ್ನಾನ, ಸುರಕ್ಷತೆ.
- ತರಬೇತಿ ಸಾಧನಗಳು - ಪುಸ್ತಕಗಳು, ಸ್ಟೇವ್ (ಸ್ಕೌಟ್ ದಂಡ), ಹಗ್ಗ, ಫಲಕ, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ದಿಕ್ಸೂಚಿಗಳು, ಸೂಚನಾಫಲಕ, ನಕ್ಷೆ.

ಈ ಸೌಲಭ್ಯಗಳು ಪರಿಣಾಮಕಾರಿ ತರಬೇತಿಗೆ ಅವಶ್ಯಕ. ಅದರಲ್ಲೂ "First experience is the best experience". ಮೂಲ ತರಬೇತಿಯಲ್ಲಿ ಅವರಿಗೆ ಒಳ್ಳೆಯ ಅನುಭವ ದೊರೆತರೆ ಚಳವಳಿಯಲ್ಲಿ ಮುಂದುವರಿಯುತ್ತಾರೆ.

ಇವುಗಳಲ್ಲದೆ ತರಬೇತಿ ಕಾರ್ಯಕ್ರಮ ಕ್ರಮಬದ್ಧವಾಗಿ ನಡೆಯಬೇಕು. ಹೀಗಿರಬೇಕಾದರೆ ತರಬೇತಿ ಪ್ರಾರಂಭವಾಗುವ ಮುನ್ನ ಈ ಕೆಳಗಿನ ಯೋಜನೆಗಳು ಸಿದ್ಧವಿರಬೇಕು.

ಉದ್ದೇಶ, ದೃಷ್ಟಿಕೋನ, ದೈನಿಕ ದಿನಚರಿ, ನಿಯಮಗಳು, ಶಿಬಿರದ ಕರ್ತವ್ಯ, ಪ್ರವಚನ ವೇಳಾಪಟ್ಟಿ ಮತ್ತು ಬೋಧನಾ ಸಾಮಗ್ರಿಗಳು.

4.1 ತರಬೇತಿಯ ಉದ್ದೇಶಗಳು :

- ನೂತನ ವಯಸ್ಕ ಪ್ರವೇಶಿಗಳಿಗೆ ಚಳವಳಿಯ ಇತಿಹಾಸ, ಮಹತ್ವ ಮತ್ತು ಸಿದ್ಧಾಂತವನ್ನು ಮನಮುಟ್ಟುವಂತೆ ನೀಡುವುದು.
- ಪ್ರವೇಶಿಗಳನ್ನು ಸ್ವ-ಇಚ್ಛೆಯಿಂದ ದೀಕ್ಷೆ ತೆಗೆದುಕೊಳ್ಳುವಂತೆ ಪ್ರೇರೇಪಿಸಿ ಚಳವಳಿಯ ಅಧಿಕೃತ ಸದಸ್ಯರನ್ನಾಗಿ ಮಾಡುವುದು.
- ದಳ ನಾಯಕಿಯಾಗಲು "ತರಬೇತಿ ಯೋಜನೆ" ಪಠ್ಯಕ್ರಮದ ಅನುಸಾರ ಅವಶ್ಯಕವಾದ, ಜ್ಞಾನ, ಕೌಶಲ, ಸಾಮರ್ಥ್ಯ ನೀಡುವುದು.
- ಮೂಲ ಸಿದ್ಧಾಂತದ ಮೌಲ್ಯಗಳ ನಿರಂತರ ಅವಶ್ಯಕತೆಯ ಅನಿವಾರ್ಯತೆಯನ್ನು ತಿಳಿಸುವುದು.
- ನಾಯಕತ್ವ ಸಾಮರ್ಥ್ಯ ಬೆಳೆಸುವುದು
- ಸ್ವಯಂ ಅಭಿವೃದ್ಧಿಗಾಗಿ ಪ್ರಗತಿಪರ ತರಬೇತಿ ಪಡೆಯಲು ಪ್ರೋತ್ಸಾಹಿಸುವುದು.
- ವಿಶೇಷ ತರಬೇತಿ, ಸಮಾವೇಶ, ರ್‍ಯಾಲಿ, ಜಾಂಬೂರೇಟ್‌ಗಳಲ್ಲಿ ಭಾಗವಹಿಸಲು ಪ್ರೇರಣೆ ನೀಡುವುದು.
- ದಳ ತೆರೆಯುವುದು, ನೋಂದಾಯಿಸುವುದು, ನಡೆಸುವುದು ಹೇಗೆಂದು ತಿಳಿಸುವುದು.
- ದಳನಾಯಕಿಯ ಜವಾಬ್ದಾರಿ ತಿಳಿಸುವುದು.
- ಮುಖ್ಯ ಶಿಕ್ಷಕರು, ಪೋಷಕರು, ಸಾರ್ವಜನಿಕರು, ವಿದ್ಯಾ ಇಲಾಖೆ, ಸ್ಥಳೀಯ ಸಂಸ್ಥೆಯಿಂದ ರಾಜ್ಯ ಸಂಸ್ಥೆವರೆಗಿನ

ಪದಾಧಿಕಾರಿಗಳೊಡನೆ ಉತ್ತಮ ಸಂಬಂಧ ಹೊಂದುವುದು. ಒಳ್ಳೆಯ ರೀತಿಯಲ್ಲಿ ವ್ಯವಹರಿಸುವುದು, ಸಹಕಾರ ಪಡೆಯುವುದರ ಬಗ್ಗೆ ತಿಳಿಸುವುದು.

- ಸ್ವಯಂ ಅಭಿವೃದ್ಧಿಯ ಮಾರ್ಗಗಳನ್ನು ತಿಳಿಸುವುದು.
- ಹೆಣ್ಣು ಮಕ್ಕಳ ಸಬಲೀಕರಣದಲ್ಲಿ ಗೈಡಿಂಗ್‌ನ ಮಹತ್ವ ತಿಳಿಸುವುದು.

ಮೂಲ ತರಬೇತಿಯ ದೃಷ್ಟಿಕೋನ (Vision)

ತರಬೇತಿ ಬರುವ ಪ್ರವೇಶಿಗಳಾದ ವಯಸ್ಕ ಮಹಿಳೆಯರಿಗೆ, ಯುವತಿಯರಿಗೆ ಚಳವಳಿಯ ಪರಿಚಯವನ್ನು ಮಾಡಿಸಿ, ಸ್ವಪ್ರೇರಣೆಯಿಂದ ಭಾಷೆ ನೀಡುವಂತೆ ಮಾಡಿ, ಚಳವಳಿಯ ಸದಸ್ಯರನ್ನಾಗಿ ಮಾಡಿ, ಪ್ರಭಾವಪೂರಿತ ತರಬೇತಿಯನ್ನು ನೀಡಿ, ನಾಯಕಿಯರನ್ನಾಗಿ ಮಾಡಿ, ಗೈಡ್ ದಳ ತೆರೆಯುವಂತೆ ಪ್ರೋತ್ಸಾಹಿಸಿ, ಚಳವಳಿಯಲ್ಲಿ ಉಳಿದು ಪ್ರಗತಿಪರ ತರಬೇತಿ ತೆಗೆದುಕೊಳ್ಳುವಂತೆ ಹಾಗೂ ಗೈಡ್‌ಗಳಿಗೂ ಪ್ರಗತಿಪರ ತರಬೇತಿ ನೀಡುವಂತೆ ಮನ ಒಲಿಸಿ, ಚಳವಳಿಯ ಬಗ್ಗೆ ಕಾಳಜಿ ಮತ್ತು ಬದ್ಧತೆಯನ್ನು ಮೂಡಿಸಿ, ಚಳವಳಿಯನ್ನು ಗುಣಾತ್ಮಕ ಮತ್ತು ಗಣಾತ್ಮಕವಾಗಿ ಬೆಳೆಸಲು ಸುಭದ್ರವಾದ ಅಡಿಪಾಯವನ್ನು ಹಾಕುವುದಾಗಿದೆ.

4.2 ದೈನಿಕ ದಿನಚರಿ

ಮೊದಲನೇ ದಿನ

09.00 – ಸ್ವಾಗತ, ನೋಂದಣಿ, ತಂಗುವ ವ್ಯವಸ್ಥೆ

11.30 – ಸಮಾವೇಶ – ಪ್ರಾರ್ಥನೆ, ಧ್ವಜಾರೋಹಣ, ದಿನಚರಿ, ಶಿಬಿರದ ನಿಯಮಗಳು ಪಟಾಲಂ ರಚನೆ

12.30 – ಭೋಜನ

02.00 – ಪಟಾಲಂ ರಚನೆ

04.00 – ಪ್ರವಚನ – ಚಳವಳಿಯ ಇತಿಹಾಸ

04.30 – ಪಾನೀಯ ವಿರಾಮ ಮತ್ತು ಶಿಬಿರದ ಪ್ರವಾಸ

07.00 – ಹಾಡು ಹಾಡಿ

08.00 – ಭೋಜನ

10.00 – ಶುಭರಾತ್ರಿ

ಎರಡನೇ ದಿನದಿಂದ ಆರನೇ ದಿನದ ವರೆಗೆ

05.30 – ಸುಪ್ರಭಾತ

06.30 – ವ್ಯಾಯಾಮ

07.30 – ಪರಿವೀಕ್ಷಣೆ

08.00 – ಧ್ವಜಾರೋಹಣ

08.30 – ಬೆಳಗಿನ ಉಪಾಹಾರ

09.15 – ಗೌರವ ನ್ಯಾಯಸಭೆ

09.30 – ಪ್ರವಚನ ಅವಧಿಗಳು

12.30 – ಭೋಜನ ವಿರಾಮ

02.00 ರಿಂದ

02.30 – ವಿರಾಮ ಅವಧಿಯ ಚಟುವಟಿಕೆಗಳು

02.30 ರಿಂದ

04.30 – ಪ್ರವಚನ ಅವಧಿಗಳು

04.30 – ಪಾನೀಯ ವಿರಾಮ

05.00 – ಆಟಗಳು, ಆಜ್ಞಾವಿಧಿಗಳು

07.00 – ಶಿಬಿರಾಗ್ನಿ ಸಮಾರಂಭಗಳು

08.00 – ಭೋಜನ ವಿರಾಮ

10.30 – ಶುಭ ರಾತ್ರಿ

ಏಳನೇ ದಿನ

05.30 – ಸುಪ್ರಭಾತ

07.00 – ಸರ್ವಧರ್ಮ ಪ್ರಾರ್ಥನೆ

07.30 – ಸಲಕರಣೆ ಪಡೆದಿದ್ದರೆ ಹಿಂತಿರುಗಿಸುವುದು

08.00 – ಧ್ವಜಾರೋಹಣ

08.30 – ಉಪಾಹಾರ

09.30 – ಗೌರವ ನ್ಯಾಯ ಸಭೆ

10.00 – ಪ್ರವಚನ

12.30 – ಭೋಜನ ವಿರಾಮ

02.00 – ಶಿಬಿರ ಪರಿಸರದ ಅಂತಿಮ ಪರಿವೀಕ್ಷಣೆ

03.00 – ಮೌಲ್ಯಮಾಪನ

03.30 – ಅಂತಿಮ ನುಡಿ

03.45 – ಧ್ವಜಾ ಅವರೋಹಣ

04.00 – ವಿದಾಯ

4.3 ಶಿಬಿರದ ನಿಯಮಗಳು
(Camp Rules)

+ ಗೈಡ್ ನಿಯಮವೇ ಶಿಬಿರದ ನಿಯಮ.
+ ಆಹಾರ, ನೀರು, ವಿದ್ಯುತ್ ಹಾಗು ಮಾತುಗಳನ್ನು ಹಿತ–ಮಿತವಾಗಿ ಬಳಸಿ.
+ ಸಮಯ ಪಾಲನೆ ಕಡ್ಡಾಯವಾಗಿ ಅನುಸರಿಸಿ.
+ ವೈಯಕ್ತಿಕ, ಸ್ನಾನ ಮತ್ತು ಶೌಚಗೃಹ, ಶಿಬಿರದ ಮತ್ತು ಸುತ್ತಲಿನ ಆವರಣದ ಸ್ವಚ್ಛತೆಯನ್ನು ಕಾಪಾಡಿ.
+ ಅನಾರೋಗ್ಯದ ಬಗ್ಗೆ ತಕ್ಷಣವೇ ಶಿಬಿರದ ಮಾತೆ / ಶಿಬಿರದ ನಾಯಕಿಗೆ ವರದಿ ಮಾಡಿ.
+ ಹೆಚ್ಚಿನ ಆಭರಣ ಮತ್ತು ಹಣವನ್ನು ಶಿಬಿರ ನಾಯಕಿ ಮೂಲಕ ಸುರಕ್ಷಿತವಾಗಿಡಿಸಿ.
+ ನಿಮ್ಮ ಸಾಮಾನುಗಳಿಗೆ ನೀವೇ ಜವಾಬ್ದಾರರು.
+ ಅನುಮತಿ ಇಲ್ಲದೆ ಶಿಬಿರದ ಆವರಣದಿಂದ ಹೊರಕ್ಕೆ ಹೋಗಬಾರದು.
+ ಪ್ರವಚನ ಅವಧಿಯಲ್ಲಿ ಮೊಬೈಲ್‌ಗಳನ್ನು ನಿಶ್ಶಬ್ದಗೊಳಿಸಬೇಕು.
+ ಸಂದರ್ಶಕರ ಸಮಯ ಸಂಜೆ 06.00 ರಿಂದ 07.00 ಗಂಟೆ ಎಂದು ನಿಮ್ಮ ಬಂಧು–ಮಿತ್ರರಿಗೆ ತಿಳಿಸಬೇಕು.
+ ಸುತ್ತಲಿನ ಹಸಿರನ್ನು ಸಂರಕ್ಷಿಸಬೇಕು.
+ ಶಿಬಿರದ ವಾತಾವರಣವನ್ನು ಸಂತಸವಾಗಿರುವಂತೆ ನೋಡಿಕೊಳ್ಳಬೇಕು.
+ ಅಂದಿನ ಕೆಲಸವನ್ನು ಅಂದೇ ಮಾಡಬೇಕು.

ನಿಯಮಗಳನ್ನು ಪಾಲಿಸಿ ತರಬೇತಿಯನ್ನು ಯಶಸ್ವಿಗೊಳಿಸಿ

ದಿನಾಂಕ : **ಶಿಬಿರದ ನಾಯಕಿ**

ಶಿಬಿರದ ಕರ್ತವ್ಯಗಳು (Camp Duties)

1. ಶಿಬಿರದ ಕರ್ತವ್ಯ : ಸಮಾರಂಭಗಳು –

* ಧ್ವಜಾರೋಹಣ ಮತ್ತು ಅವರೋಹಣದ ಜವಾಬ್ದಾರಿ ನಿರ್ವಹಣೆ ಮಾಡುವುದು.
* ದೈನಿಕ ಸುವಿಚಾರ ಸಿದ್ಧತೆ ಮಾಡುವುದು.
* ಗೌರವ ನ್ಯಾಯ ಸಭೆ ನಡೆಸುವುದು.
* ಶಿಬಿರಾರ್ಥಿಗಳ ಟಿಪ್ಪಣಿ ಪುಸ್ತಕ ಸಂಗ್ರಹಿಸಿ ನಾಯಕಿಗೆ ಸಲ್ಲಿಸುವುದು.
* ಸರ್ವಧರ್ಮ ಪ್ರಾರ್ಥನೆಯ ಜವಾಬ್ದಾರಿ ನಿರ್ವಹಣೆ ಮಾಡುವುದು.
* ಸಮಾರೋಪ ಸಮಾರಂಭದ ಜವಾಬ್ದಾರಿ ನಿರ್ವಹಣೆ ಮಾಡುವುದು.
* ಶಿಬಿರಾಗ್ನಿ ಸಮಾರಂಭ ನೆರವೇರಿಸುವುದು.

2. ಶಿಬಿರದ ಕರ್ತವ್ಯ : ಶಿಸ್ತು–ಪ್ರವಚನ ಸಿದ್ಧತೆ –

* 05.30ಕ್ಕೆ ಸುಪ್ರಭಾತ ಕರೆ ನೀಡುವುದು.
* ಪ್ರವಚನ, ಸಭೆ, ಸಮಾರಂಭಗಳ ಸಮಯದ ಬಗ್ಗೆ 5/10 ನಿಮಿಷ ಮುಂಚೆ ಪಟಾಲಂಗಳನ್ನು ಎಚ್ಚರಿಸುವುದು.
* ಪ್ರವಚನ ಚಟುವಟಿಕೆಗಳಿಗೆ ನಾಯಕಿಯ ಸಲಹೆ ಮೇರೆಗೆ ಸ್ಥಳ, ಆಸನ ಮತ್ತು ಸಾಮಗ್ರಿಗಳ ವ್ಯವಸ್ಥೆ ಮಾಡುವುದು.
* ಪ್ರವಚನ ಸ್ಥಳದಲ್ಲಿ ನೀರಿನ ವ್ಯವಸ್ಥೆ ಮಾಡುವುದು.
* ಸೂಚನಾ ಫಲಕದ (Notice Board) ಜವಾಬ್ದಾರಿ ನಿರ್ವಹಣೆ ಮಾಡುವುದು.
* ಪ್ರವಚನದ ಆವರಣ ಸ್ವಚ್ಛವಾಗಿಡುವುದು.

3. ಶಿಬಿರದ ಕರ್ತವ್ಯ : ಊಟೋಪಚಾರ –

* ಪಟಾಲಂಗಳಿಗೆ ಊಟೋಪಚಾರ ಸಮಯಕ್ಕೆ ಸರಿಯಾಗಿ ಬರಲು ಎಚ್ಚರಿಕೆ ನೀಡುವುದು.
* ಆಹಾರ ಬಡಿಸುವ ಹಾಗೂ ಉಣ್ಣುವ ಸ್ಥಳವನ್ನು ಸ್ವಚ್ಛವಾಗಿಡುವುದು.
* ನಲ್ಲಿ ಕಟ್ಟೆಯಲ್ಲಿ ಏನನ್ನೂ ಎಸೆಯದಂತೆ ಕಾವಲು ಕಾಯುವುದು.
* ಭೋಜನ ಸ್ತೋತ್ರ ಹೇಳಿಸುವುದು.
* ಆಹಾರವನ್ನು ಬಡಿಸುವ ಮುನ್ನ ಅಡುಗೆ ವ್ಯವಸ್ಥಾಪಕರಿಂದ ವಿಶೇಷ ಪದಾರ್ಥಗಳ ಅಳತೆ ತಿಳಿದುಕೊಳ್ಳುವುದು.
* ಅವಶ್ಯವಿದ್ದಲ್ಲಿ ಅಡಿಗೆಗೆ ಸಹಾಯ ಮಾಡುವುದು.
* ಅತಿಥಿ ಸತ್ಕಾರಕ್ಕೆ ವ್ಯವಸ್ಥೆ ಮಾಡುವುದು.
* ಆಹಾರ ಹಿತವಾಗಿ, ಮಿತವಾಗಿ ಬಡಿಸುವುದು. ಅಪವ್ಯಯ ಮಾಡದಂತೆ ಮನ ಒಲಿಸುವುದು.

4. **ಶಿಬಿರದ ಕರ್ತವ್ಯ : ಆರೋಗ್ಯ-ಸ್ವಚ್ಛತೆ –**

* ಅನಾರೋಗ್ಯ ಕೂಡಲೇ ತಿಳಿಸಿ ಚಿಕಿತ್ಸೆ ವ್ಯವಸ್ಥೆ ಮಾಡುವುದು.
* ಪ್ರಥಮ ಚಿಕಿತ್ಸೆ ಅವಶ್ಯವಿದ್ದಲ್ಲಿ ಮಾಡುವುದು.
* ನೀರಿನ ಸ್ವಚ್ಛತೆ ಗಮನಿಸಿ, ಬಿಸಿನೀರು ಅಗತ್ಯವಿದ್ದರೆ ಸರಬರಾಜು ಮಾಡಿ.
* ನೀರು ಪೋಲಾಗದಂತೆ ನೋಡಿಕೊಳ್ಳುವುದು.
* ಶೌಚಾಲಯ ಸ್ವಚ್ಛವಾಗಿಡಲು ವ್ಯವಸ್ಥಾಪಕರ ಸಹಾಯ ಪಡೆಯುವುದು.
* ಸ್ನಾನಗೃಹ ಆವರಣದ ಸ್ವಚ್ಛತೆಯ ಜವಾಬ್ದಾರಿ ನಿರ್ವಹಣೆ ಮಾಡುವುದು.

4.5 ಶಿಬಿರದ ಕರ್ತವ್ಯ : ಕರ್ತವ್ಯ ಸರತಿ ಪಟ್ಟಿ (Rota Chart)

1. **ಸಮಾರಂಭ (Ceremonials)**
2. **ಶಿಸ್ತು-ಪ್ರವಚನ ಸಿದ್ಧತೆ (Session)**
3. **ಊಟೋಪಚಾರ (Service)**
4. **ಆರೋಗ್ಯ-ಸ್ವಚ್ಛತೆ (Health & Sanitation)**

ದಿನಗಳು **Days**	ಕರ್ತವ್ಯಗಳ ಸರದಿ **Duty Rotation**			
1	1	2	3	4
2	4	1	2	3
3	3	4	1	2
4	2	3	4	1
5	1	2	3	4
6	4	1	2	3
7	3	4	1	2

* ಶಿಬಿರದ ಕರ್ತವ್ಯಗಳನ್ನು ಗಮನಿಸಿ ಮೌಲ್ಯಮಾಪನ ಮಾಡಿ. ಇದರಿಂದ ಅವರ ನೈಜ ಮನೋಭಾವ ಪರಿಚಯವಾಗುತ್ತದೆ.
* ತರಬೇತಿ ನೀಡುವಾಗ ಪ್ರತಿಯೊಂದು ಕರ್ತವ್ಯಕ್ಕೂ ಒಂದು ಕಾರ್ಡು ಮಾಡಿಕೊಳ್ಳಿ. ಕರ್ತವ್ಯ ಬದಲಾಗುವಾಗ ಕಾರ್ಡನ್ನು ಬದಲಾಯಿಸಿಕೊಳ್ಳಲಿ.
* ಕರ್ತವ್ಯ ಸರದಿ ಪಟ್ಟಿ ದೊಡ್ಡದಾಗಿ ಮಾಡಿ ಸೂಚನಾಫಲಕದ ಮೇಲೆ ಹಾಕಿ.

4.6. ಶಿಬಿರದ ಕರ್ತವ್ಯ : ಕರ್ತವ್ಯ ಬದಲಾವಣೆ (Duty Change)

* ತರಬೇತಿ ಶಿಬಿರದಲ್ಲಿ ಕರ್ತವ್ಯ ಬದಲಾವಣೆಯನ್ನು ಕೆಳಕಂಡಂತೆ ಮಾಡಲಾಗುವುದು.
* ಇದನ್ನು ಭೋಜನ ವಿರಾಮಕ್ಕೆ ಮುನ್ನ ಮಾಡಬೇಕು (ಕರ್ತವ್ಯ ಅವಧಿ 12 Noon to 12 Noon)
* ನಾಯಕಿ ಅಥವಾ ಕೊನೆಯ ಪ್ರವಚನದ ನಾಯಕಿ ಈ ಪ್ರಕ್ರಿಯೆಯನ್ನು ವೀಕ್ಷಿಸುವರು.

- ಬಲದಿಂದ ಎಡಕ್ಕೆ ಎಲ್ಲ ಶಿಬಿರಾರ್ಥಿಗಳು ಪಟಾಲಂವಾರು ಕರ್ತವ್ಯನುಸಾರ ನಿಲ್ಲುವರು.
- ಪಟಾಲಂ ಸದಸ್ಯರು ಅವರಿಗೆ ನೀಡಿದ ಸಂಖ್ಯೆ ಪ್ರಕಾರ ನಿಲ್ಲುವರು.
- ಕರ್ತವ್ಯ ಸಂಖ್ಯೆ ಒಂದು ಬಲತುದಿಯಲ್ಲಿ ನಿಲ್ಲುವರು. ಪಟಾಲಂ ನಾಯಕಿ ಅಷ್ಟಕದ ಮುಂದೆ ಪಟಾಲಂದ ಸಹನಾಯಕಿ ಕೊನೆಯಲ್ಲಿ ನಿಲ್ಲುವರು.
- **ಕನಾ–1** (ಕರ್ತವ್ಯ ನಾಯಕಿ) : **ಕೋರ್ಸ್ ಸಾವಧಾನ್**

Duty Change

On the command of duty change.

- ಪಟಾಲಂದ ಸಹನಾಯಕಿಯರು ಒಟ್ಟಾಗಿ ಒಂದು ಹೆಜ್ಜೆ ಬಲಕ್ಕೆ ಇಟ್ಟು ಒಟ್ಟಿಗೆ ನಡೆದು ನಾಯಕಿ ಸಮಕ್ಕೆ ಬಂದು ಒಂದು ಹೆಜ್ಜೆ ಮುಂದೆ ಇಟ್ಟು ಎಡಕ್ಕೆ ತಿರುಗಿ ನಾಯಕಿಯರ ಮುಂದೆ ನಿಲ್ಲುವರು.
- ನಾಯಕಿ ಸಹನಾಯಕಿ ಪರಸ್ಪರ ವಂದಿಸುವರು.
- ನಾಯಕಿ ಕರ್ತವ್ಯ ಕಾರ್ಡ್ ಮತ್ತು ತೋಳುಪಟ್ಟಿಯನ್ನು ಸಹನಾಯಕಿಗೆ ಕೊಡುವಳು. ಪುನಃ ಪರಸ್ಪರ ವಂದಿಸುವರು.
- ಸಹನಾಯಕಿ About turn ಆಗುತ್ತಾಳೆ.
- ಪಟಾಲಂದ ಸಾಲಿನಲ್ಲಿ 3ನೆಯವಳು (ಇಂದಿನ ಸಹನಾಯಕಿ) ಒಂದು ಹೆಜ್ಜೆ ಬಲಕ್ಕೆ ತೆಗೆದುಕೊಂಡು ಮುಂದಕ್ಕೆ ಚಲಿಸಿ ಎಡಕ್ಕೆ ತಿರುಗಿ ಒಂದು ಹೆಜ್ಜೆ ಮುಂದಕ್ಕೆ ಎಡಕ್ಕೆ ತಿರುಗಿ ನಾಯಕಿ ಮುಂದೆ ನಿಲ್ಲುವಳು. ಪರಸ್ಪರ ವಂದಿಸುವರು. ನಾಯಕಿ ಸಹನಾಯಕಿಗೆ ತೋಳುಪಟ್ಟಿ ನೀಡುವಳು. ಪರಸ್ಪರ ವಂದಿಸುವರು.
- ಸಹನಾಯಕಿ ಒಂದು ಹೆಜ್ಜೆ ಬಲಕ್ಕೆ ತೆಗೆದುಕೊಂಡು ಮುನ್ನಡೆದು ಪಟಾಲಂದ ಕೊನೆಯಲ್ಲಿ ನಿಲ್ಲುವಳು.
- ಕೊನೆಯ ಪಟಾಲಂದ ನಾಯಕಿ ಒಂದು ಹೆಜ್ಜೆ ಮುಂದಕ್ಕೆ ಬಂದು ಬಲಕ್ಕೆ ತಿರುಗಿ ಮುನ್ನಡೆದು ಕರ್ತವ್ಯ ನಾಯಕಿಗೆ ಎದುರಾಗಿ ನಿಲ್ಲುವರು. ಪರಸ್ಪರ ವಂದಿಸುವರು. ಕರ್ತವ್ಯ ಪಟ್ಟಿಯನ್ನು ಅದಲು ಬದಲು ಮಾಡಿಕೊಳ್ಳುವರು. ಪರಸ್ಪರ ವಂದಿಸುವರು. ಕ.ನಾ. ತನ್ನ ಮೊದಲಿನ ಸ್ಥಳಕ್ಕೆ ಹಿಂದಿರುಗುವಳು.

- ಕೊನೆಯ ನಾಯಕಿ ಅವಳ ಪಕ್ಕದ ನಾಯಕರು ಎದುರು ಬದುರಾಗಿ ಪರಸ್ಪರ ವಂದಿಸಿ ಕರ್ತವ್ಯ ಪಟ್ಟಿಯನ್ನು ಅದಲು-ಬದಲು ಮಾಡಿಕೊಳ್ಳುವರು. ಪರಸ್ಪರ ವಂದಿಸಿ ತಮ್ಮ ತಮ್ಮ ಸ್ಥಾನಕ್ಕೆ ಹಿಂತಿರುಗುವರು.
- ಈ ಕರ್ತವ್ಯ ಪಟ್ಟಿ ಅದಲು-ಬದಲಾವಣೆ ಪ್ರತಿದಿನ ಮುಂದುವರೆಯುವುದು.

ಕರ್ತವ್ಯ ಈ ರೀತಿ ಬದಲಾಗುವುದು

1ನೇ ದಿನ	**1**	**2**	**3**	**4**
2ನೇ ದಿನ	**4**	**1**	**2**	**3**

– ನಾಯಕಿ : ವಿಶ್ರಾಂ
ಸಾವಧಾನ್
ಸ್ವಸ್ಥಾನ್

5. ಪ್ರವಚನ ಪೂರ್ವ ಸಿದ್ಧತೆ
(Prepartion for sessions)

ಪೂರ್ವ ಸಿದ್ಧತೆ ಇಲ್ಲದೆ ಯಾವ ಕೆಲಸವೂ ಪರಿಣಾಮಕಾರಿಯಾಗುವುದಿಲ್ಲ. ಪ್ರವಚನಗಳು (Session) ತರಬೇತಿಯ ಒಂದು ಮುಖ್ಯ ಭಾಗ. ತರಬೇತಿ (SOT) ಯೋಜನೆ ಎಂಬ ರಾಷ್ಟ್ರ ಸಂಸ್ಥೆ ಪ್ರಕಟಿಸಿರುವ ಪುಸ್ತಕದಲ್ಲಿ ನೀಡಲಾಗಿರುವ ಗೈಡ್ ಶಿಕ್ಷಕಿಯರ ಮೂಲ ತರಬೇತಿ ಪಠ್ಯವನ್ನು ಆಧರಿಸಿ ಪ್ರವಚನಗಳನ್ನು ಹಂಚಲಾಗುವುದು. ಇವುಗಳನ್ನು ಕುರಿತು ಪರಿಣಾಮಕಾರಿ ತರಬೇತಿ ನೀಡಲು ಪೂರ್ವ ಸಿದ್ಧತೆಗಾಗಿ ಸಲಹೆಗಳನ್ನು ನೀಡಲಾಗಿದೆ.

- ಪ್ರವಚನ ವೇಳಾಪಟ್ಟಿ ಸಿದ್ಧಪಡಿಸಿಕೊಳ್ಳುವುದು. ಅತ್ಯವಶ್ಯಕ ಸಂದರ್ಭಗಳಲ್ಲಿ ಮಾತ್ರ ಬದಲಾಯಿಸಿಕೊಳ್ಳುವುದು.
- ಪ್ರವಚನ ಉದ್ದೇಶ ಪಟ್ಟಿ ಮಾಡುವುದು.
- ವಿಷಯ ಮತ್ತು ಕೌಶಲ ಪ್ರಭುತ್ವದ ಬಗ್ಗೆ ಖಚಿತಪಡಿಸಿಕೊಳ್ಳುವುದು. ಸಂಬಂಧಪಟ್ಟ ಮಾಹಿತಿ, ಹಸ್ತಪ್ರತಿ ಸಿದ್ಧಗೊಳಿಸಿಕೊಳ್ಳುವುದು.
- ವಿಷಯಕ್ಕೆ ತಕ್ಕಂತೆ ವಿಧಾನ ಮತ್ತು ತಂತ್ರ ಆಯ್ಕೆ ಮಾಡಿಕೊಳ್ಳುವುದು.
- ಪ್ರವಚನಕ್ಕೆ ಸಾಮಗ್ರಿ ಸಿದ್ಧವಾಗಿಡುವುದು.
- ಪ್ರವಚನಕ್ಕೆ ಸ್ಥಳ ಆಯ್ಕೆ ಮಾಡಿಕೊಳ್ಳುವುದು.
- ಆಸನ ವ್ಯವಸ್ಥೆ ಬಗ್ಗೆ ಮೊದಲೇ ಪ್ರಶಿಕ್ಷಣಾರ್ಥಿ ನಾಯಕಿಗೆ ತಿಳಿಸುವುದು.
- ಚೇತೋಹಾರಿಗಳನ್ನು ನಿರ್ಧರಿಸುವುದು.
- ಸಮಯಕ್ಕೆ ಸರಿಯಾಗಿ ಪ್ರಾರಂಭಿಸುವುದು ಮತ್ತು ಮುಕ್ತಾಯಗೊಳಿಸುವುದು.
- ಪ್ರವಚನದ ಅವಧಿಯಲ್ಲಿ ಚಟುವಟಿಕೆಗಳಿಗೆ ಸಮಯ ನಿಗದಿಪಡಿಸುವುದು.
- ಪ್ರವಚನವನ್ನು ಒತ್ತಡ ಮುಕ್ತವಾಗಿ ಮಾಡುವುದು.
- ಸಹಾಯಕ ಪ್ರಶಿಕ್ಷಕರಿಗೆ ಪ್ರವಚನವನ್ನು ಹಂಚುವುದು. ಸಿದ್ಧತೆಗೆ ಸಹಾಯ ಮತ್ತು ಸಹಕಾರ ನೀಡುವುದು.

ತರಬೇತಿ ಗೊಂದಲರಹಿತವಾಗಿ ಕ್ರಮಬದ್ಧವಾಗಿ ನಡೆಯಬೇಕಾದರೆ ಪೂರ್ವ ಯೋಜನೆಗಳು ಸಿದ್ಧವಿರಬೇಕು.

ಪ್ರವಚನ ವಿಧಾನಗಳು :

0 ಉಪನ್ಯಾಸ, ಪ್ರಶ್ನೋತ್ತರ (Elicition) – (Power Point)

0 ಪ್ರದರ್ಶನ, ಪ್ರಾತ್ಯಕ್ಷಿಕೆ, ಕಥನ, ವಲಯಾವೃತ್ತಿ (Base Method) – ಅಂತರ್ಜಾಲ ಬಳಕೆ (Internet)

0 ತಂಡ ಬೋಧನೆ, ನಿಯೋಜನೆ, ವಿಚಾರಣೆ (Enquiry) – CD - LCD

0 ನೆಲಹಾಸು (Sand bed method) ವೀಕ್ಷಣೆ, ಸ್ವಕಲಿಕೆ, ಸಮಸ್ಯೆ ಪರಿಹಾರ, ಮೆದುಳು ಪ್ರಚೋದನೆ (Brain Storming), ಗುಂಪು ಚರ್ಚೆ (Group Discussion)

ತಂತ್ರಗಳು : ಶೈಕ್ಷಣಿಕ ಆಟಗಳು, ಹಾಡು, ಕಥೆ, ಪಾತ್ರಾಭಿನಯ, ಅನ್ವೇಷಣೆ, ವಿಶ್ಲೇಷಣೆ, ರಸಪ್ರಶ್ನೆ, ಚೇತೋಹಾರಿ, ವಿವಿಧ ಮಾಧ್ಯಮಗಳು.

5.1 ಪ್ರಶಿಕ್ಷಕರ ವೈಯುಕ್ತಿಕ ತರಬೇತಿ ಸಂಚಿ

ತರಬೇತಿಯಲ್ಲಿ ತರಬೇತುದಾರರು ಜ್ಞಾನ, ಕೌಶಲಗಳ ಪ್ರಭುತ್ವವನ್ನು ಮತ್ತು ಅವುಗಳನ್ನು ನೀಡಲು ಬೇಕಾದ ಸಾಧನ ಸಲಕರಣೆಗಳನ್ನು ಹೊಂದಿರಬೇಕು. ಸಾಧನ ಸಲಕರಣೆಗಳ ಸಂಗ್ರಹವೇ ತರಬೇತಿ ಸಂಚಿ. ಇದು ವೈಯುಕ್ತಿಕವಾಗಿರಬೇಕು.

ತರಬೇತಿ ಸಂಚಿ (Training Kit) ಸಿದ್ಧತೆ :

ಮೂಲ ತರಬೇತಿಯನ್ನು ಸ್ಥಳೀಯ ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಸಲಾಗುವುದು. ಬಹುಪಾಲು ತರಬೇತಿಗೆಬೇಕಾದ ಅವಶ್ಯಕ ವಸ್ತುಗಳು ದೊರೆಯದೆ ತರಬೇತಿ ವಿಫಲಗೊಳ್ಳುತ್ತದೆ. ಸ್ಥಳ ಮತ್ತು ವಸತಿ, ಊಟೋಪಚಾರದ ವ್ಯವಸ್ಥೆಯು ಇದಕ್ಕೆ ಹೊರತಾಗಿರುವುದಿಲ್ಲ. ಆದ್ದರಿಂದ ಬದ್ಧತೆ ಮತ್ತು ಕಾಳಜಿಯುಳ್ಳ ಪ್ರಶಿಕ್ಷಕರಾದ ನಾವು ಅವಶ್ಯಕ ವಸ್ತುಗಳ ಒಂದು ಸಂಚಿಯನ್ನು ಸಿದ್ಧವಾಗಿಟ್ಟುಕೊಂಡರೆ ತರಬೇತಿಯನ್ನು ಸಫಲವಾಗಿ ನಡೆಸಬಹುದು.

ಒಮ್ಮೆ ಬಿ.ಪಿ.ಯವರು ಅವರ ಅಧಿಕಾರಿ ತುರ್ತುಕರೆ ನೀಡಿದಾಗ 10 ನಿಮಿಷಗಳಲ್ಲಿ ತಮ್ಮ ಸಂಚಿಯೊಡನೆ ಹಾಜರಾದರಂತೆ, ಪ್ರಸನ್ನಗೊಂಡ ಅವರ ಅಧಿಕಾರಿ ಹೀಗೆ ಹೇಳಿದರಂತೆ **"This young man BP will go a very long way in the army as he has learnt to be prepared for emergency"**. ಅಂತೆಯೇ ಬಿ.ಪಿ.ಯವರು 43ನೇ ವರ್ಷದಲ್ಲಿ ಕಿರಿಯ ಜನರಲ್ ಆಗಿ ಬಡ್ತಿ ಹೊಂದಿದರು. ಮುಂದೊಂದು ದಿನ ಈ ಸೈನ್ಯಾಧಿಕಾರಿಯು ಬಿ.ಪಿ.ಯವರ ಬಗ್ಗೆ ಬಳಸಿದ **'Be prepared'** ಸ್ಕೌಟ್-ಗೈಡ್‌ಗಳ ಧ್ಯೇಯ ವಾಕ್ಯವಾಯಿತು.

ಸಂಚಿಯಲ್ಲಿ ಇರಬೇಕಾದ ಸಾಮಾನುಗಳು

1. **ಪುಸ್ತಕ ಸಂಗ್ರಹ (Book collection)**
   - ಬಾಲಕರಿಗಾಗಿ ಸ್ಕೌಟಿಂಗ್ (ಕನ್ನಡ) / Scouting for Boys
   - ಗರ್ಲ್ ಗೈಡ್ ಮಾರ್ಗದರ್ಶಿ / Girl Guiding in India, APRO Part-III / ಗುರಿ, ನೀತಿ, ನಿಯಮ ಮತ್ತು ಸಂಘಟನೆ ಭಾಗ-III
   - Scheme of Training
   - ಹಸ್ತಪ್ರತಿಗಳು, ಹಾಡುಗಳು, ರಸಪ್ರಶ್ನೆಗಳು, ಆಟಗಳ ಮತ್ತು ಕಿರುಪುಸ್ತಕಗಳ ಸಂಗ್ರಹ.
   - ಕಿರುಕಥೆಗಳು, ಒಗಟುಗಳು, ಭಾರತ್ ಸ್ಕೌಟ್ಸ್-ಗೈಡ್ಸ್ ಮಾಸಿಕಗಳಲ್ಲಿ ಬರುವ ಉಪಯುಕ್ತ ಲೇಖನಗಳ ಸಂಗ್ರಹ.
   - ಒಳ್ಳೆ ಜೋಕ್ಸ್‌ಗಳು.

2. **ತರಬೇತಿ ಸಾಮಗ್ರಿ (Training Materials)**
   - ಚಿತ್ರಪಟ; ಮಿಂಚುಫಲಕ; ಗಂಟು ಕಟ್ಟು; ಮಾದರಿ (ಸಂಚಿಯಲ್ಲಿ ಹಿಡಿಸುವಷ್ಟು); ಒಂದೆರಡು ಕೈಕೆಲಸ ಮಾದರಿ; ಮಾದರಿ ಧ್ವಜಗಳು; ಮೂರು ಮೀಟರ್ ಹಗ್ಗ (ತುದಿಕಟ್ಟು ಕಟ್ಟಿರಬೇಕು) ಮತ್ತು ಆಟದ ಸಾಮಗ್ರಿ; ಚಟುವಟಿಕೆ ಪ್ರದರ್ಶಿಸುವ ಛಾಯಾಚಿತ್ರಗಳು; ಪಾರದರ್ಶಿಕೆ (Transparency); ಕ್ಯಾಸೆಟ್; ಸಿ.ಡಿ. (ಪ್ರದರ್ಶಕಗಳಿದ್ದರೆ ಬಳಸಿ); ಪಾವರ್ ಪಯಿಂಟ್

3. ಬರಹಗಳು (Write ups)

- ಶಿಬಿರದ ನಿಯಮ; ದಿನಚರಿ; ಕರ್ತವ್ಯಗಳ ಪಟ್ಟಿ; ಪ್ರವಚನ ವಿವರ ವೇಳಾಪಟ್ಟಿ; ಸೂಚನಾ ಫಲಕದ ಸಾಮಗ್ರಿಗಳು; ನೋಂದಣಿ ನಮೂನೆ; ಪರಿವೀಕ್ಷಣಾ ನಮೂನೆಗಳು; ಮೌಲ್ಯಮಾಪನ ಪ್ರಶ್ನಾವಳಿ; ವರದಿ ನಮೂನೆ.

4. ಕಂಪ್ಯೂಟರ್ / ಲ್ಯಾಪ್‌ಟಾಪ್

ವೆಬ್‌ಸೈಟ್, ಎಲ್.ಸಿ.ಡಿ., ಓ.ಹೆಚ್.ಪಿ. ಇವುಗಳಲ್ಲಿ ಸಾಧ್ಯವಾದವುಗಳನ್ನು ಲಭ್ಯವಿರುವವುಗಳನ್ನು ಬಳಸಿ.

ತರಬೇತಿಯ ಯಶಸ್ವಿ ಅಂಶಗಳು :

- ಪ್ರಶಿಕ್ಷಕರ ವಯಸ್ಸು, ಆರೋಗ್ಯ ಅನುಭವ ಆಸಕ್ತಿ
- ಚಳವಳಿಯ ಬಗ್ಗೆ ಬದ್ಧತೆ ಕಾಳಜಿ, ಸ್ಫೂರ್ತಿ
- ವಿಷಯ ಮತ್ತು ಕೌಶಲಗಳ ಪ್ರಭುತ್ವ
- ಸಮರ್ಥ ಮತ್ತು ಮಾದರಿ ನಾಯಕತ್ವ
- ಸಮಯ ಪ್ರಜ್ಞೆ, ಶಿಸ್ತು
- ಸಮಸ್ಯೆ ಪರಿಹಾರ ಕೌಶಲ
- ಸವಾಲು ಎದುರಿಸಲು ಸಾಮರ್ಥ್ಯ

5.2 ಒಂದು ಪ್ರವಚನ ಯಶಸ್ವಿಯಾಗಬೇಕಾದರೆ ಬೇಕಾದ ಅಂಶಗಳ ಮಾದರಿ –



ಭಾಗ–2
ಪ್ರವಚನಗಳು
ಪ್ರವಚನ ವೇಳಾಪಟ್ಟಿ
(Session Time Table)

ಒಂದು ಮಾದರಿ

ಮೊದಲನೇ ದಿನ			ತರಬೇತಿ ಯೋಜನೆ ಕ್ರಸಂ.
1.	ಸಮಾವೇಶ –	ಪ್ರಾರ್ಥನೆ, ಧ್ವಜಾರೋಹಣ, ಸ್ವಾಗತ	
2.	ಪರಿಚಯ	* ಪ್ರಶಿಕ್ಷಕರ ಪರಿಚಯ	
		* ಪ್ರಶಿಕ್ಷಣಾರ್ಥಿಗಳ ಪರಿಚಯ	
		* ಪರಿಚಯದಾಟ	
3.	ಚಳವಳಿಯ ಪ್ರಸ್ತಾವನೆ		
4.	ಶಿಬಿರದ ಪ್ರಸ್ತಾವನೆ	– ದಿನಚರಿ	* SOT-01
		– ನಿಯಮ	
		– ಕರ್ತವ್ಯ	
		– ಉದ್ದೇಶ	
5.	ಅಷ್ಟಕರ ರಚನೆ	– ನಾಮಕರಣ	
		ಲಾಂಛನ ಸಿದ್ಧತೆ	
		ಪಟಾಲಂ ಧ್ವಜ ಸಿದ್ಧತೆ	
		ಘೋಷಣೆ ರಚನೆ	
6.	ಪ್ರಾರ್ಥನಾ ಗೀತೆ	– ಅರ್ಥ, ರಚನೆ, ಅವಧಿ	SOT-05
	ಧ್ವಜಗೀತೆ	– ಅರ್ಥ, ರಚನೆ, ಅವಧಿ	
7.	ಸಂಕ್ಷಿಪ್ತ ಇತಿಹಾಸ –		SOT-02
8.	ಆಟ – ಏಕೆ? ಹೇಗೆ?		SOT-11
	ಹಸ್ತ ಮತ್ತು ಸೀಟಿ ಸಂಕೇತ	RM 8	
	ಪಟಾಲಂವಾರು ಆಟ	RM 5	
9.	ಹಾಡಿ – ಹಾಡಿ		SOT-20
	ಸಮಾರಂಭಗಳು		
	ಶಿಬಿರಾಗ್ನಿ ಬಗ್ಗೆ ಹೇಳುವುದು		

ಎರಡನೇ ದಿನ

1. ಘೂಲ ಸಿದ್ಧಾಂತ SOT-03
2. ಪ್ರತಿಜ್ಞೆ – ನಿಯಮ SOT-07
3. ಸಮವಸ್ತ್ರ SOT-04
4. ವಂದನೆ, ಧ್ಯೇಯ, ಎಡಗೈ ಹಸ್ತಲಾಘವ – ಸತ್ಕಾರ್ಯ SOT-07
5. ಧ್ವಜಗಳು – ರಾಷ್ಟ್ರಧ್ವಜ – ಭಾರತ್ ಸ್ಕೌಟ್ ಮತ್ತು ಗೈಡ್ ಧ್ವಜ – ವಿಶ್ವ ಗೈಡ್ ಧ್ವಜ SOT-06
6. ಹಗ್ಗ ಕೌಶಲ–1 : ತುದಿಕಟ್ಟು, ಸಮಗಂಟು, ಕೊಟ್ಟಿಗೆಗಂಟು, ಮೂಲೆಗಂಟು SOT-10
   ಒಂದು ಸುತ್ತು ಎರಡು ಮಲಕುಸ ದಿಮ್ಮಿಗಂಟು.
7. ಆರೋಗ್ಯ ಮಹತ್ವ SOT-13
8. ಆಟದ ಮಹತ್ವ SOT-19 SOT-21
9. ಶಿಬಿರಾಗ್ನಿ
   ದೀಕ್ಷಾ ಸಮಾರಂಭದ ಬಗ್ಗೆ ಹೇಳುವುದು

ಮೂರನೇ ದಿನ

1. ಗೈಡ್ ವಿಭಾಗಗಳ ಪರಿಚಯ (ಪೂರಕ ವಿಷಯ)
2. ಪಟಾಲಂ ಪದ್ಧತಿ SOT-15
3. ಗುಂಪು ಪದ್ಧತಿ SOT-23
4. ಪ್ರಥಮ ಚಿಕಿತ್ಸೆ SOT-22
5. ಶಿಬಿರವಾಸ SOT-29
6. ಹಗ್ಗ ಕೌಶಲ 2 : ಚೌಕಕಟ್ಟು, ಕರ್ಣಕಟ್ಟು, ಸಮನಾಂತರ ಕಟ್ಟು, ಪಟಾಲಂ ಕಟ್ಟು SOT-10
7. ಶಿಬಿರ ಪೀಠೋಪಕರಣ ತಯಾರಿಕೆ SOT-29
8. ಆಟ : ವ್ಯಾಪಕ ಆಟ (ದ್ವಿಸೋ.)
9. ಶಿಬಿರಾಗ್ನಿ : ಚಿಂತನ ದಿನಾಚರಣೆಯ ಬಗ್ಗೆ ಹೇಳುವುದು.

ನಾಲ್ಕನೇ ದಿನ

1. ಸಂಘಟನೆ : ಸ್ಥಳೀಯ ಜಿಲ್ಲೆ, ರಾಜ್ಯ SOT-24
2. ಪ್ರಗತಿಪರ ತರಬೇತಿ SOT-31
   – ಗೈಡ್ ಶಿಕ್ಷಕಿಯರು
   – ಗೈಡ್‌ಗಳು
3. ಪದಕ ಪರಿಚಯ – ಶ್ರೇಣಿ ಪದಕ, ಪ್ರಾವೀಣ್ಯತಾ ಪದಕ (ಪೂರಕ ವಿಷಯ)
4. ದಿಕ್ಸೂಚಿ, ನಕ್ಷತ್ರ ಪುಂಜ SOT-12
5. ಪ್ರವೇಶದಿಂದ ದ್ವಿತೀಯ ಸೋಪಾನ SOT-14
   – ತರಬೇತಿ, ಪರೀಕ್ಷೆ

6. ವನವಿದ್ಯಾ ಕೌಶಲ SOT-09

7. ಹೊರಸಂಚಾರ ಏಕೆ? ಹೇಗೆ? SOT-16

8. ಹಗ್ಗ ಕೌಶಲ 3 : ಗಂಟು, ಅಷ್ಟಕಗಂಟು, ಕಣಕಾಲುಗುಂಟು, ಬೆಸ್ತರಗಂಟು, ಬಾಗುಗಂಟು SOT-10

9. ವಯೋಮಾನದ ಮನೋಧರ್ಮ (15 ರಿಂದ 18) SOT-30

10. ಆಟ – ಹಾಜರಿ ಕವಾಯತು SOT-21

11. ಶಿಬಿರಾಗ್ನಿ : ಸರ್ವಧರ್ಮ ಪ್ರಾರ್ಥನೆ ಬಗ್ಗೆ ಹೇಳುವುದು.

ಐದನೇ ದಿನ

1. ಕಾರ್ಯಯೋಜನೆ SOT-28

2. ದಳಸಭೆ ಯೋಜನೆ

3. ಪ್ರಥಮ ಚಿಕಿತ್ಸೆ

4. ಹೊರಸಂಚಾರ – ಮಧ್ಯಾಹ್ನದಿಂದ ಸಂಜೆಯವರೆಗೆ SOT-22

ಆರನೇ ದಿನ

1. ದಳ ತೆರೆಯುವುದು, ನಡೆಸುವುದು SOT-27

2. ಸಹಕಾರ : ಶಾಲೆ, ಪೋಷಕರು, ಸಾರ್ವಜನಿಕರು, ಸ್ವಯಂ ಅಭಿವೃದ್ಧಿ SOT-26

3. ಕರಕೌಶಲ SOT-18

4. ಉರುವಲು ಜೋಡಣೆ – ಬೆಂಕಿ ಬಗ್ಗೆ ಎಚ್ಚರಿಕೆ (ದ್ವಿ.ಸೋ.)

5. ಅಂದಾಜು ಅಳತೆ (ದ್ವಿ.ಸೋ)

6. ಪ್ರದರ್ಶನ ದಳಸಭೆ

7. ಪುಸ್ತಕಗಳ ಪರಿಚಯ (ಪೂರಕ ವಿಷಯ)

8. ಆಟ – ಪಥ ಸಂಚಲನ

9. ಭವ್ಯ ಶಿಬಿರಾಗ್ನಿ

ಏಳನೇ ದಿನ

1. ಸರ್ವಧರ್ಮ ಪ್ರಾರ್ಥನೆ SOT-25

2. ಗೈಡ್ ಶಿಕ್ಷಕಿಯರ ಜವಾಬ್ದಾರಿಕೆ

3. ಜ್ಞಾನೇಂದ್ರಿಯಗಳ ಆಟ (ಕಿಮ್ಸ್‌ನ ಆಟ)

4. ಪುನರಾವರ್ತನೆ

5. ಮೌಲ್ಯಮಾಪನ

6. ಅಂತಿಮ ನುಡಿ SOT-32

7. ನುಡಿನಮನ

8. ಧ್ವಜ ಅವರೋಹಣ

9. ವಿದಾಯ

ಈ ಪ್ರವಚನ ವೇಳಾಪಟ್ಟಿಯನ್ನು ಕೆಳಗಿನ ಅಂಶಗಳ ಆಧಾರದ ಮೇಲೆ ರಚಿಸಲಾಗಿದೆ :

ಸೂಚನೆ : RM - Residential Module
SOT - Scheme of Training
SLM - Self Learning Module

1. ಎಲ್ಲಾ ಉಪನ್ಯಾಸ ಪ್ರಧಾನ (Theory) ತತ್ವಾಧಾರಿತ ವಿಷಯಗಳನ್ನು ಬೆಳಗಿನ ಒಂದು ಮತ್ತು ಎರಡನೇ ಅವಧಿಗಳಲ್ಲಿ ಅಳವಡಿಸಲಾಗಿದೆ.
2. 3, 4 ಅವಧಿಗಳಲ್ಲಿ ಪ್ರದರ್ಶನ ಮತ್ತು ಕೌಶಲಾಧಾರಿತ ವಿಷಯಗಳನ್ನು ಅಳವಡಿಸಲಾಗಿದೆ.
3. 5 ಮತ್ತು 6ನೇ ಅವಧಿ ಕೌಶಲ ಮತ್ತು ಪ್ರಾತ್ಯಕ್ಷಿಕೆ ಪ್ರಧಾನ ವಿಷಯಗಳನ್ನು ಅಳವಡಿಸಲಾಗಿದೆ.
4. ಆಟದ ಅವಧಿಯಲ್ಲಿ ಆಜ್ಞಾಬದ್ಧ ವಿಧಿ (Ceremonials) ಗಳನ್ನು ಆಟದ ಜೊತೆ ಅಳವಡಿಸಲಾಗಿದೆ. ಇದರಿಂದ ಕೌಶಲ ಪಠ್ಯಕ್ಕೆ ಹೆಚ್ಚು ಸಮಯ ದೊರೆಯುತ್ತದೆ.
5. ಹಾಡಿ ಹಾಡಿ ಮತ್ತು ಶಿಬಿರಾಗ್ನಿ ವೇಳೆಯಲ್ಲಿ ವಿಧಿಬದ್ಧ ಸಮಾರಂಭ (Ceremonies) ಗಳನ್ನು ದಿನಕ್ಕೊಂದರಂತೆ ಅಳವಡಿಸಲಾಗಿದೆ. ಇದರಿಂದ ಕೌಶಲ ಪಠ್ಯಕ್ಕೆ ಹೆಚ್ಚು ಸಮಯ ದೊರೆಯುತ್ತದೆ.
6. ಈ ಪ್ರವಚನ ಯೋಜನೆಯನ್ನು ಹಲವಾರು ಬಾರಿ ಅಕ್ಷರಶಃ ಪ್ರಯೋಗಮಾಡಿ ತಯಾರಿಸಲಾಗಿದೆ. ಇದರ ಜೊತೆಗೆ ಬಾಲಕಿಯರ ಕಾರ್ಯಕ್ರಮ ದ್ವಿತೀಯ ಸೋಪಾನದವರೆಗೆ ಗು.ನೀ.ನಿ.ಸಂ. ಭಾಗ–3ರಲ್ಲಿನ ಪಠ್ಯ ತಾಳೆ ಮಾಡಿ ನೋಡಿದಾಗ ನಕ್ಷತ್ರ ಪುಂಜಗಳ ಮೂಲಕ ಉತ್ತರ, ಉರುವಲು ಜೋಡಣೆ, ಬೆಂಕಿ ಬಗ್ಗೆ ಎಚ್ಚರಿಕೆ, ಪದಕ ಪರಿಚಯ, ಗೈಡ್‌ಗಳಿಗೆ ತರಬೇತಿ ನೀಡಲು ಅವಶ್ಯಕವೆಂದು ಇದರಲ್ಲಿ ಸೇರಿಸಲಾಗಿದೆ. ತರಬೇತಿದಾರರು ಇದನ್ನೊಮ್ಮೆ ನೋಡಿ ತಮಗೆ ಅವಶ್ಯಕವೆನಿಸಿದಲ್ಲಿ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಿಕೊಳ್ಳಬಹುದು.
7. ಗಂಟುಗಳು, ಪ್ರಥಮ ಚಿಕಿತ್ಸೆ, ಶಿಬಿರ ಕೌಶಲ, ಅಗ್ರಗಾಮಿತ್ವ, ದಿಕ್ಕುಗಳಿಗೆ 2 ರಿಂದ 3 ಅವಧಿ ನೀಡಲಾಗಿದೆ. ಈ ವಿಷಯಗಳನ್ನು ವಿಭಾಗ ಮಾಡಿ ಕೊಡಲಾಗಿದೆ.
8. ಕ್ರಮದಲ್ಲಿ ಪ್ರವಚನದಲ್ಲಿ ಬೇಕಾದ ಭಾಗಗಳನ್ನು ಆಯ್ಕೆ ಮಾಡಿಕೊಳ್ಳಿ. ಅದರ ಪುಟ ಸಂಖ್ಯೆಗೆ ಪರಿವಿಡಿಯಲ್ಲಿ ನೋಡಿ.
9. ಚಟುವಟಿಕೆ ಹಾಳೆಗಳು ಹಾಗೂ ಚಿತ್ರಗಳನ್ನು ಅವಶ್ಯವಾದಲ್ಲಿ ಜೆರಾಕ್ಸ್ ಮಾಡಿಸಿ ಕೊಡಿ.
10. ಪ್ರವಚನದ ವಿವರಗಳು ಬೇಕಾದಲ್ಲಿ ಗರ್ಲ್ ಗೈಡ್ ಮಾರ್ಗದರ್ಶಿ, Girl Guiding in India, ಗು.ನೀ.ನಿ.ಸಂ. ಭಾಗ–3 SOT ಹಾಗೂ Scouting for Boys ಪುಸ್ತಕಗಳನ್ನು ನೋಡಿ.

"Plan your work, work your plan."
"ನಿಮ್ಮ ಕೆಲಸದ ಯೋಜನೆ ತಯಾರಿಸಿ, ಯೋಜನೆಯ ಪ್ರಕಾರ ಕೆಲಸ ಮಾಡಿ"
– ಬಿ.ಪಿ.

"ಯೋಜನೆ ಇಲ್ಲದ ಕೆಲಸ, ಗುರಿಯಿಲ್ಲದ ಗಾಳಿಪಟದಂತೆ ಎತ್ತೆತ್ತಲೋ ಸಾಗುತ್ತದೆ."

ಪ್ರವಚನ:1 ಭಾರತ್ ಸ್ಕೌಟ್-ಗೈಡ್ ಪ್ರಾರ್ಥನೆ (PRAYER)

ಹಿಂದಿ ಗೀತೆ		ಕನ್ನಡ ಅರ್ಥ	
ದಯಾಕರ ದಾನ ಭಕ್ತಿ ಕಾ		ದಯ ಮಾಡು ಭಕ್ತಿಯ ದಾನವನು	
ಹಮೆ ಪರಮಾತಮಾ ದೇನಾ		ಪರಮಾತ್ಮನೆ ಎಮಗೆ ನೀಡು	
ದಯಾಕರನಾ ಹಮಾರಿ		ದಯಮಾಡಿ ನಮ್ಮಯ	
ಆತಮಾ ಮೆ ಶುದ್ಧತಾ ದೇನಾ ॥		ಆತ್ಮದಲ್ಲಿ ಶುದ್ಧತೆಯ ನೀಡು ॥	
ಹಮಾರೆ ಧ್ಯಾನ ಮೆ ಆವೊ		ನಮ್ಮಯ ಧ್ಯಾನದಿ ಬಾರೋ,	
ಪ್ರಭು, ಆಂಖೋಮೆ ಬಸಜಾವೊ		ಪ್ರಭು! ನಮ್ಮಯ ನೇತ್ರದಿ ನೆಲೆಸು,	
ಅಂಧೇರೆ ದಿಲ್‌ಮೆ ಆಕರಕೆ		ಕತ್ತಲೆ ಕವಿದ ಎಮ್ಮಯ ಮನದಿ	
ಪರಂಜ್ಯೋತಿ ಜಗಾದೇನಾ	॥೧॥	ಪ್ರಭು! ಪರಂಜ್ಯೋತಿಯ ಬೆಳಗಿಸು	॥೧॥
ಬಹಾದೋ ಪ್ರೇಮಕಿ ಗಂಗಾ		ಪ್ರೇಮದ ಗಂಗೆಯ ಹರಿಸು	
ದಿಲೋಮೆ ಪ್ರೇಮ ಕಾ ಸಾಗರ್		ಮನದಲಿ ಪ್ರೇಮದ ಸಾಗರವನಿರಿಸು	
ಹಮೇ ಆಪಸ್ ಮೆ ಮಿಲ್‌ಝುಲ್‌ಕರ್		ಎಲ್ಲರೂ ಜೊತೆ ಗೂಡಿ ಬಾಳುವಂತೆ	
ಪ್ರಭು, ರಹನಾ ಸಿಖಾದೇನಾ	॥೨॥	ಪ್ರಭು! ಹಾರೈಸು ನಮ್ಮೆಲ್ಲರನ್ನು	॥೨॥
ಹಮಾರಾ ಕರ್ಮ ಹೋ ಸೇವಾ		ನಮ್ಮಯ ಕರ್ಮವು (ಕೆಲಸ) ಸೇವೆಯು	
ಹಮಾರಾ ಧರ್ಮ ಹೋ ಸೇವಾ		ನಮ್ಮಯ ಧರ್ಮವು ಸೇವೆಯು	
ಸದಾ ಈಮಾನ ಹೋ ಸೇವಾ		ಸದಾ ಸೇವೆಯು ಪ್ರಾಮಾಣಿಕವಾಗಿರಲಿ	
ವೊ ಸೇವಕ ಚರ್ ಬನಾದೇನಾ	॥೩॥	ಈ ಸೇವಕರನ್ನು ನಿನ್ನ ದಾಸನಾಗಿಸು	॥೩॥
ವತನ ಕೆ ವಾಸತೆ ಜೀನಾ		ರಾಷ್ಟ್ರಕ್ಕಾಗಿ ಜೀವಿಸುವಾ	
ವತನ ಕೆ ವಾಸತೆ ಮರನಾ		ರಾಷ್ಟ್ರಕ್ಕಾಗಿ ಬಲಿಯಾಗುವಾ	
ವತನ ಪರ್ ಜಾನ್ ಫಿದಾಕರನಾ		ರಾಷ್ಟ್ರಕ್ಕಾಗಿ ಎಲ್ಲವನು ತ್ಯಾಗ ಮಾಡುವ	
ಪ್ರಭು ಹಮಕೊ, ಸಿಖಾದೇನಾ	॥೪॥	ಪ್ರಭು! ಕಲಿಸು ನಮ್ಮೆಲ್ಲರಿಗೂ	॥೪॥

ನಮ್ಮ ಚಳವಳಿಗೆ ತನ್ನದೇ ಆದ ಪ್ರಾರ್ಥನಾ ಗೀತೆ ಇದೆ. ಇದನ್ನು ನಮ್ಮ ಚಳವಳಿಯ ಯಾವುದೇ ಸಮಾರಂಭ ಮತ್ತು ಸಭೆಗಳು ಪ್ರಾರಂಭವಾಗುವ ಮುನ್ನ ಹಾಡುತ್ತೇವೆ. ಈ ಗೀತೆ ರಾಷ್ಟ್ರಕ್ಕಾಗಿ ಜೀವಿಸುವ, ಬಲಿ ಯಾಗುವ ಮತ್ತು ತ್ಯಾಗ ಮಾಡುವ ಮನೋಭಾವವನ್ನು ಬೆಳಸುತ್ತದೆ. ಇದನ್ನು ರಚಿಸಿದವರು **ಶ್ರೀ ವೀರ್‌ದೇವ್ ವೀರ್**, ಇದನ್ನು **90** ಸೆಕೆಂಡುಗಳಲ್ಲಿ ಹಾಡಬೇಕು.

B.S & G Proejer

"Dayaa Kar Daan Bhakti Kaa
Hamen Paramatma Denaa
Dayaa Karnaa Hamaari Atmaa
Main Shuddhata Denaa ||

Hamere Dhyaan Main Aao
Prabhu Ankon Main Bas Jao
Andhere Dil Main Aa Kar Ke
Param Jyoti Jagaa Denaa ||1||

Bahaada Prem Ki Ganga
Dilon Main Prem Kaa Sagar
Hamen Aapas Main Miljulkar
Prabhu Rehna Sikha Denaa ||2||

Hamaraa Karm Ho Sevaa
Hamaraa Dharm Ho Sevaa
Sadaa Iman Ho Sevaa
Wah Sevakchar Banaa Denaa ||3||

Vatan Ke Vaaste Jeenaa
Vatan Ke Vaaste Marnaa
Vatan Par Jaan Fidaa Karnaa
Prabhu Humko Sikhaa Denaa" ||4||

[Writer - Veerdev Veer Duration - 90 sec]

ಇಂಗ್ಲೀಷ್ ಅರ್ಥ

Oh! God Bless us with devotion
Please be kind to Give us the purity of soul.
Be present in our prayer
Oh Lord! Settle down in our eyes
Enter our dark mind
Oh Lord! Light the divine light (1)
Flood the river of affection
the ocean of love into our hearts.
Oh Lord! teach us to live
to-gether in harmony (2)

Our duty is service
Our Dharma is service
Let always service be honest
Let he/she be made your earnest
Servant (3)
live for the Nation
die for the Nation
Oh Lord! Teach us to
Sacrifice our life for the
sake of our Nation (4)

ಧ್ವಜ ಗೀತೆ (Flag Song)

ನಮ್ಮ ಚಳವಳಿಗೆ ತನ್ನದೇ ಆದ ಧ್ವಜವಿದೆ. ಅದನ್ನು ಕುರಿತು ರಚಿಸಿದ ಧ್ವಜಗೀತೆ ಇದು. ಇದನ್ನು ಧ್ವಜಾರೋಹಣ ಸಮಯದಲ್ಲಿ ಮಾತ್ರ ಹಾಡುತ್ತೇವೆ. ಸಾವಧಾನದಲ್ಲಿ ನಿಂತು ಹಾಡುತ್ತೇವೆ. ಇದು ನಮ್ಮ ಸಂಸ್ಥೆಯ ಧ್ಯೇಯ ಮತ್ತು ಆಶೋತ್ತರಗಳನ್ನು ಸಾರುತ್ತದೆ ಮತ್ತು ನೆನಪಿಸುತ್ತದೆ. ಇದನ್ನು ರಚಿಸಿದವರು **ಶ್ರೀ ದಯಾಶಂಕರ್ ಭಟ್**. ಇದನ್ನು 45 ಸೆಕೆಂಡುಗಳಲ್ಲಿ ಹಾಡಬೇಕು.

ಹಿಂದಿ ಗೀತೆ	ಕನ್ನಡ ಅರ್ಥ
ಭಾರತ್ ಸ್ಕೌಟ್ ಗೈಡ್ ಝುಂಡಾ	ಭಾರತ್ ಸ್ಕೌಟ್ ಗೈಡ್ ಧ್ವಜವು
ಊಂಚಾ ಸದಾ ರಹೇಗಾ	ಎತ್ತರದಲಿ ಸದಾ ಹಾರುತಿರಲಿ
ಊಂಚಾ ಸದಾ ರಹೇಗಾ	ಎತ್ತರದಲಿ ಸದಾ ಹಾರುತಿರಲಿ
ಝುಂಡಾ ಊಂಚಾ ಸದಾ ರಹೇಗಾ	ಧ್ವಜವು ಎತ್ತರದಲಿ ಸದಾ ಹಾರುತಿರಲಿ
ನೀಲಾ ರಂಗ ಗಗನ ಸಾವಿಸ್ತೃತ	ನೀಲಿಬಣ್ಣವು ಬಾನಲಿ ಪಸರಿಸಿದಂತೆ
ಭ್ರಾತೃಭಾವ ಫೈಲಾತಾ	ಭ್ರಾತೃಭಾವವು ಎಲ್ಲೆಡೆ ಪಸರಿಸಲಿ
ತ್ರಿದಲ ಕಮಲ ನಿತ ತೀನ	ತ್ರಿದಳ ಕಮಲವು ಒಂದು
ಪ್ರತಿಜ್ಞಾವೋಂಕಿ ಯಾದ ದಿಲಾತ	ಪ್ರತಿಜ್ಞೆಯ ಮೂರು ಅಂಶಗಳನ್ನು ನೆನಪಿಸುತಿಹುದು
ಔರ್ ಚಕ್ರ ಕಹತಾ ಹೈ ಪ್ರತಿಪಲ್	ಮತ್ತು ಚಕ್ರವು ಸಾರುತಿಹುದು ಪ್ರತಿಕ್ಷಣವು
ಆಗೆ ಕದಂ ಬಡೇಗಾ... ॥	ಮುಂದೆ ಸಾಗುತಿರಲಿ ಹೆಜ್ಜೆ
ಊಂಚಾ ಸದಾ ರಹೇಗಾ	ಎತ್ತರದಲಿ ಸದಾ ಹಾರುತಿರಲಿ
ಝುಂಡಾ ಊಂಚಾ ಸದಾ ರಹೇಗಾ	ಧ್ವಜ ಎತ್ತರದಲಿ ಸದಾ ಹಾರುತಿರಲಿ
ಭಾರತ್ ಸ್ಕೌಟ್ ಗೈಡ್ ಝುಂಡಾ	ಭಾರತ್ ಸ್ಕೌಟ್-ಗೈಡ್ ಧ್ವಜವು
ಊಂಚಾ ಸದಾ ರಹೇಗಾ.	ಎತ್ತರದಲಿ ಸದಾ ಹಾರುತಿರಲಿ

ನಮ್ಮ ಚಳವಳಿಗೆ : BS&G Flag will be always flying High, Flag will be always flying high, Like the blue that spreads in the sky, Let brotherhood /sisterhood spread in this world, the three petals of Lotus reminds three fold promise and the wheel says go on, March ahead every moment.

Flag Song of the Bharat Scout & Guides

Bharat Scout guide jhandaa
Unchaa sadaa rahegaa,
Unchaa sadaa rahegaa jhanda
Unchaa sadaa rahegaa ||

Neelaa rang gagan saa vistrut
Bhatru bhaav failaathaa,
Tridal kamal nit teen pratijnaa onki yaad dilaataa.
Aur chakr kehataa hei
Pratipal aage kadam badegaa.
Unchaa sadaa rahegaa jhandaa
Unchaa sadaa rahegaa.
Bharat Scout Guide jhandaa
Unchaa sadaa rahega.

[Writer - Daya Shankar Bhat - 45 sec]

ಚಟುವಟಿಕೆ :

1) **ಪ್ರಾರ್ಥನಾ ಗೀತೆ ಮತ್ತು ಧ್ವಜಗೀತೆಯನ್ನು ಸಾಹಿತ್ಯ ಮತ್ತು ರಾಗಗಳಲ್ಲಿ ದೋಷವಿಲ್ಲದೆ ಹಾಡಿ.**

2) **ಈ ಸಾಲುಗಳ ಅರ್ಥ ಬರೆಯಿರಿ :**

* ಅಂಧೇರೆ ದಿಲ್ ಮೆ ಆಕರಕೆ
* ಹಮೇ ಆಪಸ್ ಮೆ ಮಿಲ್‌ಝುಲ್‌ಕರ್ ರೆಹನಾ
* ಸದಾ ಈಮಾನ ಹೊ ಸೇವಾ
* ವತನ್ ಪರ ಜಾನ್ ಫಿದಾಕರನಾ
* ನೀಲಾರಂಗ ಗಗನ ಸಾವಿಸ್ತೃತ ಭ್ರಾತೃಭಾವ ಫೈಲಾತ
* ಚಕ್ರ ಕೆಹತಾ ಹೈ ಪ್ರತಿಪಲ್ ಆಗೆ ಕದಂ ಬಡೇಗಾ

ರಾಷ್ಟ್ರ ಗೀತೆ (National Anthem)

ಪ್ರತಿ ರಾಷ್ಟ್ರವು ತನ್ನದೇ ಆದ ರಾಷ್ಟ್ರ ಗೀತೆಯನ್ನು ಹೊಂದಿರುತ್ತದೆ. ಪ್ರತಿಯೊಬ್ಬರೂ ಇದರ ಸಾಹಿತ್ಯ, ಅರ್ಥ ಮತ್ತು ರಾಗವನ್ನು ಕಲಿತಿರಬೇಕು. ಪ್ರತಿಯೊಬ್ಬ ಪ್ರಜೆಯೂ ಇದನ್ನು ಭಕ್ತಿ ಮತ್ತು ಗೌರವದಿಂದ ಹಾಡಬೇಕು. ರಾಷ್ಟ್ರಗೀತೆಯು ನಮ್ಮ ರಾಷ್ಟ್ರದ ಭೌಗೋಳಿಕ ಲಕ್ಷಣಗಳನ್ನು ವರ್ಣಿಸುತ್ತದೆ. ಜನರಿಗೆ ಮತ್ತು ವಿಧಾತನಿಗೂ ಜೈಕಾರವನ್ನು ಸಾರುತ್ತದೆ.

ಜನಗಣಮನ ಅಧಿನಾಯಕ ಜಯಹೆ, ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠ, ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯುಮುನಾ ಗಂಗಾ, ಉಚ್ಛಲ ಜಲಧಿತರಂಗ,
ತವ ಶುಭ ನಾಮೆ ಜಾಗೆ, ತವ ಶುಭ ಆಶಿಶ ಮಾಘೆ,
ಗಾಹೆ ತವ ಜಯ ಗಾಥಾ,
ಜನಗಣ ಮಂಗಳದಾಯಕ ಜಯಹೇ, ಭಾರತ ಭಾಗ್ಯವಿಧಾತಾ
ಜಯ ಹೇ ಜಯ ಹೇ, ಜಯ ಹೇ,
ಜಯ, ಜಯ ಜಯ ಹೇ!

ಕನ್ನಡ ಅರ್ಥ

ಜನಗಣಮನದ ಅಧಿನಾಯಕನಿಗೆ
ಭಾರತ ಭಾಗ್ಯವಿಧಾತನಾದ ನಿನಗೆ ಜಯವಾಗಲಿ
ಪಂಜಾಬ, ಸಿಂಧು, ಗುಜರಾತ, ಮರಾಠ,
ದ್ರಾವಿಡ, ಒರಿಸ್ಸಾ, ಬಂಗಾಲ ರಾಜ್ಯಗಳು
ವಿಂಧ್ಯ ಹಿಮಾಚಲ ಪರ್ವತಗಳು, ಯಮುನಾ ಗಂಗಾ ನದಿಗಳು
ಸಮುದ್ರದ ಎತ್ತರದ ಅಲೆಗಳು ನಿನ್ನ ಶುಭನಾಮದಿಂದ ಎಚ್ಚರಗೊಂಡು
ನಿನ್ನ ಶುಭ ಆಶೀರ್ವಾದ ಬೇಡುತ್ತವೆ, ನಿನ್ನ ಜಯಗೀತೆಯನ್ನು ಹಾಡುತ್ತವೆ
ಜನಗಳಿಗೆ ಮಂಗಳ ಉಂಟು ಮಾಡುವ ನಿನಗೆ ಜಯವಾಗಲಿ
ಹೇ ಭಾರತ ಭಾಗ್ಯವಿಧಾತನೆ ನಿನಗೆ
ಜಯವಾಗಲಿ ಜಯವಾಗಲಿ ಜಯವಾಗಲಿ
ಜಯ ಜಯ ಜಯವಾಗಲಿ.

ನಮ್ಮ ರಾಷ್ಟ್ರ ಗೀತೆಯನ್ನು ರಚಿಸಿದವರು ನೋಬಲ್ ಪ್ರಶಸ್ತಿ ವಿಜೇತರಾದ, ಬಂಗಾಳದ ವಿಶ್ವಕವಿ **ರವೀಂದ್ರನಾಥ ಟಾಗೂರ್**, ಇದನ್ನು 24 ಜನವರಿ 1950ರಲ್ಲಿ ರಚಿಸಲಾಯಿತು. ಇದನ್ನು ಸಾವಧಾನದಲ್ಲಿ ನಿಂತು **52** ಸೆಕೆಂಡುಗಳಲ್ಲಿ ಹಾಡಬೇಕು.

ಈ ಕೆಳಗಿನ ಅಂಕಣ ತುಂಬಿಸಿ :

ರಚನೆ	ರಚನೆಕಾರರ ಹೆಸರು	ನಿಲ್ಲುವ ಭಂಗಿ	ಹಾಡುವ ಅವಧಿ
ರಾಷ್ಟ್ರಗೀತೆ			
ಪ್ರಾರ್ಥನೆ			
ಧ್ವಜಗೀತೆ			

ಪ್ರವಚನ:2 – ಸ್ಕೌಟಿಂಗ್–ಗೈಡಿಂಗ್‌ನ ಸಾಮಾನ್ಯ ಮಾಹಿತಿ, ಮೂಲ ಬೆಳವಣಿಗೆಗೆ ಮತ್ತು ಉದ್ದೇಶ
(General Information - Origin Growth - Aim)

ಉದ್ದೇಶ : ಪ್ರಶಿಕ್ಷಣಾರ್ಥಿಗಳು –

* ಚಳವಳಿಯ ಮೂಲ, ಇತಿಹಾಸ ಮತ್ತು ಬೆಳವಣಿಗೆ ಮತ್ತು ಅದರ 100 ವರ್ಷಗಳ ಪಯಣದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವರು.
* ತಮ್ಮ ಗೈಡ್ಸ್‌ಗಳಿಗೆ ಹೇಳುವ ಸಾಮರ್ಥ್ಯ ಪಡೆಯುವರು.
* ಇದು ಸೈನ್ಯ ಮೂಲದ ಶಾಂತಿಯನ್ನು ಪ್ರಸಾರ ಮಾಡುವ ಯುವ ಚಳವಳಿ ಎಂದು ಮನಗಾಣುವರು.
* ಇದರ ಸಂಸ್ಥಾಪಕರಿಗೆ ಕೃತಜ್ಞತಾಪೂರ್ವಕವಾಗಿ ನಮಿಸುವರು.
* ಇತಿಹಾಸಕ್ಕೆ ಸಂಬಂಧಿಸಿದ ಚಿತ್ರ ಸಂಗ್ರಹ ಮಾಡಲು ಮುಂದಾಗುವರು.
* ಈ ಕುರಿತು ಮೌಲ್ಯಮಾಪನಕ್ಕೆ ಮರು ಪುಷ್ಟೀಕರಣಕ್ಕೆ ಆಟವಾಡಿಸಲು ಸಮರ್ಥರಾಗುವರು.

ವಿಧಾನ : ಕಥನ, ಭಾವಚಿತ್ರ, ವಸ್ತುಗಳ ಪ್ರದರ್ಶನ

ಚಳವಳಿಯ ಮೂಲ : ಈ ಚಳವಳಿಯ ಮೂಲ ಸೈನ್ಯ. ಇದರ ಸಂಸ್ಥಾಪಕರು ಸೈನ್ಯಾಧಿಕಾರಿಯಾಗಿದ್ದರು. ಇವರು ಸೈನಿಕರಲ್ಲಿ ಉತ್ಸಾಹ ಮೂಡಿಸಲು ಈ ಚಟುವಟಿಕೆ ಪ್ರಾರಂಭಿಸಿದರು. ಇದರ ನಂತರ ಬಾಲಕರಿಗಾಗಿ ಸ್ಕೌಟಿಂಗ್ ಪ್ರಾರಂಭಿಸಿದರು. ಬಾಲಕರನ್ನು ಅನುಸರಿಸಿ ಬಾಲಕಿಯರು ಗರ್ಲ್ ಸ್ಕೌಟಿಂಗ್ ಪ್ರಾರಂಭಿಸಿದರು. ಸ್ಕೌಟಿಂಗ್–ಗೈಡಿಂಗ್‌ನ ಮೂಲ ಸೈನ್ಯವಾಗಿದ್ದರೂ ಈ ಚಳವಳಿಯ ವಿಶ್ವ ಭ್ರಾತೃತ್ವ ಮತ್ತು ವಿಶ್ವ ಶಾಂತಿಯನ್ನು ಸಾಧಿಸುವ ಗುರಿಯನ್ನು ಹೊಂದಿದೆ.

ಸಂಸ್ಥಾಪಕರ ಜನನ : ರಾಬರ್ಟ್ ಸ್ಟೀಫನ್‌ಸನ್ ಸ್ಮಿತ್ ಬೇಡನ್ ಪೋವೆಲ್ಲರು 1857 ಫೆಬ್ರವರಿ 22 ರಂದು ಲಂಡನ್ನಿನಲ್ಲಿ ಜನಿಸಿದರು. ತಂದೆ ರೆವರೆಂಡ್ ಪ್ರೊಫೆಸರ್ ಹರ್‌ಬರ್ಟ್ ಜಾರ್ಜ್ ಬೇಡನ್ ಪಾವೆಲ್. ಇವರು ಜ್ಯಾಮಿತಿಯಲ್ಲಿ ಆಕ್ಸ್‌ಫರ್ಡ್‌ನಲ್ಲಿ ಪ್ರೊಫೆಸರ್ ಆಗಿದ್ದರು. ತಾಯಿ ಹೆನ್ರಿಟ್ ಗ್ರೇಸ್ ಸ್ಮಿತ್. ಇವರಿಗೆ 10 ಮಕ್ಕಳು ಬಿ.ಪಿ. 8ನೆಯವರು. ಇವರು 3 ವರ್ಷದವರಿದ್ದಾಗ ಪಿತೃವಿಯೋಗವಾಯಿತು. ಶಿಸ್ತಿನಿಂದ ಕೂಡಿದ ಮಧ್ಯಮ ವರ್ಗದ ಕುಟುಂಬದಲ್ಲಿ ಸಮಸ್ಯೆಗಳನ್ನು, ಸವಾಲುಗಳನ್ನು ಎದುರಿಸುತ್ತಾ ಬದುಕಿನ ಕಲೆಯನ್ನು ಕಲಿಯುತ್ತಾ ಉತ್ತಮ ಯುವಕರಾಗಿ ಬೆಳೆದರು.

ವಿದ್ಯಾಭ್ಯಾಸ : ಲಂಡನ್ನಿನ ಚಾರ್ಟರ್ ಹೌಸ್ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಸಾಧಾರಣ ವಿದ್ಯಾರ್ಥಿಯಾದ ಬಿ.ಪಿ.ಯವರು ಅಪ್ರತಿಮ ಪ್ರತಿಭಾವಂತ ವಿದ್ಯಾರ್ಥಿ ನಾಯಕರಾಗಿದ್ದರು. ಶಾಲಾ ಶಿಕ್ಷಣ ಮುಗಿಸಿದ ನಂತರ ಸೈನ್ಯಕ್ಕೆ ಅರ್ಜಿ ಸಲ್ಲಿಸಿದಾಗ 700 ಅಭ್ಯರ್ಥಿಗಳಲ್ಲಿ 4ನೆಯವರಾಗಿ ಆಯ್ಕೆಯಾದರು. ಭಾರತದ ಅಧಿಕಾರಿಯಾಗಿ ಲಕ್ನೋದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡರು. ಇವರನ್ನು ಭಾರತದ ಉತ್ತರ ಗಡಿಗೆ ನಿಯೋಜಿಸಲಾಯಿತು.

ಸೈನಿಕರಿಗಾಗಿ ಸ್ಕೌಟಿಂಗ್ : "ತಮ್ಮ ತುಕುಡಿಯು ಯಾರಿಗೂ ಎರಡನೆಯವರಾಗಬಾರದು" ಎಂದು ಹಂಬಲಿಸುತ್ತಿದ್ದ ಬಿ.ಪಿ.ಯವರು ತಮ್ಮ ಸೈನಿಕರಲ್ಲಿ ನಾಳಿನ ಬಗೆಗಿನ ನಿರಾಶೆ, ಕುಟುಂಬದ ಅಗಲಿಕೆಯಿಂದಾಗುವ ಖಿನ್ನತೆಯನ್ನು

ಗಮನಿಸಿದರು. ಇವರನ್ನು ಪ್ರೋತ್ಸಾಹಿಸಲು ಸ್ಕೌಟಿಂಗ್ ಪ್ರಾರಂಭಿಸಿದರು. ಬಿಡುವಿನ ವೇಳೆಯಲ್ಲಿ ಸೈನಿಕರನ್ನು ರಾತ್ರಿ ತಂಗಿಬರುವಂತೆ ಕಾಡಿಗೆ ಕಳುಹಿಸುತ್ತಿದ್ದರು. ಅವರು ಮರಳಿ ಬಂದಾಗ ವರದಿ ಒಪ್ಪಿಸುವಾಗ ಅವರಲ್ಲಿ ಉತ್ಸಾಹವನ್ನು ಗಮನಿಸಿದರು. ಸ್ಕೌಟಿಂಗ್ ಎಂದರೆ ಸಾಹಸ, ಅನ್ವೇಷಣೆ, ಪ್ರಕೃತಿ ಸಂಚಾರ, ಕಳ್ಳನಡೆ, ಬೇಹುಗಾರಿಕೆ ಎಂಬ ಅರ್ಥಗಳಿವೆ. ಇದರ ಜೊತೆಗೆ ಶಿಬಿರಾಗ್ನಿ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಅಗ್ನಿಯ ಮುಂದೆ ಕುಣಿದು ಕುಪ್ಪಳಿಸಿ ನಕ್ಕು ನಲಿದು ದಣಿವನ್ನು, ಖಿನ್ನತೆಯನ್ನು ಮರೆತು ಸೈನಿಕರು ನಿದ್ರಿಸುತ್ತಿದ್ದರು. ಬಿ.ಪಿ. ಈ ಕಾರ್ಯಕ್ರಮವನ್ನು ಮುಂದುವರಿಸಿದರು. 1899ರಲ್ಲಿ "Aids to Scouting for soldiers" ಎಂಬ ಪುಸ್ತಕ ಬರೆದು ಪ್ರಕಟಿಸಿದರು. ಇದನ್ನು ಲಂಡನ್ನಿನ ಕೆಲವು ಶಾಲೆಗಳಲ್ಲಿ ಪಠ್ಯವಾಗಿ ಉಪಯೋಗಿಸಿದರಂತೆ.

ದಕ್ಷಿಣ ಆಫ್ರಿಕಾ ಗುಡ್ಡಗಾಡಿನ ಜನಾಂಗಗಳ ಜೊತೆ ಬಿ.ಪಿ.ಯವರು ನಡೆಸಿದ ಯುದ್ಧಗಳು –

ದಕ್ಷಿಣ ಆಫ್ರಿಕಾದಲ್ಲಿ ಅನೇಕ ಬ್ರಿಟಿಷ್ ವಸಾಹತುಗಳು ಬೀಡುಬಿಟ್ಟಿದ್ದವು. ಅಲ್ಲಿ ಸ್ಥಳೀಯರು ಇವರಿಗೆ ತೊಂದರೆ ಕೊಡುತ್ತಿದ್ದರು. ಆದ್ದರಿಂದ ಬ್ರಿಟಿಷ್ ಸಾಮ್ರಾಜ್ಯ ಇವರುಗಳನ್ನು ದಮನ ಮಾಡಲು ಚತುರ ಸೈನ್ಯಾಧಿಕಾರಿಯಾದ ಬಿ.ಪಿ.ಯವರನ್ನು ನಿಯೋಜಿಸಿದರು. ಈ ಯುದ್ಧಗಳಲ್ಲಿ ಪಡೆದ ಅನುಭವಗಳು ಮತ್ತು ವಸ್ತುಗಳನ್ನೆಲ್ಲಾ ಬಿ.ಪಿ.ಯವರು ತಾವೇ ಸಂಸ್ಥಾಪಿಸಿದ ಬಾಯ್ಸ್ ಸ್ಕೌಟ್ ಚಳವಳಿಗೆ ಉಡುಗೊರೆಯಾಗಿ ನೀಡಿದರು.

1888 ಜೂಲು ಯುದ್ಧ : ಬಿ.ಪಿ.ಯವರು ಜೂಲುಗಳನ್ನು ಸೋಲಿಸಿದರು. ಸೋತ ಜೂಲುಗಳು ಪರಾರಿಯಾದರು. ಬಿ.ಪಿ.ಯವರು ಅವರ ವಸಾಹತುಗಳನ್ನು ಹುಡುಕಾಡಿದಾಗ ನಾಯಕ **ಡಿನಿಜೂಲು** ಧರಿಸುತ್ತಿದ್ದ **"1000 ಮರದ ಮಣಿಯ ಹಾರ"** ಅವನ ಗುಡಿಸಿಲಿನಲ್ಲಿ ಸಿಕ್ಕಿತು. ಈ ಪವಿತ್ರ ಹಾರವನ್ನು ಹಗಲು-ರಾತ್ರಿ ಕಾವಲು ಕಾಯುತ್ತಿದ್ದರು.

ಬಿ.ಪಿ.ಯವರು ಮುಂದೆ ಸ್ಕೌಟ್ ಮಾಸ್ಟರ್‌ಗಳ ಮೂರನೇ ಹಂತದ ತರಬೇತಿಯಾದ **"ವುಡ್ ಬ್ಯಾಡ್ಜನ್ನು"** ಮುಗಿಸಿದವರಿಗೆ ಮರದ ಮಣಿ ನೀಡುವ ಪದ್ಧತಿ ಪ್ರಾರಂಭಿಸಿದರು. ಇಂದಿಗೂ ಈ ಪದ್ಧತಿ ಮುಂದುವರಿದಿದೆ. ಮೂಲಮಣಿಗಳು ಮುಗಿದಿವೆ. ಪ್ರತಿರೂಪದ ಮಣಿಯನ್ನು ಇಂದಿಗೂ ನೀಡಲಾಗುತ್ತಿದೆ.

1895 ಅಶಾಂತಿ ಗುಡ್ಡಗಾಡಿನ ಜನಾಂಗದೊಡನೆ ಯುದ್ಧ : ಬಿ.ಪಿ. ಇವರನ್ನು ಗೆದ್ದರು. ಇವರ ನಾಯಕ ಬಿ.ಪಿ.ಯವರಿಗೆ ಎಡಗೈ ನೀಡಿದ. ಆಶ್ಚರ್ಯದಿಂದ ನೋಡಿದ ಬಿ.ಪಿ.ಯವರಿಗೆ **ಪ್ರೆಂಫೆ** ಹೇಳಿದ, ಇದು ನಾವು **ವೀರರಲ್ಲಿ ವೀರರಿಗೆ ಸಲ್ಲಿಸುವ ಗೌರವ.** ಎಡಗೈ ನಂಬಿಕೆ ಮತ್ತು ಸ್ನೇಹದ ಹಸ್ತ. ಬಿ.ಪಿ.ಯವರು ಮೆಚ್ಚುಗೆಯಿಂದ ಎಡಗೈ ನೀಡಿದರು.

ಬಿ.ಪಿ.ಯವರು ಈ ಜನಾಂಗದಿಂದ **'ಅಗ್ರಗಾಮಿತ್ವ'** (ಪಯೊನಿಯರಿಂಗ್) ಕೌಶಲವನ್ನು ಕಲಿತರು. ಅಶಾಂತಿ ತಂಡ ಗುಡ್ಡಗಾಡುಗಳಲ್ಲಿ ದಾರಿ ಮಾಡುತ್ತಾ, ನದಿಗೆ ಸೇತುವೆ ಕಟ್ಟುತ್ತಾ, ಅಲ್ಲಲ್ಲಿ ಆಶ್ರಯ ನಿರ್ಮಿಸುತ್ತಾ ಮುನ್ನಡೆಯುತ್ತಿದ್ದರು. ಇದರಿಂದ ಅನುಸರಣಾ ತಂಡ ಸುಲಭವಾಗಿ ಇವರನ್ನು ತಲುಪುತ್ತಿತ್ತು. ಜೊತೆಗೆ ಪ್ರತಿಯೊಬ್ಬರ ಕೈಯಲ್ಲಿ ಒಂದು ದಂಡವಿರುತ್ತಿತ್ತು. ವೇಗವಾಗಿ ಬೆಟ್ಟ-ಗುಡ್ಡಗಳನ್ನು ಹತ್ತಿ ಇಳಿಯಲು, ಜಾರದಂತೆ ಊರಲು, ರಕ್ಷಣೆಗಾಗಿ ಈ ದಂಡ ಬಳಸುತ್ತಿದ್ದರು.

ಬಿ.ಪಿ.ಯವರು ಸ್ಕೌಟಿಂಗ್‌ಗೆ ಮುಂದೆ ಎಡಗೈ ಹಸ್ತಲಾಘವವನ್ನು ಸ್ನೇಹದ ಚಿಹ್ನೆಯಾಗಿ ನೀಡಿದರು. ಜೊತೆಗೆ ದಂಡವನ್ನು (staves) ನೀಡಿದರು. ಅಗ್ರಗಾಮಿತ್ವ ಕೌಶಲ ಅಳವಡಿಸಿದರು.

ಬಿ.ಪಿ.ಯವರು ಕುರುಬರ ದೊಡ್ಡ ಟೋಪಿಯನ್ನು (cow boys cap) ಹಾಕಿಕೊಂಡು ಅಡ್ಡಾಡುತ್ತಿದ್ದರಿಂದ ಈ ಜನಾಂಗವು ಬಿ.ಪಿ.ಯವರನ್ನು **ಕೆಂಟಕಿ** ಅಂದರೆ ದೊಡ್ಡ ಟೋಪಿಯನ್ನು ಧರಿಸಿದವನೆಂದು ಕರೆಯುತ್ತಿದ್ದರು.

1896 ಮೇಟಬಲ್ ಯುದ್ಧ : ಬಿ.ಪಿ.ಯವರು ಈ ಯುದ್ಧವನ್ನು ಗೆದ್ದರು. ಇವರು ರಾತ್ರಿ ಸಂಚರಿಸುತ್ತಿದ್ದರಿಂದ ಅಲ್ಲಿನ ಸ್ಥಳೀಯರು ಇವರನ್ನು **Impeesa (ನಿದ್ರಿಸದ ತೋಳ)** ಎಂದು ಕರೆದರು. ಬಿ.ಪಿ.ಯವರಿಗೆ ಈ ಕಾಡಿನಲ್ಲಿ

ಸಂಚರಿಸುವಾಗ ಸುಂದರವಾದ **ಕುಡು ಪ್ರಾಣಿಯ ಕೊಂಬು** (ಎಂಟಿಲೋಪ್‌ನಂತಹ ಪ್ರಾಣಿ) ದೊರೆಯಿತು. ಈ ಕೊಂಬು ಯುದ್ಧ ಕಹಳೆ ಊದಲು ಉಪಯೋಗಿಸಿದರು. ಹಾಗೂ ಗುಪ್ತ ಸಂದೇಶ ನೀಡಲು ಉಪಯೋಗಿಸಿದರು.

ಬಿ.ಪಿ.ಯವರು ಕುಡುಕೊಂಬನ್ನು ಸಂರಕ್ಷಿಸಿದರು. 1907ರಲ್ಲಿ ಬ್ರೌನ್ಸಿ ದ್ವೀಪದಲ್ಲಿ 20 ಬಾಲಕರಿಗಾಗಿ ನಡೆಸಿದ ಪ್ರಥಮ ಪ್ರಾಯೋಗಿಕ ಸ್ಕೌಟ್ ಶಿಬಿರದಲ್ಲಿ ಆಗಸ್ಟ್ ಒಂದರಂದು ಕುಡು ಕೊಂಬಿನಿಂದ ಬೆಳಗಿನ ಕಹಳೆಯನ್ನು ಸ್ಕೌಟ್‌ಗಳಿಗೆ ಊದಿದರು. 2007 ಆಗಸ್ಟ್ 1 ರಂದು 2ನೇ ಶತಮಾನದ ಪ್ರಥಮ ಕಹಳೆಯನ್ನು ಅದೇ ಕೊಂಬಿನಿಂದ ಊದಿ ಸ್ವಾಗತಿಸಲಾಯಿತು. ಈ ಕೊಂಬು ಅಂತಾರಾಷ್ಟ್ರೀಯ ಸ್ಕೌಟ್ ತರಬೇತಿ ಕೇಂದ್ರವಾಗಿ **ಗಿಲ್‌ವೆಲ್ ಪಾರ್ಕ್** ಲಂಡನ್ನಿನಲ್ಲಿ ಇಂದಿಗೂ ಸುರಕ್ಷಿತವಾಗಿ ಇಡಲಾಗಿದೆ. ಇಂದಿಗೂ ಕಹಳೆಯಾಗಿ ಬಳಸಲಾಗುತ್ತಿದೆ.

1899 ಮೇಫ್‌ಕಿಂಗ್ ಯುದ್ಧ : ಬಿ.ಪಿ.ಯವರು ಸ್ಥಳೀಯ ಬೋಯರ್ಸ್‌ಗಳೊಡನೆ ಯುದ್ಧ ಸಾರಿದರು. ಇವರ ಸೈನಿಕರ ಸಂಖ್ಯೆ ಕಡಿಮೆ ಇತ್ತು. ಈ ಕುರಿತು ಸಮಾಲೋಚಿಸುವಾಗ ಎಡ್‌ವರ್ಡ್ ಸಿಸಿಲಿ ಎಂಬುವವರು ಕೆಲಸವಿಲ್ಲದೆ ಅಲೆದಾಡುತ್ತಿದ್ದ ಬ್ರಿಟಿಷ್ ಗಂಡು ಮಕ್ಕಳನ್ನು ಒಟ್ಟುಗೂಡಿಸಿ ಅವರ ಕೆಡೆಟ್ ಕಾರ್ಪ್ ಏಕೆ ರಚಿಸಬಾರದು. ಅವರಿಗೆ ತರಬೇತಿ ನೀಡಿ ಯುದ್ಧದಲ್ಲಿ ಬಳಸಿಕೊಂಡರೆ ಸೈನಿಕರಿಗೆ ಸ್ವಲ್ಪ ವಿಶ್ರಾಂತಿ ಸಿಕ್ಕೀತು ಎಂಬ ಸಲಹೆ ನೀಡಿದರು, ಬಿ.ಪಿ.ಯವರು ಒಪ್ಪಿದರು. ಮಕ್ಕಳಿಗೆ ಬೇಹುಗಾರಿಕೆ ಹಾಗೂ ದೂತಸೇವೆಯಲ್ಲಿ ತರಬೇತಿ ನೀಡಿದರು. ಸಮವಸ್ತ್ರ ನೀಡಿ ಸೈಕಲ್ ಕೊಟ್ಟರು. ಮಕ್ಕಳ ಆನಂದಕ್ಕೆ ಪಾರವೇ ಇರಲಿಲ್ಲ. ಯುದ್ಧದಲ್ಲಿ ಅವರ ಸೇವೆ, ಕಾರ್ಯದಕ್ಷತೆಯನ್ನು ಬಿ.ಪಿ.ಯವರು ಮೆಚ್ಚಿದರು. ಬಿ.ಪಿ.ಯವರ ಮನಸ್ಸಿನಲ್ಲಿ ಆ ಕ್ಷಣದಲ್ಲೇ **'ಬಾಲಕರಿಗಾಗಿ ಸ್ಕೌಟಿಂಗ್'** ಕಾರ್ಯಕ್ರಮ ರೂಪಿಸುವ ವಿಚಾರ ಅಂಕುರಿಸಿತು.

ಈ ಯುದ್ಧ ಸುದೀರ್ಘವಾಗಿ 217 ದಿನ ನಡೆಯಿತು. ಒಂದು ಬೆಳಿಗ್ಗೆ ಬಿ.ಪಿ.ಯವರು ನಿರಾಶೆಯಿಂದ ಕುಳಿತಿದ್ದಾಗ ಸ್ಥಳೀಯ ಜಲಗಾರ (scavenger) ಅವರ ಬಳಿ ಬಂದು "ಅಯ್ಯಾ ಚಿಂತಿಸಬೇಡಿ, ನನ್ನ ಅಮ್ಮ ಈ ಚರ್ಮದ ಹಾರವನ್ನು (Thong) ನನಗೆ ಅದೃಷ್ಟ ತರಲೆಂದು ಹಾಕಿದ್ದಳು. ಇದನ್ನು ನೀವು ತೆಗೆದುಕೊಳ್ಳಿ, ಅದೃಷ್ಟ ನಿಮ್ಮದಾಗಬಹುದು" ಎಂದ. ಬಿ.ಪಿ.ಯವರು ನಕ್ಕು ಅವನ ಹೃದಯಸಿರಿಯನ್ನು ಮೆಚ್ಚಿ ತೆಗೆದುಕೊಂಡರು. ಕಾಕತಾಳಿಯವೆಂಬಂತೆ ಅಂದೆ ಯುದ್ಧದಲ್ಲಿ ಜಯ ಲಭಿಸಿತು. ಮುಂದೆ ಬಿ.ಪಿ.ಯವರು ವುಡ್ ಬ್ಯಾಡ್ಜ್ (HWB) ಮಾಡಿದ ಸ್ಕೌಟ್ ಮಾಸ್ಟರ್‌ಗಳಿಗೆ ಚರ್ಮದ ದಾರದಲ್ಲಿ ಮರದ ಮಣಿ ಪೋಣಿಸಿ ನೀಡುವ ಪದ್ಧತಿ ಜಾರಿಗೆ ತಂದರು. ಇದು ಇಂದಿಗೂ ಮುಂದುವರೆದಿದೆ. ಆದರೆ ಪರಿಸರ ಸಂರಕ್ಷಣೆಗಾಗಿ ಚರ್ಮದ ದಾರ ಕೈ ಬಿಡಲಾಗಿದೆ.

ಬಿ.ಪಿ.ಯವರು 'ಮೇಫ್‌ಕಿಂಗ್ ವೀರಯೋಧ' (Mafeking War Hero) ಎಂದು ಪ್ರಸಿದ್ಧರಾದರು. ಗಂಡು ಮಕ್ಕಳ ಯುದ್ಧ ಸೇವೆಗೆ ಸಾಕಷ್ಟು ಪ್ರಚಾರ ದೊರೆಯಿತು. ಸಾಕಷ್ಟು ಮಕ್ಕಳು ಬಿ.ಪಿ.ಯವರನ್ನು ನಾವೇನು ಮಾಡಬೇಕೆಂದು ಪ್ರಶ್ನಿಸಲಾರಂಭಿಸಿದರು. ಬಿ.ಪಿ.ಯವರು **'ಕನಿಷ್ಠ ದಿನಕ್ಕೊಂದು ಒಳ್ಳೆಯ ಕಾರ್ಯ ಮಾಡಿ'** 'Do atleast one good turn a day' ಎಂದು ಸಲಹೆ ನೀಡಿದರು.

1907 ಬಾಲಕರಿಗಾಗಿ ಸ್ಕೌಟಿಂಗ್ ಆರಂಭ : ಬಿ.ಪಿ.ಯವರು ಬಾಲಕರಿಗಾಗಿ ಸ್ಕೌಟಿಂಗ್ ಕಾರ್ಯಕ್ರಮ ರೂಪಿಸಿದರು. 20 ಮಕ್ಕಳನ್ನು ಎಲ್ಲಾ ಸಾಮಾಜಿಕ ಸ್ತರಗಳಿಂದ ಆಯ್ಕೆ ಮಾಡಿದರು. 29 ಜುಲೈನಿಂದ 9 ಆಗಸ್ಟ್ 1907 ರವರೆಗೆ ಸ್ಕೌಟಿಂಗ್‌ನ ಪ್ರಥಮ ಪ್ರಾಯೋಗಿಕ ಶಿಬಿರವನ್ನು ಬ್ರೌನ್ಸಿ ದ್ವೀಪ ಲಂಡನ್ನಿನಲ್ಲಿ ನಡೆಸಿದರು. ಇವರನ್ನು 5ರ ಚಿಕ್ಕ ಗುಂಪು ಪಟಾಲಂ / ಅಷ್ಟಕವಾಗಿ ಮಾಡಿ, ಪ್ರತಿ ಗುಂಪಿಗೂ ಅವರದೇ ಆದ ನಾಯಕನನ್ನು ಆಯ್ಕೆ ಮಾಡಿದರು. ಇದರಿಂದ ಸ್ಕೌಟಿಂಗ್‌ನಲ್ಲಿ ಪಟಾಲಂ ಪದ್ಧತಿ ಅಥವಾ ಅಷ್ಟಕ ಪದ್ಧತಿಯು ಆರಂಭವಾಯಿತು. ಶಿಬಿರದಲ್ಲಿ 'ಮಕ್ಕಳಿಗೆ ಬೇಕಾದ ಚಟುವಟಿಕೆಗಳನ್ನು ಮಕ್ಕಳಿಗೆ ಬೇಕಾದ ರೀತಿಯಲ್ಲಿ ನೀಡಲಾಯಿತು'. ಅತ್ಯಂತ ಸಂತುಷ್ಟರಾದ ಮಕ್ಕಳು ವಿದಾಯದ ಸಮಯದಲ್ಲಿ ಬಿ.ಪಿ.ಯವರನ್ನು ಶಿಬಿರವನ್ನು ಮುಂದುವರೆಸುವಂತೆ ಕೇಳಿಕೊಂಡರು. ಪ್ರಯೋಗ ಯಶಸ್ವಿಯಾಯಿತು. **ಬಾಲಕರ ಸ್ಕೌಟಿಂಗ್ ಆರಂಭವಾಯಿತು!**

1908 ಸ್ಕೌಟಿಂಗ್ ಫಾರ್ ಬಾಯ್ಸ್ ಪುಸ್ತಕ ಪ್ರಕಟಣೆ : ಬಿ.ಪಿ.ಯವರು ತಮ್ಮ ಬಾಲ್ಯ ಮತ್ತು ಯೌವನದ ಅನುಭವಗಳನ್ನು ಮತ್ತು ಪ್ರಯೋಗದ ಅನುಭವಗಳನ್ನು ಸೇರಿಸಿ 6 ಕಂತುಗಳಲ್ಲಿ 15 ದಿನಕ್ಕೆ ಒಂದರಂತೆ 1908 ಜನವರಿಯಂದು ಪ್ರಕಟಿಸಿದರು. ನಂತರ ಈ ಕಂತುಗಳನ್ನು ಕ್ರೋಢೀಕರಿಸಿ "Scouting for Boys" ಎಂಬ ಪುಸ್ತಕವನ್ನು ಏಪ್ರಿಲ್ 1908ರಲ್ಲಿ ಪ್ರಕಟಿಸಿದರು. ಈ ಪುಸ್ತಕ ಸ್ಕೌಟಿಂಗ್ ಅನ್ನು ಇಂಗ್ಲೆಂಡ್ ಹಾಗೂ ಹೊರದೇಶಗಳಲ್ಲಿ ಮಾಂತ್ರಿಕ ದಂಡದಂತೆ ಪ್ರಸಾರ ಮಾಡಿತು. ಲೆಕ್ಕವಿಲ್ಲದಷ್ಟು ಸ್ಕೌಟ್ ಗುಂಪುಗಳು ಪ್ರಾರಂಭವಾದವು. ಪತ್ರಗಳ ರಾಶಿ ಬರಲಾರಂಭಿಸಿತು. ಬಿ.ಪಿ.ಯವರು ಉತ್ತರಿಸಲಾಗದೆ ಸ್ಕೌಟಿಂಗ್‌ಅನ್ನು ಸಂಘಟಿಸುವ ಸಲುವಾಗಿ **1909 ಸೆಪ್ಟೆಂಬರ್ 4 ರಂದು ಕ್ರಿಸ್ಟೆಲ್ ಪ್ಯಾಲೇಸ್ ಲಂಡನ್ನಿನಲ್ಲಿ** 'ಬಾಯ್ಸ್ ಸ್ಕೌಟ್ಸ್‌ನ ಪ್ರಥಮ ರ್‍ಯಾಲಿ' ಏರ್ಪಡಿಸಿದರು.

ಈ ರ್‍ಯಾಲಿಯಲ್ಲಿ **11,000** ಬಾಲಕರು ಭಾಗವಹಿಸಿದ್ದರು. ಇವರು ಗೌರವ ವಂದನೆ ಸಲ್ಲಿಸುತ್ತಾ ಮುಂದೆ ಸಾಗಿದಂತೆ ಒಂದು ಹೆಣ್ಣು ಮಕ್ಕಳ ಚಿಕ್ಕ ಗುಂಪು ಬಿ.ಪಿ.ಯವರಿಗೆ ಎದುರಾಯಿತು. ಅವರಿಗೆ ಮಾತ್ರವಲ್ಲ, ಎಲ್ಲರಿಗೂ ಆಶ್ಚರ್ಯ!

ಬಿ.ಪಿ.ಯವರು ನಾಯಕಿಗೆ ಕೇಳಿದರು – "ನೀವು ಯಾರು?"
"ನಾವು ವುಲ್ಫ ಪ್ಯಾಟ್ರೋಲ್ ಗರ್ಲ್ ಸ್ಕೌಟ್ಸ್" ಎಂದರು.
ಬಿ.ಪಿ.ಯವರು "ಸ್ಕೌಟಿಂಗ್ ಗಂಡು ಮಕ್ಕಳಿಗೆ ಮಾತ್ರ ಪ್ರಾರಂಭಿಸಿದೆ" ಎಂದರು.
ನಾಯಕಿ "ಆದರೆ ನಾವೂ ಇದರಲ್ಲಿ ಇದ್ದೇವಲ್ಲ" ಎಂದಳು

ಬಿ.ಪಿ.ಯವರು ರ್‍ಯಾಲಿಯ ನಂತರ ಹೆಣ್ಣು ಮಕ್ಕಳೊಡನೆ ಈ ಆಟ ನಿಮಗಲ್ಲ ಎಂದು ತಿಳಿಯ ಹೇಳಿ ವಾದಿಸಿ ಸೋತರು. ಹೆಣ್ಣು ಮಕ್ಕಳು ನಾವು ಸ್ಕೌಟಿಂಗ್ ಮಾಡಬಲ್ಲೆವು ಎಂದು ಬಿ.ಪಿ.ಯವರ ಮನವೊಲಿಸಿ ಮನ್ನಣೆ ಪಡೆದರು. **ಗರ್ಲ್ ಸ್ಕೌಟಿಂಗ್ ಪ್ರಾರಂಭವಾಯಿತು!**

ಗರ್ಲ್ ಸ್ಕೌಟಿಂಗ್ : ಬಿ.ಪಿ.ಯವರು ಅವರ ತಂಗಿ ಆಗ್ನೆಸ್ ಬಿ.ಪಿ.ಯವರನ್ನು ಇದರ ಪ್ರಥಮ ಅಧ್ಯಕ್ಷರನ್ನಾಗಿ ಮಾಡಿದರು. ಇಂಪೀರಿಯಲ್ ಸ್ಕೌಟ್ ಕಛೇರಿ ಲಂಡನ್ನಿನಲ್ಲಿ **4 ಏಪ್ರಿಲ್ 1910** ರಂದು ಒಂದು ಕೊಠಡಿಯನ್ನು ಕಛೇರಿಯಾಗಿ ನೀಡಿದರು. ಗೈಡಿಂಗ್ ಅಧಿಕೃತವಾಗಿ ಪ್ರಾರಂಭವಾಯಿತು.! 8,000 ಹೆಣ್ಣು ಮಕ್ಕಳು ನೋಂದಣಿ ಹೊಂದಿದರು. ಬಿ.ಪಿ.ಯು ಆಗ್ನೇಸ್ ಜೊತೆ ಸೇರಿ ಸಮಾಜ ಒಪ್ಪುವಂತೆ ಬಾಯ್ಸ್ ಸ್ಕೌಟ್ ಕಾರ್ಯಕ್ರಮವನ್ನು ಗರ್ಲ್ ಸ್ಕೌಟ್ಸ್‌ಗೆ ಮಾರ್ಪಡಿಸಿದರು. ಅಂದಿನ ಸಮಾಜ ಹೆಣ್ಣು ಮಕ್ಕಳು ಗಂಡು ಬೀರಿಯರಾಗಲು ಒಪ್ಪುತ್ತಿರಲಿಲ್ಲ. ಅವರನ್ನು ಗೃಹಕೃತ್ಯಕ್ಕೆ ಸೀಮಿತಗೊಳಿಸಿತ್ತು. ಬಿ.ಪಿ.ಯವರು 1910ರಲ್ಲಿ ಗರ್ಲ್ ಸ್ಕೌಟ್ ಎಂಬ ಹೆಸರನ್ನು "ಗರ್ಲ್ ಗೈಡ್" ಎಂದು ಬದಲಾಯಿಸಿದರು. ಆದರೆ ಕೆಲವು ರಾಷ್ಟ್ರಗಳಲ್ಲಿ, ಯು.ಎಸ್.ಎ.ಯಲ್ಲಿ ಗರ್ಲ್ ಸ್ಕೌಟ್ ಎಂಬ ಹೆಸರೇ ಮುಂದುವರೆದಿದೆ. ಭಾರತದಲ್ಲಿ ಗರ್ಲ್ ಗೈಡ್ ಎಂದು ಕರೆಯುತ್ತೇವೆ. 1911ರಲ್ಲಿ ಭಾರತಕ್ಕೆ ಗೈಡಿಂಗ್ ಆಗಮನವಾಯಿತು.

ಗೈಡಿಂಗ್ ಬೆಳವಣಿಗೆ :

ದಿನಾಂಕ 30 ಅಕ್ಟೋಬರ್ 1912ರಲ್ಲಿ ಲಂಡನ್ನಿನಲ್ಲಿ **'ಅಲೇವ್ ಸೇಂಟ್ ಕ್ಲೇರ್ ಸೋಮ್ಸ್‌ರವರನ್ನು ಬಿ.ಪಿ.'**ಯವರು ಮದುವೆಯಾದರು. ಪತ್ನಿ ಅಲೇವ್, ಗೈಡ್ ವಿಭಾಗದಲ್ಲಿ ಕಾರ್ಯಾರಂಭ ಮಾಡಿದರು. ಸಂಖ್ಯಾಬಲವಲ್ಲದೆ ಸಂಘಟನೆಯಲ್ಲಿ ತೊಡಗಿದರು. ಅವರ ಕಾರ್ಯದಕ್ಷತೆಯನ್ನು ಮೆಚ್ಚಿ 1918ರಲ್ಲಿ ಅವರನ್ನು ಬ್ರಿಟನ್ನಿನ ರಾಷ್ಟ್ರೀಯ ಆಯುಕ್ತೆಯಾಗಿ ಮಾಡಿದರು. 1928ರಲ್ಲಿ 24 ಸದಸ್ಯ ರಾಷ್ಟ್ರಗಳು ಸೇರಿ ಲೇಡಿ ಬಿ.ಪಿ.ಯವರ ನೇತೃತ್ವದಲ್ಲಿ "ವಿಶ್ವ ಗರ್ಲ್ ಗೈಡ್ ಮತ್ತು ಗರ್ಲ್ ಸ್ಕೌಟ್ ಸಂಸ್ಥೆಯನ್ನು (WAGGGS)" ಲಂಡನ್ನಿನಲ್ಲಿ ಸ್ಥಾಪಿಸಿದರು. ಇಂದು 152 ಸದಸ್ಯ ರಾಷ್ಟ್ರಗಳಿವೆ. ಇನ್ನೂ ಕೆಲವು ಪರಿಶೀಲನೆಯಲ್ಲಿವೆ ಆಡಳಿತಾತ್ಮಕವಾಗಿ 1. ವಿಶ್ವ ಮಂಡಳಿ (World Conference) 2. ವಿಶ್ವ ಕಾರ್ಯಕಾರಿ ಸಮಿತಿ (World Committee), 3. ವಿಶ್ವ ಕಾರ್ಯಾಲಯ (World Bureau)ಗಳಿವೆ. ಕಾರ್ಯಕ್ರಮ ಚಾಲನೆಗಾಗಿ ಆಡಳಿತ, ಸಂಘಟನೆ, ತರಬೇತಿಯ ವಿಭಾಗಗಳಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಸಂಸ್ಥೆ ಎಲ್ಲಾ ಸದಸ್ಯ ರಾಷ್ಟ್ರಗಳನ್ನು ಒಗ್ಗೂಡಿಸಿ

ಕಾರ್ಯಕ್ರಮಗಳನ್ನು ನಡೆಸುತ್ತದೆ. ಎಲ್ಲಾ ಸದಸ್ಯ ರಾಷ್ಟ್ರಗಳು ಇದರ ನಿಯಮ ನಿಬಂಧನೆಗೆ ಒಳಪಟ್ಟಿವೆ. ಇದು **ಐದು** ಅಂತಾರಾಷ್ಟ್ರೀಯ ಭವನವನ್ನು ತರಬೇತಿ ಮತ್ತು ಕಾರ್ಯಕ್ರಮಗಳಿಗಾಗಿ ಹೊಂದಿದೆ. ಅದರಲ್ಲಿ ಪೂನಾದಲ್ಲಿರುವ **ಸಂಗಮ್ ಭವನ** ಒಂದು, ಭಾರತ ವಿಶ್ವ ಗೈಡ್ ಸಂಸ್ಥೆಯ ಸಂಸ್ಥಾಪಕ ಸದಸ್ಯತ್ವ ಹಾಗೂ ಸಂಸ್ಥೆ ಪೂರ್ಣ ಸದಸ್ಯತ್ವವನ್ನು ಹೊಂದಿದೆ.

ಈಗ ವಿಶ್ವದಲ್ಲಿ ಸುಮಾರು 10,000 ಮಿಲಿಯನ್‌ಗಿಂತ ಹೆಚ್ಚು ಗೈಡ್ಸ್‌ಗಳಿದ್ದೇವೆ.

ರಾಷ್ಟ್ರದಲ್ಲಿ 20 ಲಕ್ಷ ಗೈಡ್ಸ್‌ಗಳಿದ್ದೇವೆ. ಕರ್ನಾಟಕದಲ್ಲಿ 6 ಲಕ್ಷ ಗೈಡ್ಸ್‌ಗಳಿದ್ದೇವೆ.

ವಿಶ್ವದಲ್ಲಿ ಇದು ಏಕಮಾತ್ರ ಸ್ವತಂತ್ರ ಬೃಹತ್ ಮಹಿಳಾ ಸಂಘಟನೆ. ಆದರೆ ಇನ್ನೂ ಇದರ ಸಂಖ್ಯಾಬಲ ಮತ್ತು ಗುಣಮಟ್ಟ ಸುಧಾರಣೆ ಆಗಬೇಕಾಗಿದೆ. ಇದು ನಮ್ಮೆಲ್ಲರ ಗುರುತರ ಜವಾಬ್ದಾರಿಯಾಗಿದೆ.

ಆಟಗಳು :

ಆಟ 1: ವಸ್ತುಗಳು : ಗುಂಪು–1 – ಇಸವಿ ಕಾರ್ಡುಗಳು, ಗುಂಪು–2 ಘಟನೆ ಕಾರ್ಡುಗಳು (ಒಂದು ವರ್ಷಕ್ಕೆ ಒಂದಕ್ಕಿಂತ ಹೆಚ್ಚಿನ ಘಟನೆ ಇದ್ದರೆ, ಒಂದೊಂದನ್ನು ಪ್ರತ್ಯೇಕವಾಗಿ ಬರೆಯಿರಿ. ಅದೇ ವರ್ಷಕ್ಕೆ ಒಂದಕ್ಕಿಂತ ಹೆಚ್ಚಿನ ಘಟನೆಗಳನ್ನು ಜೋಡಿಸಲಿ.)

ಆಟಗಾರರನ್ನು ಎರಡು ಗುಂಪು ಮಾಡಿ. ಒಂದಕ್ಕೆ ಇಸವಿ ಕಾರ್ಡ್ ಹಂಚಿ, ಇನ್ನೊಂದಕ್ಕೆ ಘಟನೆ ಕಾರ್ಡ್ ಹಂಚಿ.

ವಿಧಾನ : ಇವರನ್ನು ಒಂದು ನಿಯಮಿತ ವಿಸ್ತೀರ್ಣದಲ್ಲಿ ಬೆರೆತು ಚಲಿಸುವಂತೆ ಮಾಡಿ. ಸೀಟಿ ಊದಿ. ಜೊತೆಯಾದ ಘಟನೆ ಇಸವಿಯವರು ಒಂದು ಕಡೆ ಸಾಲು ಮಾಡಲಿ. ಸೀಟಿ ಊದಿ ಮತ್ತೆ ಆಡಿಸಿ. ಕಾರ್ಡು ಮುಗಿಯುವವರೆಗೂ ಆಡಿಸಿ. ನಂತರ ಅವರನ್ನೇ ಸರಿ ತಪ್ಪು ನೋಡಲು ಬಿಡಿ. ತಪ್ಪನ್ನು ಅವರೇ ತಿದ್ದಲಿ (ಪುಸ್ತಕ ನೋಡಲಿ).

ಆಟ 2: ಇದೇ ರೀತಿ ಇಸವಿ ನಿಲ್ಲಿಸಿ ಘಟನೆ ಓಡಿಸಿ, ಮ್ಯೂಸಿಕಲ್ ಛೇರ್ ಆಡಿಸಿ.

ಆಟ 3: ಇಸವಿಯ ಕಾರ್ಡ್‌ಗಳನ್ನು ನೆಲದ ಮೇಲೆ ಚದುರಿ ಘಟನೆಯನ್ನು ಜೋಡಿಸಲು ಹೇಳಿ.

ಆಟ 4: ಇಸವಿಯನ್ನು ಕಾಲರೇಖೆಯಲ್ಲಿ (ಕ್ರಮವಾಗಿ) ಜೋಡಿಸಿ. ಅದಕ್ಕೆ ಘಟನೆ ಜೋಡಿಸಿ. (ಎದೆಯ ಮೇಲೆ ಇಸವಿ ಕಾರ್ಡು ಬಲಕ್ಕೆ ಪಿನ್ ಮಾಡಿ ಘಟನೆ **ಕಾರ್ಡ್** ಎಡಕ್ಕೆ ಪಿನ್ ಮಾಡಿ.) ಪ್ರತಿ ಜೋಡಿಯು ಇಸವಿ ಘಟನೆಯನ್ನು ಜೋರಾಗಿ ಹೇಳಲಿ.

ಆಟ 5: ಇತಿಹಾಸಕ್ಕೆ ಸಂಬಂಧಿಸಿದ ಚಿತ್ರ ಸಂಗ್ರಹ ಮತ್ತು ಅವುಗಳ ಶೀರ್ಷಿಕೆ ಕಾರ್ಡುಗಳನ್ನು ಜೋಡಿಸುವ ಆಟ ಆಡಿಸಿ. ಮೇಲಿನ ಯಾವ ಆಟವನ್ನಾದರೂ ಆಡಬಹುದು. ಆಯ್ಕೆ ನಿಮ್ಮದು.

ಚಟುವಟಿಕೆ : ಇತಿಹಾಸದ ಮುಖ್ಯಾಂಶಗಳು :

ಕೆಳಗಿನ ಇಸವಿಯಲ್ಲಿ ಗೈಡಿಂಗ್‌ಗೆ ಸಂಬಂಧಿಸಿದ ಘಟನೆಯನ್ನು ತಿಳಿಸಿ :

1857 –

1876 –

1888 –

1889 –

1895 –

1896 –

1899 –

1907 –

1908 –

1909 –

1910 –

1918 –

1920 –

1928 –

ಈ ಕೆಳಗಿನ ಇಸವಿಯಲ್ಲಿ ಆಚರಿಸಿದ ವಿಶೇಷತೆಯನ್ನು ಹೆಸರಿಸಿ :

2007 –

2008 –

2009 –

2010 –

2012 –

ಗೈಡ್ ಸದಸ್ಯರು ಈ ದಿನಾಂಕದಂದು ಆಚರಿಸುವ ವಿಶೇಷತೆಗಳೇನು?

22.2

01.5

05.6

25.6

01.8

15.8

04.9

08.1

ಸೂಚನೆ: ಇದು ಪುಸ್ತಕ ನೋಡಿ, 2/3 ಜನರು ಸೇರಿ ಮಾಡುವ ಚಟುವಟಿಕೆ.

ಪ್ರವಚನ:3 – ಮೂಲ ಸಿದ್ಧಾಂತಗಳು (Fundamentals)

ಉದ್ದೇಶ : ಪ್ರಶಿಕ್ಷಣಾರ್ಥಿಗಳು –

* ಮೂಲ ಸಿದ್ಧಾಂತಗಳು ಅಂದಿಗೂ ಇಂದಿಗೂ ಸರ್ವಕಾಲಕ್ಕೂ ತಕ್ಕುದೆಂದು ಮೆಚ್ಚುವರು.
* ಬಿ.ಪಿ.ಯವರ ಸಿದ್ಧಾಂತಗಳ ದರ್ಶನವನ್ನು ಒಪ್ಪಿಕೊಳ್ಳುವರು ಮತ್ತು ನಿತ್ಯ ಜೀವನದಲ್ಲಿ ಅಭ್ಯಾಸ ಮಾಡಿಕೊಳ್ಳಲು ನಿರ್ಧರಿಸುವರು.
* ಆಪತ್ಕಾರಿ ಸಾಮಾಜಿಕ ಸ್ಥಿತಿಯಲ್ಲಿ ಈ ಸಿದ್ಧಾಂತಗಳನ್ನು ಮಕ್ಕಳಲ್ಲಿ ಬೆಳೆಸಿದ್ದೇ ಆದರೆ ನಾವು ದೇಶ ಸೇವೆ ಮಾಡಿದಂತೆ ಎಂದು ಮನಗಾಣುವರು.
* ಈ ವಿಷಯ ಕುರಿತು ಚಟುವಟಿಕೆ ಮಾಡಿಸಲು, ಆಟಗಳನ್ನಾಡಿಸಲು ಸಮರ್ಥರಾಗುವರು.

ವಿಧಾನ : ಕಥನ, ಹೇಳಿ ಕೇಳಿ.

ಮೂಲ ಸಿದ್ಧಾಂತ :

1. **ನಿರೂಪಣೆ (Definition),**
2. **ಉದ್ದೇಶ (Purpose),**
3. **ಮೂಲತತ್ತ್ವಗಳು (Prinicples) ಮತ್ತು**
4. **ಸ್ಕೌಟಿಂಗ್–ಗೈಡಿಂಗ್ ತರಬೇತಿ ವಿಧಾನ (The Method)**

1. **ನಿರೂಪಣೆ :** ಸಂಸ್ಥಾಪಕರಾದ ಲಾರ್ಡ್ ಬೇಡನ್ ಪಾವೆಲ್ಲರು ಕಲ್ಪಿಸಿದಂತೆ ಬುಡಕಟ್ಟು, ಜನಾಂಗ, ಧರ್ಮದ ಭೇದವಿಲ್ಲದೆ ಯುವ ಜನಾಂಗಕ್ಕಾಗಿ ಸ್ಥಾಪಿಸಿದ, ಸ್ವಯಂ ಸೇವಕ, ರಾಜಕೀಯ ಮುಕ್ತ ಶಿಕ್ಷಣ ಪೂರಕವಾದ ತನ್ನದೇ ಆದ ಧ್ಯೇಯೋದ್ದೇಶಗಳನ್ನು ಹೊಂದಿರುವ ಚಳವಳಿ ಇದಾಗಿದೆ.

   Definition : The S & G is a Voluntary, non-political, Educational movement for young people, open to all without discrimination of origin, race and creed in accordance with the purpose prinicples and the method as conceived by the founder Lord Baden Powell of Gillwell.

2. **ಉದ್ದೇಶ :** ಯುವ ಜನಾಂಗದ ಸಾಧನೆಗಾಗಿ, ಅವರಲ್ಲಿರುವ ದೈಹಿಕ, ಬೌದ್ಧಿಕ, ಸಾಮಾಜಿಕ, ಆಧ್ಯಾತ್ಮಿಕ ಮತ್ತು ಭಾವನಾತ್ಮಕ ಅಂತಃಸತ್ವವನ್ನು ಪರಿಪೂರ್ಣವಾಗಿ ಅಭಿವೃದ್ಧಿಗೊಳಿಸಿ ಅವರನ್ನು ಸ್ಥಳೀಯ, ರಾಷ್ಟ್ರೀಯ ಜಾಗತಿಕ ಸಮುದಾಯಗಳ ಜವಾಬ್ದಾರಿಯುತ ಪ್ರಜೆಗಳನ್ನಾಗಿ ಮಾಡುವುದೇ ಈ ಚಳವಳಿಯ ಮಹೋನ್ನತ ಉದ್ದೇಶವಾಗಿದೆ.

   Purpose : The purpose of the Movement is to contribute to the development of young people in achieving their full physical, Intellectual, Social spiritual and Emotional

potentials as responsible citizen and as the member of the local National and International Communities.

3. **ಮೂಲತತ್ವಗಳು (Principles) :**

ಸ್ಕೌಟ್-ಗೈಡ್ ಚಳವಳಿಯು ಈ ಕೆಳಗಿನ ತತ್ತ್ವಗಳಿಂದ ರೂಪುಗೊಂಡಿದೆ.

ದೇವರಿಗೆ ಕರ್ತವ್ಯ (Duty to God) :

ಸಂಸ್ಥಾಪಕರ ಪ್ರಕಾರ ಈ ಚಳವಳಿಯ ಸದಸ್ಯರು ದೇವರಲ್ಲಿ ನಂಬಿಕೆ ಉಳ್ಳವರಾಗಿರಬೇಕು. ಆಧ್ಯಾತ್ಮಿಕ ತತ್ತ್ವಗಳಿಗೆ ನಿತ್ಯವೂ ಬದ್ಧರಾಗಿ, ಧರ್ಮಕ್ಕೆ ನಿಷ್ಠೆವುಳ್ಳವರಾಗಿ, ಮಾನವ ಧರ್ಮವನ್ನು ಪಾಲಿಸಬೇಕು. ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಮಾಡಬೇಕು. ನಾವೂ ಸೇರಿದಂತೆ ಸಮಸ್ತ ಸೃಷ್ಟಿಯನ್ನು ಕಾಪಾಡಬೇಕು. ಮಾನವ ನಿರ್ಮಿತಗಳನ್ನು ಬಳಸುತ್ತಾ, ಕಾಪಾಡುತ್ತಾ ಅವುಗಳ ಕೆಡಕನ್ನು ನಿಯಂತ್ರಿಸಬೇಕು.

"ಜನ ಸೇವೆಯೇ ಜನಾರ್ಧನ ಸೇವೆ"

"ಬದುಕಿ ಬದುಕಲು ಬಿಡಿ". "ಖುದ್ ಜಿಯೋ ಔರೋಂಕೊ ಜೀನೆ ದೊ" "Live & Let Live"

ದೇಶಕ್ಕೆ ಕರ್ತವ್ಯ (Duty to Country) :

ದೇಶಕ್ಕೆ ಕರ್ತವ್ಯ ಎಂದರೆ, ದೇಶಕ್ಕೆ ನಿಷ್ಠರಾಗಿರುವುದು, ಸೌಹಾರ್ದಯುತವಾದ ಸಹಬಾಳ್ವೆ ನಡೆಸುವುದು, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಸ್ಪರ ಹೊಂದಾಣಿಕೆಯನ್ನು ಮಾಡಿಕೊಂಡು ಸಹಕಾರ ಮತ್ತು ಶಾಂತಿಯಿಂದ ಬಾಳುವುದು. ರಾಷ್ಟ್ರಾಭಿವೃದ್ಧಿಗಾಗಿ, ವೈಯಕ್ತಿಕ ಅಭಿವೃದ್ಧಿಗಾಗಿ, ಭಾವೈಕ್ಯತೆ ಮತ್ತು ಅಖಂಡತೆಯನ್ನು ಕಾಪಾಡುವುದು. ದೇಶದ ಘನತೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವುದು. ದೇಶದ ರಕ್ಷಣೆಯ ಜವಾಬ್ದಾರಿಯನ್ನು ಹೊರುವುದು. ಸಮಯ ಬಂದಾಗ ಪ್ರಾಣತ್ಯಾಗಕ್ಕೂ ಸಿದ್ಧರಾಗಿರುವುದು. ಹೀಗೆ ತ್ಯಾಗ ಮಾಡಿದ ಸಹಸ್ರಾರು ಜನರನ್ನು ಇಲ್ಲಿ ಸ್ಮರಿಸೋಣ. ಪ್ರಾರ್ಥನೆಯ 'ವತನ್ ಕೆ ವಾಸ್ತೇ ಜೀನಾ.....' ಎಂಬ ನುಡಿಯನ್ನು ನೆನಪಿಸಿಕೊಳ್ಳೋಣ. ರಾಷ್ಟ್ರದ ಪ್ರಾಕೃತಿಕ ಸಂಪತ್ತು ಮಾನವ ನಿರ್ಮಿತ ಸಂಪತ್ತು, ಜನಸಂಪತ್ತನ್ನು, ಸಂಸ್ಕೃತಿ ಮತ್ತು ಪರಂಪರೆಯನ್ನು ಸಂರಕ್ಷಿಸುತ್ತಾ ರಾಷ್ಟ್ರವನ್ನು ಮುನ್ನಡೆಸುವುದು.

ಸೊನ್ನೆಯಿಂದ ಚಂದ್ರನ ಮೇಲೆ ನೀರಿನ ಇರುವಿಕೆವರೆಗೆ ಶೋಧನೆಗಳ ಹೆಮ್ಮೆ ನಮ್ಮದಾಗಿದೆ. ಇಂತಹ ಅನೇಕ ಉನ್ನತ ಕೊಡುಗೆಗಳು ಮುಂದೂ ನಮ್ಮದಾಗಬೇಕು.

"ಜನ ಸೇವೆಯೇ ದೇಶ ಸೇವೆ"

"ವ್ಯಕ್ತಿಯ ಅಭಿವೃದ್ಧಿಯೇ ರಾಷ್ಟ್ರಾಭಿವೃದ್ಧಿ" – ಗಾಂಧೀಜಿ

"ಆಪ್ ಬಡೋ, ದೇಶ್‌ಕೋ ಬಡಾವ್" – ಎ.ಪಿ.ಜೆ. ಅಬ್ದುಲ್ ಕಲಾಂ

ಇತರರಿಗೆ ಸಹಾಯ (Helping others) :

* ಸಮಾಜದಲ್ಲಿರುವ ರೋಗಿಗಳಿಗೆ, ವಿಧಿವಂಚಿತರಿಗೆ, ಶೋಷಿತರಿಗೆ, ಅಪಘಾತಕ್ಕೆ ಈಡಾದವರಿಗೆ, ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಮಾಡುವ ಸಹಾಯ, ಈ ಸಹಾಯದಲ್ಲಿ ಪ್ರತಿಫಲಾಪೇಕ್ಷೆ ಇರಬಾರದು.
* ಲಾರ್ಡ್ ಬೇಡನ್ ಪೊವೆಲ್‌ರು "ದಿನಕ್ಕೊಂದು ಒಳ್ಳೆಯ ಕೆಲಸ (Good turn) ಮಾಡಿ" ಎಂಬ ಸಂದೇಶ ನೀಡಿದ್ದಾರೆ. ಸ್ಕೌಟ್-ಗೈಡ್ ಮಕ್ಕಳಿಗೆ ಚಿಕ್ಕಂದಿನಿಂದಲೇ ಚಿಕ್ಕಪುಟ್ಟ ಸಹಾಯ ಮಾಡುವ ಮನೋಭಾವ ಬೆಳೆಸಲಾಗುವುದು. ಹೀಗೆ ಮಾಡುತ್ತಾ ಅವರು ಬೆಳೆದಂತೆ ಅವರನ್ನು ಸಮುದಾಯ ಸೇವೆ, ಸಮಾಜ ಸೇವೆಯಲ್ಲೂ

ತೊಡಗಿಸಲಾಗುವುದು. "ಸೇವೆಯೇ ಪರಮಧರ್ಮ" ಎಂದು ಎಲ್ಲಾ ಧರ್ಮವೂ ಸಾರಿದೆ. ಇದಕ್ಕಾಗಿಯೇ "ಮಾನವ ಜನ್ಮ ದೊಡ್ಡದು" ಎಂದು ಪರಿಗಣಿಸಲಾಗಿದೆ.

ನನಗೆ ನನ್ನ ಕರ್ತವ್ಯ (Duty to Self) :

* ನನ್ನ ಜೀವನದ ಎಲ್ಲವೂ ನನ್ನಿಂದಲೇ ಪ್ರಾರಂಭವಾಗಬೇಕು. ಆಗಲೇ ಜೀವನ ನೈಜವಾಗಿ ಮುಂದೆ ಸಾಗಲು ಸಾಧ್ಯ.
* ನನ್ನ ವ್ಯಕ್ತಿತ್ವ ಮತ್ತು ಆರೋಗ್ಯ ನನ್ನದೇ ಜವಾಬ್ದಾರಿ.
* ನಾನು ನನ್ನ ಕೆಲಸಗಳನ್ನು ನಾನೇ ಮಾಡಿಕೊಳ್ಳಬೇಕು, ಸೇವಕರನ್ನು ನಿರೀಕ್ಷಿಸಬಾರದು. ನಾನು ಸ್ವಾವಲಂಬಿಯಾದರೆ ಮಾತ್ರ ಇತರರಿಗೆ ಸಹಾಯ ಮಾಡಲು ಸಾಧ್ಯ.
* ಬಾಲ್ಯದಲ್ಲಿ ತಂದೆ-ತಾಯಿ ಗುರು-ಹಿರಿಯರು ನಮ್ಮನ್ನು ಒಳ್ಳೆಯ ರೀತಿ-ನೀತಿಯಲ್ಲಿ ಬೆಳೆಸುತ್ತಾರೆ. ಯೌವನದಲ್ಲಿ ನಾವು ಬಾಲ್ಯದಲ್ಲಿ ಕಲಿತ ರೀತಿ-ನೀತಿಗಳ ಆಧಾರದ ಮೇಲೆ, ಅನುಭವಗಳ ಭದ್ರ ಬುನಾದಿಯ ಮೇಲೆ, ನಮ್ಮ ಸನ್ನಿವೇಶ, ಸಂದರ್ಭಕ್ಕನುಗುಣವಾಗಿ ನಾವೇ ಜವಾಬ್ದಾರಿಯುತ ಯುವಕ-ಯುವತಿಯರಾಗಿ ಬೆಳೆಯಬೇಕು. ಚಳವಳಿಯ ಉದ್ದೇಶ ಮಕ್ಕಳನ್ನು "ಆರೋಗ್ಯಕರ, ಆನಂದದಾಯಕ, ಉಪಯುಕ್ತ ಪ್ರಜೆಗಳನ್ನಾಗಿ" ಬೆಳೆಸುವುದು. "To make every youth a Healthy, Happy and Helpful Citizen".

4. ಸ್ಕೌಟಿಂಗ್-ಗೈಡಿಂಗ್ ತರಬೇತಿ ವಿಧಾನ (The Method) :

ಈ ವಿಧಾನವು ಪ್ರಗತಿಪರ ಶಿಕ್ಷಣ ಪದ್ಧತಿಯಾಗಿದೆ (Progressive Training).

ಪ್ರತಿಜ್ಞೆ ಮತ್ತು ನಿಯಮ (Promise and Law) :

ಪ್ರತಿಜ್ಞೆ ಮತ್ತು ನಿಯಮವನ್ನು ಜೀವನಶೈಲಿಯಾಗಿಸುವುದು. ಪ್ರತಿಜ್ಞೆ ಪ್ರತಿಯೊಬ್ಬ ಮಾನವರು ಮಾಡಬೇಕಾದ ಕರ್ತವ್ಯ. 100 ವರ್ಷ ತುಂಬಿರುವ ಈ ಪ್ರತಿಜ್ಞೆ ಸರ್ವಕಾಲಕ್ಕೂ ಕ್ರಿಯಾಶೀಲವಾಗಿದೆ "On my honour, I promise that I will do my best, to do my duty to God and my country, help other people and to obey the Guide / Scout Law".

ಪ್ರತಿಜ್ಞೆಯ ಜೊತೆಗೆ ನಿಯಮವಿದೆ. ನಿಯಮವು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕಾದ ಗುಣ ಮತ್ತು ಮೌಲ್ಯಗಳಾಗಿವೆ. ಇದರಲ್ಲಿ 9 ಅಂಶಗಳಿವೆ. ಪ್ರತಿಜ್ಞೆ ಮತ್ತು ನಿಯಮವನ್ನು ತರಬೇತಿಯ ಉದ್ದಕ್ಕೂ ಅಳವಡಿಸಿಕೊಳ್ಳಲಾಗುವುದು.

ಪಟಾಲಂ ಪದ್ಧತಿ (Patrol System)

* ಚಿಕ್ಕ ಗುಂಪಿನಲ್ಲಿ ಸಮವಯಸ್ಕರೊಡನೆ ಕಲಿಯುವ / ಕೆಲಸ ಮಾಡುವ ಪದ್ಧತಿಯೇ ಪಟಾಲಂ ಪದ್ಧತಿ.
* ಸ್ಕೌಟ್ಸ್-ಗೈಡ್ಸ್ ಒಂದು ಗುಂಪಿನಲ್ಲಿ 6 ರಿಂದ 8 ಮಕ್ಕಳಿರುತ್ತಾರೆ. ಈ ಗುಂಪನ್ನು ಪಟಾಲಂ (Patrol) ಎನ್ನಲಾಗಿದೆ.
* ಕಬ್, ಬುಲ್‌ಬುಲ್ಸ್ ಒಂದು ಗುಂಪಿನಲ್ಲಿ 6 ಮಕ್ಕಳಿರುತ್ತಾರೆ. ಈ ಗುಂಪನ್ನು ಷಟ್ಕ (Six) ಎನ್ನಲಾಗಿದೆ.
* ರೋವರ್-ರೇಂಜರ್ ಇವರಲ್ಲಿ ಪಟಾಲಂ ಪದ್ಧತಿ ಇರಬಹುದು, ಇಲ್ಲದಿರಬಹುದು.

ಪ್ರತಿ ಚಿಕ್ಕ ಗುಂಪಿಗೂ ಅವರದೇ ಆದ ನಾಯಕರಿರುತ್ತಾರೆ. ಈ ಕಿರಿಯ ನಾಯಕರು ಹಿರಿಯ ನಾಯಕರ ಮಾರ್ಗದರ್ಶನದ ಮೇರೆಗೆ ಗುಂಪಿನಲ್ಲಿ ಚಟುವಟಿಕೆ ಮಾಡಿಸುತ್ತಾರೆ. ಪ್ರಜಾಪ್ರಭುತ್ವದ ಆಧಾರದ ಮೇಲೆ ಈ ಪಟಾಲಂ ಪದ್ಧತಿಯಲ್ಲಿ ನಾಯಕತ್ವವನ್ನು ಬೆಳೆಸಲಾಗುವುದು. ಲಾರ್ಡ್ ಬೇಡನ್ ಪೊವೆಲ್ಲರು ರೂಪಿಸಿರುವ ಈ ಪದ್ಧತಿ ವಿಶ್ವದಲ್ಲೇ ವಿಶಿಷ್ಟವಾದ ಹಾಗೂ ವಿನೂತನ ತರಬೇತಿ ಪದ್ಧತಿಯಾಗಿದೆ.

ಮಾಡಿ ಕಲಿ (Learning by Doing) :

ಗಂಡು ಮತ್ತು ಹೆಣ್ಣು ಮಕ್ಕಳ ಕಾರ್ಯಕ್ರಮ (Boy-Girl Programme) ಮಾಡುತ್ತಾ ಕಲಿಯುವಂತೆ ರೂಪಿಸಲಾಗಿದೆ. ಸ್ವತಃ ಬಿ.ಪಿ.ಯವರು ಬಾಲ್ಯದಲ್ಲಿ ಕಲಿತದ್ದು ಮಾಡುತ್ತಾ, ಹೀಗೆ ಕಲಿತ ಯಶಸ್ವಿ ಅನುಭವಗಳಿಂದ ಈ ವಿಧಾನವನ್ನು ಅಳವಡಿಸಿದ್ದಾರೆ.

* ಮಾಡುತ್ತಾ ಕಲಿಯುವುದು ಅನುಭವ ವೇದ್ಯ.
* ಕಲಿಕೆ ಶಾಶ್ವತವಾಗಿರುತ್ತದೆ.
* ಕಲಿಕೆಗೆ ಪ್ರೇರಣೆ ನೀಡುತ್ತದೆ.
* ಕಲಿಕೆಯ ವೇಗ ಹೆಚ್ಚಾಗುತ್ತದೆ.
* ಪ್ರತ್ಯಕ್ಷ ಅನುಭವ ನೀಡುತ್ತದೆ.

ಹೊರಾಂಗಣ ಚಟುವಟಿಕೆ (Out door activities) :

* ಸ್ಕೌಟಿಂಗ್-ಗೈಡಿಂಗ್ ಮತ್ತೊಂದು ಶಾಲಾ ತರಗತಿಯಾಗಬಾರದು. ಈ ಚಟುವಟಿಕೆಯನ್ನು ಹೊರಾಂಗಣದಲ್ಲಿ ಮಾಡಬೇಕು.
* ಕಲಿಕೆ ಗಿಡ ಮರದ ಕೆಳಗೆ ಆಹ್ಲಾದಕರವಾಗಿರುತ್ತದೆ, ಆನಂದದಾಯಕವಾಗಿರುತ್ತದೆ.
* ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಹೊರಾಂಗಣ ಪರಿಸರ ಪೂರಕವಾಗಿರುತ್ತದೆ. ಹೊರಾಂಗಣ ಚಟುವಟಿಕೆ ಎಂದರೆ ಶಿಬಿರವಾಸ, ಹೊರಸಂಚಾರ, ಪ್ರಕೃತಿ ಅಧ್ಯಯನ ಹಾಗು ಸಾಹಸ ಚಟುವಟಿಕೆಗಳು.

ಮೂಲ ಸಿದ್ಧಾಂತದ ಅಂಶಗಳನ್ನು ಮೊದಲು ನಮ್ಮಲ್ಲಿ ಅಂತರ್ಗತಗೊಳಿಸಿಕೊಳ್ಳುವುದರ ಮೂಲಕ ಹಾಗೂ ಸ್ಕೌಟಿಂಗ್ ಮತ್ತು ಗೈಡಿಂಗ್ ತರಬೇತಿಯಲ್ಲಿ ಅಳವಡಿಸುವುದರ ಮೂಲಕ ಚಳವಳಿಯ ಉದ್ದೇಶವನ್ನು ಸಾಧಿಸಬಹುದು.

ಶತಾಯುಶಿ ಸ್ಕೌಟಿಂಗ್-ಗೈಡಿಂಗ್ ಚಿರಾಯುವಾಗಲಿ

ಚಟುವಟಿಕೆ :

1. **ಗುಂಪು-1 ಸಿದ್ಧಾಂತಗಳ ಕಿರುವಾಕ್ಯ/ಪದ. ಗುಂಪು-2 ಅದಕ್ಕೆ ಹೊಂದುವ ವಾಕ್ಯ/ಹೇಳಿಕೆ.**

   (ಇದನ್ನು ಕಾರ್ಡು ಮಾಡಬಹುದು. ಇಲ್ಲವೇ ಹೊಂದಿಸಲು ಅಚ್ಚಿಸಿದ ಹಾಳೆ ಕೊಡಬಹುದು).

ಜೊತೆ ಮಾಡಿ / ಹೊಂದಿಸಿ :

ಅ.	ಆ.	ಉತ್ತರ
ಇ. ದೇವರಿಗೆ ಕರ್ತವ್ಯ	1. ಜವಾಬ್ದಾರಿಯುತ ಪ್ರಜೆ	________
ಈ. ಸ್ವಾವಲಂಬನೆ	2. ಜೀವನ ಶಿಕ್ಷಣ	________
ಉ. ನಿರೂಪಣೆ	3. ಅಗತ್ಯವಿರುವವರಿಗೆ ಸಹಾಯ	________
ಊ. ಉದ್ದೇಶ	4. ತನ್ನ ಕೆಲಸ ತಾವೇ ಮಾಡುವುದು	________
ಋ. ಗೈಡಿಂಡ್/ಸ್ಕೌಟಿಂಗ್	5. ಪರಿಸರ ಸಂರಕ್ಷಿಸುವುದು	________
ಎ. ಸೇವೆ	6. ಜಾತಿ, ಮತ, ಲಿಂಗ, ವಯಸ್ಸು ಭೇದವಿಲ್ಲ	________

[ಉತ್ತರ : ಇ-5, ಈ-4, ಉ-6, ಊ-1, ಋ-2, ಎ-1]

2. ಇವರಲ್ಲಿರುವ ಎದ್ದುಕಾಣುವ ಮೂಲ ಸಿದ್ಧಾಂತ ಅಂಶಗಳನ್ನು ಹೇಳಿಸಿ/ತುಂಬಿಸಿ.

2.1 ಕಿತ್ತೂರು ರಾಣಿ ಚೆನ್ನಮ್ಮ ....

2.2 ಝಾನ್ಸಿ ರಾಣಿ ....

2.3 ಭಗತ್ ಸಿಂಗ್ ....

2.4 ಗಾಂಧೀಜಿ ....

2.5 ಕಿರಣ್ ಬೇಡಿ ....

2.6 ಅಬ್ದುಲ್ ಕಲಾಂ ....

3. **ಅಪೂರ್ಣ ವಾಕ್ಯ ಪೂರ್ಣಗೊಳಿಸಿ :**

3.1 'ನೀಲಿ ಬಣ್ಣವು ಆಕಾಶದಲ್ಲಿ ಹರಡಿದಂತೆ' ಎಂಬ ಅರ್ಥ ಬರುವ ಧ್ವಜ ಗೀತೆಯ ಸಾಲನ್ನು ಬರೆಯಿರಿ.

....

3.2 ಪ್ರತಿಕ್ಷಣವು ಮುಂದೆ ಸಾಗೋಣ ಎಂಬ ಅರ್ಥ ಬರುವ ಧ್ವಜಗೀತೆಯ ಸಾಲನ್ನು ಬರೆಯಿರಿ.

....

3.3 ಧ್ವಜ ಗೀತೆ ರಚಿಸಿದವರು ....

ಧ್ವಜ ಗೀತೆ ಹಾಡಬೇಕಾದ ಅವಧಿ ....

3.4 ಹಾಡನ್ನು ತಪ್ಪಿಲ್ಲದೆ ಕಲಿತು ಒಪ್ಪಿಸುವುದು.

ತರಬೇತಿಯ ನಾಲ್ಕು ಆಧಾರಾಂಶಗಳು (ಮಾರ್ಗೋಪಾಯಗಳು) :

ಚಳವಳಿಯ ಉದ್ದೇಶವನ್ನು ಸಾಧಿಸಲು ನೈಜ ಮಾರ್ಗೋಪಾಯಗಳನ್ನು ಬಿ.ಪಿ.ಯವರು ನೀಡಿದ್ದಾರೆ :

ಚಾರಿತ್ರ್ಯಾಭಿವೃದ್ಧಿ : ನಮ್ಮ ತಾಯಿ ಮತ್ತು ನಮ್ಮ ಗುರುಗಳು ನಮ್ಮನ್ನು ಉತ್ತಮ ರೀತಿಯಲ್ಲಿ ಬೆಳೆಸುತ್ತಾರೆ. ಇದರ ಜೊತೆಗೆ ಗೈಡಿಂಗ್ ನಮ್ಮನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತಮವಾಗಿ ಬೆಳೆಸಲು ಪ್ರಯತ್ನಿಸುತ್ತದೆ. ಚಿಕ್ಕ ಗುಂಪಿನಲ್ಲಿ ಗೆಳತಿಯರೊಡನೆ ಒಟ್ಟಾಗಿ ಕಲಿಯುವ, ಕೆಲಸ ಮಾಡುವ ಅವಕಾಶ ನೀಡುತ್ತದೆ. **ಪಟಾಲಂ ಪದ್ಧತಿ ಸಚ್ಚಾರಿತ್ರ್ಯದಿಂದ ಕೂಡಿದ ವ್ಯಕ್ತಿ**ಗಳಾಗಿ, ಉತ್ತಮ ನಾಗರಿಕರಾಗಿ, ಉತ್ತಮ ತಾಯಂದಿರಾಗುವಂತೆ ಮಾಡುತ್ತದೆ.

"ಸಚ್ಚಾರಿತ್ರ್ಯ ವ್ಯಕ್ತಿಯ ನೈಜ ಆಭರಣ"

ಆರೋಗ್ಯಾಭಿವೃದ್ಧಿ : ಈ ಕಾಲದಲ್ಲಿ ಆರೋಗ್ಯ ಬಹಳ ದುಬಾರಿ, ಗೈಡಿಂಗ್ ಆರೋಗ್ಯವನ್ನು ಕಾಪಾಡಿಕೊಳ್ಳಲು ನಿಮಗೆ ನಿಯಮಗಳನ್ನು ನೀಡುತ್ತದೆ. ಅಭ್ಯಾಸಗಳನ್ನು ಮಾಡಿಸುತ್ತದೆ. ಬಯಲಿನಲ್ಲಿ ವ್ಯಾಯಾಮ ಮಾಡುವುದು, ಕಲಿಯುವುದು, ಆಟವಾಡುವುದು ಇದರಲ್ಲಿ ಕಡ್ಡಾಯ. ಪ್ರಕೃತಿಯ ಮಡಿಲಲ್ಲಿ ಮಾಡುವ ಪರ್ವತಾರೋಹಣ, ಸಾಹಸ, ಶಿಬಿರವಾಸ, ಹೊರಸಂಚಾರ, ಪ್ರಕೃತಿ ಸಂಚಾರ, ಚಾರಣ ಚಟುವಟಿಕೆಗಳಿಂದ ಆರೋಗ್ಯ ವೃದ್ಧಿಯಾಗುತ್ತದೆ.

ಕರಕೌಶಲ : ಕೈಗಳು ಕೆಲಸದಲ್ಲಿ ತೊಡಗಿದ್ದಾಗ ಮನಸ್ಸು ಸಮಸ್ಥಿತಿಯಲ್ಲಿರುತ್ತದೆ. ಕಸೂತಿ, ಮಾದರಿ ತಯಾರಿಕೆ, ಚಿತ್ರಕಲೆ, ಕಾಗದದ ಕಲೆ, ಬಿದಿರಿನ ಕಲೆ, ತ್ಯಾಜ್ಯ ವಸ್ತುಗಳ ಬಳಕೆ ಮಾಡಿ ಕೈ ಕೆಲಸ ಮಾಡಲು ಗೈಡಿಂಗ್‌ನಲ್ಲಿ ಅವಕಾಶ ನೀಡಲಾಗುತ್ತದೆ. ನಮ್ಮ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಕರಕುಶಲತೆ ಹಾಸುಹೊಕ್ಕಾಗಿದೆ. ಭಾರತೀಯರ ಕರಕುಶಲತೆಗೆ ದೇಶ ವಿದೇಶಗಳಲ್ಲಿ ಭಾರಿ ಬೇಡಿಕೆ ಇದೆ. ಕರಕೌಶಲಗಳ ಹವ್ಯಾಸವನ್ನು ಬೆಳೆಸಿಕೊಂಡರೆ ಭವಿಷ್ಯದಲ್ಲಿ ಇವು

ಅದಾಯದಾಯಕವಾಗಬಹುದು. ಎಲ್ಲಕ್ಕೂ ಮಿಗಿಲಾಗಿ ಈ ಹವ್ಯಾಸಗಳಿಂದ ಸೃಜನಶೀಲತೆ ಹೊರಹೊಮ್ಮಿ ಆತ್ಮತೃಪ್ತಿ, ಆತ್ಮಾನಂದ ದೊರೆಯುತ್ತದೆ.

ಸೇವೆ : ಸೇವೆಯೇ ಮಾನವ ಜನ್ಮದ ಪರಮಧರ್ಮ. ಅಗತ್ಯವಿರುವವರಿಗೆ, ಸಂಕಷ್ಟದಲ್ಲಿ ತಕ್ಷಣವೇ ಮಾಡುವ ಸಹಾಯವೇ ಸೇವೆ. ಪ್ರತಿಜ್ಞೆಯಲ್ಲಿ "ಇತರರಿಗೆ ಸಹಾಯ ಮಾಡುತ್ತೇನೆ" ಎಂಬುದನ್ನು ಅಳವಡಿಸಲಾಗಿದೆ. ಬಿ.ಪಿ.ಯವರು ಸ್ಕೌಟಿಂಗ್ ಪ್ರಾರಂಭ ಮಾಡುವ ಮುನ್ನ ಬಾಲಕರು ನಾವೇನು ಮಾಡಬೇಕೆಂದು ಪ್ರಶ್ನಿಸಿದಾಗ ಸರಳವಾಗಿ "ದಿನಕ್ಕೊಂದು ಒಳ್ಳೆ ಕೆಲಸ ಮಾಡಿ" ಎಂದು ತಿಳಿಸಿದರು. ಸೇವೆ ಮಾಡಲು, ಪ್ರಥಮ ಚಿಕಿತ್ಸೆ, ಸುರಕ್ಷತೆ ಮತ್ತು ರಕ್ಷಣಾ ವಿಧಾನಗಳ ಪ್ರತ್ಯಕ್ಷ ತರಬೇತಿ ನೀಡಲಾಗುವುದು. ಮಕ್ಕಳನ್ನು ಹಂತ ಹಂತವಾಗಿ ಸಮುದಾಯ ಮತ್ತು ಸಮಾಜ ಸೇವೆಯಲ್ಲೂ ತೊಡಗಿಸಲಾಗುವುದು.

ಇದೆಲ್ಲದರ ಜೊತೆಗೆ ಬುದ್ಧಿಶಕ್ತಿಯನ್ನು ಬೆಳೆಸಲು ಗೈಡಿಂಗಿನಲ್ಲಿ ವಿಪುಲ ಅವಕಾಶವನ್ನು ನೀಡಲಾಗಿದೆ. ನಕ್ಷಾಕೌಶಲ, ಸಂಕೇತ ಭಾಷೆಗಳು, ಬುದ್ಧಿಗೆ ಸವಾಲು ನೀಡುವ ಚಟುವಟಿಕೆಗಳು ಹಾಗೆಯೇ, ಪ್ರಕೃತಿ ಸಂಚಾರ, ಅನ್ವೇಷಣೆ, ಸಾಹಸ ಕಾರ್ಯಗಳು ನಾನಾ ಸವಾಲುಗಳನ್ನು ಒಡ್ಡಿ ಅವುಗಳನ್ನು ಎದುರಿಸುವ ಸಾಮರ್ಥ್ಯ ಬೆಳೆಸುತ್ತದೆ. ವೇಗವಾಗಿ ಸಾಗುತ್ತಿರುವ ವಿಶ್ವದಲ್ಲಿ, ಆಧುನಿಕ ಗಣಕೀಕೃತ ಯುಗವನ್ನು ಎದುರಿಸುವ ಸಾಮರ್ಥ್ಯ ಬೆಳೆಸುತ್ತದೆ. ಬುದ್ಧಿಶಕ್ತಿಯನ್ನು ಸಮರ್ಥವಾಗಿ ಬೆಳೆಸಿಕೊಳ್ಳದಿದ್ದರೆ ನಾವೂ ಈ ವೇಗದಲ್ಲಿ ಕಳೆದುಹೋಗಿಬಿಡುತ್ತೇವೆ.

ಈ ನಾಲ್ಕು ಮಾರ್ಗಗಳನ್ನು ಅನುಸರಿಸುತ್ತಾ ಮಹಿಳೆಯರಿಗೆ ಮತ್ತು ಬಾಲಕಿಯರಿಗೆ ತರಬೇತಿಯನ್ನು ನೀಡಲಾಗುವುದು. ಈ ನಾಲ್ಕು ಅಂಶಗಳ ಆಧಾರದ ಮೇಲೆ ಎಲ್ಲಾ ಬಾಲಕಿಯರ ಕಾರ್ಯಕ್ರಮಗಳನ್ನು (Girl Program) ರೂಪಿಸಲಾಗಿದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಇವುಗಳಿಗೆ ಸರಿ ಹೊಂದುವ ಪದಗಳನ್ನು ಮೂಲ ಸಿದ್ಧಾಂತದಿಂದ ಆಯ್ದು ಉತ್ತರಿಸಿ, ಎರಡು ಉತ್ತರಕ್ಕೆ ಮಾತ್ರ ಇಬ್ಬರ ಸಹಾಯ ಪಡೆಯಬಹುದು. ಅವರ ಹೆಸರು, ಊರು ಮತ್ತು ಮೊಬೈಲ್ ಸಂಖ್ಯೆ ಬರೆದುಕೊಳ್ಳಿ.

1. ಶಿಕ್ಷಕ ವೃತ್ತಿ	2. ಕಾಯಕವೇ ಪೂಜೆ	3. ಯಾವ ಭೇದವು ಇಲ್ಲದೆ ಮುಕ್ತ ಪ್ರವೇಶ	4. ಶಿಬಿರವಾಸ	5. ಹಾಡ್ತಾ ಹಾಡ್ತಾ ರಾಗ
6. ಪ್ರಥಮಬಾರಿ ಪ್ರತಿಜ್ಞೆ ಮಾಡುವ ಸಮಾರಂಭ	7. ಪರಿಸರ ರಕ್ಷಣೆ ನಮ್ಮ ರಕ್ಷಣೆ	8. ಪುಸ್ತಕದಲ್ಲಿ ಉಳಿದ ಖಾಲಿ ಪುಟಗಳ ಮರು ಬಳಕೆ	9. ಕಾಲು ಮುರಿದು ಬಿದ್ದ ಕಾಗೆಗೆ ಶುಶ್ರೂಷೆ	10. ಹಮೆ ಆಪಸ್ ಮೆ ಮಿಲ್ ಝುಲ್‌ಕರ್ ಪ್ರಭೊ ರೆಹನಾ ಸಿಖಾದೇನ
11. ಕಿರಣ ಬೇಡಿ ದಿಟ್ಟ ಪೊಲೀಸ್ ಅಧಿಕಾರಿಣಿ	12. ವಂದನಾರ್ಪಣೆಯ ಸಮಯದಲ್ಲೂ ಸುಮ್ಮನೆ ಕುಳಿತಿರುವುದು	13. ಒಮ್ಮೆ ಗೈಡ್ ಆದರೆ ಜೀವನ ಪರ್ಯಂತ ಗೈಡ್	14. ಮನದಾಳದ ಮಾತು ಹೊರಗೆ ಆಡುವರು	15. ತಮ್ಮ ತಮ್ಮ ಕೆಲಸ ತಾನೇ ಮಾಡಿಕೊಳ್ಳಬೇಕು
16. ದಿನಕ್ಕೊಂದು ಒಳ್ಳೆ ಕೆಲಸ ಮಾಡುವ ಅಭ್ಯಾಸ	17. ದೇಶದ ರಕ್ಷಣೆ ನಮ್ಮ ಹೊಣೆ	18. ಒಟ್ಟಾಗಿ ಚಿಕ್ಕ ಗುಂಪಿನಲ್ಲಿ ಕೆಲಸ ಮಾಡುವುದು	19. ಭ್ರಾತೃಭಗಿನಿ ಭಾವವನ್ನು ಸಾರುವ ಅಂಶ	20. ಉದ್ಯಾನವನ ರಕ್ಷಣೆ ನಮ್ಮ ಹೊಣೆ
21. ಸಮಯಕ್ಕೆ ಸರಿಯಾಗಿ ಕೆಲಸ ಮಾಡುವ ಅಭ್ಯಾಸ	22. ಆರೋಗ್ಯಕರ, ಆನಂದ ದಾಯಕ ಉಪಯುಕ್ತ ಪ್ರಜೆಗಳ ನಿರ್ಮಾಣ	23. ಮಾತು ಮಂದಿಯನ್ನು ಗೆಲ್ಲುತ್ತದೆ	24. ನೈಜ ರೀತಿಯಲ್ಲಿ ಚಾರಿತ್ರ್ಯಾಭಿವೃದ್ಧಿ ಮಾಡುವ ಸ್ಕೌಟಿಂಗ್/ಗೈಡಿಂಗ್‌ನಲ್ಲಿನ ಮಾರ್ಗೋಪಾಯ	25. ವಿಶ್ವದ ಏಕಮಾತ್ರ ಬೃಹತ್ ಮಹಿಳಾ ಸಂಘಟನೆ

ಪ್ರತಿ ಅಂಕಣದಲ್ಲಿ ಇರುವ ಹೇಳಿಕೆಯನ್ನು ಮೂಲ ಸಿದ್ಧಾಂತದ ಅಂಶಗಳಾದ – ನಿರೂಪಣೆ, ಉದ್ದೇಶ, ತತ್ವ ಮತ್ತು ವಿಧಾನ ಆಧಾರಾಂಶಗಳಿಗೆ ಹೊಂದಿಸಿ ಬರೆಯಿರಿ.

ಉತ್ತರ :1. ದೀಕ್ಷೆ ಕರ್ತವ್ಯ 2. ದೇವರಿಗೆ ಕರ್ತವ್ಯ 3. ನಿರೂಪಣೆ 4. ಹೊರಾಂಗಣ ಚಟುವಟಿಕೆ 5. ಮಾಡುತ್ತಾ ಕಲಿ 6. ದೀಕ್ಷಾ ಸಮಾರಂಭ 7. ಪ್ರಕೃತಿ ಪ್ರೇಮಿ 8. ಮಿತವ್ಯಯಿ 9. ಪ್ರಾಣಿ ಮಿತ್ರಳು 10. ಎಲ್ಲರಿಗೂ ಸ್ನೇಹಿತಳು 11. ಧೈರ್ಯವಂತಳು 12. ಶಿಸ್ತು 13 ನಿಷ್ಠೆ 14. ಮನಸಾ ಶುದ್ಧ 15. ಸ್ವಸಹಾಯ 16. ಸತ್ಕಾರ್ಯ 17. ದೇಶಕ್ಕೆ ಕರ್ತವ್ಯ 18. ಪೆಟ್ರೋಲ್ ಪದ್ಧತಿ 19. ವಿಶ್ವ ಬಂಧುತ್ವ 20. ಸಾರ್ವಜನಿಕ ಆಸ್ತಿ ರಕ್ಷಣೆ 21. ಸಮಯಪ್ರಜ್ಞೆ 22. ಉದ್ದೇಶ 23. ವಿನಯವಂತಿಕೆ 24. ಪೆಟ್ರೋಲ್ ಪದ್ಧತಿ 25. ಗೈಡ್ ಚಳುವಳಿ ಜಾಗತಿಕ

ಸೂಚನೆ : ಜೆರಾಕ್ಸ್ ಮಾಡಿಸುವಾಗ ಉತ್ತರ ಜೆರಾಕ್ಸ್ ಮಾಡಿಸಬೇಡಿ.

ಪ್ರವಚನ:4 – ಪ್ರತಿಜ್ಞೆ ಮತ್ತು ನಿಯಮ
(Promise and Law)

ಉದ್ದೇಶ : ಪ್ರವಚನದ ಅಂತ್ಯದಲ್ಲಿ ಪ್ರಶಿಕ್ಷಣಾರ್ಥಿಗಳು –

* ಪ್ರಸ್ತುತ ದೇಶ ಮತ್ತು ಜಾಗತಿಕ ಪರಿಸ್ಥಿತಿಯಲ್ಲಿ ಪ್ರತಿಜ್ಞೆ ಮತ್ತು ನಿಯಮದ ಮಹತ್ವವನ್ನು ತಿಳಿಯುವರು.
* ಪ್ರತಿಜ್ಞೆ ಮಾಡಲು ನಿಯಮ ಅನುಸರಿಸಲು ಸ್ವ-ಇಚ್ಛೆಯಿಂದ ಮುಂದಾಗುವರು.
* ಸ್ವ-ಪ್ರೇರಣೆಯಿಂದ ಭಾಷೆ ನೀಡಿ ದೀಕ್ಷೆ ಪಡೆಯುವರು.
* ನಿಯಮ ಪ್ರತಿಜ್ಞೆಗೆ ಮರುಪುಷ್ಟಿ ನೀಡಲು ದೃಷ್ಟಾಂತಗಳನ್ನು ಕೊಡುವರು, ಆಟಗಳನ್ನು ಆಡಿಸುವರು.

ವಿಧಾನ : ಕಥೆ, ವ್ಯಕ್ತಿ ಚಿತ್ರಣ, ಉದಾಹರಣೆ ಮೂಲಕ ಮಾಡುವುದು.

ಪ್ರತಿಜ್ಞೆ

ನಾನು ನನ್ನ ಗೌರವ ಸಾಕ್ಷಿಯಾಗಿ ನನ್ನ ಕೈಲಾದಮಟ್ಟಿಗೆ ದೇವರಿಗೂ ಮತ್ತು ನನ್ನ ದೇಶಕ್ಕೂ ಕರ್ತವ್ಯವನ್ನು ಸಲ್ಲಿಸುತ್ತೇನೆಂದೂ, ಇತರರಿಗೆ ಸಹಾಯ ಮಾಡುತ್ತೇನೆಂದೂ ಮತ್ತು ಗೈಡ್ ನಿಯಮವನ್ನು ಪಾಲಿಸುತ್ತೇನೆಂದೂ ಪ್ರತಿಜ್ಞೆ ಮಾಡುತ್ತೇನೆ.

ನಿಯಮ ಒಂದು – ಅಂಶಗಳು ಒಂಬತ್ತು :

1. ಗೈಡ್ ವಿಶ್ವಾಸಾರ್ಹಳು.
2. ಗೈಡ್ ನಿಷ್ಠಾವಂತಳು.
3. ಗೈಡ್ ಎಲ್ಲರ ಸ್ನೇಹಿತಳು ಮತ್ತು ಗೈಡ್‌ಗಳಿಗೆ ಸೋದರಿಯಾಗಿರುವಳು.
4. ಗೈಡ್ ವಿನಯಶೀಲಳು.
5. ಗೈಡ್ ಪ್ರಾಣಿಮಿತ್ರಳು ಮತ್ತು ಪ್ರಕೃತಿ ಪ್ರೇಮಿಯಾಗಿರುವಳು.
6. ಗೈಡ್ ಶಿಸ್ತುಳ್ಳವಳು ಮತ್ತು ಸಾರ್ವಜನಿಕ ಆಸ್ತಿ ರಕ್ಷಿಸಲು ಸಹಾಯ ಮಾಡುವಳು.
7. ಗೈಡ್ ಧೈರ್ಯವಂತಳು.
8. ಗೈಡ್ ಮಿತವ್ಯಯಿಯಾಗಿರುವಳು.
9. ಗೈಡ್ ಕಾಯಾ, ವಾಚಾ, ಮನಸಾ ಪರಿಶುದ್ಧಳು.

(ಸುಲಭವಾಗಿ ನೆನೆಪಿಡಲು ವಿ.ನಿ.ಸ್ನೇ., ವಿ.ಪ್ರಾ.ಶಿ., ಧೈ.ಮಿ.ಕಾ., ಎಂದು ಮನನ ಮಾಡಿ)

ಆಟಗಳು :

ಆಟ 1: ಪ್ರತಿಜ್ಞೆ-ನಿಯಮ ಗುರುತಿಸುವುದು.

ವಸ್ತುಗಳು : ಗುಂಪು-1, 1 ರಿಂದ 12 ಸಂಖ್ಯೆಯ ಕಾರ್ಡು. ಗುಂಪು-2 ಪ್ರತಿಜ್ಞೆಯ 3 ಅಂಶ ಮತ್ತು ನಿಯಮದ

9 ಅಂಶಗಳಿಗೆ ಹೇಳಿಕೆ / ವ್ಯಕ್ತಿಗಳು / ಗಾದೆ.

ಸಂಕೇತ ಸಂಖ್ಯೆ : ದೇವರಿಗೆ, ದೇಶಕ್ಕೆ ಕರ್ತವ್ಯ–1, ಸಹಾಯ–2, ಸ್ಕೌಟ್ಸ್–ಗೈಡ್ಸ್ ನಿಯಮಕ್ಕೆ ವಿಧೇಯತೆ–3, ವಿಶ್ವಾಸಾರ್ಹ–4, ಪ್ರಾಮಾಣಿಕತೆ–5, ಸ್ನೇಹ–6, ವಿನಯ–7, ಪರಿಸರ ಸ್ನೇಹಿ–8, ಶಿಸ್ತು–9, ಧೈರ್ಯವಂತರು–10, ಮಿತವ್ಯಯ–11, ಪರಿಶುದ್ಧತೆ–12.

ಗಮನಿಸಿ : ಚಳವಳಿಯ ಮೂಲ ಮತ್ತು ಇತಿಹಾಸದ ಆಟಗಳಂತೆ ಜೊತೆ ಗೂಡುವ / ಹೊಂದಿರುವ ಈ ಆಟಗಳನ್ನು ಆಡಿಸಿ. ಇದರಲ್ಲೂ ವ್ಯಕ್ತಿಯ ಹೆಸರು ನೀಡಿದರೆ ಒಬ್ಬರಲ್ಲಿ ಒಂದಕ್ಕಿಂತ ಹೆಚ್ಚು ಅಂಶಗಳಿರಬಹುದು.

ಚಟುವಟಿಕೆ–2 :

(ಕೇಳಿರುವ, ಓದಿರುವ, ಪ್ರಸಿದ್ಧ ಅಂಶಗಳಿಗೆ ಮಾನ್ಯತೆ, ಊಹೆಗಳಿಗೆ ಅವಕಾಶವಿಲ್ಲ.)

ವ್ಯಕ್ತಿಗಳು	ಪ್ರತಿಜ್ಞೆ ನಿಯಮ ಸಂಕೇತ
ಕಿರಣ್ ಬೇಡಿ	....
ಕಲ್ಪನಾ ಚಾವಲ	....
ಮದರ್ ತೆರೇಸಾ	....
ಸಾಲುಮರದ ತಿಮ್ಮಕ್ಕ	....
ಸುನಿತಾ ವಿಲಿಯಂ	....
ವಿದ್ಯಾಧರಿ	....
ಅಶ್ವಿನಿ ಅಕುಂಜೆ ಶೆಟ್ಟಿ	....

ಚಟುವಟಿಕೆ–3 : ಪ್ರತಿಜ್ಞೆ ನಿಯಮದ ಅಂಶ ನೀಡಿ ಕಿರುನಾಟಕ / ಪಾತ್ರಾಭಿನಯ ಮಾಡಿಸುವುದು.

ಪ್ರತಿಜ್ಞೆ ಮತ್ತು ನಿಯಮ

1. ಪ್ರತಿಜ್ಞೆ :	
2. ನಿಯಮ :	5.
1.	6.
2.	7.
3.	8.
4.	9.

ಹಾಡಿನ ಸಾಲುಗಳನ್ನು ಪ್ರತಿಜ್ಞೆ ನಿಯಮಗಳೊಂದಿಗೆ ಹೊಂದಿಸಿ, ಕನ್ನಡದಲ್ಲಿ ಅರ್ಥ ಬರೆಯಿರಿ.

ಪ್ರಾರ್ಥನೆ ಧ್ವಜಗೀತೆಯ ಸಾಲು	ಪ್ರತಿಜ್ಞೆ ನಿಯಮ	ಕನ್ನಡ ಅರ್ಥ
	ಭ್ರಾತೃತ್ವ	
	ದೇಶಕ್ಕೆ ಕರ್ತವ್ಯ	
	ಸೇವೆ	
	ಪರಿಶುದ್ಧತೆ	
	ಎಲ್ಲರಿಗೂ ಸ್ನೇಹಿತರು	

"ಅವರು (ಬಿ.ಪಿ.ಯವರು) ರಚಿಸಿದ ಸರಳ ವಿಚಾರವುಳ್ಳ ಈ ಪ್ರತಿಜ್ಞೆ ಎಷ್ಟೊಂದು ದೂರಕ್ಕೆ ಸಾಗಿದೆ!" ಎಷ್ಟೊಂದು ಅದ್ಭುತವಾದ ಪ್ರಭಾವ ಬೀರಿದೆ!

– ಲೇಡಿ ಅಲೇನ್ ಬಿ.ಪಿ.

ಪ್ರವಚನ:5 ಗೈಡ್ ವಂದನೆ, ಸಂಕೇತ-ಧ್ಯೇಯ, ಎಡಗೈ ಹಸ್ತಲಾಘವ, ಸತ್ಕಾರ್ಯ (Guide Salute, Sign-Motto, Left hand shake, Goodturn)

ಉದ್ದೇಶ ಪ್ರಶಿಕ್ಷಣಾರ್ಥಿಗಳು –

* ಸರಿಯಾಗಿ ವಂದಿಸುವ, ಶುಭಕೋರುವ ಅಭ್ಯಾಸ ಮಾಡಿಕೊಂಡು ಈ ವಿಶಿಷ್ಟತೆಯನ್ನು ಚಳವಳಿಯಲ್ಲಿ ಮಾತ್ರ ಬಳಸುವರು.
* ಎಡಗೈ ಹಸ್ತಲಾಘದ ಕಥೆಯನ್ನು ತಿಳಿಯುವರು, ತಿಳಿಸುವರು.
* 'ಸದಾ ಸಿದ್ಧ' ಎಂದು ಧ್ಯೇಯವಾಕ್ಯದ ಕಥೆ ಹೇಳಲು ಅದರ ಮಹತ್ವ ತಿಳಿಸಲು ಸಮರ್ಥರಾಗುವರು.
* ಸತ್ಕಾರ್ಯವು ನಿಸ್ವಾರ್ಥ ಸಹಾಯ ಎಂದು ತಿಳಿದುಕೊಳ್ಳುವರು. ಇದರ ಕಥೆಯನ್ನು ಹೇಳುವವರು ಮಕ್ಕಳಲ್ಲಿ ಬೆಳೆಸುವರು.
* ಈ ಎಲ್ಲಾ ವಿಶಿಷ್ಟತೆಗಳು ವಿಶ್ವ ಸ್ಕೌಟ್ ಮತ್ತು ಗೈಡ್ಸ್‌ಗಳು ಬಳಸುವ ಸಾಮಾನ್ಯ ಬಂಧಕವೆಂದು ತಿಳಿಯುವರು, ತಿಳಿಸುವರು.

ಧ್ಯೇಯ (Aim) : ಗೈಡ್ ಧ್ಯೇಯ **"ಸದಾ ಸಿದ್ಧವಾಗಿರು"**. ಇದು ಗೈಡ್‌ಗಳನ್ನು ಮುನ್ನಡೆಸುವ ಆದರ್ಶ ಸೂತ್ರವಾಗಿದೆ. ಗೈಡ್ ಆದವಳು ಮನೋವಾಕ್ ಕಾಯ ಕರ್ತವ್ಯ ನಿರ್ವಹಿಸಲು, ಸೇವೆ ಮಾಡಲು, ಸಹಾಯ ಮಾಡಲು, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಮತ್ತು ಸವಾಲೆದುರಿಸಲು ಸದಾ ಸಿದ್ಧಳಾಗಿರಬೇಕು.

ಕಾಯ ಸಿದ್ಧತೆ : ಚಲನವಲಯದಲ್ಲಿ ಚುರುಕುತನ, ಆರೋಗ್ಯಕರ ಆಹಾರ ಸೇವನೆ, ಸ್ವಚ್ಛತೆ, ಶೌಚಗಳ ಸರಿಯಾದ ಅಭ್ಯಾಸಗಳಿಂದ ದೇಹವನ್ನು ಸದೃಢಗೊಳಿಸಿಕೊಳ್ಳುವುದು ಅಗತ್ಯ. ಶಿಸ್ತಿನ ಜೀವನದಿಂದ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ಆರೋಗ್ಯವಿದ್ದರೆ ಮಾತ್ರ ಕೆಲಸ ಮಾಡಲು ಸಾಧ್ಯ.

ವಾಕ್ ಸಿದ್ಧತೆ : ಎಂದರೆ ಸಮಯೋಚಿತವಾಗಿ ಸೂಕ್ತವಾದ ಕಲ್ಮಶರಹಿತವಾದ ಮಾತನ್ನಾಡುವುದು. ಅಪಾಯ ಉಂಟು ಮಾಡುವ ಮಾತುಗಳನ್ನು ಆಡದಿರುವುದು. ಒಳ್ಳೆಯ ಮಾತಿನಿಂದ ಇತರರ ಆತಂಕ ದೂರ ಮಾಡುವುದು. ಈ ರೀತಿ ವಿನಯದಿಂದ ಕೂಡಿದ ಮನಮುಟ್ಟುವಂತೆ ಮಾತನಾಡುವ ಹಾಗೂ ಕೊಟ್ಟ ಮಾತನ್ನು ತಪ್ಪದಿರುವ ಅಭ್ಯಾಸ ಮಾಡಬೇಕು.

ಮನಸಾ ಸಿದ್ಧತೆ : ಜ್ಞಾನ ಸಂಪಾದನೆ, ಶಿಸ್ತು ಸಂಯಮದಿಂದ ಕೂಡಿದ ವರ್ತನೆ, ಸೂಕ್ತ ಸಮಯೋಚಿತ ಚಿಂತನೆ, ನೈತಿಕ ಮೌಲ್ಯಗಳ ಪಾಲನೆಯ ಜೊತೆಗೆ ಧೈರ್ಯ ಮತ್ತು ನಾಯಕತ್ವವನ್ನು ಬೆಳೆಸಿಕೊಳ್ಳಬೇಕು. ಈ ರೀತಿಯ ಸಿದ್ಧತೆ ನಿಮ್ಮನ್ನು ಸದಾ ಸಿದ್ಧರನ್ನಾಗಿ ಮಾಡುತ್ತದೆ.

ಸಂಕೇತ (Sign) : ಸಂಕೇತವು ಗೈಡ್‌ಗಳು ವಿಶ್ವದಾದ್ಯಂತ ವಂದಿಸುವ ಗೌರವ ಸೂಚಿಸುವ ಕ್ರಮವಾಗಿದೆ. ಇದರಿಂದ ಗೈಡ್‌ಗಳನ್ನು ಗುರುತಿಸಬಹುದು. ಗೈಡ್ ಸಂಕೇತ ಮಾಡಲು ಬಲಗೈ ಹಸ್ತದ ಮಧ್ಯದ ಮೂರು ಬೆರಳನ್ನು ನೇರವಾಗಿ ಚಾಚಿ, ಕಿರುಬೆರಳಿನ

ಮೇಲೆ ಹೆಬ್ಬೆರಳನ್ನಿಟ್ಟು ವೃತ್ತ ಮಾಡಿ ಬಲಗೈಯನ್ನು ಭುಜ ಮಟ್ಟಕ್ಕೆ ಚಿತ್ರದಲ್ಲಿರುವಂತೆ ಎತ್ತಬೇಕು. ನೇರ ಚಾಚಿದ ಮೂರು ಬೆರಳು ಪ್ರತಿಜ್ಞೆಯ ಮೂರು ಅಂಶಗಳನ್ನು ಪ್ರತಿನಿಧಿಸುತ್ತದೆ. ಬೆರಳಿನಿಂದ ಮಾಡಿದ ವೃತ್ತವು ಚಳವಳಿಯು ವಿಶ್ವವ್ಯಾಪ್ತಿಯನ್ನು, ನಾವೆಲ್ಲರೂ ವಿಶ್ವಕುಟುಂಬಕ್ಕೆ ಸೇರಿದವರು ಎಂದೂ ಸೂಚಿಸುತ್ತದೆ.

ಈ ಸಂಕೇತವನ್ನು ಪ್ರತಿಜ್ಞೆ ಮಾಡುವಾಗಲೂ ಬಳಸುತ್ತೇವೆ. ಸಮವಸ್ತ್ರ ಧರಿಸದೇ ಸಾಮಾನ್ಯ ಉಡುಪಿನಲ್ಲಿದ್ದಾಗ ಒಬ್ಬರನ್ನೊಬ್ಬರು ವಂದಿಸಲು ಬಳಸುತ್ತೇವೆ.

ವಂದನೆ (Salute) : ಸಂಕೇತದ ಹಸ್ತ ಮುದ್ರೆಯನ್ನು ಹಣೆಯವರೆಗೂ ಎತ್ತಿ ಬಲ ಹುಬ್ಬಿನ ಮೇಲ್ಭಾಗಕ್ಕೆ ಮಧ್ಯ ಬೆರಳನ್ನು ತಾಗಿಸಿದರೆ ವಂದನೆಯಾಗುತ್ತದೆ. ನಮ್ಮ ಸಂಸ್ಥೆಯ ಹಾಗೂ ಸ್ಕೌಟ್ ಮತ್ತು ಗೈಡ್ ವಿಶ್ವ ಸಂಸ್ಥೆಯ ಧ್ವಜಗಳಿಗೆ ಈ ರೀತಿ ವಂದಿಸುತ್ತೇವೆ. ಸಂಸ್ಥೆಯ ಸದಸ್ಯರನ್ನು ಭೇಟಿಯಾದಾಗ ಗೌರವ ಪೂರ್ವಕವಾಗಿ ಸ್ನೇಹ ಸೂಚಕವಾಗಿಯೂ ಹೀಗೆ ವಂದಿಸಲಾಗುವುದು. ಇವು ಚಳವಳಿಯ ಒಂದು ವಿಶ್ವ ಸಾಮಾನ್ಯ ಬಂಧಕ.

ಎಡಗೈ ಹಸ್ತಲಾಘವ : ಈ ಸಂಸ್ಥೆಯ ಎಲ್ಲಾ ಸದಸ್ಯರು ವಿಶ್ವದಾದ್ಯಂತ ಒಬ್ಬರನ್ನೊಬ್ಬರು ಭೇಟಿಯಾದಾಗ ಸ್ನೇಹಪೂರ್ವಕಾಗಿ ಮಂದಸ್ಮಿತರಾಗಿ ವಂದಿಸುತ್ತಾ ಎಡಗೈ ಚಾಚಿ ಹಸ್ತಲಾಘವ ಮಾಡುತ್ತೇವೆ. ಇದೊಂದು ಅಪೂರ್ವ ವಿಶ್ವ–ಸ್ಕೌಟ್–ಗೈಡ್‌ಗಳ ಸಾಮಾನ್ಯ ಬಂಧಕ. (ಇದರ ಕಥೆ ನೆನಪಿಸಿ). ಇದು ನಮ್ಮ ಗುಪ್ತ ಹಾಗು ವಿಶಿಷ್ಟ ಸಂಕೇತವೂ ಹೌದು.

ಸತ್ಕಾರ್ಯ (Good Turm) : ಸತ್ಕಾರ್ಯ ಎಂದರೆ ಒಳ್ಳೆಯ ಕೆಲಸ. ಪ್ರತಿಯೊಬ್ಬ ಗೈಡ್ ದಿನಕ್ಕೊಂದು ಒಳ್ಳೆಯ ಕೆಲಸವನ್ನು ಮಾಡಬೇಕು. ಒಳ್ಳೆಯ ಕೆಲಸವೆಂದರೆ ಇತರರಿಗೆ ಸಹಾಯ, ಹೀಗೆ ಮಾಡುತ್ತೇನೆ ಎಂದು ಪ್ರತಿಯೊಬ್ಬರೂ ಪ್ರತಿಜ್ಞೆ ಮಾಡುತ್ತೇವೆ. ಪ್ರತಿಜ್ಞೆ ಮಾಡಿದ ನಂತರ ನಾಯಕಿಯು ನಿಮಗೆ, "ನೀನು ಪ್ರತಿದಿನ ಒಂದು ಸತ್ಕಾರ್ಯ ಮಾಡುತ್ತೀಯ" ಎಂದು ನಂಬುತ್ತೇನೆ ಎಂದು ಹೇಳಿ ಅಭಿನಂದಿಸುತ್ತಾ ಪದಕ ಪ್ರದಾನ ಮಾಡುತ್ತಾರೆ. ಸತ್ಕಾರ್ಯವನ್ನು ನಿಸ್ವಾರ್ಥವಾಗಿ ಪ್ರತಿಫಲಾಪೇಕ್ಷೆ ಇಲ್ಲದೆ ಮಾಡಬೇಕು. ಗೈಡ್ ಆದವಳು ಈ ಅವಕಾಶಕ್ಕಾಗಿ ಕಾಯುತ್ತಿರಬೇಕು. ಅವಕಾಶ ಸಿಕ್ಕಾಗ ಮಾಡಲು ಸದಾ ಸಿದ್ಧಳಾಗಿರಬೇಕು. ಸತ್ಕಾರ್ಯವು ಮನೆಯಲ್ಲಿ ಮಾಡುವ ಸಹಾಯ, ಅಶಕ್ತರಿಗೆ ರಸ್ತೆ ದಾಟಿಸುವುದು, ಅಪರಿಚಿತರಿಗೆ ಮಾರ್ಗ ತೋರಿಸುವ ಸರಳ ಸಹಾಯವಾಗಿರಬಹುದು ಅಥವಾ ದೊಡ್ಡ ಪ್ರಮಾಣದಲ್ಲಿ ಅಪಘಾತವಾದಾಗ ಮಾಡುವ ಪ್ರಥಮ ಚಿಕಿತ್ಸೆಯಾಗಿರಬಹುದು, ಸಂತ್ರಸ್ತರಿಗೆ ಸಹಾಯವಾಗಿರಬಹುದು. ಸತ್ಕಾರ್ಯವನ್ನು ದಿನವೂ ಮಾಡಲು ಪ್ರಯತ್ನಿಸಿ ದಿನಚರಿಯನ್ನು ಬರೆಯಬೇಕು. ದಿನಚರಿಯಲ್ಲಿ ದಿನಾಂಕ, ಸ್ಥಳದ ಹೆಸರು ಮಾಡಿದ ಕಾರ್ಯದ ಸಂಕ್ಷಿಪ್ತ ಮಾಹಿತಿಯನ್ನು ಬರೆಯಬೇಕು. ಈ ಸೇವೆಯನ್ನು ಮುಂದುವರಿಸುತ್ತಾ ಸಮಾಜ ಸೇವೆ, ಸಮುದಾಯ ಸೇವೆ, ಸಮುದಾಯ ಅಭಿವೃದ್ಧಿ ಸೇವೆಗಳಲ್ಲಿ ಗೈಡ್‌ಗಳನ್ನು ತೊಡಗಿಸಲಾಗುವುದು.

ಚಟುವಟಿಕೆಗಳು :

1. ಸೆಲ್ಯೂಟ್, ಸೈನ್ ಎಂದು ಹೇಳುತ್ತಾ ಕೆರೆ ದಡ ಆಟದಂತೆ ಆಡಿಸಿ.
2. ವೃತ್ತ ಮಾಡಿಸಿ, ಜೋಡಿ ಸಂಖ್ಯೆ 1, 1–2, 2 .... ಅಂತ ಸಂಖ್ಯೆ ಹೇಳಿಸಿ ನಂತರ ಜೋಡಿಯನ್ನು ಇದಿರುಬದುರಾಗಿ ಓಡಿಸಿ, ಸೆಲ್ಯೂಟ್ ಷೇಕ್‌ಹ್ಯಾಂಡ್ ಮಾಡಿಸಿ. ಎಲ್ಲಾ ಜೋಡಿಗೂ ಅವಕಾಶ ಕೊಡಿ. ವೀಕ್ಷಿಸಿ ತಪ್ಪಿದ್ದಲ್ಲಿ ತಿದ್ದಿ.
3. ಎಡಗೈ ಹಸ್ತಲಾಘವದ ಕಥಾ ಸರಪಣಿ ಮಾಡಿಸಿ.

ಪ್ರವಚನ:6 ಪಟಾಲಂ ಪದ್ಧತಿ
(Patrol System)

ಉದ್ದೇಶ ಪ್ರಶಿಕ್ಷಣಾರ್ಥಿಗಳು – ಪ್ರವಚನದ ಅಂತ್ಯದಲ್ಲಿ

* ಪಟಾಲಂ ರಚಿಸಲು ಸಮರ್ಥರಾಗುವರು.
* ಪಟಾಲಂ ಲಾಂಛನ, ಧ್ವಜ, ಘೋಷಣೆ ಮಾಡಿಸಲು ಸಮರ್ಥರಾಗುವರು.
* ಪಟಾಲಂ ಸಭೆ ಮತ್ತು ಗೌರವ ನ್ಯಾಯ ಸಭೆಯನ್ನು ನಡೆಸುವರು.
* ಪಟಾಲಂ ಚಟುವಟಿಕೆಯ ಮಹತ್ವದ ಅರಿತು ಪ್ರತಿ ದಳ ಸಭೆಯಲ್ಲಿ ಚಟುವಟಿಕೆ ನೀಡುವರು.

ವಿಧಾನ : ಇದು ಎರಡನೇ ದಿನದ ವಿಷಯವಾದ್ದರಿಂದ ಪಟಾಲಂ ರಚನೆ ಮಾಡಿರುವುದರಿಂದ ಗುಂಪು ಚರ್ಚೆ ಮಾಡಿಸಬಹುದು. ಹೊಸ ವಿಚಾರಗಳನ್ನು ಹೇಳಬಹುದು.

ಲಾರ್ಡ್ ಬೇಡನ್ ಪೊವೆಲ್ಲರು ವಿಶ್ವವಿನೂತನ ತರಬೇತಿ ಪದ್ಧತಿಯಾದ 'ಪಟಾಲಂ ಪದ್ಧತಿ'ಯನ್ನು ರಚಿಸಿದರು. ಈ ಪದ್ಧತಿಯನ್ನು ಸಮಾನ ವಯಸ್ಕ, ಸಮಾನ ಮನೋಧರ್ಮದ ಆಧಾರದ ಮೇಲೆ ಚಿಕ್ಕ ಗುಂಪಿನಲ್ಲಿ ಒಟ್ಟಾಗಿ ಕೆಲಸ ಮಾಡುವ ಪಟಾಲಂ ವಿಧಾನವನ್ನು ರಚಿಸಿದರು.

ಬಿ.ಪಿ.ಯವರು ದಳದ ಆಡಳಿತ ನಿರ್ವಹಿಸಲು ಪ್ರಜಾಪ್ರಭುತ್ವ ಆಡಳಿತ ವಿಧಾನವನ್ನು ಅಳವಡಿಸಿದರು. ಮಕ್ಕಳಿಂದ, ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ರೂಪಿಸಿದ ಪದ್ಧತಿ ಇದಾಗಿದೆ.

ಒಂದು ಗೈಡ್ ದಳದಲ್ಲಿ ಕನಿಷ್ಠ 12, ಗರಿಷ್ಠ 32 ಮಕ್ಕಳಿರುತ್ತಾರೆ. ದಳವನ್ನು 6 ರಿಂದ 8 ಮಕ್ಕಳ ಚಿಕ್ಕ ಗುಂಪಾಗಿ ವಿಂಗಡಿಸಲಾಗುವುದು. ಈ ಗುಂಪೇ ಪಟಾಲಂ (Patrol).

ಈ ಪದ್ಧತಿಯ ಮೂಲಕ ನಾಯಕತ್ವ ಬೆಳೆಸಲಾಗುವುದು. ಪ್ರಜಾಪ್ರಭುತ್ವ ವಿಧಾನದಲ್ಲಿ ನಾಯಕಿಯರನ್ನು ಚುನಾಯಿಸಲಾಗುವುದು. ಪ್ರತಿ ಪಟಾಲಂ ನಾಯಕಿಯನ್ನು ಗೈಡ್ ಶಿಕ್ಷಕಿ ಆಯ್ಕೆ ಮಾಡಿ ಪಟಾಲಂನ ಅನುಮೋದನೆ ಪಡೆಯುವರು. ಪಟಾಲಂ ಸಹನಾಯಕಿಯನ್ನು ಆಯ್ಕೆ ಮಾಡಿ ಗೈಡ್ ಶಿಕ್ಷಕಿಯರು ಅನುಮೋದನೆ ಪಡೆಯುವರು.

ಗೈಡ್ ಶಿಕ್ಷಕಿ ದಳ ನಾಯಕಿಯನ್ನು ಆಯ್ಕೆ ಮಾಡಿ ಪಟಾಲಂಗಳ ಅನುಮೋದನೆ ಪಡೆಯುವರು. ದಳದ ಸಹನಾಯಕಿಯನ್ನು ಪಟಾಲಂ ಸದಸ್ಯರು ಆಯ್ಕೆ ಮಾಡಿ ಗೈಡ್ ಶಿಕ್ಷಕಿಯರ ಅನುಮೋದನೆ ಪಡೆಯುವರು.

ಎಲ್ಲಾ ಹಂತದಲ್ಲೂ ಹಿರಿಯ ಮತ್ತು ಅನುಭವಿ ನಾಯಕಿಯರನ್ನು ಆಯ್ಕೆ ಮಾಡುವರು.

ದಳ ನಾಯಕಿ ಧರಿಸುವ ಹಸಿರು ಹಿನ್ನೆಲೆಯ ಪದಕದಲ್ಲಿ ಹಳದಿ ಬಣ್ಣದ ವೃತ್ತದಲ್ಲಿ ಭಾರತ್ ಸ್ಕೌಟ್–ಗೈಡ್ ಲಾಂಛನ ಇರುತ್ತದೆ. ಅದರ ಎಡಕ್ಕೆ 3 ಲಂಬ ಹಸಿರು ಪಟ್ಟಿ ಇರುತ್ತದೆ. ಇದನ್ನು ಸಮವಸ್ತ್ರದ ಎಡ ತೋಳಿನ ಮೇಲೆ ಧರಿಸಲಾಗುವುದು.

ಸಹ ದಳ ನಾಯಕಿ ಧರಿಸುವ ಪದಕ ತದ್ರೂಪವಾಗಿದ್ದು, 2 ಹಸಿರು ಲಂಬಪಟ್ಟಿ ಹೊಂದಿರುತ್ತದೆ.

ದಳ ನಾಯಕಿ 1.5 ಸೆಂ.ಮೀ. ಅಗಲದ 3 ಹಸಿರು ಪಟ್ಟಿಯನ್ನು 1 ಸೆಂ.ಮೀ. ಅಂತರದಲ್ಲಿ ಸಮವಸ್ತ್ರದ ಎಡತೋಳಿನ ಮೇಲೆ ಹೊಲಿದುಕೊಳ್ಳಬೇಕು. ಪಟಾಲಂ ನಾಯಕಿ 1.5 ಸೆಂ.ಮೀ. ಅಗಲದ 2 ಹಸಿರು ಪಟ್ಟಿಯನ್ನು 1 ಸೆಂ.ಮೀ. ಅಂತರದಲ್ಲಿ ಸಮವಸ್ತ್ರದ ಎಡತೋಳಿನ ಮೇಲೆ ಹೊಲಿದುಕೊಳ್ಳಬೇಕು. ಪಟಾಲಂ ಸಹ ನಾಯಕಿ 1.5 ಸೆಂ.ಮೀ. ಅಗಲದ 1 ಹಸಿರು ಪಟ್ಟಿಯನ್ನು ಎಡತೋಳಿನ ಮೇಲೆ ಹೊಲಿದುಕೊಳ್ಳಬೇಕು.

ಗೈಡ್ ಶಿಕ್ಷಕಿ	–	Guide Captain	- GC
ದಳ ನಾಯಕಿ	–	Company Leader	- CL
ಸಹದಳ ನಾಯಕಿ	–	Asst. Company Leader	- ACL
ಪಟಾಲಂ ನಾಯಕಿ	–	Patrol Leader	- PL
ಪಟಾಲಂ ಸಹ ನಾಯಕಿ	–	Patrol Second	- PS
ಪಟಾಲಂ ಸದಸ್ಯರು	–	Patrol Members	- PM

ಪಟಾಲಂ ರಚನೆ : ಪಟಾಲಂ ರಚಿಸುವಾಗ ಎತ್ತರ-ಕುಳ್ಳು ಚುರುಕುತನ, ಪ್ರತಿಭೆ, ಕೌಶಲಗಳನ್ನು ಎಲ್ಲಾ ಪಟಾಲಂಕ್ಕೂ ಸಮನಾಗಿ ಹಂಚಬೇಕು.

ಪಟಾಲಂ ಲಾಂಛನ : ಪ್ರತಿ ಪಟಾಲಂ ಪ್ರತ್ಯೇಕವಾಗಿ ಒಂದು ಹೂವನ್ನು ಆಯ್ಕೆ ಮಾಡಬೇಕು. ಈ ಹೂವು ಪಟಾಲಂ ಹೆಸರಾಗಿ ಗುರುತಿಸಲ್ಪಡುತ್ತದೆ. ಇದನ್ನು ಬಿಲ್ಲೆಯ ಮೇಲೆ ಚಿತ್ರಿಸಿ ಪಟಾಲಂನ ಸದಸ್ಯರು ಸಮವಸ್ತ್ರದ ಎಡಜೇಬಿನ ಮೇಲೆ ಧರಿಸಬೇಕು.

ಪಟಾಲಂ ಧ್ವಜ : ಬಿಳಿಯ ಬಣ್ಣದ ತಳ 20 ಸೆಂ.ಮೀ. ಭಾಗವು 30 ಸೆಂ.ಮೀ. ಇರುವಂತೆ ಸಮಬಾಹು ತ್ರಿಭುಜ ರಚಿಸಿ ಅದರ ಮಧ್ಯೆ ಕೆಂಪು ಬಣ್ಣ ಮಾತ್ರ ಬಳಸಿ ಲಾಂಛನದ ಚಿತ್ರ ಬಿಡಿಸಬೇಕು. ಇದನ್ನು ತಮ್ಮ ಅಂಕಣದಲ್ಲಿ ಹಾರಿಸಬೇಕು.



ಪಟಾಲಂನ ಅಂಕಣ : ಪಟಾಲಂನ ಚಟುವಟಿಕೆ ಗೊತ್ತು ಪಡಿಸಿಕೊಳ್ಳುವ ಸ್ಥಳ ಅಂಕಣದಲ್ಲಿ ನಿಮ್ಮ ಪಟಾಲಂನ ಹೆಸರು ಪ್ರದರ್ಶಿಸಿ ಧ್ವಜ ಹಾರಿಸಿ. ಆಸನ ವ್ಯವಸ್ಥೆ ಮಾಡಿಕೊಳ್ಳುವುದು. ಅಂಕಣಕ್ಕೆ ಬೇಕಾದ ಸಾಧನ ಸಲಕರಣೆಗಳನ್ನು ಜೋಡಿಸಿಕೊಳ್ಳುವುದು.

ಪಟಾಲಂನ ಚಟುವಟಿಕೆ : ಪ್ರಶಿಕ್ಷಕರು ಪ್ರವಚನದ ಮಧ್ಯೆ 10 ನಿಮಿಷವಾದರೂ ಪಟಾಲಂ ಚಟುವಟಿಕೆಯನ್ನು ಕೊಟ್ಟು ಅದರ ಮಹತ್ವ ಮನದಟ್ಟು ಮಾಡಬೇಕು. ಪ್ರಶಿಕ್ಷಣಾರ್ಥಿಗಳು ತಪ್ಪದೇ ತಮ್ಮ ದಳಸಭೆಗಳಲ್ಲಿ ಪ್ರತಿದಿನ ಪಟಾಲಂ ಚಟುವಟಿಕೆ ಕೊಡಬೇಕು. ಪಟಾಲಂ ಚಟುವಟಿಕೆಯಿಂದ 'ನೈಜ ರೀತಿಯಲ್ಲಿ ಚಾರಿತ್ರ್ಯಾಭಿವೃದ್ಧಿಯಾಗುತ್ತದೆಂದು' ಬಿ.ಪಿಯವರು ಹೇಳಿದ್ದಾರೆ. ಸ್ಕೌಟಿಂಗ್-ಗೈಡಿಂಗ್ ಗುಣಮಟ್ಟ ಕಾಪಾಡಲು ಪಟಾಲಂ ಚಟುವಟಿಕೆ ಅತ್ಯವಶ್ಯಕ.

ಪಟಾಲಂ ಸಭೆ : ಪಟಾಲಂ ನಾಯಕಿಯ ಅಧ್ಯಕ್ಷತೆಯಲ್ಲಿ ಗೌರವ ನ್ಯಾಯ ಸಭೆಗೆ ಮುನ್ನ ಮತ್ತು ನಂತರ ನಡೆಯುವುದು. ಇದರಲ್ಲಿ ಕಾರ್ಯಕ್ರಮ, ಸಮಸ್ಯೆ, ಶಿಸ್ತು, ಹಣಕಾಸು, ಅಭಿನಂದನೆ ಮುಂತಾದವುಗಳನ್ನು ಕುರಿತು ಚರ್ಚಿಸಲಾಗುವುದು. ಪಟಾಲಂ ನಾಯಕಿ ವರದಿ ತಯಾರಿಸಿ ಗೌರವ ನ್ಯಾಯ ಸಭೆಗೆ ಸಲ್ಲಿಸುವಳು. ಗೌರವ ನ್ಯಾಯ ಸಭೆಯ ಚರ್ಚೆಯ ನಂತರ ನಿರ್ಣಯಗಳನ್ನು ತಂದು ಅಷ್ಟಕ ಸಭೆಗೆ ನೀಡುವಳು.

ಗೌರವ ನ್ಯಾಯ ಸಭೆ : ಈ ಸಭೆಯನ್ನು ದಳ ನಾಯಕಿಯರು ಮತ್ತು ಪಟಾಲಂ ನಾಯಕಿಯರು ಸೇರಿ ನಡೆಸುವರು. ಗೈಡ್ ಶಿಕ್ಷಕಿ, ಗೈಡ್ ಸಹ ಶಿಕ್ಷಕಿಯರು, ವೀಕ್ಷಕರಾಗಿ, ಮಾರ್ಗದರ್ಶಿಗಳಾಗಿ ಸಲಹೆ ನೀಡುವರು. ಸಭೆ ಅಧ್ಯಕ್ಷರನ್ನು ಆಯ್ಕೆ ಮಾಡುವುದು. ಕಾರ್ಯದರ್ಶಿ ನೇಮಕ ಮಾಡುವುದು. ಪಟಾಲಂ ನಾಯಕಿಯರು ವರದಿ ಸಲ್ಲಿಸುವರು. ಪಟಾಲಂ ಸಹನಾಯಕರು ಶಿಸ್ತು ಚರ್ಚೆ ಹೊರತುಪಡಿಸಿ ಮಿಕ್ಕ ಸಭೆಗಳಿಗೆ ಅವಶ್ಯಕವಿದ್ದರೆ ಹಾಜರಾಗಬಹುದು. ಈ ಸಭೆಯಲ್ಲೂ ಕಾರ್ಯಕ್ರಮ, ಸಮಸ್ಯೆ, ಶಿಸ್ತು, ಹಣಕಾಸು, ಪದಕ ಪ್ರದಾನ, ಸೇವಾ ಹಾಗು ಹೊರಸಂಚಾರ ಕಾರ್ಯಕ್ರಮಗಳ ಚರ್ಚೆ ನಡೆಸಲಾಗುವುದು. ಹಾಗು ಹೊರಸಂಚಾರ ಸೇವಾ ಕಾರ್ಯಗಳಿಗೆ ಅನುಮೋದನೆ ನೀಡಲಾಗುವುದು. ಈ ಅನುಮೋದನೆಯನ್ನು ದಿನಚರಿ ಪುಸ್ತಕದಲ್ಲಿ ಲಗತ್ತಿಸಬೇಕು. ಹೊರಸಂಚಾರ ಹಾಗು ಸೇವಾ ಕಾರ್ಯದ ವರದಿ ಬರೆಯುವ ಮುನ್ನ ಎ.ಪಿ.ಆರ್.ಓ. ಭಾಗ-3 ಗೈಡ್ ವಿಭಾಗದಲ್ಲಿ ಪಟಾಲಂ ಪದ್ಧತಿ ಹೆಚ್ಚಿನ ವಿವರಕ್ಕಾಗಿ ಓದಿ.

ಪಟಾಲಂ ಘೋಷಣೆ ಮತ್ತು ಗೀತೆ : ಆಯ್ಕೆ ಮಾಡಿದ ಹೂವು ಕುರಿತು ಒಂದು ಘೋಷಣೆ ರಚಿಸಿ. ಹಾಗೆ ಕಿರು ಗೀತೆಯನ್ನು ರಚಿಸಿ.

ಚಟುವಟಿಕೆಗಳು :

1. ಪಟಾಲಂ ಪದ್ಧತಿಯ ಅನುಕೂಲತೆ ಬಗ್ಗೆ ಗುಂಪು ಚರ್ಚೆ ವರದಿ.
2. ಪಟಾಲಂ ಪದ್ಧತಿಯನ್ನು ಯಾವ ಆಧಾರಗಳ ಮೇಲೆ ರಚಿಸಲಾಗಿದೆ ?
3. ಇದನ್ನು ರಚಿಸಿದವರು ಯಾರು ?
4. ಪಟಾಲಂ ಪದ್ಧತಿಯಿಂದ ಸದಸ್ಯರಿಗೆ ಆಗುವ ಉಪಯೋಗಗಳೇನು?
5. ಪಟಾಲಂ ಸಭೆ ಮತ್ತು ಗೌರವ ನ್ಯಾಯ ಸಭೆಯನ್ನು ದಳದಲ್ಲಿ ಏಕೆ ನಡೆಸಬೇಕು?
6. ಈ ಸಭೆಗಳ ಕಾರ್ಯಗಳೇನು? 1. ಪಟಾಲಂ ಸಭೆ 2. ಗೌರವ ನ್ಯಾಯ ಸಭೆ.
7. ಪಟಾಲಂನಲ್ಲಿ ಕನಿಷ್ಠ .... ಗರಿಷ್ಠ .... ಸದಸ್ಯರು ಇರಬೇಕು.
8. ದಳದಲ್ಲಿ ಕನಿಷ್ಠ .... ಗರಿಷ್ಠ .... ಸದಸ್ಯರು ಇರಬೇಕು.
9. ದಳದಲ್ಲಿ ಪಟಾಲಂಗಳ ಸಂಖ್ಯೆ ....
10. ಗೈಡ್ ನಾಯಕಿಯನ್ನು (ಗೈಡ್‌ಗಳಿಂದ) ಆಯ್ಕೆ ಮಾಡುವಾಗ ಗೈಡ್ ಶಿಕ್ಷಕಿ ಗಮನಿಸಬೇಕಾದ ಅಂಶಗಳು ....

ಪದಕಗಳು ಮತ್ತು ತೋಳುಪಟ್ಟಿಯನ್ನು ಧರಿಸುವವರ ಜೊತೆ ಹೊಂದಿಸಿ ಬರೆಯಿರಿ.

	ಪದಗಳು, ತೋಳು ಪಟ್ಟಿ	**ಧರಿಸುವವರು**	
1.	ಮೂರು ಲಂಬ ಹಸಿರು ಪಟ್ಟಿ ಪದಕ	ಅ) ಪಟಾಲಂ ಸಹನಾಯಕಿ	....
2.	ಎರಡು ಹಸಿರು ತೋಳು ಪಟ್ಟಿ	ಆ) ದಳ ನಾಯಕಿ	....
3.	ಎರಡು ಲಂಬ ಹಸಿರು ಪಟ್ಟಿ ಪದಕ	ಇ) ಪಟಾಲಂ ನಾಯಕಿ	....

4. ಮೂರು ಹಸಿರು ತೋಳು ಪಟ್ಟಿ ಈ) ದಳ ಸಹನಾಯಕಿ ....

5. ಒಂದು ಹಸಿರು ತೋಳು ಪಟ್ಟಿ ಉ) ದಳ ನಾಯಕಿ ....

ಪಟಾಲಂ ಪದ್ಧತಿ :

"ನಾನು ನನಗಾಗಿ ಅಲ್ಲ, ನಾನು ನಮಗಾಗಿ."

"I not for I, I for we."

"ಗೈಡಿಂಗ್ ಯಶಸ್ಸು ಪಟಾಲಂ ಪದ್ಧತಿಯನ್ನು ಅವಲಂಬಿಸಿದೆ."

"Success of guiding depends on Patrol System."

ಪ್ರವಚನ:7

ಗುಂಪು ಪದ್ಧತಿ–ಸ್ಥಳೀಯ ಸಂಸ್ಥೆಯಿಂದ ರಾಜ್ಯ ಸಂಸ್ಥೆಯವರೆಗಿನ ಸಂಘಟನೆ (Group System - Organisation from Local to State)

ಉದ್ದೇಶ ಪ್ರಶಿಕ್ಷಣಾರ್ಥಿಗಳು –

* ಸಂಸ್ಥೆಯ ಸಮಗ್ರ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವುದು.
* ವ್ಯವಸ್ಥೆಯಲ್ಲಿ ತಮ್ಮ ಸ್ಥಾನವನ್ನು ಅರಿತು ವ್ಯವಹರಿಸಬೇಕಾದ ಅಧಿಕಾರಿಗಳು ಮತ್ತು ಕಛೇರಿಯ ಬಗ್ಗೆ ತಿಳಿದುಕೊಳ್ಳುವುದು.
* ತಾನು ಕಾರ್ಯನಿರ್ವಹಿಸುವ ಸ್ಥಳೀಯ ಕಛೇರಿಯ ವಿವರವನ್ನು ಸಂಗ್ರಹಿಸಿಕೊಂಡು ಜಿಲ್ಲೆ ಮತ್ತು ರಾಜ್ಯಗಳೊಡನೆ ಸಂಪರ್ಕಿಸಬೇಕಾದ ಪ್ರಸ್ತುತ ಅಧಿಕಾರಿಗಳ ಪಟ್ಟಿಯನ್ನು ಮಾಡಿಕೊಳ್ಳುವುದು.
* ವ್ಯಾವಹಾರಿಕ ಸ್ಥಾನ ಗೌರವವನ್ನು ವ್ಯವಹಾರ ಮಾಡುವಾಗ ಕಾಯ್ದುಕೊಳ್ಳುವುದು.
* ಗುಂಪು ದಳಗಳ ಜವಾಬ್ದಾರಿಯನ್ನು ನಿರ್ವಹಿಸಬೇಕು. ತರಬೇತಿ ಮತ್ತು ಪರೀಕ್ಷೆಯನ್ನು ಹೊರತುಪಡಿಸಬೇಕು. ಗುಂಪು ಸಮಿತಿ ಚರ–ಸ್ಥಿರ ಆಸ್ತಿಗಳ ಜವಾಬ್ದಾರಿ ಹೊಂದಿರುತ್ತದೆ. ಆಸ್ತಿ ದತ್ತಿಯನ್ನು ಹೊಂದಿರಬೇಕು. ದತ್ತಿ ವಜಾ ಆದರೆ ಆಸ್ತಿ ಸ್ಥಳೀಯ ಸಂಸ್ಥೆ / ಜಿಲ್ಲಾ ಸಂಸ್ಥೆಗೆ ಸೇರುತ್ತದೆ. ಗುಂಪು ಸಮಿತಿ ದಳ ನಾಯಕರಿಗೆ ಸ್ಥಳ, ಹಣಕಾಸು ವ್ಯವಸ್ಥೆ, ಪ್ರಗತಿ ಮತ್ತು ಕ್ಷೇಮಾಭಿವೃದ್ಧಿಗಾಗಿ ಸಹಕಾರ ನೀಡಬೇಕು ಎಂದು ಅರಿಯುವರು.

ವಿಧಾನ :

1. ಸ್ಕೌಟ್ ದಳ ನಾಯಕರು ಅಥವಾ ಸ್ಕೌಟ್ ಮಹಿಳಾ ದಳನಾಯಕಿಯರು ಗುಂಪಿನ ನಾಯಕರಾಗಬಹುದು.
2. ಒಂದು ಅಥವಾ ಒಂದಕ್ಕಿಂತ ಹೆಚ್ಚು ದಳವನ್ನು ಗುಂಪು ಎಂದು ಪರಿಗಣಿಸಲಾಗುವುದು.
3. ಎರಡು ವಿವಿಧ ಗುಂಪುಗಳಿವೆ : 1. ಪೂರ್ಣ 2. ಅಪೂರ್ಣ.

   ಗೈಡ್ ಪೂರ್ಣ ಗುಂಪು ಬುಲ್‌ಬುಲ್ಸ್, ಗೈಡ್ಸ್, ರೇಂಜರ್ಸ್‌ಗಳನ್ನು ಹೊಂದಿರುತ್ತದೆ. ಅಪೂರ್ಣ ಗುಂಪು ಯಾವುದಾದರೂ ಒಂದು ಅಥವಾ ಎರಡು ದಳವನ್ನು ಹೊಂದಿರಬಹುದು.
4. ಗೈಡ್ ಗುಂಪಿಗೆ ಗೈಡ್ ಶಿಕ್ಷಕಿಯರೇ ನಾಯಕರಾಗಬೇಕು.
5. ವಿಶೇಷ ಕಾರ್ಯಕ್ರಮದಲ್ಲಿ ಸ್ಕೌಟ್ ಗುಂಪು ಮತ್ತು ಗೈಡ್ ಗುಂಪು ಒಟ್ಟಾಗಿ ಸೇರಬಹುದು.
6. ಗುಂಪಿನ ಹಿರಿಯ ನಾಯಕರು ಅಧ್ಯಕ್ಷರು
7. ಗುಂಪು ಸಮಿತಿಯಲ್ಲಿ ಒಬ್ಬ ಪೋಷಕ ಪ್ರತಿನಿಧಿ, ಎಲ್ಲಾ ದಳನಾಯಕರು, ಮಾಜಿ ಸ್ಕೌಟ್–ಗೈಡ್‌ಗಳು ಗುಂಪಿನ ವಿಧಕ್ಕೆ ಅನುಗುಣವಾಗಿ ಪ್ರತಿನಿಧಿಗಳಾಗುತ್ತಾರೆ.
8. ದಳ ನಾಯಕರೊಬ್ಬರು ಕಾರ್ಯದರ್ಶಿಯಾಗಿರುತ್ತಾರೆ.
9. ಸದಸ್ಯರು ಕೊಡುವ ಹಣವೇ ಗುಂಪಿನ ಹಣಕಾಸಿನ ಮೂಲ. ಜಿಲ್ಲಾ ಸಂಸ್ಥೆ–ಸ್ಥಳೀಯ ಸಂಸ್ಥೆಯ ಅನುಮತಿ

ಇಲ್ಲದೆ ಗುಂಪಿನವರು ಹೊರಗಿನವರಿಂದ ಹಣಕಾಸು ಸಂಗ್ರಹಿಸಬಾರದು. ಸರ್ಕಾರಿ ಸಹಾಯಧನ ಇದ್ದರೆ ಬಳಸಬಹುದು.

ಸಂಘಟನೆ : ಸ್ಥಳೀಯ ಸಂಸ್ಥೆಯಿಂದ ರಾಜ್ಯ ಸಂಸ್ಥೆಯವರೆಗೆ



ಜಿಲ್ಲೆ : 33 ಸ್ಥಳೀಯ ಸಂಸ್ಥೆ : 215

ಸಂಸ್ಥೆಯ ಹೆಸರು	ವಿಳಾಸ	ದೂರವಾಣಿ ಸಂಖ್ಯೆ	ಇ-ಮೇಲ್
ರಾಷ್ಟ್ರೀಯ ಕೇಂದ್ರ ಕಛೇರಿ	Bharat Scout & Guides National Head Quarters # 16, M.G. Marg Indraprasta Estate New Delhi-110 002	011-23370724 23378667 23370126	tbsgnet@del2. vsnl.net.in
ರಾಜ್ಯ ಕೇಂದ್ರ ಕಛೇರಿ	ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ – ಕರ್ನಾಟಕ 'ಶಾಂತಿ ಗೃಹ', # 39/1, ಅರಮನೆ ರಸ್ತೆ, ಬೆಂಗಳೂರು–560 001	080–26701227 26708776/26708803 26708803/22267470 77606 34264 94812 47902	shq@scout.org.in shanthigruha@ scout.org.in
ಜಿಲ್ಲಾ ಸಂಸ್ಥೆ	–	–	–
ಸ್ಥಳೀಯ ಸಂಸ್ಥೆ	–	–	–

ರಾಜ್ಯ ತರಬೇತಿ ಕೇಂದ್ರಗಳು	ವಿಳಾಸ	ದೂರವಾಣಿ ಸಂಖ್ಯೆ	ಇ-ಮೇಲ್
ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಹಾಗೂ ರಾಜ್ಯ ಕೇಂದ್ರ	ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ	080–27622093	–
ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಹಾಗೂ ಶಿಬಿರ ಕೇಂದ್ರ	ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಂಡಜ್ಜಿ, ಹರಿಹರ ತಾಲ್ಲೂಕು ದಾವಣಗೆರೆ ಜಿಲ್ಲೆ	08192–281821	–
ಶಾಂತಿಗೃಹ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ	'ಶಾಂತಿಗೃಹ' # 39/1, ಅರಮನೆ ರಸ್ತೆ, ಬೆಂಗಳೂರು–560 001	080–22267470 94812 47902	shanthigruha@ scout.org.in

ನಿಮ್ಮ ಜಿಲ್ಲಾ ತರಬೇತಿ ಕೇಂದ್ರದ ಹೆಸರು	ವಿಳಾಸ	ದೂರವಾಣಿ ಸಂಖ್ಯೆ	ಇ-ಮೇಲ್
–	–	–	–

ಸ್ಥಳೀಯ, ಜಿಲ್ಲಾ ಹಾಗು ರಾಜ್ಯ ಸಂಸ್ಥೆಯಲ್ಲಿ ಇರುವ ಸಾಮಾನ್ಯ ಸದಸ್ಯರ ಪಟ್ಟಿ

ಪರಿಷತ್ ಸಭೆಯ ಸದಸ್ಯರು	ಸ್ಥಳೀಯ	ಜಿಲ್ಲಾ	ರಾಜ್ಯ
* ಪೋಷಕರು	-	-	Patron
* ಉಪ ಪೋಷಕರು	-	-	Vice-Patron
* ಅಧ್ಯಕ್ಷರು	President/ Chairman	President/ Chairman	President/ Chairman
* ಉಪಾಧ್ಯಕ್ಷರು (3 ಪುರುಷರು, 3 ಮಹಿಳೆಯರು ಕಡ್ಡಾಯ)	VP 3+3	VP 3+3	VP 3+3
* ಮುಖ್ಯ ಆಯುಕ್ತರು	–	DCC	SCC
* ಆಯುಕ್ತರು (ಸ್ಕೌಟ್ಸ್)	–	DC (S)	SC (S)
* ಆಯುಕ್ತರು (ಗೈಡ್ಸ್)	–	DC (G)	SC (G)
* ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್ಸ್)	–	–	4 ASC (S)
* ಸಹಾಯಕ ರಾಜ್ಯ ಆಯುಕ್ತರು (ಗೈಡ್ಸ್)	–	–	4 ASC (G)
* ಸ್ಥಾನಿಕ ಆಯುಕ್ತರು (ಸ್ಕೌಟ್ಸ್)	–	4 HQC (S)	4 HQC (S)
* ಸ್ಥಾನಿಕ ಆಯುಕ್ತರು (ಗೈಡ್ಸ್)	–	4 HQC (G)	4 HQC (G)
* ಕಾರ್ಯದರ್ಶಿ	LA Sec	DA Sec	S Sec
* ಖಜಾಂಚಿ	Tr.	DTr.	STr.
* ಜಂಟಿ ಕಾರ್ಯದರ್ಶಿ (ಸ್ಕೌಟ್ಸ್)	LA Js (S)	DJS (S)	SJS (S)
* ಜಂಟಿ ಕಾರ್ಯದರ್ಶಿ (ಗೈಡ್ಸ್)	LA Js (G)	DJS (G)	SJS (G)
* ಸಹಾಯಕ ಜಿಲ್ಲಾ ಆಯುಕ್ತರು (ಸ್ಕೌಟ್ಸ್)	ADC (S)	ADC (S)	-
* ಸಹಾಯಕ ಜಿಲ್ಲಾ ಆಯುಕ್ತರು (ಗೈಡ್ಸ್)	ADC (S)	ADC (S)	-
* ಸಂಘಟನಾ ಆಯುಕ್ತರು (ಸ್ಕೌಟ್ಸ್ ಮತ್ತು ಗೈಡ್ಸ್)	ASOC, DOC, DO SGV	ASOC, DOC, DO SGV	SOC (G)
* ತರಬೇತಿ ಆಯುಕ್ತರು (ಸ್ಕೌಟ್ಸ್)		DTC (S)	STC (S)
* ತರಬೇತಿ ಆಯುಕ್ತರು (ಗೈಡ್ಸ್)		DTC (G)	STC (G)

ಪರಿಷತ್ ಸಭೆಯ ಸದಸ್ಯರು	ಸ್ಥಳೀಯ	ಜಿಲ್ಲಾ	ರಾಜ್ಯ
* ಸಹಾಯಕ ರಾಜ್ಯ ತರಬೇತಿ ಆಯುಕ್ತರು (ಗೈಡ್ಸ್)	-	-	ASTC (G)
* ಎಲ್ಲಾ ತರಬೇತಿ ನಾಯಕರು	ALT, LT	ALT, LT	ALT, LT
* ಸಹಾಯಕ ಪ್ರಾದೇಶಿಕ ನಿರ್ದೇಶಕರು	–	–	AD - SR *
* ಸ್ಕೌಟರ್ಸ್–ಗೈಡರ್ಸ್ ಪ್ರತಿನಿಧಿಗಳು (ಅಧಿಕಾರ ಪತ್ರ ಹೊಂದಿರುವುದು)	✓	✓	✓
* ಗುಂಪಿನ ಪ್ರತಿನಿಧಿಗಳು (Group Representative)	✓	✓	✓
* ಆಜೀವ ಸದಸ್ಯರು (Life Member)	✓	✓	✓
* ಸಾಮಾನ್ಯ ಸದಸ್ಯರು (Ordinary Member)	✓	✓	✓
* ಸಂಸ್ಥಾ ಸದಸ್ಯರು (Associate Member)	✓	✓	✓
* ಯುವ ಪ್ರತಿನಿಧಿಗಳು (Young Member)	✓	✓	✓
* ಸಹಕೃತ ಸದಸ್ಯರು (Co-opted Member)	✓	✓	✓

*** Southern Region**

ಸೂಚನೆ : ಈ ಸದಸ್ಯರ ಸಂಖ್ಯೆ ಹಾಗು ನೇಮಕಾತಿ / ಚುನಾವಣೆ ವಿವರಕ್ಕಾಗಿ ರಾಷ್ಟ್ರ ಸಂಸ್ಥೆ ಪ್ರಕಟಿಸಿರುವ ನಿಯಮಾವಳಿ ಪುಸ್ತಕವನ್ನು (Rules Book) ಪರಾಮರ್ಶಿಸಿ (Refer)

ನಿಮಗೆ ಇವರು ತಿಳಿದಿರಬೇಕು / ಯಾರು ? ಯಾರು ?

ಪದನಾಮೆ	ಹೆಸರು
ರಾಜ್ಯ ಮುಖ್ಯ ಆಯುಕ್ತರು - SCC	
ರಾಜ್ಯ ಗೈಡ್ ಆಯುಕ್ತರು - SC (G)	
ರಾಜ್ಯ ಕಾರ್ಯದರ್ಶಿ - SS	
ರಾಜ್ಯ ಜಂಟಿ ಕಾರ್ಯದರ್ಶಿ (ಗೈಡ್ಸ್) - JSS	
ರಾಜ್ಯ ಖಜಾಂಚಿ - ST	
ರಾಜ್ಯ ಸಂಘಟನಾ ಆಯುಕ್ತರು (ಗೈಡ್ಸ್) - STC (S)	
ರಾಜ್ಯ ತರಬೇತಿ ಆಯುಕ್ತರು (ಗೈಡ್ಸ್) - STC (G)	
ಜಿಲ್ಲಾ ಮುಖ್ಯ ಆಯುಕ್ತರು - DCC	
ಜಿಲ್ಲಾ ಸ್ಕೌಟ್ಸ್ ಆಯುಕ್ತರು - DC (S)	
ಜಿಲ್ಲಾ ಗೈಡ್ಸ್ ಆಯುಕ್ತರು - DC (G)	
ಜಿಲ್ಲಾ ಕಾರ್ಯದರ್ಶಿ - DS	
ಜಿಲ್ಲಾ ಜಂಟಿ ಕಾರ್ಯದರ್ಶಿ - DJS	
ಜಿಲ್ಲಾ ಖಜಾಂಚಿ - DT	
ಜಿಲ್ಲಾ ತರಬೇತಿ ಆಯುಕ್ತರು - STC (G)	
ಜಿಲ್ಲಾ ಸಹಾಯ ಸಂಘಟನಾ ಆಯುಕ್ತರು - ASOC	
ಜಿಲ್ಲಾ ಸಂಘಟನಾ ಆಯುಕ್ತರು - DOC	
ಜಿಲ್ಲಾ ಸಂಘಟರು - DO	
ಸ್ಥಳೀಯ ಸಂಸ್ಥೆ ಅಧ್ಯಕ್ಷರು - LAP	
ಸ್ಥಳೀಯ ಸಂಸ್ಥೆ ಖಜಾಂಚಿ - LTr	
ಸ್ಥಳೀಯ ಸಂಸ್ಥೆ ಕಾರ್ಯದರ್ಶಿ - LAS	
ಸ್ಥಳೀಯ ಸಂಸ್ಥೆ ಜಂಟಿ ಕಾರ್ಯದರ್ಶಿ - JS (G)	
ಸ್ಥಳೀಯ ಸಂಸ್ಥೆ - ADC / ALT (G)	

ಪ್ರವಚನ:8 ಗೈಡ್ ವಿಭಾಗದ ವಿವರ (Sections in Guide Wing)

ಕ್ರ. ಸಂ.	ವಿಭಾಗದ ಹೆಸರು	ಆರಂಭ	ಸೇರುವ ವಯಸ್ಸು	ಧ್ಯೇಯ	ಗುಂಪಿನ ಹೆಸರು	ವ್ಯೂಹ ರಚನೆ	ಹಿರಿಯ ನಾಯಕಿಯರ ಹೆಸರು	ಸಮವಸ್ತ್ರ (ಮಕ್ಕಳಿಗೆ)	ಪದಕ	ಗುಂಪಿನ ಸಭೆ
	ಬನ್ನೀಸ್ (ಮೊಲದ ಮರಿಗಳು)	1977 ಮಕ್ಕಳ ವರ್ಷ – UNO ಶ್ರೀಮತಿ ಲಕ್ಷ್ಮೀ ಮಜುಂದಾರ್ ದಾ.ಆ. ದೆಹಲಿ ಅವರ ಕೊಡುಗೆ	3+	Be smiling ನಗುನಗುತಿರಿ	ಟಮ್‌ಟೊಲ	ಮುಕ್ತ (ವ್ಯೂಹರಚನೆ ಇಲ್ಲ)	• ಬನ್ನಿ ಆಂಟಿ	ಶಾಲಾಯುನಿ ಫಾರಂ/ನಿತ್ಯದ ಉಡುಗೆ ಮೇಲೆ ಮುಂಗವಚ (Apron)	ಎದೆ ವಸ್ತ್ರದ ಮೇಲೆ ಕ್ಯಾರೆಟ್ ತಿನ್ನುತ್ತಿರುವ ಮೊಲದ ಮರಿ ಮತ್ತು ಭಾರತ ಸ್ಕೌಟ್ ಗೈಡ್ ಲಾಂಛನ	–
	ಬುಲ್ ಬುಲ್ಸ್ (ನೀಲಿ ಹಕ್ಕಿಗಳು)	1916 ಬಿ.ಪಿ ಯವರು ಪ್ರಾರಂಭಿಸಿದ್ದು	5+	Do your Best ಕೈಲಾದಷ್ಟು ಉತ್ತಮ ಕೆಲಸ ಮಾಡಿ	ಫ್ಲಾಕ್ – 12 ರಿಂದ 24 – Six ಷಟ್ಕ – ಇದರಲ್ಲಿ 6 ಹಕ್ಕಿ ಗಳಿರುತ್ತಾರೆ	ವೃತ್ತ 	ಫ್ಲಾಕ್ ಲೀಡರ್ ಹಿಂಡಿನ ನಾಯಕಿ	ಆಕಾಶ ಕಡು ನೀಲಿ overall ಫ್ರಾಕ್	ಎಡತೋಳಿನ ಮಧ್ಯೆ ನೀಲಿ ಒತ್ತಿನಲ್ಲಿ ಹಳದಿ ಗೆರೆಯ ಭಾರತ ಸ್ಕೌಟ್ ಗೈಡ್ಸ್ ಲಾಂಛನ	ಪವ್‌ವವ್
	ಗೈಡ್ಸ್ (ಮಾರ್ಗದರ್ಶಿಗಳು)	1909 ಇಂಗ್ಲೆಂಡಿನ ಹೆಣ್ಣು ಮಕ್ಕಳು ಪ್ರಾರಂಭಿಸಿದ್ದು	10+	Be prepared ಸದಾ ಸಿದ್ಧವಾಗಿರು	ದಳ – Company 12–32 ಅಷ್ಟಕ–ಪ್ಯಾಟ್ರೋಲ್ 6 ರಿಂದ 8 ಸದಸ್ಯರು 12 – 32		ಗೈಡ್ ಶಿಕ್ಷಕಿ ಗೈಡ್ ಕ್ಯಾಪ್ಟನ್ ಗೈಡ್ ನಾಯಕಿ	• ಆಕಾಶ ಕಡು ನೀಲಿ ಫ್ರಾಕ್ • ಆಕಾಶ ತಿಳಿ ನೀಲಿ ಕಮೀಜ್ – ಆಕಾಶ ಕಡು ನೀಲಿ ಸಲ್ವಾರ್ – ಆಕಾಶ ಕಡು ನೀಲಿ ದುಪ್ಪಟ • ಮಿಡಿ–ಕುಪ್ಪಸ	ಎಡತೋಳಿನ ಮಧ್ಯೆ ಹಸಿರು ಒತ್ತಿನಲ್ಲಿ ಹಳದಿ ಗೆರೆಯ ಭಾರತ ಸ್ಕೌಟ್ ಗೈಡ್ಸ್ ಲಾಂಛನ	• ಅಷ್ಟಕಸಭೆ Patrol in Council • ಗೌರವ ನ್ಯಾಯಸಭೆ Court of Honour
	ರೇಂಜರ್ (ರಕ್ಷಕರು)	1916 ಬಿ.ಪಿ.ಯವರು ಪ್ರಾರಂಭಿಸಿದ್ದು	15 +	Service ಸೇವೆ	ತಂಡ – Team ಅಷ್ಟಕ–ಇರಬಹುದು ಇಲ್ಲದಿರಬಹುದು 4 ರಿಂದ		ರೇಂಜರ್ ಲೀಡರ್	ಗೈಡ್ ಧರಿಸುವಂತೆ ಸಲ್ವಾರ್ ಕಮೀಜ್ ದುಪ್ಪಟ ಧರಿಸುವುದು.	ಎಡತೋಳಿನ ಮಧ್ಯೆ ಕೆಂಪು ಒತ್ತಿನಲ್ಲಿ ಹಳದಿ ಗೆರೆಯ ಭಾರತ ಸ್ಕೌಟ್ ಗೈಡ್ಸ್ ಲಾಂಛನ	ತಂಡ ಸಭೆ Team Council

ಎಲ್ಲರೂ ಬಲತೋಳಿನ ಮಧ್ಯೆ ವಿಶ್ವ ಗೈಡ್ ಪದಕ ಧರಿಸುವುದು

ಪ್ರವಚನ:9 ಗೈಡ್ ಶಿಕ್ಷಕಿಯರ ಪ್ರಗತಿಪರ ತರಬೇತಿ (Progressive Training of Guide Captains)

ಅರ್ಹತೆ
* ಭಾರತೀಯ ಪೌರತ್ವ ಹೊಂದಿರಬೇಕು
* 21 ವರ್ಷ ತುಂಬಿರಬೇಕು
* ವಿಶೇಷ ಸಂದರ್ಭಗಳಲ್ಲಿ ಆಯುಕ್ತರು 18 ವರ್ಷದವರಿಗೆ ಅನುಮತಿ ನೀಡಬಹುದು.
* ಎಸ್.ಎಸ್.ಎಲ್.ಸಿ. ಅಥವಾ ತತ್ಸಮ ವಿದ್ಯಾರ್ಹತೆ
* ವಿಶೇಷ ಸಂದರ್ಭದಲ್ಲಿ ಚೆನ್ನಾಗಿ ಓದಿ-ಬರೆಯಲು ಬರುವವರಿಗೂ ಅನುಮತಿ ನೀಡಲಾಗುವುದು.
* ಎಲ್ಲಾ ಪ್ರಗತಿಪರ ತರಬೇತಿಗಳ ಅವಧಿ 7 ದಿನಗಳು

ಗೈಡ್ ಶಿಕ್ಷಕಿಯರ ಮೂಲ ತರಬೇತಿ
Basic Course for
*Guide Captain

B.C.G.C.
ಗೈಡ್‌ಗಳಿಗೆ ಪ್ರವೇಶದಿಂದ ದ್ವಿತೀಯ ಸೋಪಾನವವರೆಗಿನ ತರಬೇತಿ

→ 6 ತಿಂಗಳು →

ಮುಂದುವರಿದ ತರಬೇತಿ
Advanced course
for G.C.

A.C.G.C.
ಗೈಡ್ಸ್‌ಗಳಿಗೆ ತೃತೀಯ ಸೋಪಾನ – ರಾಜ್ಯ ಪುರಸ್ಕಾರದ ವರೆಗಿನ ತರಬೇತಿ

→ 6 ತಿಂಗಳು →

ಹಿಮಾಲಯ ವುಡ್ ಬ್ಯಾಡ್ಜ್ ತರಬೇತಿ
Himalaya
Wood Badge Course
for G.C.

H.W.B.G.C.
ರಾಜ್ಯ ಪುರಸ್ಕಾರ–ರಾಷ್ಟ್ರಪತಿ ಪುರಸ್ಕಾರ ತರಬೇತಿ
ವಯಸ್ಕ ನಾಯಕಿ
ತರಬೇತಿ ಸಹಾಯಕಿ

→ 1 ವರ್ಷ →

ಪೂರ್ವ ಸಹನಾಯಕಿಯರ ತರಬೇತಿ
Pre-Assistant Leaders
Training Course

PALT
ಮಕ್ಕಳ ತರಬೇತಿಯ ಜೊತೆಗೆ ವಯಸ್ಕ ನಾಯಕರ ತರಬೇತಿ ಸಹಾಯಕಿ
PM Shield

→ 1 ವರ್ಷ →

ಸಹ ನಾಯಕಿಯರ ತರಬೇತಿ
Assistant Leader
Training Course

ALT
BCGC ಮತ್ತು ACGC ಗೆ ನಾಯಕಿ ಅಥವಾ ಸಹನಾಯಕಿಯರ ತರಬೇತಿ

→ 2 ವರ್ಷ →

ನಾಯಕಿಯರ ತರಬೇತಿ
*Leader Trainer
Course

LT
BCGC ಮತ್ತು ACGC ಗೆ ನಾಯಕಿ ಅಥವಾ ಸಹನಾಯಕಿಯರ ತರಬೇತಿ

ನಿಬಂಧನೆ :
ತರಬೇತಿ 4 ವರ್ಷಕ್ಕೊಮ್ಮೆ ಪುನಶ್ಚೇತನ ಪಡೆಯುವುದು ಕಡ್ಡಾಯ

ವಿಶೇಷ ತರಬೇತಿಗಳು :
* ಶಿಬಿರ ಕೌಶಲ * ನಕ್ಷ ಕೌಶಲ * ನಕ್ಷತ್ರ ವೀಕ್ಷಣೆ
* ಅಗ್ರಗಾಮಿತ್ವ * ಆಟಗಳು * ಕರಕುಶಲತೆ
* ಗಣಕೀಕರಣ * HAM ತರಬೇತಿ * ಪರಿಸರ ಅಧ್ಯಯನ
* ಸಂರಕ್ಷಣೆ * ಏಡ್ಸ್ ಅವೇರ್‌ನೆಸ್ * ಹದಿಹರೆಯದ ಶಿಕ್ಷಣ
* ಮಕ್ಕಳ ಹಕ್ಕು * ಸ್ತ್ರೀ ಸಬಲೀಕರಣ
* ನೈಸರ್ಗಿಕ ವಿಕೋಪ ನಿರ್ವಹಣೆ * ಗೀತಗಾಯನ
* ಪ್ರಥಮ ಚಿಕಿತ್ಸೆ

ಎಲ್ಲಾ ವಿಶೇಷ ತರಬೇತಿಗಳ ಅವಧಿ 5 ದಿನಗಳು

ಗೈಡ್ ಕ್ಯಾಪ್ಟನ್ (ಗೈಡ್ ಶಿಕ್ಷಕಿ) GC - 18+   ಗೈಡ್ 10+ ರಿಂದ 16+

ಗೈಡ್‌ಗಳ ಪ್ರಗತಿಪರ ತರಬೇತಿ (Advancement of Guides)

ಗೈಡ್ಸ್: 10+ ವರ್ಷಗಳು

* ಭಾರತೀಯ ಪ್ರಜೆ ಆಗಿರಬೇಕು
* ಪ್ರವೇಶಿಯಾಗಿ ಸೇರಬೇಕು
* ಪ್ರತಿಜ್ಞೆ ಮಾಡಿ ಸದಸ್ಯತ್ವ ಪಡೆಯಬೇಕು
* ಪ್ರಗತಿಪರ ತರಬೇತಿ ಪಡೆಯಬೇಕು.

ವರ್ಷ 13+
ರಾಷ್ಟ್ರಪತಿ ಗೈಡ್ ಪುರಸ್ಕಾರ

12 ತಿಂಗಳ ಕಲಿಕೆ
ಪ್ರಾವೀಣ್ಯತಾ ಪದಕ-2
ಕಡ್ಡಾಯ: ಆಂಬುಲೆನ್ಸ್

ವರ್ಷ 12, 3ತಿಂಗಳು
ರಾಜ್ಯ ಪುರಸ್ಕಾರ

9 ತಿಂಗಳ ಕಲಿಕೆ
ಪ್ರಾವೀಣ್ಯತಾ ಪದಕ – (5)
ಸಾಮಾನ್ಯ ಪದಕ –
VIII–3
IX–2

ತೃತೀಯ ಸೋಪಾನ

6 ತಿಂಗಳ ಕಲಿಕೆ
ಈಜಿಗೆ ಬದಲಾಗಿ ಪ್ರಾವೀಣ್ಯತಾ ಪದಕ – (1)
ಪ್ರಾವೀಣ್ಯತಾ ಪದರ – (2)
ಗುಂಪು ಎ – 1
ಗುಂಪು ಬಿ – 1

ದ್ವಿತೀಯ ಸೋಪಾನ

6 ತಿಂಗಳ ಕಲಿಕೆ
ಪ್ರಾವೀಣ್ಯತಾ ಪದಕ 02

ಪ್ರಥಮ ಸೋಪಾನ

6 ತಿಂಗಳ ಕಲಿಕೆ
ಪ್ರವೇಶ

ವರ್ಷ 10
[illegible]

3 ತಿಂಗಳು
10 + ವರ್ಷಗಳು

ವಿಶೇಷ ತರಬೇತಿ / ಶಿಬಿರ

1) ಪದಕ ಕಾರ್ಯಾಗಾರ
2) ಅಷ್ಟಕ ನಾಯಕರ ತರಬೇತಿ
3) ಚಾರಣ
4) ಸಾಹಸ
5) ಸಮುದಾಯ ಅಭಿವೃದ್ಧಿ

ವಿಶೇಷ ಅವಕಾಶ

ಸ್ಥಳೀಯ ರ್‍ಯಾಲಿ, ಜಿಲ್ಲಾ ಕ್ಯಾಂಪೂರಿ, ರಾಜ್ಯ ಜಂಬೂರೇಟ್, ಗೈಡ್ ಸಮಾವೇಶ, ರಾಜ್ಯ ಪುರಸ್ಕಾರ, ರಾಷ್ಟ್ರೀಯ ಜಾಂಬೂರಿ, ಅಂತರರಾಷ್ಟ್ರೀಯ ಕಾರ್ಯಕ್ರಮ, ರಾಷ್ಟ್ರಪತಿ ಗೈಡ್ಸ್ ಸಮಾವೇಶ, ಯುವ ವೇದಿಕೆ.

ಪ್ರವಚನ:10 ಪದಕ ಪದ್ಧತಿ
(Badge System)

ಉದ್ದೇಶ ಪ್ರಶಿಕ್ಷಣಾರ್ಥಿಗಳು –

* ಪದಕ ಪದ್ಧತಿ ಹಂತದ ಸಾಧನೆಯನ್ನು ಗುರುತಿಸುವ ಪ್ರೋತ್ಸಾಹಿಸುವ ಪದ್ಧತಿ ಎಂದು ತಿಳಿಯುವರು.
* ವಿಶೇಷ ಪ್ರಾವೀಣ್ಯತಾ ಪದಕಗಳು ಪ್ರತಿಭೆಯನ್ನು ಪ್ರೋತ್ಸಾಹಿಸಿ ಚಾರಿತ್ರ್ಯಾಭಿವೃದ್ಧಿಗೊಳಿಸಿ, ಉದ್ಯೋಗಗಳಿಗೆ ಅಡಿಪಾಯವಾಗುವ ಮೂಲಕ ಸಾಮಾನ್ಯ ಪದಕ ಗಳಿಸಲು ಪೂರಕಾಂಶಗಳೆಂದು ಮನಗಾಣುವರು.
* ಪ್ರಾವೀಣ್ಯತಾ ಪದಕ ನೀಡಲು ಅವಶ್ಯಕವಾದ ಪ್ರಕ್ರಿಯೆಯನ್ನು ಅರಿಯುವರು.
* ಚಳವಳಿಯ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಪದಕ ಪ್ರದಾನದ ಸಮಾರಂಭದ ಪಾತ್ರ ಅರಿತು ಅಳವಡಿಸಿಕೊಳ್ಳಲು ಅನುವಾಗುವರು.
* ಪದಕ ಧರಿಸುವ ಕ್ರಮ ಅರಿತು ಸರಿಯಾಗಿ ಧರಿಸುವಂತೆ ಗೈಡ್‌ಗಳಿಗೆ ಮಾರ್ಗದರ್ಶನ ನೀಡುವರು.

ವಿಧಾನ–ಕಥನ ಪದಕ ಪ್ರದರ್ಶನ :

ಸಾಮಾನ್ಯ ಪದಕ (General Badge) : ಇವುಗಳು ಶ್ರೇಣಿ ಪದಕಗಳು. ಗೈಡ್‌ಗಳು ಪ್ರವೇಶ ಮುಗಿಸಿದರೆ ಸದಸ್ಯತ್ವ ಪದಕ ದೊರೆಯುವುದು. ನಂತರ 5 ಹಂತಗಳ ಪ್ರಥಮ ಸೋಪಾನ, ದ್ವಿತೀಯ ಸೋಪಾನ, ತೃತೀಯ ಸೋಪಾನ, ರಾಜ್ಯ ಪುರಸ್ಕಾರ, ರಾಷ್ಟ್ರಪತಿ ಪುರಸ್ಕಾರದ ಅವಶ್ಯಕತೆಗಳನ್ನು ಪೂರೈಸಿ ಪರೀಕ್ಷೆಗೆ ಒಳಪಟ್ಟರೆ ಪ್ರತಿ ಹಂತಕ್ಕೂ ಪದಕಗಳು ದೊರೆಯುತ್ತವೆ. ಈ ಪದಕಗಳ ಅವಶ್ಯಕತೆಗಳನ್ನು ಪೂರೈಸಲು ದ್ವಿತೀಯ ಸೋಪಾನದ ಹಂತದಿಂದ ಪ್ರಾವೀಣ್ಯತಾ ಪದಕ ಪಡೆಯಬೇಕು.

ಪ್ರಾವೀಣ್ಯತಾ ಪದಕ (Proficiency Badge) : ಪ್ರಾವೀಣ್ಯತಾ ಪದಕ ಎಂದರೆ ವಿಷಯ ಪರಿಣತಿಗಾಗಿ ನೀಡುವ ವಿಶೇಷ ಪದಕ. ಈ ಪದಕಗಳನ್ನು ವೃತ್ತಿ, ಕರಕುಶಲ, ಆರೋಗ್ಯ, ಸೇವೆ ಸಂರಕ್ಷಣೆಗಳನ್ನು ಆಧರಿಸಿ ಕೊಡಲಾಗಿದೆ. ಪ್ರತಿ ಪದಕಕ್ಕೂ ಕಾರ್ಯಕ್ರಮವಿದೆ. ಗೈಡ್‌ಗಳು ಬೇಕಾದ ಪದಕವನ್ನು "ಬಾಲಕಿಯರ ಕಾರ್ಯಕ್ರಮ"ಕ್ಕೆ (Girl Programme) ಅನುಗುಣವಾಗಿ ಆಯ್ಕೆ ಮಾಡಿಕೊಂಡು ಪದಕ ಕಾರ್ಯವನ್ನು ಮಾಡಿ ಅದರ ಕಾರ್ಯ ವಿವರವನ್ನು ಬರೆದು ಪರೀಕ್ಷೆಯನ್ನು ತೆಗೆದುಕೊಂಡು ಉತ್ತೀರ್ಣರಾದರೆ ಈ ಪದಕ, ಪ್ರಮಾಣ ಪತ್ರದ ಸಹಿತ ಲಭ್ಯವಾಗುವುದು. ಜೊತೆಗೆ ಈ ವಿಷಯದಲ್ಲಿ ಪರಿಣತಿಯನ್ನು ಹೊಂದುವರು. ದ್ವಿತೀಯ ಸೋಪಾನದ ಹಂತದಿಂದ ವಿಶೇಷ ಪದಕಗಳನ್ನು ಗು.ನೀ.ನಿ.ಸಂ. ಭೌಗ–3ರಲ್ಲಿ ಕೊಟ್ಟಿರುವಂತೆ ಗಳಿಸಲಾರಂಭಿಸುವರು.

ಪದಕದ ಹೆಸರು	ವಯಸ್ಸು	ಗಳಿಸಬೇಕಾದ ಪ್ರಾ.ಪ. ಸಂಖ್ಯೆ	ಪರೀಕ್ಷಕರು	ನೀಡುವವರು
1. ಪ್ರವೇಶ	10+	–	ಗೈಡ್ ನಾಯಕಿ	ಗೈಡ್ ನಾಯಕಿ (ಶಿಕ್ಷಕಿ)
2. ಪ್ರಥಮ ಸೋಪಾನ		–	ಗೈಡ್ ನಾಯಕಿ	ಗೈಡ್ ನಾಯಕಿ (ಶಿಕ್ಷಕಿ)

3.	ದ್ವಿತೀಯ ಸೋಪಾನ		2	ಗೈಡ್ ನಾಯಕಿ	ಗೈಡ್ ನಾಯಕಿ (ಶಿಕ್ಷಕಿ)/ ಸ್ಥಳೀಯ ಸಂಸ್ಥೆ
4.	ತೃತೀಯ ಸೋಪಾನ		ಈಜಿಗೆ ಬದಲಾಗಿ–1 ಗುಂಪು (ಎ)–1 ಗುಂಪಿ (ಬಿ)–2	ಜಿಲ್ಲಾ ಸಂಸ್ಥೆ	ಜಿಲ್ಲಾ ಸಂಸ್ಥೆ
5.	ರಾಜ್ಯ ಪುರಸ್ಕಾರ	13+	ಕಡ್ಡಾಯ – 3+2	ರಾಜ್ಯ ಸಂಸ್ಥೆ	ರಾಜ್ಯಪಾಲರು
6.	ರಾಷ್ಟ್ರಪತಿ ಪುರಸ್ಕಾರ	14+	ಕಡ್ಡಾಯ – 2+1	ರಾಷ್ಟ್ರೀಯ ಸಂಸ್ಥೆ	ರಾಷ್ಟ್ರಪತಿಯವರು

ದ್ವಿತೀಯ ಸೋಪಾನ ಪ್ರಾವೀಣ್ಯತಾ ಪದಕಗಳ ಚಿತ್ರ ಬಿಡಿಸಿ ಒಟ್ಟು–9

ಪಾಕ ಪ್ರವೀಣೆ
(Cook)

ಚರ್ಚಾಪಟು
(Debater)

ಪ್ರಾಣಿ ಮಿತ್ರಳು
(Friend to Animal)

ತೋಟಗಾರ್ತಿ
(Gardener)

ಗೃಹಕುಶಲಿ
(Handy Women)

ಸೈಕಲ್ ಸವಾರಕಿ
(Cyclist)

ಮಡಿವಾಳಗಿತ್ತಿ
(Laundress)

ವಾಚಕಿ
(Reader)

ಶಿಶು ದಾದಿ
(Child Nurse)

ಹೊಸ ಪದಕಗಳ ಸೇರ್ಪಡೆ : ಶಿಶು ದಾದಿ, ವಾಚಕಿ

ಪ್ರವೇಶದ ಅವಶ್ಯಕತೆಗಳನ್ನು ಗೈಡ್ಸ್‌ಗಳು ಪೂರ್ಣಗೊಳಿಸಿದ ನಂತರ ಗೈಡ್ ಶಿಕ್ಷಕಿಯೇ ಪರೀಕ್ಷಿಸಿ ತೃಪ್ತಿಯಾದರೆ ಪದಕವನ್ನು ನೀಡಬೇಕು. ಈ ಪದಕವನ್ನು **ಸದಸ್ಯತ್ವ ಪದಕ** ಎನ್ನಲಾಗುವುದು. ಇದನ್ನು ಸದಸ್ಯರಾಗಿರುವವರೆಗೂ ಹಿರಿಯ ಮತ್ತು ಕಿರಿಯರೆಲ್ಲರೂ ಧರಿಸಬೇಕು.

ಪ್ರಥಮ ಸೋಪಾನದ ಅವಶ್ಯಕತೆಗಳನ್ನು ಮುಗಿಸಿದ ನಂತರ ಗೈಡ್ ಶಿಕ್ಷಕಿಯೇ ಪರೀಕ್ಷಿಸಿ ತೃಪ್ತಿಯಾದರೆ ಪ್ರಥಮ ಸೋಪಾನದ ಪದಕವನ್ನು ನೀಡಬೇಕು.

ದ್ವಿತೀಯ ಸೋಪಾನದ ಅವಶ್ಯಕತೆಗಳನ್ನು ಮುಗಿಸಿದ ನಂತರ ಗೈಡ್ ಶಿಕ್ಷಕಿ / ಸ್ಥಳೀಯ ಸಂಸ್ಥೆಯು ಗೊತ್ತುಪಡಿಸಿದ ಸ್ವತಂತ್ರ ಪರೀಕ್ಷಕರಿಂದ ಪರೀಕ್ಷಿಸಿ ತೃಪ್ತಿಯಾದಲ್ಲಿ ದ್ವಿತೀಯ ಸೋಪಾನದ ಪದಕವನ್ನು ನೀಡಬೇಕು.

ಇದರಲ್ಲಿ ಗೈಡ್ 2 ಪ್ರಾವೀಣ್ಯತಾ ಪದಕವನ್ನು ಪಡೆಯಬೇಕು. ಗೈಡ್‌ಗಳು ಮೇಲಿನ 9ರಲ್ಲಿ ಆಯ್ಕೆ ಮಾಡಿಕೊಂಡ ಎರಡು ಪದಕಗಳಲ್ಲಿ ಗೈಡ್ ಶಿಕ್ಷಕಿ ಆ ವಿಷಯದಲ್ಲಿ ಪರಿಣತಿ ಹೊಂದಿದಂತಹ ಬೋಧಕರನ್ನು ಗೊತ್ತುಪಡಿಸಿ ಪದಕ ಬೋಧನೆ ಮಾಡಿಸಬೇಕು. ಪದಕ ಬೋಧನೆಯ ನಂತರ ಜಿಲ್ಲಾ ಸಂಸ್ಥೆಯು ಪದಕ ಕಾರ್ಯದರ್ಶಿಯನ್ನು ಸಂಪರ್ಕಿಸಿ ಪದಕ ಸಮಿತಿ ಅನುಮೋದಿಸಿರುವ ಪದಕ ಪರೀಕ್ಷಕರನ್ನು ಕರೆಸಿ ಪರೀಕ್ಷೆ ನಡೆಸಬೇಕು. ತೇರ್ಗಡೆಯಾದಲ್ಲಿ ಪದಕ ಬೋಧಕರಿಂದ ಪ್ರಮಾಣಪತ್ರ ಪಡೆದು ಪದಕ ಕಾರ್ಯದರ್ಶಿಯ ಸಹಿ ಮತ್ತು ಆಯುಕ್ತರ / ಜಿಲ್ಲಾ ಸಹಾಯಕ ಆಯುಕ್ತರ (ಸ್ಥಳೀಯ) ಸಹಿ ಮಾಡಿಸಿ ನಂತರ ಈ ಪದಕವನ್ನು ಕೊಂಡುಕೊಂಡು ಪದಕ ಪ್ರದಾನ ಸಮಾರಂಭವನ್ನು ಏರ್ಪಡಿಸಿ ಈ ಪದಕವನ್ನು ನೀಡಬೇಕು. ಪ್ರಾವೀಣ್ಯತಾ ಪದಕವನ್ನು ಗಳಿಸಿದಂತೆ 10 ಸೆಂ.ಮೀ. ಅಗಲದ ಡವಾಲಿ ಮೇಲೆ ಏರುಕ್ರಮದಲ್ಲಿ ಧರಿಸುತ್ತಾ ಹೋಗಬೇಕು.

ಪದಕಗಳನ್ನು ಧರಿಸುವ ಕ್ರಮ :



ಸದಸ್ಯತ್ವ ಪದಕದ ಕೆಳಗೆ ಪ್ರಥಮ ಸೋಪಾನ ಪದಕ ಹಾಕಬೇಕು

ಪ್ರಥಮ ತೆಗೆದು ಅದೇ ಜಾಗದಲ್ಲಿ ದ್ವಿತೀಯ ಹಾಕಬೇಕು



* ನಿಯೋಜನೆ – Assignment
* ವಿಚಾರಣೆ – Enquiry
* ಪರಿಕಲ್ಪ – Project
* ವಲಯ ಆವೃತ್ತಿ – Base Method
* ಕಥನ – Narration
* ವಿಚಾರ ವಿನಿಯಮ – Discussion
* ಮಸ್ತಿಷ್ಕ ತರಂಗ – Brain storming
* ನೆಲಹಾಸು ವಿಧಾನ – Sand bed technique

ಆಟ, ಹಾಡು, ಕಥೆ, ನಿದರ್ಶನ, ಅಷ್ಟಕ ಚಟುವಟಿಕೆಗಳನ್ನು ಕಲಿಕೆಯ ತಂತ್ರವಾಗಿ ಆಸಕ್ತಿಯನ್ನು ಕಾಯ್ದಿರಿಸಲು ಬಳಸಬಹುದು.

ಪರೀಕ್ಷೆಗಳು ಎಂದ ತಕ್ಷಣ ನೆನಪಿಗೆ ಬರುವ ವಿಧಾನ ಬರವಣಿಗೆ. ಈ ಸಾಂಪ್ರದಾಯಿಕ ಪರೀಕ್ಷೆಗಳನ್ನು ಗೈಡಿಂಗ್‌ನಲ್ಲಿ ಹೊರತುಪಡಿಸಿ ಕೆಳಗಿನ ವಿಧಾನಗಳ ಮೂಲಕ ಪರೀಕ್ಷೆಗಳನ್ನು ಮಾಡಬಹುದು.

* ಆಟ – Game
* ಪ್ರಾತ್ಯಕ್ಷಿಕೆ – Practical
* ಆಶುಭಾಷಣ – Pick-Speak
* ಮಿಂಚು ಫಲಕ – Flash Card
* ರಸಪ್ರಶ್ನೆ – Quiz
* ಪ್ರದರ್ಶನ – Demo
* ವೀಕ್ಷಣೆ – Observation

ದಳ ತೆರೆದು ದಳ ಸಭೆ ಮಾಡುತ್ತಾ ಹೋದಂತೆ ನಿಮಗೆ ಹೊಸ -ಹೊಸ ವಿಧಾನ ತಂತ್ರಗಳು ಹೊಳೆಯುತ್ತವೆ. ಅವುಗಳನ್ನು ಪ್ರಯೋಗಿಸಿ ನಿಮ್ಮ ಸ್ನೇಹಿತೆ ಗೈಡ್ ಶಿಕ್ಷಕಿಯರೊಡನೆ ಹಂಚಿಕೊಳ್ಳಿ.

ಚಟುವಟಿಕೆ :

ಪಠ್ಯ ಕ್ರಮವನ್ನು ಓದುವರು. ಗುಂಪು ಚರ್ಚೆ ಮಾಡಿ ಪ್ರತಿ ವಿಷಯಕ್ಕೂ ಸೂಕ್ತವಾದ ವಿಧಾನ ಮತ್ತು ತಂತ್ರಗಳನ್ನು ನಿರ್ಣಯಿಸುವರು, ಪಟ್ಟಿ ಮಾಡುವರು.

ಪ್ರವಚನ:11 ಪ್ರಥಮ ಸೋಪಾನದ ಅವಶ್ಯಕತೆಗಳು

ಪ್ರಥಮ ಸೋಪಾನದ ಆವಶ್ಯಕತೆಗಳು –

1. ನಿಮ್ಮನ್ನು ನೀವು ನೋಡಿಕೊಳ್ಳುವುದು.
2. ನೀವು ಮನೆಯಲ್ಲಿ ಮಾಡುವ ಕೆಲಸಗಳನ್ನು ಹೇಳಿ.
3. ನಿಮ್ಮ ಹಾಸಿಗೆಯನ್ನು ನೀವೇ ಹಾಸಿಕೊಳ್ಳುವ ಸಾಮರ್ಥ್ಯವನ್ನು ಪಡೆಯುವುದು.
4. ವೈಯಕ್ತಿಯ ಸ್ವಚ್ಛತೆ ಮತ್ತು ಆರೋಗ್ಯದ ನಿಯಮಗಳ ಬಗ್ಗೆ ತಿಳಿಯುವುದು.
5. ಬಿ.ಪಿ. ಷಟ್ಕವ್ಯಾಯಾಮ ಮತ್ತು ಯೋಗಾಸನ / ಸೂರ್ಯ ನಮಸ್ಕಾರ ಕಲಿಯಿರಿ.
6. ಗುಂಡಿ ಹೊಲಿದು ಕಾಜ ಮಾಡಿ.
7. ಕ್ಯಾನ್ವಾಸ್ / ಚರ್ಮದ ಬೂಟನ್ನು ಸ್ವಚ್ಛ ಮಾಡಿ, ಪಾಲಿಷ್ ಮಾಡಿ.
8. ಪ್ರಥಮ ಚಿಕಿತ್ಸೆ ಸಂಚಿ ವೈಯಕ್ತಿಕವಾಗಿ ತಯಾರಿಸಿಕೊಳ್ಳಿ. ಇದರಲ್ಲಿಡುವ ಸಾಮಾನುಗಳ ಪಟ್ಟಿ ಮಾಡಿ. ಪ್ರಥಮ ಚಿಕಿತ್ಸೆಯ ನಿರೂಪಣೆ ಮತ್ತು ಸುವರ್ಣ ನಿಯಮಗಳನ್ನು ತಿಳಿಸುವುದು. ಸರಳ ಕತ್ತರಿಸಿದ ಗಾಯ, ಸುಟ್ಟಗಾಯ, ಮೂಗಿನಿಂದಾಗುವ ರಕ್ತಸ್ರಾವಕ್ಕೆ ಚಿಕಿತ್ಸೆ ನೀಡುವುದು (ಇದನ್ನು ಗು.ನೀ.ನಿ.ಸಂ. ಆಂಗ್ಲ ಪುಸ್ತಕದಲ್ಲಿ ಸೇವಾ ಕಾರ್ಯದಿಂದ ತೆಗೆದು ಇಲ್ಲಿ ತರಲಾಗಿದೆ.)

ಶಿಸ್ತು –

1. **ಪಟಾಲಂ ಪದ್ಧತಿ :** ನಿಮ್ಮ ಪಟಾಲಂ ಸಂಕೇತ, ಧ್ವಜ, ಹರ್ಷವಾದ ಗೀತೆಗಳನ್ನು ರಚಿಸಿ. ಪಟಾಲಂಕ್ಕೆ ಗೊತ್ತುಪಡಿಸಿದ ನಿಮ್ಮ ಸ್ಥಳವನ್ನು ಪಟಾಲಂ ಚಟುವಟಿಕೆಗಳಿಗೆ ಸಜ್ಜುಗೊಳಿಸಿ.
2. ಹಸ್ತ ಮತ್ತು ಶಿಲ್ಪ ಸಂಕೇತವನ್ನು ಅಭ್ಯಸಿಸಿ ಬಳಸಿ.
3. ಸರಳ ವ್ಯಾಯಾಮಗಳು ಮತ್ತು ಕ್ರಮಬದ್ಧ ಚಲಿಸಿ.
4. ಪಟಾಲಂ ಮತ್ತು ದಳ ಆಟಗಳಲ್ಲಿ ಭಾಗವಹಿಸಿ.
5. ನಿಮ್ಮ ನಡತೆ ಮನೆಯಲ್ಲಿ ಮತ್ತು ಶಾಲೆಯಲ್ಲಿ ತೃಪ್ತಿಕರವಾಗಿದೆ ಎಂದು ನಿಮ್ಮ ಗೈಡ್ ಶಿಕ್ಷಕಿಗೆ ಮನವರಿಕೆ ಮಾಡಿ.

ಹಗ್ಗ ಕೌಶಲ –

1. ಹಗ್ಗದ ತುದಿಗಳಿಗೆ ಕಟ್ಟನ್ನು (ವಿಪಿಂಗ್) ಕಟ್ಟುವುದು.
2. ಕೆಳಗಿನ ಗಂಟುಗಳನ್ನು ಹಾಕುವುದನ್ನು ಮತ್ತು ಬಳಸುವುದನ್ನು ಕಲಿಯಿರಿ.

1. ಸಮ ಗಂಟು (ರೀಫ್ ನಾಟ್)
2. ಮೂಲೆ ಗಂಟು (ಶೀಟ್ ಬೆಂಡ್)
3. ಕೊಟ್ಟಿಗೆ ಗಂಟು (ಕ್ಲೋವ್ ಹಿಚ್)
4. ಜೀವ ರಕ್ಷಕ ಗಂಟು (ಬೋ ಲೈನ್ ನಾಟ್)
5. ಕಣಕಾಲು ಗಂಟು (ಷೀಪ್ ಷಾಂಕ್)
6. ಬೆಸ್ತರ ಗಂಟು (ಫಿಷರ್‌ಮನ್ ನಾಟ್)
7. ಒಂದು ಸುತ್ತು ಎರಡು ಅರೆಗಂಟು (ರೌಂಡ್ ಟರ್ನ್ ಟೂ ಹಾಫ್ ಹಿಚ್‌ಗಳು)

3. ಸಮಾನಾಂತರ ಕಟ್ಟು 1 ಮತ್ತು 2 / ಷಿಯರ್ ಲ್ಯಾಷಿಂಗ್ ಕಟ್ಟುವುದನ್ನು ಪ್ರದರ್ಶಿಸಿ.
4. ಮನೆಗೆ ಉಪಯುಕ್ತವಾದ ಪೀಠೋಪಕರಣ / ಕರಕುಶಲ ವಸ್ತುವನ್ನು ತಯಾರಿಸಿ.

ಸೇವಾ ಚಟುವಟಿಕೆಗಳು –

1. ನಿಮ್ಮ ಶಾಲೆ / ಸ್ಥಳೀಯ / ಜಿಲ್ಲಾ ಕೇಂದ್ರ ಕಛೇರಿಯಲ್ಲಿ ಸೇವಾ ಕಾರ್ಯವನ್ನು ಗೈಡ್ ಶಿಕ್ಷಕಿಯ ಮಾರ್ಗದಲ್ಲಿ ಮಾಡುವುದು.
2. ಅಡಿಗೆ, ನೀರು ಸಂಗ್ರಹ, ಆತಿಥ್ಯ, ಸ್ವಚ್ಛತೆ ಮುಂತಾದ ಮನೆ ಜವಾಬ್ದಾರಿಯನ್ನು ಪೋಷಕರ ಸಹಾಯದಿಂದ ನಿರ್ವಹಿಸುವುದು.
3. ಪ್ರತಿದಿನ ಕನಿಷ್ಠ ಒಂದು ಸತ್ಕಾರ್ಯವನ್ನು ಒಂದು ತಿಂಗಳು ಕಾಲ ಮಾಡಿ ದಿನಚರಿ ಬರೆಯಿರಿ.
4. ಕೆಳಗಿನ ಚಟುವಟಿಕೆಗಳಲ್ಲಿ ಭಾಗವಹಿಸಿ :
   ಅ) ನಿಯಮದ ಯಾವುದಾದರೂ ಅಂಶಗಳನ್ನು ಒಳಗೊಂಡಂತೆ ಗೈಡ್ ಶಿಕ್ಷಕಿಯೊಡನೆ ವಿಚಾರ ಮಾಡಿ ಒಂದು ವಾರದಲ್ಲಿ ವರದಿ ಸಲ್ಲಿಸುವುದು.
   ಆ) ಪಟಾಲಂ ನಾಯಕಿಯೊಡನೆ ಸಮಾಲೋಚಿಸಿ ಪ್ರಕೃತಿ ಅಧ್ಯಯನ ಯೋಜನೆಯನ್ನು ಮಾಡಿ 10 ದಿನಗಳಲ್ಲಿ ವರದಿ ನೀಡುವುದು. ಅಥವಾ

   ಗ್ರಾಮ ಪಂಚಾಯಿತಿ / ಕ್ಷೇತ್ರಾಭಿವೃದ್ಧಿ ಸಮಿತಿ ಪುರಸಭೆ / ನಗರ ಪಾಲಿಕೆ, ಕಾರ್ಪೊರೇಷನ್ ಕಛೇರಿಗೆ ಭೇಟಿ ನೀಡಿ ಅವರು ಕೈಗೊಂಡ ಸಾರ್ವಜನಿಕ ಸೇವಾ ಯೋಜನೆಯ ವರದಿಯನ್ನು ಸಂಗ್ರಹಿಸಿ ಗೈಡ್ ಶಿಕ್ಷಕಿಯವರಿಗೆ 10 ದಿನಗಳಲ್ಲಿ ಸಲ್ಲಿಸುವುದು.

ಹೊರಾಂಗಣ –

ನಿಮಗೆ ದೊರೆತಿರುವ ಮತ್ತು ಪರಿಚಯವಾಗಿರುವ ಸಾರ್ವಜನಿಕ ಕಛೇರಿ ಮತ್ತು ಚಲಿಸುವ ದೂರವಾಣಿಯ ಉಪಯೋಗ ತಿಳಿಯುವುದು.

1. ವನವಿದ್ಯಾ ಸಂಕೇತವನ್ನು ತಿಳಿದು ಅಷ್ಟಕದೊಡನೆ 1/2 ಕಿ.ಮೀ.ಗೆ ಕಡಿಮೆ ಇಲ್ಲದಂತೆ ಜಾಡನ್ನು ಅನುಸರಿಸಿ ಮಾರ್ಗವನ್ನು ಕ್ರಮಿಸಿ.
2. ಪಾದಚಾರಿಗಳು ರಸ್ತೆಯ ಸುರಕ್ಷಿತ ನಿಯಮಗಳನ್ನು ತಿಳಿದು ಅನುಸರಿಸುವುದು.
3. ಪ್ರಕೃತಿ ಅಧ್ಯಯನದಲ್ಲಿ ಜಾಡನ್ನು ಅನುಸರಿಸುವುದು.

   ಪ್ರವೇಶದ ನಂತರ ಕನಿಷ್ಠ 6 ತಿಂಗಳು ಪ್ರಥಮ ಸೋಪಾನ ಗೈಡಾಗಿ ಸೇವೆ ಸಲ್ಲಿಸುವಳು.

ದ್ವಿತೀಯ ಸೋಪಾನದ ಅವಶ್ಯಕತೆಗಳು ಮತ್ತು ಪರೀಕ್ಷೆಗಳು –

1. **ಅಗ್ರಗಾಮಿತ್ವ : ಈ ಗಂಟು ಕಟ್ಟುಗಳನ್ನು ಕಟ್ಟಿ ಬಳಸಿ.**

   ಅ) ದಿಮ್ಮಿಗಂಟು (ಟಿಂಬರ್ ಹಿಚ್), ಅಷ್ಟಕ ಗಂಟು (ಫಿಗರ್ ಆಫ್ 8 ಗಂಟು), ಸುರುಳಿ ಗಂಟು (ರೋಲಿಂಗ್ ಹಿಚ್), ಸನ್ನೆ ಗಂಟು (ಮರ್ಲ್ಲಿನ್ ಹಿಚ್)

   ಆ) ಚೌಕ ಕಟ್ಟು (ಸ್ಕ್ವೇರ್ ಲ್ಯಾಷಿಂಗ್), ಅಷ್ಟಕ ಕಟ್ಟು (ಫಿಗರ್ ಆಫ್ ಏಯಿಟ್ ಲ್ಯಾಷಿಂಗ್)

   ಇ) ಶಿಬಿರ ಸಲಕರಣೆ ಕೈಗೊಡಲಿ ಅಥವಾ ಮಚ್ಚು ಹರಿತವಾಗಿಡುವುದು. ತುಕ್ಕು ಹಿಡಿಯದಂತೆ ಸುರಕ್ಷಿತವಾಗಿಡುವುದು.

   ಈ) ಭರ್ಜಿ ಅಥವಾ ಚಾಕು ಉಪಯೋಗಿಸಿ ಸುರಕ್ಷಿತವಾಗಿ ಹರಿತವಾಗಿ ಸ್ಕ್ರೂಡ್ರೈವರ್ ಮತ್ತು ಕಟಿಂಗ್ ಪ್ಲಯರ್ ಮತ್ತು ಸುತ್ತಿಗೆಯನ್ನು ಬಳಸಿ ಸುರಕ್ಷಿತವಾಗಿಡಿ.

2. **ಬೆಂಕಿ :**

   ಅ) ಶಿಬಿರದಲ್ಲಿ ಅಥವಾ ಬಯಲಿನಲ್ಲಿ ಬಳಸುವ ವಿವಿಧ ರೀತಿಯ ಬೆಂಕಿ ಜೋಡಣೆಯನ್ನು ತಿಳಿಯಿರಿ.

   ಆ) ಎರಡು ಬೆಂಕಿ ಕಡ್ಡಿಗಿಂತ ಹೆಚ್ಚು ಬಳಸದೆ ಬಯಲಿನಲ್ಲಿ ಬೆಂಕಿ ಹತ್ತಿಸಿ.

3. **ಅಡುಗೆ :**

   ಅ) ಸೀಮೆ ಎಣ್ಣೆ / ಅನಿಲ ಒಲೆಗಳ ಕಾರ್ಯ ರೀತಿ ತಿಳಿದು ಅದನ್ನು ಸರಿಯಾಗಿ ಇಡುವುದನ್ನು ತಿಳಿಯಿರಿ.

   ಆ) ಬಯಲಿನಲ್ಲಿ ಇಬ್ಬರಿಗೆ ಸರಳ ತಿನಿಸುಗಳನ್ನು ಮತ್ತು ಟೀ / ಕಾಫಿ ಮಾಡಿ.

   ಇ) ಅನಿಲ ಸೋರಿಕೆ ಬಗ್ಗೆ ಮುನ್ನೆಚ್ಚರಿಕೆ ಕ್ರಮ ತಿಳಿಯಿರಿ.

4. **ದಿಕ್ಸೂಚಿ ಮತ್ತು ನಕ್ಷೆ :**

   ಅ) ದಿಕ್ಸೂಚಿಯಲ್ಲಿ 16 ದಿಕ್ಕುಗಳನ್ನು ತಿಳಿಯಿತಿ.

   ಆ) ರಾತ್ರಿ ಸಮಯದಲ್ಲಿ ನಕ್ಷತ್ರ ಪುಂಜಗಳ ಸಹಾಯದಿಂದ ಉತ್ತರ ದಿಕ್ಕನ್ನು ಕಂಡು ಹಿಡಿಯುವುದು.

   ಇ) ದಿಕ್ಸೂಚಿಯನ್ನು ಬಳಸಿ ನೀವು ನಿಲ್ಲುವ ಸ್ಥಾನದಿಂದ ವಿವಿಧ ವಸ್ತುಗಳ (ಗಿಡಮರ, ಕಟ್ಟಡ ಇತ್ಯಾದಿ) ದಿಕ್ಕೋನವನ್ನು (ಬೇರಿಂಗ್) ಕಂಡು ಹಿಡಿಯಿರಿ.

   ಈ) ಜಾಡನ್ನು ಅನುಸರಿಸುತ್ತ ದಿಕ್ಸೂಚಿಯಿಂದ ದಿಕ್ಕೋನ ಮತ್ತು ದೂರವನ್ನು ಕಂಡು ಹಿಡಿಯಿರಿ.

   ಉ) ಮಾಪಕ (ಸ್ಕೇಲ್), ದಿಕ್ಕು, ಸಾಂಪ್ರದಾಯಿಕ ಚಿಹ್ನೆಗಳು, ಗ್ರಿಡ್, ಸಮಪಾತಳಿ ರೇಖೆಗಳು, ರೆಫೆರೆನ್ಸ್‌ಗಳನ್ನು ತಿಳಿಯಿರಿ.

   ಊ) ಪ್ರವಾಸ ನಕ್ಷೆಯ ಉಪಯೋಗ ತಿಳಿಯಿರಿ.

5. **ಪ್ರಥಮ ಚಿಕಿತ್ಸೆ :**

   ಅ) ಗಾಯಗಳ ಬಗ್ಗೆ ತಿಳಿದು ರಕ್ತಸ್ರಾವ, ಸುಟ್ಟಗಾಯ, ಬೆಂದಗಾಯ, ಉಳುಕು, ಕುಟುಕು, ಕಚ್ಚುವಿಕೆಗೆ ಪ್ರಥಮ ಚಿಕಿತ್ಸೆ ತಿಳಿಯಿರಿ.

   ಆ) ಸುರುಳಿ ಪಟ್ಟಿ (ರೋಲರ್ ಬ್ಯಾಂಡೇಜ್) ಕಟ್ಟಿ ಪ್ರದರ್ಶಿಸಿ, ಬಳಸಿ.

ಇ) ತ್ರಿಕೋನ ಪಟ್ಟಿಯ ಉಪಯೋಗ ತಿಳಿದು ತಲೆ, ಕೈ, ಪಾದ, ತೋಳು, ಮೊಣಕಾಲು, ಪಾದಪಟ್ಟಿಗಳನ್ನು ಕೊರಳಿನ ಅಸ್ಥಿಭಂಗಕ್ಕೆ ಪಟ್ಟಿ ಕಟ್ಟಿ

ಈ) ತಾತ್ಕಾಲಿಕ ಡೋಲಿಯನ್ನು (Stretcher) ತಯಾರಿಸಿ.

6. **ಅಂದಾಜು ಅಳತೆ :**

ಅ) 2 ದೂರ / 1 ಅಗಲ 100 ಮೀಟರ್ ಮೀರದಂತೆ 30 ಮೀ. ಕಡಿಮೆ ಇರದಂತೆ ಸುಧಾರಿತ ಉಪಕರಣವನ್ನು ಮಾಡಿಕೊಂಡು ಅಳತೆ ಅಂದಾಜು ಮಾಡಿ.

ಆ) ಗೊತ್ತು ಪಡಿಸಿದ ದೂರವನ್ನು ಕ್ರಮಿಸಿ ಹೆಜ್ಜೆಯ ಅಳತೆಯ ಆಧಾರದ ಮೇಲೆ ಅಂದಾಜು ಮಾಡಿ.

7. **ಹೊರಾಂಗಣ :**

ಅ) ದಳದ ವ್ಯಾಪಕ ಆಟದಲ್ಲಿ ಭಾಗವಹಿಸಿ.

ಆ) ಎರಡು ದೇಶ ಭಕ್ತಿ ಗೀತೆ / ಜಾನಪದ ಗೀತೆ / ಪಟಾಲಂ ಕಿರುನಾಟಕವನ್ನು ಅಭ್ಯಾಸ ಮಾಡಿ.

ಇ) ವಾಹನ ಸಂಚಾರ ನಿಯಮಗಳನ್ನು ತಿಳಿದು ಅಭ್ಯಾಸ ಮಾಡಿ.

ಈ) ಸೈಕಲ್ ಸವಾರಿಯನ್ನು ಕಲಿಯಿರಿ.

ಉ) ಹತ್ತಿರದ ಕಾರ್ಖಾನೆಗೆ ಭೇಟಿ ನೀಡಿ ಅದರ ಉತ್ಪಾದನೆಯನ್ನು, ಉತ್ಪಾದಿಸುವ ಪ್ರಕ್ರಿಯೆಯನ್ನು ತಿಳಿಯಿರಿ. ಜೊತೆಗೆ ಕಾರ್ಮಿಕತೆಯ ಗೌರವವನ್ನು ತಿಳಿಯುವುದು.

8. **ಸೇವಾಕಾರ್ಯ :**

ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಪೂರ್ಣಗೊಳಿಸಿ.

ಅ) ಶಾಲಾ ಮುಖ್ಯಸ್ಥರೊಡನೆ ವಿಚಾರ ಮಾಡಿ ಶಾಲೆಗೆ ಬೇಕಾದ ಅಭಿವೃದ್ಧಿ ಸೇವಾ ಯೋಜನೆಯನ್ನು ಪಟಾಲಂವಾರು ಮಾಡಿ.

ಆ) ಒಂದು ತಿಂಗಳು ಒಂದಕ್ಕಿಂತ ಹೆಚ್ಚು ಸಮಾಜ ಕಾರ್ಯದಲ್ಲಿ ಭಾಗವಹಿಸುವುದು.

ಇ) ಸಮುದಾಯದಲ್ಲಿ ನಡೆಯುವ ಜಾತ್ರೆ ಮತ್ತು ಉತ್ಸವದ ಪೂರ್ವಸಿದ್ಧತೆ ಮತ್ತು ಜಾತ್ರೆ ಉತ್ಸವ ನಡೆಯುವಾಗ ನಿಯೋಜನೆ ಸೇವಾಕಾರ್ಯವನ್ನು ನಿರ್ವಹಿಸುವುದು.

ಈ) ಕಸ ವಿರೋಧ ಚಟುವಟಿಕೆ ಆಂದೋಲನದಲ್ಲಿ ಭಾಗವಹಿಸಿ. ನೀವು ಶಾಲೆ / ಸ್ಥಳೀಯ ಮತ್ತು ಜಿಲ್ಲಾ ಕೇಂದ್ರದ ಸುತ್ತಲೂ ಸ್ವಚ್ಛ ಮಾಡಿ.

ಉ) 3R's ಸಂರಕ್ಷಣೆ, ಕಡಿಮೆ ಬಳಕೆ ಮತ್ತು ಪುನರ್ ಬಳಕೆಗಳನ್ನು ಮಾಡಿ ತೋರಿಸಿ.

ಊ) ಸ್ವಸಹಾಯ ಸಂಘಗಳನ್ನು ಅಥವಾ ತತ್ಸಮವಾದ ಸಂಘಟನೆಗಳನ್ನು ರಚಿಸಿ ಗೈಡ್ ಕೌಶಲಗಳನ್ನು ಬಳಸುವುದು.

9. **ಜ್ಞಾನೇಂದ್ರಿಯ ತರಬೇತಿ :**

ಕಿಮ್ಸ್‌ನ ಜ್ಞಾನೇಂದ್ರಿಗಳ ಆಟ ರುಚಿ, ವಾಸನೆ, ದೃಷ್ಟಿ, ಶಬ್ದ ಮತ್ತು ಸ್ಪರ್ಶ ಸಾಮರ್ಥ್ಯ ಮತ್ತು ವೀಕ್ಷಣಾ ಸಾಮರ್ಥ್ಯಗಳನ್ನು ಅಭಿವೃದ್ಧಿಗೊಳಿಸಿಕೊಳ್ಳಿ.

10. ಕೆಳಗಿನ ಪ್ರಾವೀಣ್ಯತಾ ಪದಕಗಳಲ್ಲಿ ಯಾವುದಾದರೂ ಎರಡನ್ನು ಪಡೆಯುವುದು.

1.	ಪಾಕ ಪ್ರವೀಣೆ (ಕುಕ್)	6.	ಸೈಕಲ್ ಸವಾರಕಿ (ಸೈಕಲಿಸ್ಟ್)
2.	ಚರ್ಚಾಪಟು (ಡಿಬೇಟರ್)	7.	ಮಡಿವಾಳಗಿತ್ತಿ (ಲಾಂಡ್ರೆಸ್)

3. ಪ್ರಾಣಿಮಿತ್ರೆ (ಫ್ರೆಂಡ್ ಟು ಅನಿಮಲ್)
4. ತೋಟಗಾರ್ತಿ (ಗಾರ್ಡನರ್)
5. ಗೃಹಕುಶಲಿ (ಹ್ಯಾಂಡಿ ವುಮನ್)
8. ವಾಚಕಿ (ರೀಡರ್)
9. ಶಿಶುದಾದಿ (ಚೈಲ್ಡ್ ನರ್ಸ್)

11. ಶಿಸ್ತು :

ಅ) ವಿವಿಧ ರೀತಿಯಲ್ಲಿ ದಳ ರಚನೆ ಮಾಡಿ.

ಆ) ಚುರುಕಾಗಿ ಆಜ್ಞೆಗಳನ್ನು ಪಾಲಿಸುತ್ತಾ ಮೂರರ ಸಾಲಿನಲ್ಲಿ ಪಥಸಂಚಲನ ಮಾಡಿ.

ಇ) ನಿಮ್ಮ ದಳದ ನಾಲ್ಕು ಸರ್ವಧರ್ಮ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ.

12. ಸಂಪರ್ಕ ಸಂವಹನ :

ಅ) ಕಂಪ್ಯೂಟರ್ ಬಳಸುವುದನ್ನು ಕಲಿಯಿರಿ. ಅಂತರ್ಜಾಲದ ಬಗ್ಗೆ ಮತ್ತು ಮೊಬೈಲ್ ಅನುಕೂಲತೆ ಮತ್ತು ಅನಾನುಕೂಲತೆ ತಿಳಿಯಿರಿ.

ಆ) ಜಾಲತಾಣಗಳ ಬಳಕೆ ತಿಳಿದು ಭಾರತ ಸ್ಕೌಟ್ಸ್-ಗೈಡ್ಸ್‌ನ ಜಾಲತಾಣವನ್ನು ಸಂಪರ್ಕಿಸಿ.

13. ದೇಶಭಕ್ತಿ :

ಅ) ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ದಿನಚರಿ (ಲಾಗ್) ಪುಸ್ತಕ ತಯಾರಿಸುವುದು.

ಗೈಡ್ ತರಬೇತಿಯನ್ನು ಆಕರ್ಷಕವಾಗಿ ನೀಡಬೇಕು. ತರಬೇತಿ ಚಟುವಟಿಕೆ ಪೂರ್ಣವಾಗಿ ಸಂತಸವಾಗಿರಬೇಕು ದಳ ಸಭೆಗೆ ಬರುವ ಉತ್ಸಾಹ ನಿರಂತರವಾಗಿರಬೇಕು. ಈ ಕೆಳಗಿನ ತರಬೇತಿ ವಿಧಾನಗಳನ್ನು ಉಪಯೋಗಿಸಿ.

* ಪ್ರದರ್ಶನ – Demonstration
* ಪ್ರಾತ್ಯಕ್ಷಿತೆ – Practical
* ಸ್ವ-ಅಧ್ಯಯನ – Self Study
* ನಿಯೋಜನೆ – Assignment
* ವಿಚಾರಣೆ – Enquiry
* ಪರಿಕಲ್ಪ – Project
* ವಲಯ ಆವೃತ್ತಿ – Base Method
* ಕಥನ – Narration
* ಚರ್ಚೆ – Discussion
* ಮಸ್ತಿಷ್ಕ ತರಂಗ – Brain storming
* ನೆಲಹಾಸು ವಿಧಾನ – Sand bed Method

ಆಟ, ಹಾಡು, ಕಥೆ, ನಿದರ್ಶನ, ಪಟಾಲಂ ಚಟುವಟಿಕೆಗಳನ್ನು ಕಲಿಕೆಯ ತಂತ್ರವಾಗಿ ಆಸಕ್ತಿಯನ್ನು ಕಾಯ್ದಿರಿಸಲು ಬಳಸಬಹುದು.

ಪರೀಕ್ಷೆಗಳು ಎಂದ ತಕ್ಷಣ ನೆನಪಿಗೆ ಬರುವ ವಿಧಾನ ಬರವಣಿಗೆ. ಈ ಸಾಂಪ್ರದಾಯಿಕ ಪರೀಕ್ಷೆಗಳನ್ನು ಗೈಡಿಂಗ್‌ನಲ್ಲಿ ಹೊರತುಪಡಿಸಿ ಕೆಳಗಿನ ವಿಧಾನಗಳ ಮೂಲಕ ಪರೀಕ್ಷೆಗಳನ್ನು ಮಾಡಬಹುದು.

* ಆಟ – Game
* ರಸಪ್ರಶ್ನೆ – Quiz
* ಪ್ರಾತ್ಯಕ್ಷಿಕೆ – Practical
* ಪ್ರದರ್ಶನ – Demo
* ಆಶುಭಾಷಣ – Pick-Speak
* ವೀಕ್ಷಣೆ – Observation
* ಮಿಂಚು ಫಲಕ – Flash Card

ದಳ ತೆರೆದು ದಳ ಸಭೆ ಮಾಡುತ್ತಾ ಹೋದಂತೆ ನಿಮಗೆ ಹೊಸ ಹೊಸ ವಿಧಾನ ತಂತ್ರಗಳು ಹೊಳೆಯುತ್ತವೆ. ಅವುಗಳನ್ನು ಪ್ರಯೋಗಿಸಿ ನಿಮ್ಮ ಸ್ನೇಹಿತೆ ಗೈಡ್ ಶಿಕ್ಷಕಿಯರೊಡನೆ ಹಂಚಿಕೊಳ್ಳಿ.

ಚಟುವಟಿಕೆ :

ಪಠ್ಯ ಕ್ರಮವನ್ನು ಓದುವರು. ಗುಂಪು ಚರ್ಚೆ ಮಾಡಿ ಪ್ರತಿ ವಿಷಯಕ್ಕೂ ಸೂಕ್ತವಾದ ವಿಧಾನ ಮತ್ತು ತಂತ್ರಗಳನ್ನು ನಿರ್ಣಯಿಸುವರು, ಪಟ್ಟಿ ಮಾಡುವರು.

ಜಲ ಗೈಡ್ –

ಮೇಲಿನ ಪರೀಕ್ಷೆಗಳ ಜೊತೆಗೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಜಲ ಗೈಡಿಂಗ್‌ನ ಸಾಮಾನ್ಯ ತಿಳುವಳಿಕೆ ಪಡೆದಿರಬೇಕು.
2. ನೀರಿನಲ್ಲಿ ಸುರಕ್ಷತಾ ಕ್ರಮವನ್ನು ತಿಳಿದಿರಬೇಕು.
3. ನೀರಿನ ಭಯದಿಂದ ಮುಕ್ತರಾಗಬೇಕು.

ವಾಯು ಗೈಡ್ –

ಮೇಲಿನ ಪ್ರಥಮ ಸೋಪಾನ ಪರೀಕ್ಷೆಗಳ ಜೊತೆಯಲ್ಲಿ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ವಾಯು ಗೈಡಿಂಗ್‌ನ ಸಾಮಾನ್ಯ ತಿಳುವಳಿಕೆ ಪಡೆದಿರಬೇಕು.
2. ವಾಯುಯಾನಗಳ ಕನಿಷ್ಠ ಹತ್ತು ಮಾದರಿಯ ಛಾಯಾಚಿತ್ರ ಸಂಗ್ರಹಿಸುವುದು.
3. ವಾಯುದಳದ ಶ್ರೇಣಿ, ಪದಕ ಮತ್ತು ಧ್ವಜಗಳ ಬಗೆಗೆ ಸಾಮಾನ್ಯ ತಿಳುವಳಿಕೆ ಪಡೆದಿರಬೇಕು.
4. ರಾಷ್ಟ್ರದ ವಾಯುದಳ / ನಾಗರಿಕ ವಾಯುಯಾನಗಳನ್ನು ಗುರುತಿಸಬೇಕು.
5. ಗೈಡ್ ನಾಯಕಿ ನಿಗದಿಪಡಿಸಿದ ಅವಧಿಯಲ್ಲಿ ನೋಡಿದ ವಾಯುಯಾನಗಳ ಒಂದು ಸಮಗ್ರ ಕೋಶ / ದಿನಚರಿ ಪುಸ್ತಕ ತಯಾರಿಸಬೇಕು.

ಪ್ರವಚನ:12 ಕಾರ್ಯ ಯೋಜನೆ / ದಳ ಯೋಜನೆ
(Programme Planning / Company Meeting Planning)

ಉದ್ದೇಶ : ಪ್ರಶಿಕ್ಷಣಾರ್ಥಿಗಳು

* ಶಾಲೆಯಲ್ಲಿ ಕಾರ್ಯ ಯೋಜನೆ ತಯಾರು ಮಾಡುವ ಪಠ್ಯಕ್ರಮದ ವಾರ್ಷಿಕ ಯೋಜನೆಯಂತೆ ಎಂದು ತಿಳಿಯುವರು.
* ಬಾಲಕಿಯರ ಕಾರ್ಯಕ್ರಮ (ಗೈಡ್ ಕಾರ್ಯಕ್ರಮ) ಆಧರಿಸಿ ವಾರ್ಷಿಕ ಯೋಜನೆಯನ್ನು ತಯಾರು ಮಾಡಲು ಸಿದ್ಧರಾಗುವರು.
* ದಳ ಸಭೆ ಯೋಜನೆ ತಾವು ತಯಾರಿಸುವ ತರಗತಿಯ ಪಠ್ಯ ಟಿಪ್ಪಣಿ ಎಂದು ಅರಿಯುವರು.
* ಆಕರ್ಷಕವಾದ ಗೈಡ್ ದಳ ಸಭೆ ಯೋಜನೆಯನ್ನು (ಕಂಪನಿ ಮೀಟಿಂಗ್) ತಯಾರಿಸಲು ಸಮರ್ಥರಾಗುವರು.
* ಪ್ರದರ್ಶನ ಸಭೆಯಿಂದ ಮಾರ್ಗದರ್ಶನ, ಪ್ರೇರಣೆ ಪಡೆದು ಪ್ರದರ್ಶನ ದಳ ಸಭೆಯನ್ನು ನಡೆಸುವರು.
* ಗೈಡ್ ಸಭೆಗಳನ್ನು ವೀಕ್ಷಿಸಲು, ವಿಶ್ಲೇಷಿಸಲು, ವಿಮರ್ಶಿಸಲು ಸಮರ್ಥರಾಗುವರು.
* ಗೈಡ್ ಕೌಶಲಗಳನ್ನು ಗೈಡ್‌ಗಳಿಗೆ ಕಲಿಸಲು ಸಮರ್ಥರಾಗುವರು.
* ಈ ಮೂಲಕ ದಳದಲ್ಲಿ ಉತ್ತಮ ದಳ ಸಭೆ ನಡೆಸಲು ಸಜ್ಜಾಗುವರು.

ವಿಧಾನ :

ಹೇಳಿ, ಹೇಳಿಸಿ. ಅವರ ಶಾಲಾ ಕಾರ್ಯ ಯೋಜನೆ – ಪಠ್ಯ ಟಿಪ್ಪಣಿಗೆ ಹೋಲಿಸಿ.

ಬಾಲಕಿಯರ ಕಾರ್ಯಕ್ರಮದ ಯೋಜನೆ (Girl Program, Planning) :

ದಳವನ್ನು ಮೊದಲ ಬಾರಿಗೆ ತೆರೆದಾಗ ಸೇರುವ ಎಲ್ಲಾ ಬಾಲಕಿಯರು ಪ್ರವೇಶಿಗಳಾಗಿರುತ್ತಾರೆ. (Recruit) ಇವರನ್ನು ಚಿಕ್ಕ ಗುಂಪುಗಳು ಅಂದರೆ ಪಟಾಲಂನಾಗಿ ಮಾಡುವುದು. ಪಟಾಲಂ ನಾಯಕಿಯರಿಗೆ ಮುಂದಾಗಿ ತರಬೇತಿ ನೀಡತಕ್ಕದ್ದು. ಒಂದು ವರ್ಷ ಇವರಿಗೆ ಚೆನ್ನಾಗಿ ತರಬೇತಿ ನೀಡಿ ಪಟಾಲಂ ಚಟುವಟಿಕೆ ನಡೆಸಿ, ದಳಕ್ಕೆ ಪ್ರಗತಿಪರ ತರಬೇತಿ ನೀಡಲು ಮುಂದಕ್ಕೆ ಸಹಾಯಕವಾಗುತ್ತದೆ. ಇದಕ್ಕಾಗಿ ನೀವು ಪಠ್ಯ ಯೋಜನೆ ತಯಾರಿಸುವಂತೆ ವಾರ್ಷಿಕ ಯೋಜನೆಯನ್ನು ತಯಾರಿಸಿಕೊಳ್ಳಬೇಕು.

ಈ ಚಳವಳಿಯ ದಳದ ವಿಶೇಷತೆ ಎಂದರೆ ದಳವು ಎರಡನೇ ವರ್ಷದಿಂದ ಬಹುವರ್ಗವಾಗುವುದು. ಆದ್ದರಿಂದ ಬಹುವರ್ಗದ ಮಾದರಿ ಯೋಜನೆ ತಯಾರಿಸಬೇಕು. ಗೈಡ್‌ಗಳ ಪಠ್ಯಕ್ರಮ / ಬಾಲಕಿಯರ ಕಾರ್ಯಕ್ರಮ ಹೊಂದಿರುವ ಗುರಿ, ನೀತಿ, ನಿಯಮ, ಸಂಘಟನೆ ಭಾಗ–3ರಲ್ಲಿ ಗೈಡ್ಸ್ ವಿಭಾಗವನ್ನು ಆಧಾರವಾಗಿಟ್ಟುಕೊಳ್ಳಬೇಕು. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಾಲಕಿಯರ ವಯಸ್ಸು – 10+ ಇರುವುದರಿಂದ ಗೈಡ್ ದಳವನ್ನು ತೆಗೆಯಬೇಕು. ಈ ಅವಧಿಯಲ್ಲಿ ಪ್ರವೇಶದಿಂದ ದ್ವಿತೀಯ ಸೋಪಾನದವರೆಗೆ ಮೂಲ ತರಬೇತಿ ಪಡೆದ ತಾವು ಮಾಡಬಹುದು.

ದಳ ತೆರೆದ ನಂತರ :

ಮೊದಲ ವರ್ಷ	:	ಪ್ರವೇಶ – ಪ್ರಥಮ ಸೋಪಾನ
ಎರಡನೇ ವರ್ಷ	:	ದ್ವಿತೀಯ ಸೋಪಾನ – ಪ್ರವೇಶ, ಪ್ರಥಮ ಸೋಪಾನ
ಮೂರನೇ ವರ್ಷ	:	ತೃತೀಯ ಸೋಪಾನ – ದ್ವಿತೀಯ ಸೋಪಾನ, ಪ್ರವೇಶ, ಪ್ರಥಮ ಸೋಪಾನ

ಮೂರನೆ ವರ್ಷದಂತೆ ಇದೇ ರೀತಿ ಮುಂಬರುವ ವರ್ಷಗಳಲ್ಲೂ ಮುಂದುವರಿಯುವುದು. ಮೂರನೇ ವರ್ಷದಲ್ಲಿ ವಿವಿಧ ಹಂತದವರೂ ನಿಮ್ಮ ದಳದಲ್ಲಿ ಇರುತ್ತಾರೆ. ಹಿರಿಯ ಹಂತದವರು ಪಟಾಲಂ ನಾಯಕಿ ಮತ್ತು ಸಹಾಯಕ ನಾಯಕಿಯಾಗಿದ್ದರೆ ಉತ್ತಮ. ಇವರ ಸಹಾಯದಿಂದ ಉತ್ತಮ ತರಬೇತಿ ನೀಡಬಹುದು.

ಪ್ರೌಢ ಶಾಲೆ :

ಎ) **ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತೃತೀಯ ಸೋಪಾನ ಮುಗಿಸಿದ್ದರೆ**

8ನೇ ತರಗತಿಯಲ್ಲಿ	–	ರಾಜ್ಯ ಪುರಸ್ಕಾರ
9–10	–	ರಾಷ್ಟ್ರಪತಿ ಪುರಸ್ಕಾರ

ಬಿ) **ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಲ್ಲದೆ ಪ್ರೌಢ ಶಾಲೆಯಲ್ಲೇ ಗೈಡಿಂಗ್ ಪ್ರಾರಂಭ ಮಾಡಬೇಕಾಗಿದ್ದರೆ**

8ನೇ ತರಗತಿಯಲ್ಲಿ	–	ಪ್ರವೇಶ – ಪ್ರಥಮ – ದ್ವಿತೀಯ
9ನೇ ತರಗತಿಯಲ್ಲಿ	–	ದ್ವಿತೀಯ – ತೃತೀಯ – ರಾಜ್ಯ ಪುರಸ್ಕಾರ
10ನೇ ತರಗತಿಯಲ್ಲಿ	–	ರಾಷ್ಟ್ರಪತಿ ಪುರಸ್ಕಾರ

ಗಮನಿಸಿ :

ಬಾಲಕಿಯರ ಕಾರ್ಯಕ್ರಮ ಸರಿಯಾಗಿ ಯೋಜಿಸಿ ಅವರು ನಿಮ್ಮ ಮಾರ್ಗದರ್ಶನದಲ್ಲಿ ಮಾಡಬೇಕಾದ ಕೆಲಸ ಸಾಕಷ್ಟಿದೆ. ನೀವು ಅಧಿಕೃತವಾಗಿ ದ್ವಿತೀಯ ಸೋಪಾನದವರೆಗೆ ಮಾಡಬೇಕಾಗುವುದು. ನಿಮಗೆ ಆಸಕ್ತಿ ಇದ್ದು ಹೆಚ್ಚುವರಿ ಸ್ವ–ಅಧ್ಯಯನ ಮಾಡಿದರೆ ಮುಂದಿನ ಹಂತಕ್ಕೆ ಮುಂದುವರಿಯಬಹುದು. ಆದಷ್ಟು ಬೇಗ ಮುಂದಿನ ತರಬೇತಿ ಮಾಡಿಕೊಳ್ಳುವುದು ಸೂಕ್ತ.

ಬಾಲಕಿಯರ ಕಾರ್ಯಕ್ರಮಗಳ ಜೊತೆಗೆ ಕೆಳಗಿನ ಅಂಶಗಳನ್ನು ಸೇರಿಸಿ ತಿಂಗಳವಾರು ಹಂಚಿ, ಯೋಜನೆ ಸಿದ್ಧಪಡಿಸಿಕೊಳ್ಳಬೇಕು.

* ಹೊರಸಂಚಾರ, ಚಾರಣ, ಶಿಬಿರ, ಸೇವಾ ಕಾರ್ಯ ಯೋಜನೆ
* ದೀಕ್ಷಾ ಪ್ರಧಾನ ಸಮಾರಂಭ
* ಪ್ರಾವೀಣ್ಯತಾ ಪದಕ ಸಮಾರಂಭ
* ಪದಕ ಪ್ರದಾನ ಸಮಾರಂಭ
* ಸ್ವಾತಂತ್ರ್ಯ ದಿನಾಚರಣೆ – 15 ಆಗಸ್ಟ್ (ಅಧಿಕೃತವಾಗಿ ಭಾರತ್ ಗೈಡ್ಸ್, ಸ್ಕೌಟ್ಸ್ ಸಂಸ್ಥೆಯೊಡನೆ ವಿಲೀನವಾದ ದಿನ)
* ದಳದ ವಾರ್ಷಿಕೋತ್ಸವ – ಭವ್ಯ ಶಿಬಿರಾಗ್ನಿ
* ಚಿಂತನಾ ದಿನಾಚರಣೆ – 22 ಫೆಬ್ರವರಿ
* ವಿಶ್ವ ಪರಿಸರ ದಿನಾಚರಣೆ – 5 ಜೂನ್

* ಸ್ವಾತಂತ್ರ್ಯ ದಿನಾಚರಣೆ – 15 ಆಗಸ್ಟ್
* ಅಜ್ಜ–ಅಜ್ಜಿಯರ ದಿನಾಚರಣೆ – 14 ಸೆಪ್ಟೆಂಬರ್
* ಗಾಂಧಿ ಜಯಂತಿ – 2 ಅಕ್ಟೋಬರ್
* ಕನ್ನಡ ರಾಜ್ಯೋತ್ಸವ – 1 ನವೆಂಬರ್
* ಧ್ವಜ ದಿನಾಚರಣೆ – 7 ನವೆಂಬರ್
* ಮಕ್ಕಳ ದಿನಾಚರಣೆ – 14 ನವೆಂಬರ್
* ಶಿಕ್ಷಕರ ದಿನಾಚರಣೆ – 5 ಸೆಪ್ಟೆಂಬರ್
* ಹಿರಿಯ ನಾಗರಿಕರ ದಿನಾಚರಣೆ – 10 ಅಕ್ಟೋಬರ್
* ಮಹಿಳಾ ದಿನಾಚರಣೆ – 8 ಮಾರ್ಚ್

ಗಮನಿಸಿ :

ಇವುಗಳನ್ನೂ ಯೋಜನೆಯಲ್ಲಿ ಸೇರಿಸಿ. ಇವುಗಳನ್ನು ಆಚರಿಸಲಾಗದಿದ್ದರೆ ಕನಿಷ್ಠ ಈ ದಿನಗಳ ಮಹತ್ವವನ್ನು ದಳ ಸಭೆಯಲ್ಲಿ ಹೇಳಿ. ಈ ವಾರ್ಷಿಕ ಯೋಜನೆಯಲ್ಲಿ ನಿಮಗೆ ತಿಂಗಳಲ್ಲಿ ದೊರೆಯುವ ಅವಧಿಯ ಪ್ರಕಾರ ದಳ ಸಭೆಗಳನ್ನು ಹಂಚಿ ಹಾಕಿಕೊಳ್ಳಿ, ಅವಶ್ಯವಿದ್ದಲ್ಲಿ ಹೆಚ್ಚಿನ ದಳ ಸಭೆಯನ್ನು ನಡೆಸಿ, ದಿನಾಚರಣೆಗಳ ಪಟ್ಟಿಯನ್ನು ಗರ್ಲ್ ಗೈಡ್ ಮಾರ್ಗದರ್ಶಿಯಲ್ಲಿ ಕೊಟ್ಟಿದೆ. ನಿಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳಬಹುದು.

ವಾರ್ಷಿಕ ಗೈಡ್ ಬಾಲಕಿಯರ ಯೋಜನೆ (Annual Girl Program Planning)

ಕ್ರಮ ಸಂಖ್ಯೆ	ತಿಂಗಳು	ದೊರಕುವ ಅವಧಿ	ವಿಷಯ/ ಕೌಶಲ	ದೀಕ್ಷಾ ಸಮಾರಂಭ /ಹೊರ ಸಂಚಾರ/ ಪಂಥ ಸಂಚಲನ/ ಚಾರಣ, ಶಿಬಿರ	ಸೇವಾ ಕಾರ್ಯ	ಸ್ಕೌಟ್– ಗೈಡ್ ಮೇಳ	ಗೈಡಿಂಗ್ ನ ದಿನಾ ಚರಣೆ ಗಳು	ರಾಜ್ಯ ದಿನಾ ಚರಣೆ ಗಳು	ರಾಷ್ಟ್ರೀಯ ದಿನಾ ಚರಣೆ ಗಳು	ವಿಶ್ವ ದಿನಾ ಚರಣೆ ಗಳು	ಗೈಡ್ ಶಿಕ್ಷಕಿ ಸಹಿ

ದಳಸಭೆ = ಗೈಡ್ ತರಗತಿ (Company Meeting)

ಇದೊಂದು ಗೈಡ್ ತರಗತಿ. ಈ ಸಭೆ ಶಾಲಾ ತರಗತಿಗಳಿಗಿಂತ ಭಿನ್ನವಾಗಿರಬೇಕು. ಹೊರಾಂಗಣದಲ್ಲಿ ಸಭೆ ನಡೆಸಬೇಕು. ಆಕರ್ಷಕವಾಗಿರಬೇಕು. ಪ್ರಭಾವಯುತವಾಗಿರಬೇಕು. ಅನ್ವಯಿಕವಾಗಿರಬೇಕು.

ಚಟುವಟಿಕೆ :

ಮೂರು ತಿಂಗಳ ದಳ ಸಭೆ ಯೋಜನೆ ಮಾಡಿಸುವುದು

ದಳಸಭೆಯ ಯೋಜನೆ (Planning Company Meeting)

1. ಪ್ರಾರ್ಥನೆ ಮತ್ತು ಧ್ವಜ ವಂದನೆ : 02–08 ನಿ.
   ಧ್ವಜ ಸಮಾರಂಭ ಕರಗತವಾದ ಮೇಲೆ ಪ್ರಾರ್ಥನೆ ಮಾತ್ರ ಮಾಡಿಸಬಹುದು.
2. ಚೇತೋಹಾರಿ (Relaxers) 05–10 ನಿ.
   ಹಾಡು / ಅಭಿನಯ ಗೀತೆ / ನೃತ್ಯ / ಆಟ / ಕಥೆ / ಹಾಸ್ಯ / ಸರಳ ಕರಕೌಶಲ.
3. ಪುನರಾವರ್ತನೆ : 05–10 ನಿ.
   ಚಟುವಟಿಕೆ, ಆಟ, ರಸಪ್ರಶ್ನೆ ಬಳಸಿ
4. ಹೊಸ ವಿಷಯ : 15–20 ನಿ.
   ಅವಶ್ಯಕ ಸಾಮಗ್ರಿಗಳು, ಸೂಕ್ತ ವಿಧಾನ, ತಂತ್ರ
5. ಪಟಾಲಂ ಚಟುವಟಿಕೆ : 15–20 ನಿ.
   ಅಂದಿನ / ಹಿಂದಿನ ಚಟುವಟಿಕೆ ಪಟಾಲಂಗೆ ನೀಡುವುದು.
6. ಪಟಾಲಂ ಚಟುವಟಿಕೆ ಪ್ರಸ್ತುತಿ : 05–10 ನಿ.
   ಪಟಾಲಂವಾರು ಕೊಟ್ಟ ಚಟುವಟಿಕೆಗೆ ಪ್ರಸ್ತುತಿ, ಪ್ರದರ್ಶನ ಕಡ್ಡಾಯ
7. ಮೌಲ್ಯಮಾಪನ : 05–10 ನಿ.
   ಆಟ, ರಸಪ್ರಶ್ನೆ ಪ್ರಾತ್ಯಕ್ಷಿಕೆಗಳ ಮೂಲಕ
8. ಚೇತೋಹಾರಿ : 05–10 ನಿ.
   (ಆರಂಭದಲ್ಲಿ ಮಾಡಿಸಿದ್ದನ್ನು ಹೊರತುಪಡಿಸಿ ಮತ್ತೊಂದನ್ನು ಮಾಡಿ)
9. ಮುಕ್ತಾಯ :
   ಸೂಚನೆ ಇದ್ದರೆ ನೀಡಿ, ಚಿಕ್ಕ ಪ್ರಾರ್ಥನಾ ಗೀತೆ ಹಾಡಿ.
   ಒಂದು ನಿಮಿಷ ವೈಯಕ್ತಿಕ ಮೌನ ಪ್ರಾರ್ಥನೆ ಮಾಡಿಸಿ.
10. ವಂದಿಸುವ ಮೂಲಕ ಶುಭಕೋರಿಕೆ ವಿದಾಯ. ದಳ ಸಭೆಯ ಅವಧಿ : 1 ಘಂಟೆ

ದಳಸಭೆ ವೀಕ್ಷಣೆ

ವಿಷಯ : ಗೈಡ್ ಶಿಕ್ಷಕಿ ಹೆಸರು :..

ದಿನಾಂಕ :..

ಕ್ರ.ಸಂ.	ವಿಷಯಾಂಶಗಳು	ಗುಣಮಟ್ಟ/ಶ್ರೇಣಿ (Grade)	ಅನಿಸಿಕೆ
1.	ಪ್ರಾರಂಭ		
2.	ಚೇತೋಹಾರಿ		
3.	ಪುನರಾವರ್ತನೆ		
4.	ಹೊಸ ವಿಷಯ – ಪ್ರಸ್ತುತಿ – ಚಟುವಟಿಕೆ – ಭಾಗಿತ್ವ ಕಲಿಕೆ		
5.	ಪಟಾಲಂ ಚಟುವಟಿಕೆ ಸೂಕ್ತತೆಕಲಿಕೆ ವರದಿ / ಪ್ರದರ್ಶನ		
6.	ಮೌಲ್ಯಮಾಪನ ಚೇತೋಹಾರಿ		
7.	ಮುಕ್ತಾಯ		

ಶ್ರೇಣಿ: ಅತ್ಯುತ್ತಮ: 80=ಎ+; ಉತ್ತಮ: 60=ಎ; ತೃಪ್ತಿಕರ: 50=ಬಿ+; ಸಾಮಾನ್ಯ 40=ಬಿ; ಉತ್ತಮಪಡಿಸಿಕೊಳ್ಳಿ: 40=ಸಿ

ಗಮನಿಸಿ :

* ಮೌಲ್ಯಮಾಪನ ಆಟ ಚಟುವಟಿಕೆಯಾಗಿದ್ದರೆ ಚೇತೋಹಾರಿ ಕೈಬಿಡಬಹುದು. ಸಮಯದ ಹೊಂದಾಣಿಕೆ ಮಾಡಿಕೊಳ್ಳಿ.
* **ಪಟಾಲಂ ಚಟುವಟಿಕೆ** ಕಡ್ಡಾಯವಾಗಿ ಮಾಡಿಸಿ. ಅದು ನೈಜ ರೀತಿಯಲ್ಲಿ ಮಕ್ಕಳಲ್ಲಿ ಕಲಿಕೆ ತೀವ್ರಗೊಳಿಸುತ್ತದೆ, ಚಾರಿತ್ರ್ಯಾಭಿವೃದ್ಧಿ ಮಾಡುತ್ತದೆ, ಮೌಲ್ಯಗಳನ್ನು ಬೆಳೆಸುತ್ತದೆ. ಗೈಡಿಂಗ್ ಚಟುವಟಿಕೆಯ ಗುಣಮಟ್ಟ ಕಾಪಾಡಲು ಮತ್ತು ಚಳವಳಿಯ ಉದ್ದೇಶ ಸಾಧಿಸಲು ಇದು ಅತ್ಯವಶ್ಯಕ.
* ನಿಮ್ಮ ಗೈಡ್ ಕೌಶಲಗಳನ್ನು ಅಭಿವೃದ್ಧಿಗೊಳಿಸಿಕೊಳ್ಳುವುದು.
* ದಳ ಸಭೆ ಯೋಜನೆ, ವಿನ್ಯಾಸ ಮಾದರಿಯನ್ನು ಅವಶ್ಯವಿದ್ದಲ್ಲೆಲ್ಲಾ ಮಾರ್ಪಡಿಸಿಕೊಳ್ಳಿ.
* ನೀವು ಮಾಡುವ ದಳಸಭೆ ಮತ್ತು ಎಲ್ಲಾ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿ ಬರೆದು ಭಾವಚಿತ್ರಗಳು ಇದ್ದರೆ ಅಂಟಿಸಿ. ನಿಮ್ಮ ದಳದ ಕಾರ್ಯ ಸಾಕ್ಷಿಯಾಗಿ ದಿನಚರಿ ಪುಸ್ತಕವನ್ನಿಡಿ (Log book).

ಚಟುವಟಿಕೆ :

1. ಪ್ರಶಿಕ್ಷಕರು ಒಂದು ದಳ ಸಭೆ ನೀಡುವುದು.
2. ಪಟಾಲಂವಾರು ಪ್ರತಿಯೊಬ್ಬರು ದಳ ಸಭೆ ಯೋಜನೆ ತಯಾರಿಸುವುದು.
3. ಪ್ರಶಿಕ್ಷಣಾರ್ಥಿಗಳು ಎರಡು ದಳ ಸಭೆ ನೀಡುವುದು.

ಪ್ರವಚನ:13 ದಳ ತೆರೆಯುವುದು ನಡೆಸುವುದು ಹೇಗೆ ?
(How to Start & Run Company ?)

ಉದ್ದೇಶ : ಪ್ರಶಿಕ್ಷಣಾರ್ಥಿಗಳು – ಪ್ರವಚನದ ಅಂತ್ಯದಲ್ಲಿ

* ದಳ ತೆರೆಯಲು ಪ್ರೇರಣೆ ಹೊಂದುವರು.
* ದಳ ತೆರೆಯುವ ವಿಧಿವಿಧಾನಗಳನ್ನು ಅನುಸರಿಸುವರು.
* ದಾಖಲೆಗಳನ್ನು ಇಡುವರು.
* ದಳ ನಡೆಸಲು ಸಮರ್ಥರಾಗುವರು.

ವಿಧಾನ :

ಕಥನ – ಕೇಳಿ ಹೇಳಿ, ಶಾಲಾ ರೆಕಾರ್ಡ್‌ಗಳನ್ನು ಹೇಳಿಸಿ.

ದಳ ಆರಂಭಿಸುವುದು – ಮೂಲ ತರಬೇತಿಯ ನಂತರ ನೀವು ದಳವನ್ನು ಪ್ರಾರಂಭಿಸಬೇಕು. ಹೇಗೆ?

* ಮುಖ್ಯ ಶಿಕ್ಷಕರ / ಪ್ರಾಂಶುಪಾಲರ ಅನುಮತಿ ಪಡೆಯಬೇಕು.
* ಶಾಲೆಯ ಮಕ್ಕಳನ್ನು ಸೇರಿಸಿ ಚಳವಳಿಯ ಸಂಕ್ಷಿಪ್ತ ಪರಿಚಯ ಮಾಡಿಸಿ ಇದರಿಂದ ಆಗುವ ಲಾಭಗಳನ್ನು ಹೇಳಿ.
* ನಂತರ ತರಗತಿಗೆ ಸುತ್ತೋಲೆ ಕಳುಹಿಸಿ. ಹೆಸರು ಸಂಗ್ರಹಿಸಿ. ಅವರ ಸಭೆ ಕರೆದು ಪೋಷಕರ ಅನುಮತಿ ಪತ್ರ ತರಲು ಹೇಳಿ.
* ದಳಕ್ಕೆ ಪ್ರಸಿದ್ಧ ಮಹಿಳೆಯ ಹೆಸರನ್ನು ಇಡಿ. ಮುಖ್ಯ ಶಿಕ್ಷಕಿ/ ಸ್ಥಳೀಯ ಸಂಸ್ಥೆ/ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳನ್ನು ಆಹ್ವಾನಿಸಿ, ಶಿಕ್ಷಕ ವರ್ಗ ಮತ್ತು ಪೋಷಕ ವರ್ಗ, ಮಕ್ಕಳನ್ನು ಸೇರಿಸಿ ದಳದ ಉದ್ಘಾಟನೆ ಮಾಡಿ. ಒಬ್ಬರಾದರೂ ಸ್ಥಳೀಯ ಗೈಡರ್ಸ್ ಸಹಾಯದಿಂದ ಧ್ವಜ ಹಾರಿಸಿ. ದೀಪ ಬೆಳಗಿಸಿ. ಚಳವಳಿ ಪರಿಚಯಿಸಿ ಮಿಕ್ಕಂತೆ ಸಮಾರಂಭ ನೆರವೇರಿಸಿ.
* ದಳ ತೆಗೆದ ಬಗ್ಗೆ ಸ್ಥಳೀಯ ಹಾಗೂ ಜಿಲ್ಲಾ ಸಂಸ್ಥೆಗೆ ಮಾಹಿತಿ ನೀಡಿ. ನೋಂದಣಿ ಶುಲ್ಕ ಪಾವತಿಸಿ ಜಿಲ್ಲೆ ಮತ್ತು ರಾಜ್ಯ ಸಂಸ್ಥೆಯಲ್ಲಿ ದಳ ನೋಂದಾಯಿಸಿ. ಒಂದು ದಳ ಸಂಖ್ಯೆ (Charter Number) ಹಾಗು ನಿಮಗೆ ದಳ ನಡೆಸಲು ಪರವಾನಗಿ (warrent) ನೀಡುವರು. ಇದನ್ನು ಮತ್ತು ನಿಮ್ಮ ಮೂಲ ತರಬೇತಿಯಲ್ಲಿ ಪಡೆದ ಪ್ರಮಾಣ ಪತ್ರವನ್ನು ಭದ್ರವಾಗಿ ಕಾಪಾಡಬೇಕು. ದಳವನ್ನು ಪ್ರತಿವರ್ಷ ನವೀಕರಿಸಬೇಕು. ಮುಂದಿನ ತರಬೇತಿಗಳಿಗೆ ಈ ಮಾಹಿತಿಗಳು ಕಡ್ಡಾಯ.

ದಳ ನಡೆಸುವುದು :

* ಬಾಲಕಿಯರ ಕಾರ್ಯಕ್ರಮ ಯೋಜನೆ ಎ.ಪಿ.ಆರ್.ಓ. ಭಾಗ–3ರ ಪ್ರಕಾರ ವಾರ್ಷಿಕ ಕಾರ್ಯ ಯೋಜನೆ ತಯಾರಿಸಿ.

* ಪ್ರವೇಶಿಯು ಪ್ರವೇಶ ಮಾಡಿ ಸದಸ್ಯಳಾದ ಮೇಲೆ ಹಂತ ಹಂತವಾಗಿ ಪ್ರಗತಿಪರ ತರಬೇತಿ ನೀಡಬೇಕು.
* ಮಕ್ಕಳಿಗೆ ಪ್ರಗತಿಪರ ತರಬೇತಿ ನೀಡಲು ನೀವು ಪ್ರಗತಿಪರ ತರಬೇತಿ ಪಡೆಯಬೇಕು.
* ಜೊತೆಗೆ ದಳವನ್ನು ಸ್ಥಳೀಯದಿಂದ ರಾಜ್ಯದ-ರಾಷ್ಟ್ರದವರೆಗೂ ಕಾರ್ಯಕ್ರಮಗಳಿಗೆ ಕರೆದೊಯ್ಯಬೇಕು. ದಳ ಚೆನ್ನಾಗಿ ನಡೆಸಿದರೆ ಅಂತರ್‌ರಾಷ್ಟ್ರೀಯ ಕಾರ್ಯಕ್ರಮಕ್ಕೂ ಹೋಗಬಹುದು.
* ದಳ ಚೆನ್ನಾಗಿ ನಡೆಸಿದರೆ ನಿಮ್ಮನ್ನು ಗುರುತಿಸಿ ಜಿಲ್ಲೆ, ರಾಜ್ಯ ಹಾಗು ರಾಷ್ಟ್ರಮಟ್ಟದ ಪ್ರಶಸ್ತಿ ದೊರೆಯುವ ಅವಕಾಶವಿದೆ. ಈ ಸೇವೆ ಶಿಕ್ಷಕರ ರಾಜ್ಯ ಪ್ರಶಸ್ತಿಗೂ, ರಾಷ್ಟ್ರಪ್ರಶಸ್ತಿಗೂ ಪೂರಕವಾಗುತ್ತದೆ.
* ಮಕ್ಕಳಿಗೆ ರಾಜ್ಯ, ರಾಷ್ಟ್ರಪ್ರಶಸ್ತಿ ದೊರೆತರೆ ಕೆಲವೇ ವೈದ್ಯಕೀಯ, ಇಂಜಿನಿಯರಿಂಗ್ ಸೀಟ್ ಹೆಚ್ಚು ಅಂಕ ಗಳಿಸಿದ ಸ್ಕೌಟ್-ಗೈಡ್‌ಗಳಿಗೆ ದೊರೆಯುತ್ತದೆ. ಡಿಪ್ಲೊಮೊ, ಐ.ಟಿ.ಐ., ನರ್ಸಿಂಗ್, ಡಿ.ಇಡ್, ಬಿ.ಇಡ್ ಮುಂತಾದ ತರಬೇತಿಗಳಲ್ಲಿ ಆದ್ಯತೆ ಇರುತ್ತದೆ. ಕೆಲವು ಉದ್ಯೋಗಗಳಲ್ಲೂ ಆದ್ಯತೆ ಇರುತ್ತದೆ.

ಇಡಬೇಕಾದ ದಾಖಲೆಗಳು :

* ದಾಖಲಾತಿ ತಃಖ್ತೆ, ಹಾಜರಾತಿ ಪುಸ್ತಕ, ಸುತ್ತೋಲೆ ಪುಸ್ತಕ, ಪೋಷಕರ ಅನುಮತಿ ತಃಖ್ತೆ, ವಾರ್ಷಿಕ ಕಾರ್ಯ ಯೋಜನೆ ಪುಸ್ತಕ, ಗೌರವ ನ್ಯಾಯ ಸಭೆ ಪುಸ್ತಕ, ದಳ/ನಿಮ್ಮ ದಿನಚರಿ/ಲಾಗ್ ಪುಸ್ತಕ, ಆವಕ ಜಾವಕ ಪುಸ್ತಕ (From and To), ಹಣಕಾಸು ಆಯವ್ಯಯ ಪುಸ್ತಕ, ಛಾಯಾಚಿತ್ರ ಸ್ಮೃತಿ (Album), ಪ್ರಗತಿ ತಃಖ್ತೆ, ಸಂದರ್ಶಕರ ಪುಸ್ತಕ.

ಪ್ರವಚನ:14 ವಯೋಮಾನದ ಮನೋಧರ್ಮ
(Characteristic of Age Group)

ಉದ್ದೇಶ : ಪ್ರಶಿಕ್ಷಣಾರ್ಥಿಗಳು –

* ಗೈಡ್ ವಯೋಮಾನ ಮನೋಧರ್ಮವನ್ನು ತಿಳಿಯುವರು.
* ಮನೋಧರ್ಮಕ್ಕೆ ಅನುಗುಣವಾಗಿರುವ ಗೈಡ್ ಚಟುವಟಿಕೆಗಳನ್ನು ಗುರುತಿಸುವರು.
* ವಯೋಮಾನದ ಗೊಂದಲ ಮತ್ತು ಸಮಸ್ಯೆಗಳಿಗೆ ಗೈಡಿಂಗ್ ಒಂದು ನೈಜ ಚಿಕಿತ್ಸೆ ಎಂದು ಮನಗಾಣುವರು.

ವಿಧಾನ :

ಪಟಾಲಂ ಚರ್ಚೆ – ಪ್ರಸ್ತುತಿ – ಸಾರಾಂಶೀಕರಣ

ಬಿ.ಪಿ.ಯವರು ಪ್ರತ್ಯಕ್ಷ ಅನುಭವಿ ಮನೋವಿಜ್ಞಾನಿ. ಆದ್ದರಿಂದ ವಯೋಮಾನದ ಮನೋಧರ್ಮಕ್ಕೆ ಅನುಗುಣವಾಗಿ ಮಕ್ಕಳಿಗೆ ಕಾರ್ಯಕ್ರಮವನ್ನು ರೂಪಿಸಿದರು. ಈ ಕಾರ್ಯಕ್ರಮಗಳು 11 ರಿಂದ 16 ವರ್ಷದ ಹದಿಹರೆಯದ ಹೊಸಲಿನಲ್ಲಿ ಮಕ್ಕಳ ಸಮಸ್ಯೆಗಳಿಗೆ ನೈಜವಾಗಿ ಚಿಕಿತ್ಸೆ ನೀಡುತ್ತದೆ.

ಉದಾಹರಣೆಗೆ : 11 ರಿಂದ 16 ವರ್ಷದ ಸ್ಕೌಟ್–ಗೈಡ್ ಮಕ್ಕಳಿಗೆ ನೀಡಿರುವ ಧ್ಯೇಯ **'Be prepared' ಸದಾ ಸಿದ್ಧವಾಗಿರು** ಕೆಲಸಕ್ಕೆ ಮತ್ತು ಸೇವೆಗೆ

ಹೀಗೆಯೇ 5 ರಿಂದ 10 ವರ್ಷದ ಕಬ್ ಮತ್ತು ಬುಲ್‌ಬುಲ್ ಮಕ್ಕಳಿಗೆ **'ಕೈಲಾದುದನ್ನು ಉತ್ತಮವಾಗಿ ಮಾಡು'** ಎಂಬ ಧ್ಯೇಯ ನೀಡಿದ್ದಾರೆ. ಇವರ ವಯೋಮಾನದಲ್ಲಿ ಮಕ್ಕಳು ಅಮಿತ ಉತ್ಸಾಹ ಹೊಂದಿರುವರು. ಕೆಲಸ ಮಾಡಲು ಸದಾ ತವಕಿಸುತ್ತಾರೆ.

17 ರಿಂದ 20 ವರ್ಷದ ಯುವಕ–ಯುವತಿಯರಿಗೆ **'ಸೇವೆ' (Service)** ಸ್ವಂತ, ಮನೆಯ, ಸಮುದಾಯ ಸೇವೆಯನ್ನು ಧ್ಯೇಯವಾಗಿ ನೀಡಿದ್ದಾರೆ. ಇವರು ಪ್ರಬುದ್ಧ ಪ್ರಜೆಗಳಾಗಿ ರೂಪುಗೊಳ್ಳುವವರು.

ಮಕ್ಕಳಿಂದ ಯುವಕ–ಯುವತಿಯರವರೆಗೆ ಸೇವೆಯಲ್ಲಿ ತೊಡಗಿಸಿದರೆ ಒಳ್ಳೆಯ ಕಾರ್ಯಕ್ರಮ ನೀಡಿದರೆ ಅವರ ದೇಹ ಮತ್ತು ಮನಸ್ಸು ಆರೋಗ್ಯಕರವಾಗಿ ಬೆಳೆದು ದೇಶದ ಬಹುದೊಡ್ಡ ಮಾನವ ಸಂಪತ್ತಾಗುತ್ತಾರೆ. ಇದರಿಂದ ಜೀವನ ಶಿಕ್ಷಣ, ಜೀವನದ ಪ್ರತ್ಯಕ್ಷ ಅನುಭವ ದೊರೆಯುತ್ತದೆ. ಮಾನವೀಯ ಮೌಲ್ಯಗಳು ಬೆಳೆಯುತ್ತವೆ.

ಹದಿಹರೆಯದಲ್ಲಿ ದೈಹಿಕ ಬದಲಾವಣೆ, ಲೈಂಗಿಕ ಅಂಗಗಳ ಅಭಿವೃದ್ಧಿಯಾಗುತ್ತದೆ. ಇದರಿಂದಾಗಿ ಕೆಲವು ವಿಶಿಷ್ಟ ಲಕ್ಷಣಗಳು, ಗೊಂದಲಗಳು ಕಂಡು ಬರುತ್ತದೆ. ಇವುಗಳಿಗೆ ಹಿರಿಯರ ಮಾರ್ಗದರ್ಶನ ಅಗತ್ಯ. ಇವರಲ್ಲಿ ಅಪಾರ ಶಕ್ತಿ ಇರುತ್ತದೆ. ಈ ಶಕ್ತಿಗೆ ಪೂರಕವಾದ ಚಟುವಟಿಕೆಗಳನ್ನು ಆಕರ್ಷಕವಾಗಿ ನೀಡಬೇಕು. ಇಂತಹ ಒಂದು ಶಿಕ್ಷಣ ಕಾರ್ಯಕ್ರಮವೇ (ಚಟುವಟಿಕೆಯೇ) ಸ್ಕೌಟ್–ಗೈಡ್ ಕಾರ್ಯಕ್ರಮ. ಈ ಕಾರ್ಯಕ್ರಮ ಹರಿಹರೆಯದ ನೈಜ ಚಿಕಿತ್ಸೆಯಾಗಿದೆ.

ಚಟುವಟಿಕೆ :

ಕೆಳಗಿನ ಹದಿಹರೆಯದ ಸಮಸ್ಯೆಗಳಿಗೆ ಕಾರ್ಯಕ್ರಮದ ಮೂಲಕ ಪರಿಹಾರ ಸೂಚಿಸಿ	
ಲೈಂಗಿಕ ಗೊಂದಲ ಲೈಂಗಿಕ ಕುತೂಹಲ ವಿರುದ್ಧ ಲಿಂಗ ಆಕರ್ಷಣೆ ಸ್ವಾತಂತ್ರ್ಯಪ್ರಿಯತೆ / ನಾಚಿಕೆ–ಹಿಂಜರಿಕೆ ಅತಿಮಾತು / ಮೌನ ಅಮಿತ ಶಕ್ತಿ / ಅಮಿತ ಉತ್ಸಾಹ / ಅನಾಸಕ್ತಿ ಚಂಚಲಚಿತ್ತ / ಹಠಮಾರಿತನ ವ್ಯಕ್ತಿ ಪೂಜೆ ಕಟ್ಟಳೆಗಳ ದ್ವೇಷಿ ನಿಂದನೆಗೆ ಕಟ್ಟಾ ವಿರೋಧಿ ಪ್ರಶಂಸೆ ಪ್ರಿಯತೆ ಶೃಂಗಾರ ಪ್ರಿಯತೆ ಅನ್ಯ ಮನಸ್ಕತೆ / ಖಿನ್ನತೆ ಮುಚ್ಚು ಮನಸ್ಸು / ಬಿಚ್ಚು ಮನಸ್ಸು ತೀರ್ಮಾನ ಕೈಗೊಳ್ಳಲಾರಳು ಅಗ್ಗದ ಆಕರ್ಷಣೆಗೆ ಒಲವು ಹಗಲುಗನಸು ಸ್ಪರ್ಧೆ ಪ್ರಶ್ನಿಸುವ, ಎದುರು ವಾದಿಸುವ ಮನೋಭಾವ ಜವಾಬ್ದಾರಿತನ / ಬೇಜವಾಬ್ದಾರಿತನ ಬೇಡಿಕೆಗಳು ಹೆಚ್ಚು ಅಂಧ ಅನುಕರಣೆ ಮತ್ತೊಬ್ಬರನ್ನು ದೂಷಿಸುವುದು ತಪ್ಪು ಒಪ್ಪಿಕೊಳ್ಳದಿರುವುದು ಅಂತರಜಾಲ / ಮೊಬೈಲ್ ವ್ಯಸನ (Internet & Mobile Adiction)	

ಪ್ರವಚನ:15 ಮುಖ್ಯ ಶಿಕ್ಷಕರು/ಪ್ರಾಂಶುಪಾಲರು–ಪೋಷಕರು–ಸಾರ್ವಜನಿಕರು–ವಿದ್ಯಾ ಇಲಾಖೆ–ಸ್ಕೌಟ್–ಗೈಡ್ ಸಂಸ್ಥೆಗಳೊಡನೆ ಸಹಕಾರ (Co-operation from Head of the Institution Public, Parents)

ಮುಖ್ಯ ಶಿಕ್ಷಕರು/ಪ್ರಾಂಶುಪಾಲರು –

ನೀವು ದಳ ತೆರೆಯಲು ನಡೆಸಲು ಅನುಮತಿ ಮತ್ತು ಸಹಕಾರ ನೀಡಲು ಇವರೊಡನೆ ನೇರ ಸಂಪರ್ಕ ಅಗತ್ಯ. ಅವರಿಗೆ ನಿಮ್ಮ ಕಾರ್ಯಕ್ರಮದ ಮಾಹಿತಿ ನೀಡಬೇಕು. ಹಣ ಸಂಗ್ರಹಿಸುವ ಸಂದರ್ಭಗಳಲ್ಲಿ ಲಿಖಿತ ಅನುಮತಿ ಪಡೆಯಬೇಕು. ನಿಮ್ಮ ದಳ ಚಟುವಟಿಕೆಗಳಿಗೆ ಅವರನ್ನು ಆಹ್ವಾನಿಸುವುದರಿಂದ ಅವರ ವಿಶ್ವಾಸವನ್ನು ಗಳಿಸಬಹುದು. ನಿಮ್ಮ ದಿನಚರಿ ಪುಸ್ತಕದಲ್ಲಿ ವರ್ಷಕ್ಕೆ ಎರಡು ಬಾರಿ ಸಹಿ ಹಾಕಿಸಿ.

ಶಿಕ್ಷಕ ವರ್ಗ –

ಇವರಿಗೂ ಗೈಡಿಂಗ್ ಮಾಹಿತಿ, ಮಹತ್ವ ತಿಳಿಸಿ, ಅವಶ್ಯವಾದಲ್ಲೆಲ್ಲಾ ಅವರನ್ನು ತೊಡಗಿಸಿಕೊಳ್ಳಿ ಸಮಾರಂಭಗಳಿಗೆ ಆಹ್ವಾನಿಸಿ.

ಪೋಷಕ ವರ್ಗ –

ಪೋಷಕರಿಗೂ ಗೈಡಿಂಗ್ ಮಾಹಿತಿ, ಮಹತ್ವ ತಿಳಿಸಿ. ಮಕ್ಕಳ ಪ್ರಗತಿಯ ಬಗ್ಗೆ ಅರಿವು ನೀಡಿ. ಅವರನ್ನು ನಿಮ್ಮ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಿ ಹಾಗೂ ಆಹ್ವಾನಿಸಿ. ಅವರ ಸಹಕಾರ ನಿಮಗೆ ಅಗತ್ಯ. ನಿಮ್ಮ ಕಾರ್ಯದಲ್ಲಿ ವಿಶ್ವಾಸ ಮೂಡಿ ಅವರ ಮಕ್ಕಳಲ್ಲಿ ಪ್ರಗತಿಪರ ಬದಲಾವಣೆ ಕಂಡರೆ ಚಳವಳಿಯ ಪ್ರಸಾರಕ್ಕೆ ಮುಂದಾಗುವರು, ನಿಮ್ಮನ್ನು ಗೌರವಿಸುವರು.

ಸಾರ್ವಜನಿಕರು –

ದಳದ ಕಾರ್ಯಕ್ರಮದಲ್ಲಿ ಇವರ ಪಾತ್ರ ಸೀಮಿತ. ಆದರೆ ನಿಮ್ಮ ದಳದ ಸೇವಾ ಕಾರ್ಯಗಳಿಗೆ ಅದರಲ್ಲೂ ಸಮಾಜಸೇವೆ, ಸಮುದಾಯ ಸೇವೆಗೆ ಇವರ ಅಗತ್ಯವಿದೆ. ನಿಮ್ಮ ಸೇವೆಯನ್ನು ಅವರಿಗೆ ತಿಳಿಸಿದಾಗ ಸಾರ್ವಜನಿಕರು ಅಗತ್ಯವಿದ್ದಾಗ ನಿಮ್ಮ ದಳಗಳಿಗೆ ಸೇವೆ ಮಾಡಲು ಭಾಗವಹಿಸಲು ಆಹ್ವಾನಿಸುವರು. ಸ್ವಾತಂತ್ರ್ಯ ದಿನಾಚರಣೆ, ಆರೋಗ್ಯ ಶಿಬಿರ, ಸ್ವಚ್ಛತೆ, ಜಾಗೃತಿ ಕಾರ್ಯಕ್ರಗಳು. ಅವಶ್ಯವಿದ್ದಲ್ಲಿ ಧನ ಸಹಾಯವನ್ನು ಮಾಡುವರು.

ವಿದ್ಯಾ ಇಲಾಖೆ –

ಇದು ನಮ್ಮ ಪ್ರಾಯೋಜಕ (Sponsor) ಹಾಗು ಪೋಷಕ ಇಲಾಖೆ. ಇವರ ಸಹಕಾರ ಹೆಜ್ಜೆ ಹೆಜ್ಜೆಗೂ ಅವಶ್ಯಕ. ನಮ್ಮ ಕಾರ್ಯಕ್ರಮಗಳು, ತರಬೇತಿಗಳಿಗೆ ಅನುಮತಿ ನೀಡುವುದು. ಶಿಕ್ಷಕರು ಮತ್ತು ಮಕ್ಕಳನ್ನು ನಿಯೋಜಿಸುವುದು. ಅನುದಾನ ನೀಡುವುದು ಇತ್ಯಾದಿ ಮೂಲ ಸಹಕಾರವನ್ನು ನೀಡುವರು. ಇಲಾಖೆಯಿಂದ ಪರಿವೀಕ್ಷಣಾಧಿಕಾರಿಗಳು, ಸಂಪನ್ಮೂಲ ವ್ಯಕ್ತಿಗಳು, ಮೇಲಾಧಿಕಾರಿಗಳು ಸಂದರ್ಶನಕ್ಕೆ ಬಂದಾಗ ಶಾಲೆಯಲ್ಲಿ ದಳವಿರುವುದನ್ನು ಅವರ ಗಮನಕ್ಕೆ

ತನ್ನಿ, ಸಂದರ್ಶಕರ ಪುಸ್ತಕದಲ್ಲಿ ಟಿಪ್ಪಣಿ ಬರೆಸಿ. ಇದರಿಂದ ನಿಮ್ಮ ಕಾರ್ಯ ಗುರುತಿಸಲ್ಪಡುತ್ತದೆ.

ಭಾರತ ಸ್ಕೌಟ್-ಗೈಡ್ ಸಂಸ್ಥೆ ಪದಾಧಿಕಾರಿಗಳು –

ಇವರು ಸಂಸ್ಥೆಯನ್ನು ಬೆಳೆಸುವರು, ಅಭಿವೃದ್ಧಿಗೊಳಿಸುವರು, ಕಾರ್ಯನಿರ್ವಹಿಸಲು ಸಹಕಾರ ನೀಡುವರು. ಕಾಲ ಕಾಲಕ್ಕೆ ಕಾರ್ಯಕ್ರಮಗಳ ಸುತ್ತೋಲೆ, ನಿಯೋಜನ, ಲಭ್ಯವಿರುವಷ್ಟು ಅನುದಾನ ನೀಡುವರು. ನಿಮ್ಮ ಕಾರ್ಯಕ್ರಮ ಪರಿವೀಕ್ಷಿಸಿ, ಸಹಕಾರ, ಸಲಹೆ, ನೀಡುವರು. ನಿಮ್ಮ ಕಾರ್ಯಕ್ರಮ ಗುರುತಿಸಿ ಗೌರವಿಸುವರು. ನಿಮ್ಮ ಪ್ರಗತಿ, ತರಬೇತಿ ಕುರಿತು ಗಮನಹರಿಸುವರು. ಯಾವುದೇ ಪದಾಧಿಕಾರಿ ಬಂದರೂ ನಿಮ್ಮ ದಿನಚರಿ ತೋರಿಸಿ ಸಹಿ ಪಡೆಯುವುದು. ಸಂದರ್ಶಕರ ಪುಸ್ತಕದಲ್ಲಿ ಟಿಪ್ಪಣಿ ಬರೆಸುವುದು. ಇಂದು ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಮಾಡಿದೆ ಎಂದರೆ ಸಾಲದು, ದಾಖಲೆಗಳನ್ನು ಇಡಬೇಕಾದ, ಪ್ರದರ್ಶಿಸಬೇಕಾದ ಕಾಲ. "Display is as important as play".

ಇವರೆಲ್ಲರೊಡನೆ ಹಿತಮಿತ ಬಾಂಧವ್ಯ ಮತ್ತು ಸ್ನೇಹಮಯ ಸಂಪರ್ಕ ಹೊಂದಿರುವುದು ಅವಶ್ಯಕವಾದಾಗ ಸಹಕಾರ ಪಡೆಯುವುದು ಅಗತ್ಯ.

ಸ್ವಯಂ ಅಭಿವೃದ್ಧಿ (Self Support)

ಉದ್ದೇಶ : ಪ್ರಶಿಕ್ಷಣಾರ್ಥಿಗಳು ಪ್ರವಚನದ ಅಂತ್ಯದಲ್ಲಿ –

* ಪ್ರಗತಿಪರ ಗೈಡ್ ಶಿಕ್ಷಕಿಯಾಗಲು ಅನುಗೊಳ್ಳುವರು.
* ಸ್ವಯಂ ಅಭಿವೃದ್ಧಿಯ ಸಾಧನಗಳನ್ನು ತಿಳಿದುಕೊಳ್ಳವರು.

ವಿಧಾನ –

ಗುಂಪು ಚರ್ಚೆ – ಪ್ರಸ್ತುತಿ – ಸಾರಂಶೀಕರಣ

ಪ್ರಗತಿಪರ ತರಬೇತಿ –

ವಯಸ್ಕ ಮಹಿಳೆಯರ ತರಬೇತಿ	ನೀಡಬಹುದಾದ ತರಬೇತಿ
ಗೈಡ್ ನಾಯಕಿಯರ ತರಬೇತಿ–LT (G)	LT, ALT, Pre ALT, HWB ಮುಂದುವರಿದ ತರಬೇತಿ, ಮೂಲ ತರಬೇತಿಗೆ (ಗೈಡ್ ವಿಭಾಗ) ನಾಯಕಿಯಾಗಿ/ ಸಹಾಯಕಿಯಾಗಿ ಕಾರ್ಯನಿರ್ವಹಿಸಬಹುದು. ವಿಶೇಷ ತರಬೇತಿಯಲ್ಲಿ ಭಾಗವಹಿಸಬಹುದು, ನಡೆಸಬಹುದು.
ಸಹನಾಯಕಿಯರ ತರಬೇತಿ–ALT(G)	LT (G) ಮಾಡುವ ಎಲ್ಲಾ ಕಾರ್ಯವನ್ನು ಮಾಡಬಹುದು. ಆದರೆ HWB, Pre ALT, LT ಗೆ ನಾಯಕರಾಗಿ ತರಬೇತಿ ನೀಡಲು ಸಾಧ್ಯವಿಲ್ಲ. ಎಲ್ಲಾ ತರಬೇತಿಯುಲ್ಲೂ ಸಹ ನಾಯಕಿಯಾಗಿ ಕಾರ್ಯನಿರ್ವಹಿಸಬಹುದು.
ಪೂರ್ವ ಸಹನಾಯಕಿಯರ ತರಬೇತಿ– Pre ALT (G), HWB ತರಬೇತಿ	ದಳ ನಡೆಸುವುದು ಮುಖ್ಯ ಜವಾಬ್ದಾರಿ, ತರಬೇತಿ ಸಹಾಯಕರಾಗಿ ಕಾರ್ಯ ನಿರ್ವಹಿಸಬಹುದು. ರಾಷ್ಟ್ರಪತಿ ಗೈಡ್‌ಗಳನ್ನು ತಯಾರಿಸಬಹುದು.

ಮುಂದುವರೆದ ತರಬೇತಿ	ದಳ ನಡೆಸುವುದು, ತೃತೀಯ ಸೋಪಾನ, ರಾಜ್ಯ ಪುರಸ್ಕಾರ ಗೈಡ್ ತಯಾರಿಸುವುದು.
ಮೂಲ ತರಬೇತಿ	ದಳ ನಡೆಸುವುದು, ಪ್ರವೇಶದಿಂದ ದ್ವಿತೀಯ ಸೋಪಾನದ ವರೆಗೆ ಗೈಡ್‌ಗಳಿಗೆ ತರಬೇತಿ ನೀಡುವುದು.

ವಿಶೇಷ ತರಬೇತಿಯಲ್ಲಿ ಭಾಗವಹಿಸಬಹುದು. ಕೌನ್ಸಿಲರ್‌ಗಳಾಗಿ ತರಬೇತಿ ಪಡೆಯಬಹುದು.

* ಪ್ರತಿಜ್ಞೆ ಮತ್ತು ನಿಯಮವನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು.
* ಸಂಸ್ಥೆಯ ಬಗ್ಗೆ ಬದ್ಧತೆ ಮತ್ತು ಕಾಳಜಿ ಬೆಳೆಸಿಕೊಳ್ಳುವುದು.
* ಅಭ್ಯಾಸದಿಂದ ವಿಷಯ ಮತ್ತು ಕೌಶಲ ಪ್ರಭುತ್ವ ಬೆಳೆಸಿಕೊಳ್ಳುವುದು.
* ವಿಶೇಷ ತರಬೇತಿಗಳಿಗೆ ಕರೆ ಬಂದರೆ ಭಾಗವಹಿಸಿ, ಪರಿಣತಿ ಪಡೆಯುವುದು.
* ಗೋಷ್ಠಿ, ಸಮಾವೇಶ, ಅವಕಾಶ ದೊರೆತಾಗ ಅಂತರ್‌ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.
* ಅಂತರ್ಜಾಲದಲ್ಲಿ ರಾಜ್ಯ, ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರೀಯ ವೆಬ್‌ಸೈಟ್‌ಗಳಿವೆ. ಅವುಗಳನ್ನು ತೆರೆದು ಮಾಹಿತಿ ಸಂಗ್ರಹಿಸಿ, ಸಂಸ್ಥೆಯ ಮಾಸಿಕ ಪತ್ರಿಕೆ ಓದುವುದು.
* ಗೈಡ್ ಸಾಹಿತ್ಯ ಪೂರಕ ವಿಷಯ ಅಧ್ಯಯನ ಮಾಡುವುದು.
* ತಿಳಿಯುವ, ತಿಳಿಸುವ (Communication Skill) ಕೌಶಲ ಬೆಳೆಸಿಕೊಳ್ಳುವುದು.
* ಗೈಡರ್ಸ್‌ಗಳೊಡನೆ ಸಂಪರ್ಕ ಹೊಂದಿರುವುದು.
* ಸ್ಥಳೀಯ ಗೈಡ್ ದಳಗಳಿಗೆ ದಳದ ಸಹಿತ ವಿಚಾರ ಮತ್ತು ಚಟುವಟಿಕೆಗಳನ್ನು ವಿನಿಮಯ ಮಾಡಿಕೊಳ್ಳಲು ಭೇಟಿ ನೀಡುವುದು.
* ಸೃಜನಶೀಲ ಆಸಕ್ತಿಪೂರ್ಣ ಕಾರ್ಯಕ್ರಮ ನಡೆಸುವುದು. ದಳ ನಡೆಸಿ ಅನುಭವ ಪಡೆಯುವುದು. ಈ ಮೂಲಕ ಸ್ವಯಂ ಅಭಿವೃದ್ಧಿ ಹೊಂದುವುದು.

ಪ್ರವಚನ:16 ಗೈಡ್ ಶಿಕ್ಷಕಿಯರ ಜವಾಬ್ದಾರಿ
(Guide Captain & Her responsibilities)

ಉದ್ದೇಶ : ಪ್ರಶಿಕ್ಷಣಾರ್ಥಿಗಳು – ಪ್ರವಚನಕದ ಕೊನೆಯಲ್ಲಿ

* ತಮ್ಮ ಜವಾಬ್ದಾರಿಯನ್ನು ಚರ್ಚಿಸಿ ನಿರ್ಣಯಿಸಲು, ನಿರ್ವಹಿಸಲು ಸಮರ್ಥರಾಗುವರು.
* ದಳವನ್ನು ತೆಗೆದು ನಡೆಸಲು ನಿರ್ಧರಿಸುವರು.
* ಚಳವಳಿಯ ಬಗ್ಗೆ ಕಾಳಜಿ ಮತ್ತು ಬದ್ಧತೆಯನ್ನು ಪ್ರಕಟಿಸುವರು.

ವಿಧಾನ –

ಪಟಾಲಂ ಚರ್ಚೆ, ವರದಿ ಪ್ರಸ್ತುತಿ, ಸಾರಾಂಶೀಕರಣ. ಈ ವೇಳೆಗಾಗಲೇ ಅವರಿಗೆ ಅವರ ಜವಾಬ್ದಾರಿ ಅರಿವಾಗಿರುತ್ತದೆ.

ಗೈಡ್ ಶಿಕ್ಷಕಿಯರ ಜವಾಬ್ದಾರಿಗಳು –

* ದಳ ಆರಂಭಿಸುವುದು
* ದಳ ನೋಂದಾಯಿಸುವುದು, ಸನ್ನದು ಮತ್ತು ಚಾರ್ಟರ್‌ಗಳ ಸಂಖ್ಯೆ ಪಡೆಯುವುದು. ಪ್ರತಿವರ್ಷ ತಪ್ಪದೆ ಮೇ ತಿಂಗಳೊಳಗೆ ನೋಂದಾವಣೆಯನ್ನು ನವೀಕರಿಸುವುದು.
* ದಾಖಲೆ ಪುಸ್ತಕಗಳನ್ನು ಇಟ್ಟು ಕಾಲ ಕಾಲಕ್ಕೆ ದಾಖಲಿಸುವುದು.
* ಪ್ರಗತಿಪರ ತರಬೇತಿ ಪಡೆಯುವುದು.
* ಪ್ರಗತಿಪರ ತರಬೇತಿ ನೀಡುವುದು.
* ಗೈಡ್‌ಗಳನ್ನು ಅವರಿಗಾಗಿ ಏರ್ಪಡಿಸಿದ ಶಿಬಿರಗಳಿಗೆ ಕರೆದುಕೊಂಡು ಹೋಗುವುದು.
* ವಿಧಾನ ಮತ್ತು ತಂತ್ರಗಳನ್ನು ವಿಷಯಕ್ಕೆ ತಕ್ಕಂತೆ ಬಳಸುವುದು.
* ದಳ ಸಭೆಯನ್ನು ಸ್ವಂತಿಕೆ ಮತ್ತು ಸೃಜನಶೀಲತೆ ಪ್ರಯೋಗಿಸಿ ಆಕರ್ಷಕವಾಗಿ ಮಾಡುವುದು.
* ಸಂಸ್ಥೆಗಳಿಂದ ಬಂದ ಸುತ್ತೋಲೆಗಳಿಗೆ ತಕ್ಷಣವೇ ಉತ್ತರಿಸುವುದು. ವೈಯಕ್ತಿಕ, ಲಿಖಿತ, ದೂರವಾಣಿ ಯಾವುದೇ ಇರಲಿ, ವಿಷಯ ಸ್ಪಷ್ಟತೆ, ಸ್ಥಾನ ಗೌರವ, ವಿನಯವಂತಿಕೆ ಮತ್ತು ಶಿಸ್ತಿನಿಂದ ಕೂಡಿರಬೇಕು.
* ಕರೆ ಬಂದಾಗ ಸಾಧ್ಯವಾಗಷ್ಟು ಎಲ್.ಎ., ಡಿ.ಎ., ಎಸ್.ಎ. ಕೆಲವೊಮ್ಮೆ ಎನ್.ಎ.ಗಳಿಗೆ ಸಹಾಯ ಮಾಡುವುದು.
* ನಿಮ್ಮ ಎಲ್.ಎ.ಯನ್ನು ಬೆಳೆಸಲು ಮತ್ತು ಅದನ್ನು ಅಭಿವೃದ್ಧಿಗೊಳಿಸಲು ಸಹಾಯಹಸ್ತ ನೀಡಬೇಕು.
* ತೃತೀಯ (ಡಿ.ಎ.) ರಾಜ್ಯಪುರಸ್ಕಾರ (ಎಸ್.ಎ.) ರಾಷ್ಟ್ರಪತಿ ಪುರಸ್ಕಾರ (ಎನ್.ಎ.) ಇಂತಹ ಉನ್ನತ ತರಬೇತಿಗಳನ್ನು ಉತ್ತಮ ಗುಣಮಟ್ಟದಲ್ಲಿ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.
* ಮಾಧ್ಯಮಗಳು ಅವಶ್ಯವಿದ್ದಲ್ಲಿ ಬಳಸುವ ಪ್ರಯತ್ನ ಮಾಡಬೇಕು.

* ಮುಖ್ಯ ಶಿಕ್ಷಕ / ಪ್ರಾಂಶುಪಾಲರು, ಅಧ್ಯಾಪಕ ವರ್ಗ, ಪೋಷಕರು, ಸಾರ್ವಜನಿಕರು, ಪದಾಧಿಕಾರಿಗಳು, ಗೈಡರ್ಸ್ ಮತ್ತು ಸ್ಕೌಟರ್ಸ್‌ಗಳ ಸಹಕಾರ ಅವಶ್ಯವಿದ್ದಾಗ ಪಡೆಯಬೇಕು.

ಗೈಡ್ ಶಿಕ್ಷಕಿಯರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವ ಮೂಲಕ ಗೈಡ್ ಚಳವಳಿಯ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಕಾರಣರಾಗುತ್ತೀರಿ. ತನ್ಮೂಲಕ ದೇಶಕ್ಕೆ, ದೇವರಿಗೆ ಕರ್ತವ್ಯ ಸಲ್ಲಿಸಿದಂತಾಗುತ್ತದೆ. ಶಾಲೆಯಲ್ಲಿ ಸಮಾಜದಲ್ಲಿ ನಿಮ್ಮ ಘನತೆ, ಗೌರವ ಹೆಚ್ಚುತ್ತದೆ. ಚಳವಳಿ ಮತ್ತು ಶಿಕ್ಷಣ ಇಲಾಖೆಯು ನಿಮ್ಮ ಕಾರ್ಯದಕ್ಷತೆ ಗುರುತಿಸಿ ಪುರಸ್ಕಾರ ನೀಡುವ ಸಾಧ್ಯತೆಯು ಇದೆ. ಜವಾಬ್ದಾರಿ ನಿರ್ವಹಿಸುತ್ತಾ ಹೋದಂತೆ ಸ್ವಯಂ ಅಭಿವೃದ್ಧಿಯಾಗುತ್ತದೆ.

ಭಾಗ–3
ಜ್ಞಾನ–ಕೌಶಲ–ಪ್ರಾತ್ಯಕ್ಷಿಕೆಗಳು
ಪ್ರವಚನ:17 ಧ್ವಜಗಳು
(Flags)

ಉದ್ದೇಶ : ಪ್ರಶಿಕ್ಷಣಾರ್ಥಿಗಳು –

* ಧ್ವಜಗಳು ದೇಶದ ಹಾಗೂ ಸಂಘಟನೆಗಳ ಪ್ರತೀಕವೆಂದು ತಿಳಿದು ಗೌರವಿಸುವರು.
* ಧ್ವಜಗಳು ಸದಸ್ಯರನ್ನು ಒಗ್ಗೂಡಿಸುವ ಹಾಗೂ ಸ್ವಂತಿಕೆಯನ್ನು ಸಾರುವ ಸಂಕೇತ ಎಂದು ಮನಗಾಣುವರು.
* ಮಕ್ಕಳಲ್ಲಿ ರಾಷ್ಟ್ರ ಗೌರವ ಮೂಡಿಸುವರು.
* ಧ್ವಜವನ್ನು ಏರಿಸಿ ಹಾರಿಸಲು, ಇಳಿಸಲು ಸಮರ್ಥರಾಗುವರು.
* ಚಿತ್ರ ಬಿಡಿಸಿ, ಬಣ್ಣ ತುಂಬಲು ಸಮರ್ಥರಾಗುವರು.
* ಧ್ವಜದ ಮಹತ್ವ ತಿಳಿದು, ವಿವರಿಸುವರು.
* ಧ್ವಜಗೀತೆಗಳನ್ನು ಅರ್ಥೈಸುವರು.

1. **ರಾಷ್ಟ್ರ ಧ್ವಜ :** ಅಳತೆ ಅಗಲ x ಉದ್ದ 3:2
ತ್ರಿವರ್ಣದ 3 ಸಮನಾಂತರ ಪಟ್ಟಿ

ಬಣ್ಣಗಳು :

ಕೆಸರಿ : ತ್ಯಾಗ, ಶೌರ್ಯ, ಧೈರ್ಯಗಳ ಸಂಕೇತ

ಬಿಳಿ : ಶಾಂತಿ, ಸತ್ಯ, ಪರಿಶುದ್ಧತೆಯ ಸಂಕೇತ

ನೀಲಿ : ಪ್ರೀತಿ, ವೈಶಾಲ್ಯತೆಯ ಸಂಕೇತ

ಹಸಿರು : ಪ್ರಗತಿ, ಪ್ರಾಕೃತಿಕ ಸಂಪತ್ತು, ಕೃಷಿಯ ಸಂಕೇತವಾಗಿದೆ

ಅಶೋಕ ಚಕ್ರ :

ಚಕ್ರ : ಅಶೋಕ ಸ್ಥಂಭದಿಂದ ತೆಗೆದುಕೊಳ್ಳಲಾಗಿದೆ.
ಸದಾ ಪ್ರಗತಿಯತ್ತ ಸಾಗಬೇಕೆಂಬ ಸಂಕೇತ.

24 ಕಡ್ಡಿ : 24 ಘಂಟೆಯ ಪ್ರತೀಕ, ಸದಾ ಧರ್ಮ ಪಾಲಿಸು.

ಗಮನಿಸಿ : ರಾಷ್ಟ್ರ ಧ್ವಜ ವಿಶ್ವಗೈಡ್ ಧ್ವಜದ ಇತಿಹಾಸ
ಗರ್ಲ್ ಗೈಡ್ ಮಾರ್ಗದರ್ಶಿ ಪುಸ್ತಕದಿಂದ ತಿಳಿಯಿರಿ.



ರಾಷ್ಟ್ರ ಧ್ವಜ



ಅಶೋಕ ಚಕ್ರ

2. ವಿಶ್ವ ಗೈಡ್ ಧ್ವಜ : ಅಳತೆ ಅಗಲ 3 x ಉದ್ದ 2 ಹಿನ್ನೆಲೆ ಕಡು ನೀಲಿ ಆಕಾಶದ ಬಣ್ಣ

ಬಣ್ಣಗಳು :

ನೀಲಿ : ಆಕಾಶದ ಪ್ರತೀಕ, ಪ್ರೀತಿ ವೈಶಾಲ್ಯತೆ ಭ್ರಾತೃತ್ವ ಸಂಕೇತ

ಬಿಳಿ : ಶಾಂತಿ, ಸತ್ಯ, ಪರಿಶುದ್ಧತೆಯ ಸಂಕೇತ

ಹಳದಿ : ಸೂರ್ಯನ ಪ್ರತೀಕ. ಸೂರ್ಯನಂತೆ ಕೆಲಸದ ಮೂಲಕ ಪ್ರಕಾಶಿಸಿ.



ವಿಶ್ವಗೈಡ್ ಧ್ವಜ

ವಿಶ್ವ ಗೈಡ್ ಲಾಂಛನ :

1. ತ್ರಿದಳ : ಪ್ರತಿಜ್ಞೆಯ ಮೂರು ಅಂಶದ ಪ್ರತೀಕ.
2. ತಾರೆಗಳು : ಪ್ರತಿಜ್ಞೆ ಮತ್ತು ನಿಯಮಗಳ ಪ್ರತೀಕ ಇವುಗಳನ್ನು ಆಚರಣೆ ಮೂಲಕ ಪ್ರಕಾಶಿಸಿ.
3. ದರ್ಶಿನಿ : ದಿಕ್ಸೂಚಿಯ ಸೂಜಿಯ ಪ್ರತೀಕ ಗುರಿಯತ್ತ ಸನ್ಮಾರ್ಗದಲ್ಲಿ ನೇರವಾಗಿ ಸಾಗಿ.
4. ಜ್ವಾಲೆ : ಪ್ರೀತಿ, ಸ್ನೇಹ, ಮಾನವೀಯತೆಯ ಪ್ರತೀಕ
5. ತೆರೆದ ವೃತ್ತ: ವಿಶ್ವದ ಎಲ್ಲಾ ಮಹಿಳೆಯರನ್ನು, ಹೆಣ್ಣು ಮಕ್ಕಳನ್ನು ಯಾವ ಬೇಧವೂ ಇಲ್ಲದೆ ಈ ಚಳವಳಿಯು ಸ್ವಾಗತಿಸುತ್ತದೆ.
6. ಚೌಕುಳಿಗಳು: ಧ್ವಜದ ಬಲ ಕೆಳ ಮೂಲೆಯಲ್ಲಿ ಹಳದಿ ಚೌಕುಳಿ ಹಾಗು L ಆಕೃತಿಯ ಬಿಳಿ ಚೌಕುಳಿಗಳಿವೆ. 3 ಹಳದಿ ಚೌಕುಳಿ ಪ್ರತಿಜ್ಞೆಯ ಮೂರು ಅಂಶ. L ಆಕೃತಿ ವಿಶ್ವಶಾಂತಿ ಪ್ರಸಾರ ಮಾಡುವ ಸಂಕೇತವಾಗಿದೆ



ವಿಶ್ವಗೈಡ್ ಲಾಂಛನ

3. ಭಾರತ ಸ್ಕೌಟ್-ಗೈಡ್ ಧ್ವಜ : ಅಳತೆ ಅಗಲ 3 x ಉದ್ದ 2 ಹಿನ್ನೆಲೆ ಕಡು

ಭಾರತದಲ್ಲಿ ಗೈಡ್ ಸ್ಕೌಟ್‌ನೊಡನೆ ವಿಲೀನವಾಗಿದೆ. ಆದ್ದರಿಂದ ಭಾರತದಲ್ಲಿ ಸ್ಕೌಟ್-ಗೈಡ್ ಧ್ವಜವನ್ನು ಭಾರತ ಸ್ಕೌಟ್-ಗೈಡ್ ಧ್ವಜವೆಂದು ಕರೆಯುತ್ತೇವೆ. ಬಣ್ಣಗಳ ಸಂಕೇತ ವಿಶ್ವ ಗೈಡ್ ಧ್ವಜದಲ್ಲಿ ಕೊಡಲಾಗಿದೆ.



ಭಾರತ್ ಸ್ಕೌಟ್-ಗೈಡ್ ಧ್ವಜ

ಲಾಂಛನ : ಇದು ಸ್ವತಂತ್ರ ಲಾಂಛನವಲ್ಲ.

1. ತ್ರಿದಳ : ವಿಶ್ವ ಗೈಡ್ ಧ್ವಜದ ಲಾಂಛನದಿಂದ ಪಡೆದ ಸಂಕೇತ.
2. ಫ್ಲೂರಡೆಲಿಸ್ : ವಿಶ್ವ ಸ್ಕೌಟ್ ಲಾಂಛನದಿಂದ ತೆಗೆದುಕೊಂಡ ಸಂಕೇತ.
3. ಚಕ್ರ : ರಾಷ್ಟ್ರ ಧ್ವಜದಿಂದ ಪಡೆದ ಸಂಕೇತ.
4. ಬಂಧಕ : ವಿಶ್ವ ಸ್ಕೌಟ್-ಗೈಡ್ ಸಂಸ್ಥೆಗಳು ಭಾರತದಲ್ಲಿ ವಿಲೀನಗೊಂಡಿದೆ ಎಂದು ಬಂಧಕ ಸೂಚಿಸುತ್ತದೆ.



ಭಾರತ್ ಸ್ಕೌಟ್-ಗೈಡ್ ಲಾಂಛನ

ದಳ ಧ್ವಜ / ಗುಂಪಿನ ಧ್ವಜ :

ಭಾರತ ಸ್ಕೌಟ್-ಗೈಡ್ ಧ್ವಜ 120 : 80 ಪ್ರಮಾಣದಲ್ಲಿರಬೇಕು. ಅದರ ಕೆಳಗೆ ದಳದ / ಗುಂಪಿನ ಹೆಸರು ಸರಳ ರೇಖೆಯಲ್ಲಿ ಹೊಲೆದಿರಬೇಕು. ಇದನ್ನು ದಳಗಳ / ಕಾರ್ಯಗಳಲ್ಲಿ ಹಾರಿಸಬೇಕು.

ಧ್ವಜ ಗೌರವ :

* ಸ್ಥಳೀಯ, ಜಿಲ್ಲೆ, ರಾಜ್ಯ ಮಟ್ಟದ, ರಾಷ್ಟ್ರಮಟ್ಟದ ಸಮಾರಂಭಗಳಲ್ಲಿ ಭಾರತ್ ಸ್ಕೌಟ್ಸ್-ಗೈಡ್ಸ್. ಧ್ವಜವನ್ನು ಹಾರಿಸಲಾಗುವುದು. ರಾಷ್ಟ್ರಧ್ವಜವನ್ನು ಮೊದಲ ಸ್ಥಾನದಲ್ಲಿ ಹಾರಿಸಿ ಅದರ ಎಡಕ್ಕೆ ಭಾರತ್ ಸ್ಕೌಟ್ಸ್-ಗೈಡ್ಸ್. ವಿಶ್ವ ಸ್ಕೌಟ್ ಧ್ವಜ, ವಿಶ್ವ ಗೈಡ್ ಧ್ವಜ ಸಮಾನ ಎತ್ತರದಲ್ಲಿ ಹಾರಿಸಬೇಕು. ರಾಷ್ಟ್ರಧ್ವಜ ಸ್ತಂಭವು ಉಳಿದ ಸ್ತಂಭಗಳಿಗಿಂತ 1/2 ಅಡಿ ಎತ್ತರವಿರಬೇಕು.
* ರಾಷ್ಟ್ರ ವ್ಯಕ್ತಿಗಳ ವಿಧಿವಶರಾದಾಗ ರಾಷ್ಟ್ರ ಧ್ವಜವನ್ನು ಅರೆಮಟ್ಟಕ್ಕೆ ಹಾರಿಸಲಾಗುವುದು.
* ಹರಿದು ಹೋದಾಗ, ಬಣ್ಣಗೆಟ್ಟಾಗ ಧ್ವಜವನ್ನು ಬಳಸಬಾರದು. ಅದನ್ನು ಸನ್ಮಾನ ಪೂರ್ವಕವಾಗಿ ವಿಧಿಬದ್ಧವಾಗಿ ಹೂಳಬೇಕು, ಇಲ್ಲವೇ ಸುಟ್ಟು ಸಂಸ್ಕಾರ ಮಾಡಬೇಕು.
* ಧ್ವಜವನ್ನು ತಲೆ ಕೆಳಗೆ ಹಾರಿಸುವುದು ಅಗೌರವ.
* ಧ್ವಜ ಸೂತ್ರ ಹಾರಿಸುವ ಮುನ್ನ ಸೂತ್ರ ಸುಸ್ಥಿತಿಯಲ್ಲಿದೆ ಎಂದು ಖಾತ್ರಿ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಸೂತ್ರ ಹರಿದು ಕೆಳಗೆ ಬೀಳುತ್ತದೆ, ಇದೂ ಕೂಡ ಅಗೌರವ.
* ಧ್ವಜಾರೋಹಣ ಮತ್ತು ಅವರೋಹಣವನ್ನು ಗೊತ್ತುಪಡಿಸಿದ ಸಮಯಕ್ಕೆ ಸರಿಯಾಗಿ, ವಿಧಿಬದ್ಧವಾಗಿ ಮಾಡಬೇಕು.
* ಧ್ವಜವನ್ನು ಮಳೆಯಲ್ಲಿ ನೆನೆಯಲು ಬಿಡಬಾರದು.
* ನಮ್ಮ ರಾಷ್ಟ್ರ ಧ್ವಜವು ನಮ್ಮ ದೇಶದ ಜನರೆಲ್ಲ ಒಂದುಗೂಡಿಸುವ ಮಹತ್ವದ ಸಂಕೇತ. ಹಾಗೆಯೇ ಸದಸ್ಯರಿಗೆ ಚಳವಳಿಯ ಧ್ವಜ ಮಹತ್ವವಾದುದು. ಇವುಗಳಿಗೆ ಗೌರವ ಸಲ್ಲಿಸುವುದು ನಮ್ಮ ಕರ್ತವ್ಯ.

ಎರಡು ಗುಂಪು ಮಾಡಿ

ಚಟುವಟಿಕೆ :

1. ಗುಂಪು ಒಂದು ಬಣ್ಣ ಮತ್ತು ಚಿತ್ರ ಸಂಕೇತದ ಹೆಸರು ಹೇಳಲಿ, ಇನ್ನೊಂದು ಗುಂಪು ಅದರ ಅರ್ಥ ಹೇಳಲಿ.
2. ಲಾಂಛನ ಬರೆಯುವ ಸ್ಪರ್ಧೆ.
3. ವಿಶ್ವ ಗೈಡ್ ಧ್ವಜ ಮತ್ತು ಭಾರತ ಸ್ಕೌಟ್-ಗೈಡ್ ಧ್ವಜಗಳ ಭಾಗಗಳನ್ನು ಸೇರಿಸಿ ಪಟ್ಟಿಕೊಡಿ. ಅವರು ಆಯ್ದು ವಿಶ್ವ ಗೈಡ್ ಧ್ವಜ ಮತ್ತು ಭಾರತ ಸ್ಕೌಟ್-ಗೈಡ್ ಧ್ವಜಗಳ ಭಾಗಗಳನ್ನು ಪಟ್ಟಿ ಮಾಡಲಿ.
4. ಲಾಂಛನಗಳನ್ನು ದೊಡ್ಡದಾಗಿ ಮಾಡಿ ತುಂಡುಗಳಾಗಿ ಕತ್ತರಿಸಿ. 3 ಅಥವಾ 4 ಸೆಟ್ ಮಾಡಿಸಿ. ಪಟಾಲಂಗೆ ಹಂಚಿ. ಅವರು ಲಾಂಛನ ಜೋಡಿಸಲಿ.

ಪ್ರವಚನ:18 ಸಮವಸ್ತ್ರ
(Uniform)

ಉದ್ದೇಶ : ಪ್ರಶಿಕ್ಷಣಾರ್ಥಿಗಳು –

* ಸಮವಸ್ತ್ರದ ವಿನ್ಯಾಸಗಳ, ಬಣ್ಣಗಳ ಮಹತ್ವವನ್ನು ತಿಳಿಸಲು ಸಮರ್ಥರಾಗುವರು.
* ವಿನ್ಯಾಸದ ಅನುಕೂಲತೆಯನ್ನು ವಿವರಿಸಲು ಸಮರ್ಥರಾಗುವರು.
* ಸಮವಸ್ತ್ರಕ್ಕೆ ಬದ್ಧರಾಗಿ ಸಮವಸ್ತ್ರವನ್ನು ಅಚ್ಚುಕಟ್ಟಾಗಿ, ಹೆಮ್ಮೆಯಿಂದ ಧರಿಸುವರು.
* ಸಮವಸ್ತ್ರವು ಚಳವಳಿಯ ಘನತೆಯ ಪ್ರತೀಕವೆಂದು ಮನಗಾಣುವರು.
* ಮಕ್ಕಳಿಗೆ ಸರಿಯಾದ ಸಮವಸ್ತ್ರ ಸಿದ್ಧಗೊಳಿಸಲು ಸಮರ್ಥರಾಗುವರು.
* ಸಮವಸ್ತ್ರದ ಮಹತ್ವ ತಿಳಿಸುವರು.

ವಿಧಾನ : ಕಥನ, ಪ್ರವಚನ, ಹೇಳಿ, ಹೇಳಿಸಿ

ಗೈಡ್ ಶಿಕ್ಷಕಿಯರ ಸಮವಸ್ತ್ರ : ಇದರಲ್ಲಿ 3 ವಿಧಗಳಿವೆ.

1. **ಸೀರೆ ಕುಪ್ಪಸ :**

   ಸೀರೆ : ಕಡು ಆಕಾಶ ನೀಲಿ ಬಣ್ಣ, ಅಪಾರದರ್ಶಕ ಸಾದಾ (plain) ಸೀರೆ.

   ಕುಪ್ಪಸ : ಬಿಳಿಯ ಅಪಾರದರ್ಶಕ ಬಟ್ಟೆಯಿಂದ ಹೊಲಿಸುವುದು. ಎರಡು ಮುಚ್ಚಳಿಕೆ ಇರುವ ಮೇಲು ಜೇಬು. ಮೊಣಕೈಯಿಂದ 8 ಸೆಂ.ಮೀ. ಮೇಲಿರುವ ಮೇಲ್ಮುಖವಾಗಿ ತೋಳು ಮಡಚಿರುವ ಅರೆತೋಳು. 4 ಸೆಂ.ಮೀ. ಅಗಲದ ಕ್ರೀಡಾ ಕೊರಳು ಪಟ್ಟಿ, 2 ಭುಜ ಪಟ್ಟಿಗಳು, ಕುಪ್ಪಸದ ಉದ್ದ ಸೊಂಟದ ಕೆಳಗೆ 8 ಸೆಂ.ಮೀ. ಇರಬೇಕು. ಕುಪ್ಪಸ ಬಿಗಿಯಾಗಿರಬಾರದು. 8 ಸೆಂ.ಮೀ. ಪಾರ್ಶ್ವ ಸೀಳಿರಬೇಕು.

2. **ಸಲ್ವಾರ್ ಕಮೀಜ್, ದುಪ್ಪಟ :**

   ಸಲ್ವಾರ್ ಮತ್ತು ಕಮೀಜ್ ಅಪಾರದರ್ಶಕ ಬಿಳಿಯ ಬಟ್ಟೆಯಿಂದ ಹೊಲಿಸಬೇಕು.

   ಕಮೀಜ್ : ತೋಳು ಕೊರಳಪಟ್ಟಿ, ಭುಜಪಟ್ಟಿ ಎರಡು ಮುಚ್ಚಳವಿರುವ ಮೇಲು ಜೇಬುಗಳು ಕುಪ್ಪಸದಂತೆ ಇರಬೇಕು. ಇದರ ಜೊತೆಗೆ ಎರಡು ಪಾರ್ಶ್ವ ಜೇಬು ಪಾರ್ಶ್ವ ಸೀಳು ಇರಬೇಕು. ಇದು ಮೊಣಕಾಲ ಕೆಳಗೆ 8 ಸೆಂ.ಮೀ. ಇರಬೇಕು.

   ದುಪ್ಪಟ : ಕಡು ಆಕಾಶ ನೀಲಿ ಬಣ್ಣದ ಸಾದಾ ಅಪಾರದರ್ಶಕ ಬಟ್ಟೆಯದಾಗಿರಬೇಕು.

   ಈ ಎರಡರಲ್ಲಿ ಒಂದು ಸಮವಸ್ತ್ರವನ್ನು ಧರಿಸಬೇಕು.

3. **ಮಿಡಿ ಲಂಗ ಮತ್ತು ಕುಪ್ಪಸ :**

   ಇದನ್ನು ಸಾಮಾನ್ಯವಾಗಿ ನೈರುತ್ಯ ರಾಜ್ಯಗಳವರು (North Eastem States) ಧರಿಸುವ ಸಮವಸ್ತ್ರ.

ಸಮವಸ್ತ್ರದ ಜೊತೆ ಧರಿಸಬೇಕಾದ ಕಡ್ಡಾಯ ಭಾಗಗಳು :

1. **ಕಂಠವಸ್ತ್ರ (Scarf) :** ಮುಮ್ಮೂಲೆ ಪಟ್ಟಿ. ಇದು ಸಮವಸ್ತ್ರದ ವೈಶಿಷ್ಟ್ಯ. ಇದು ಕತ್ತನ್ನು ಬಿಸಿಲಿನಿಂದ ರಕ್ಷಿಸುತ್ತದೆ, ಪ್ರಥಮ ಚಿಕಿತ್ಸೆಗೆ ಉಪಯೋಗಕ್ಕೆ ಬರುತ್ತದೆ. ಇದನ್ನು ಕವುಂಗರ (Woggle) ಹಾಕಿ ಅಂದವಾಗಿ ಧರಿಸಲಾಗುವುದು. ನೇರಳೆ, ಹಸಿರು, ಹಳದಿ ಹೊರತುಪಡಿಸಿ ನಿಮ್ಮ ದಳಕ್ಕೆ ಬೇಕಾದ ಬಣ್ಣ ಆಯ್ಕೆ ಮಾಡಿ ಜಿಲ್ಲಾ ಸಂಸ್ಥೆಯಿಂದ ಅನುಮೋದನೆ ಪಡೆಯಬೇಕು.

   ಅಳತೆ : ಕನಿಷ್ಠ 70 ರಿಂದ ಗರಿಷ್ಠ 80 ಸೆಂ.ಮೀ. ಚೌಕಾಕಾರದಲ್ಲಿ ಎರಡು ತ್ರಿಕೋನ ಪಟ್ಟಿ ತಯಾರಿಸಲಾಗುವುದು.

2. **ಸೊಂಟಪಟ್ಟಿ :** ಕಂದು ಬಣ್ಣದ ನೈಲಾನ್ ಬೆಲ್ಟ್ ಹಿತ್ತಾಳೆ ಜೋಡಕ (Belt) ಭಾರತ್ ಸ್ಕೌಟ್ ಮತ್ತು ಗೈಡ್‌ನ ಅಧಿಕೃತ ಸರಬರಾಜು.
3. **ಕಾಲುಚೀಲ :** ಕಂದು ಬಣ್ಣ (Camel Colour)
4. **ಪಾದರಕ್ಷೆ :** ಕಪ್ಪು ತುಂಬು ಚರ್ಮ ಅಥವಾ ಕ್ಯಾನ್‌ವಾಸ್ ಶೂ.
5. **ಕೇಶಾಲಂಕಾರ :** ಕೂದಲು ಹಾರಾಡದಂತೆ ಅಚ್ಚುಕಟ್ಟಾಗಿ ಕರಿಪಟ್ಟಿ ಅಥವಾ ಕ್ಲಿಪ್‌ನಿಂದ ಬಂಧಿಸಬೇಕು. ಹಿರಿಯ ನಾಯಕಿಯರು ಮೇಲೆತ್ತಿ ತುರುಬು / ಸೂಡಿ ಕಟ್ಟಬೇಕು.
6. **ಸದಸ್ಯತ್ವ ಪದಕ :** ಹಸಿರ ಪಟ್ಟಿಯಲ್ಲಿ ಹಳದಿ ರೇಖೆಯಲ್ಲಿ ನೇಯ್ದ ಭಾರತ್ ಸ್ಕೌಟ್ ಮತ್ತು ಗೈಡ್ಸ್ ಲಾಂಛನ ಎಡತೋಳಿನ ಮಧ್ಯೆ ಧರಿಸುವುದು.
7. **ವಿಶ್ವ ಭಗಿನಿತ್ವ ಪದಕ (World Sisterhood Badge) :** ಕಡು ನೀಲಿ ಪಟ್ಟಿ ಮೇಲೆ ಹಳದಿ ವಿಶ್ವ ಲಾಂಛನ ಬಲ ತೋಳಿನ ಮಧ್ಯೆ ಧರಿಸುವುದು.
8. **ಉಣ್ಣೆ ಅಂಗಿ / ಶಾಲು :** ಕರಿಯ ಬಣ್ಣದ್ದಾಗಿರಬೇಕು. ಸಾದಾ ಇರಬೇಕು.
9. **ಶಿಬಿರ ಸಮವಸ್ತ್ರ :** ಸಲ್ವಾರ್ ಕಮೀಜ್ ದುಪ್ಪಟ ಎಲ್ಲವೂ ನೀಲಿ ಅಪಾರದರ್ಶಕ.

ಸೂಚನೆ :

ಹೆಚ್ಚಿನ ವಿವರಕ್ಕಾಗಿ ಎ.ಪಿ.ಆರ್.ಓ. ಭಾಗ–3 / ಗು.ನೀ.ನಿ.ಸಂ. ಭಾಗ–3 ಗೈಡ್ ವಿಭಾಗ ಪುಟ 22, 23, 24

We are messengers of peace.
Post your good turns on
www.scout.org.
So that all can appreciate
your good turn.

ಪ್ರವಚನ:19 ಹಗ್ಗಕೌಶಲ [ಗಂಟುಗಳು] ಭಾಗ–1
(Rope Craft-1 - Knots)

ಉದ್ದೇಶ : ಪ್ರಶಿಕ್ಷಣಾರ್ಥಿಗಳು –

* ಹಗ್ಗಗಳ ವಿಧಗಳನ್ನು ಮತ್ತು ಅವುಗಳನ್ನು ಸುರಕ್ಷಿತಗೊಳಿಸುವ ತುದಿ ಕಟ್ಟನ್ನು ಹಾಕಲು ಸಮರ್ಥರಾಗುವರು.
* ಗಂಟುಗಳನ್ನು ಕಟ್ಟುವ ಮತ್ತು ಬಳಸುವ ಕೌಶಲವನ್ನು ಪಡೆಯುವರು.
* ಗಂಟುಗಳನ್ನು ಗುರುತಿಸುವ ಹೆಸರಿಸುವ ಕೌಶಲವನ್ನು ಪಡೆಯುವರು.

ವಿಧಾನ : ಪ್ರದರ್ಶನ, ಪ್ರಾತ್ಯಕ್ಷಿಕೆ.

ಹಗ್ಗದ ಬಳಕೆ ಈ ಚಳವಳಿಯಲ್ಲಿ ಸಾಮಾನ್ಯ. ಕಾರಣ ನಾವು ಹೆಚ್ಚು ಹೆಚ್ಚು ಹೊರಾಂಗಣ ಚಟುವಟಿಕೆಯಲ್ಲಿ ತೊಡಗುತ್ತೇವೆ. ಹತ್ತಿ, ತೆಂಗು, ಸೆಣಬು, ಮನಿಲಾ, ನೈಲಾನ್ ಇತ್ಯಾದಿ ಎಳೆಗಳಿಂದ ವಿವಿಧ ಗಾತ್ರದ ಹಗ್ಗಗಳನ್ನು ಹೊಸೆಯಲಾಗುವುದು. ಹಗ್ಗವನ್ನು ಸಾಮಾನ್ಯವಾಗಿ 2, 3, 4, 6 ಎಳೆಗಳಿಂದ ಹುರಿ ಸುತ್ತಲಾಗಿರುತ್ತದೆ. ಸಂದರ್ಭಕ್ಕೆ ತಕ್ಕಂತೆ ಹಗ್ಗದ ಮಾದರಿ, ಗಾತ್ರ ಮತ್ತು ಉದ್ದವನ್ನು ನಿರ್ಧರಿಸಬೇಕಾಗುತ್ತದೆ. ಹಗ್ಗವನ್ನು ಬಳಸುವ ಮುನ್ನ ಅದರ ತುದಿಗಳನ್ನು ಸುರಕ್ಷಿತಗೊಳಿಸಬೇಕು. ಇಲ್ಲವಾದರೆ ಎಳೆಗಳು ಬಿಚ್ಚಿ ಹಗ್ಗವು ಬಿಗಿಕಳೆದುಕೊಳ್ಳುತ್ತದೆ.

ಹಗ್ಗ ಕೌಶಲ ಭಾಗ–1

ತುದಿಕಟ್ಟು – (Whipping) :

ಗಂಟುಗಳನ್ನು ಕಟ್ಟಲು 4 ಎಳೆಯ ಹತ್ತಿ ಹಗ್ಗಗಳನ್ನು ಬಳಸಬೇಕು. ಅಭ್ಯಾಸದ ಹಗ್ಗ ಸುಮಾರು 3 ಮೀಟರ್ ಉದ್ದವಿರಬೇಕು. ಹಗ್ಗವನ್ನು ಬಳಸುವ ಮುನ್ನ ಅದರ ಎಳೆಗಳು ಬಿಚ್ಚಿಕೊಳ್ಳದಂತೆ ಎರಡು ತುದಿಗಳಿಗೂ ತುದಿ ಕಟ್ಟುಕಟ್ಟಿ ಹಗ್ಗವನ್ನು ಸುರಕ್ಷಿತ ಗೊಳಿಸಬೇಕು. ಹಗ್ಗದ ತುದಿಯಿಂದ ಅರ್ಧ ಇಂಚು ಕೆಳಗೆ ಒಂದು ಇಂಚಿನಷ್ಟು ಕಟ್ಟು ಕಟ್ಟಬೇಕು.



ಗಂಟುಗಳು – (Knots) :

ಗಂಟುಗಳನ್ನು ದಿನನಿತ್ಯವೂ ಬಳಸುತ್ತೇವೆ. ಗಂಟುಗಳು ಸರಕು ಕಟ್ಟಲು, ಹಗ್ಗಕ್ಕೆ ಹಗ್ಗ ಜೋಡಿಸಲು, ಗಾಯಕ್ಕೆ ಪಟ್ಟಿ ಕಟ್ಟಲು, ಕಟ್ಟುಗಳನ್ನು ಕಟ್ಟಲು, ಜೀವ ಉಳಿಸಲು, ಕರಕುಶಲ ವಸ್ತುಗಳನ್ನು ತಯಾರಿಸಲು ಅವಶ್ಯಕವಾದ ಕೌಶಲ. ಕೆಲವು ಕಸಬುಗಳಲ್ಲಿ ಗಂಟುಗಳನ್ನು ಬಳಸಲಾಗುವುದು. ಉದಾಹರಣೆಗೆ – ಧೋಬಿ, ಬೆಸ್ತರು, ಹೂ ಕಟ್ಟುವವರು, ಮನೆ ಕಟ್ಟುವವರು, ಸೌದೆ ಮಾರುವವರು ತಮ್ಮ ಕಸುಬಿನಲ್ಲಿ ಗಂಟುಗಳನ್ನು ಮತ್ತು ಕಟ್ಟುಗಳನ್ನು ಬಳಸುವ ಪರಿಣತಿ ಹೊಂದಿರುವವರು. ಗಂಟು ಹಾಕುವುದನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು. ಗಂಟನ್ನು ಕೈಕಾಲುಗಳ ಮೇಲೆ ಹಾಕಿಕೊಳ್ಳಬಾರದು. ಅಭ್ಯಾಸ ಮಾಡುವಾಗಲೆ ಸೂಕ್ತ ಸನ್ನಿವೇಶದಲ್ಲಿ ಅಭ್ಯಾಸ ಮಾಡಬೇಕು. 3 ಮೀಟರಿನಷ್ಟು ಹತ್ತಿ

ಹಗ್ಗದ ಎರಡು ತುದಿಗಳಿಗೂ ತುದಿಕಟ್ಟು ಕಟ್ಟಿ ನಂತರ ಬಳಸಿ. ಸರಿಯಾದ ಕ್ರಮದಲ್ಲಿ ಗಂಟನ್ನು ಹಾಕಿದರೆ ಬಿಚ್ಚುವುದು ಸುಲಭ ಸರಿಯಾದ ಕ್ರಮದಲ್ಲಿ ಹಾಕದಿದ್ದರೆ ಗಂಟುಬಿಚ್ಚಿಕೊಳ್ಳುವುದು ಇಲ್ಲವೇ ಕಗ್ಗಂಟಾಗಿ ಹಾನಿವುಂಟಾಗುವುದು.

ಸಮಗಂಟು – (Reef Knot) :

ಒಂದೇ ಹಗ್ಗದ ಎರಡು ತುದಿಗಳನ್ನು ಜೋಡಿಸಲು ಮತ್ತು ಒಂದೇ ಗಾತ್ರದ ಎರಡು ಹಗ್ಗಗಳನ್ನು ಜೋಡಿಸಲು ಈ ಗಂಟನ್ನು ಉಪಯೋಗಿಸಲಾಗುವುದು ಈ ಗಂಟನ್ನು ಪ್ರಥಮ ಚಿಕಿತ್ಸೆಯಲ್ಲಿ ಪಟ್ಟಿಕಟ್ಟಲು, ಸರಕುಗಳನ್ನು ಕಟ್ಟಲು, ಅಗಸರು ಬಟ್ಟೆಯ ಮೂಟೆಯನ್ನು ಕಟ್ಟಲು ಉಪಯೋಗಿಸುವರು.



ಮೂಲೆ ಗಂಟು – (Sheet Bend) :

ಅಸಮ ದಪ್ಪದ ಹಾಗೂ ತೆಳುವಾದ ಹಗ್ಗಗಳನ್ನು ಜೋಡಿಸುವಾಗ, ಹಡಗಿನ ಹಾಯಿಕಟ್ಟುವಾಗ, ಧ್ವಜಕ್ಕೆ ಧ್ವಜಸೂತ್ರ ಕಟ್ಟುವಾಗ ಮತ್ತು ಕುಣಿಕೆಗೆ ಪಟ್ಟಿಯನ್ನು ಅಥವಾ ಹಗ್ಗವನ್ನು ಜೋಡಿಸುವಾಗ ಈ ಗಂಟನ್ನು ಉಪಯೋಗಿಸಲಾಗುವುದು.



ಕೊಟ್ಟಿಗೆ ಗಂಟು – (Clove Hitch) :

ಹಗ್ಗದಲ್ಲಿ ಸಮನಾಂತರ ಸೆಳೆತವಿದ್ದಾಗ ಈ ಗಂಟನ್ನು ಉಪಯೋಗಿಸಲಾಗುವುದು. ಉದಾಹರಣೆಗೆ ಬಟ್ಟೆ ಒಣಗಿಸುವ ಹಗ್ಗ, ಆಟದ ಜಾಲ (net) ದೋಣಿಗಳನ್ನು, ಪ್ರಾಣಿಗಳನ್ನು ಗೂಟಗಳಿಗೆ ಕಟ್ಟುವಾಗ, ಕೈವಂಚ-ಡೋಲಿ (Stretcher) ತಯಾರಿಸುವಾಗ, ಹೂವನ್ನು ಕಟ್ಟುವಾಗ (ಕಟ್ಟಿದ ಹೂವಿನ ಗಂಟನ್ನು ಗಮನಿಸಿ) ಧ್ವಜದ ಸೂತ್ರವನ್ನು ಗುರುತು ಕಡ್ಡಿಗೆ (Toggle) ಕಟ್ಟಲು ಹಗ್ಗದ ಬೇಲಿಕಟ್ಟಲೂ ಉಪಯೋಗಿಸಲಾಗುವುದು. ಇದನ್ನು ಕಟ್ಟುಗಳನ್ನು (lashings) ಕಟ್ಟಲು ಉಪಯೋಗಿಸಲಾಗುವುದು.



ಕಣಕಾಲು ಗಂಟು – (Sheep Shank) :

ಉದ್ದನೆಯ ಹಗ್ಗ ಕತ್ತರಿಸದೆ ಗಿಡ್ಡ ಮಾಡಲು, ಎರಡೂಕಡೆ ಬಂಧಿಸಿದ ಹಗ್ಗ ಜೋತು ಬಿದ್ದಾಗ ಎಳೆದು ಗಿಡ್ಡ ಮಾಡಲೂ, ಹಗ್ಗದ ದುರ್ಬಲ ಭಾಗವನ್ನು ಬಲಗೊಳಿಸಲು, ಕವಣೆ ಬೀಸಲು ಈ ಗಂಟನ್ನು ಉಪಯೋಗಿಸಲಾಗುವುದು. ಉದ್ದನೆಯ ವಿದ್ಯುತ್ ತಂತಿ/ಹಗ್ಗ ನೇತು ಬಿದ್ದಿದ್ದರೆ ಈ ಗಂಟು ಬಳಸಿ ಜೋಡಿಸಬಹುದು.



ಹಗ್ಗ ಕೌಶಲ ಭಾಗ-2

ಒಂದು ಸುತ್ತು ಮತ್ತು ಎರಡು ಅರೆ ಗಂಟು - (Round Turn & Two Half Hitches) :



ಒಂದು ತುದಿಯನ್ನು ಪ್ರಾಣಿಯ ಕತ್ತಿನ ಸುತ್ತಲೂ, ದೋಣಿಗೆ, ಗುಡಾರಕ್ಕೆ, ಧ್ವಜ ಸ್ತಂಭಕ್ಕೆ ಕಟ್ಟಿದ್ದು, ಹಗ್ಗದ ಇನ್ನೊಂದು ಮುಕ್ತ ತುದಿಯನ್ನು ಗೂಟಕ್ಕೆ, ಮರಕ್ಕೆ ಬಾಗುಮೊಳೆಗೆ (Peg) ಕಟ್ಟಲು, ಕೆಟ್ಟುಹೋದ ಕಾರನ್ನು / ವಾಹನಗಳನ್ನು ಮತ್ತೊಂದು ವಾಹನಕ್ಕೆ ಕಟ್ಟಿ ಎಳೆದುಕೊಂಡು ಹೋಗಲು, ಉಪಯೋಗಿಸಲಾಗುವುದು. ದೋಣಿಗೆ ಕಟ್ಟಿರುವ ಹಗ್ಗವನ್ನು ಅವಶ್ಯವಿದ್ದಷ್ಟು ಬಿಟ್ಟು ಗೂಟಕ್ಕೆ ಕಟ್ಟಲು ಉಪಯೋಗಿಸುವರು.

ಬಾಗು ಗಂಟು - (Bowline) :

ಪ್ರಾಣಿಗಳ ಕತ್ತಿನ ಸುತ್ತಲೂ ಕತ್ತು ಪಟ್ಟಿ ಕಟ್ಟಲೂ, ನೀರಿನಲ್ಲಿ ಸಿಕ್ಕಿಬಿದ್ದವರನ್ನು ಹೊರತರಲು ಜೀವರಕ್ಷಣೆಗಾಗಿ ಈ ಗಂಟನ್ನು ಉಪಯೋಗಿಸಲಾಗುವುದು.

ಬೆಸ್ತರ ಗಂಟು - (Fisherman's Knot) :

ಎರಡು ಹಗ್ಗ (ಒಣ/ಒದ್ದೆ)ವನ್ನು ಜೋಡಿಸಲು ಬೆಸ್ತರು ಉಪಯೋಗಿಸುವ ಗಂಟು. ಈ ಗಂಟುಗಳು ಸುಲಭವಾಗಿ ಜಾರುತ್ತವೆ ಆದರೆ ಬಿಚ್ಚಿಕೊಳ್ಳವುದಿಲ್ಲ.

ಚಟುವಟಿಕೆಗಳು :

ಆಟ-1: ಪಟಾಲಂನ ಎಲ್ಲಾ ಹಗ್ಗಗಳನ್ನು ವಿವಿಧ ಗಂಟುಗಳಿಂದ ಜೋಡಿಸಿ ಒಂದು ಹಗ್ಗ ಮಾಡಿ.

ಆಟ-2: ಗಂಟು ಹಾಕಿಸಿ, ಹೆಸರು ಹೇಳಿಸಿ.

ಆಟ-3: ಗಂಟಿನ ಉಪಯೋಗದ ಪ್ರತ್ಯಕ್ಷ ಪ್ರದರ್ಶನ.

ಆಟ-4: ಗಂಟಿನ ರಿಲೆ ಆಟ ಆಡಿಸಿ.

ಆಟ-5: ಗಂಟನ್ನು ಹಾಕಿಟ್ಟು ಮಾದರಿ ಪ್ರದರ್ಶಿಸಿ, ಹೆಸರು ಕೇಳಿ.

ಅಗ್ರಗಾಮಿಗಳು (Pioneers) ಕಾಡಿನಲ್ಲಿ / ಬೆಟ್ಟಗುಡ್ಡಗಳಲ್ಲಿ ಸಾಹಸಕ್ಕಾಗಿ / ಯುದ್ಧಕ್ಕಾಗಿ ಮುಂದಾಗಿ ಹೋಗುವ ಒಂದು ಮುಂದಾಳು ತಂಡ (Advance Party).

ಅಗ್ರಗಾಮಿಗಳಿಗೆ ಗಂಟು ಮತ್ತು ಕಟ್ಟುಗಳಲ್ಲಿ (lashing) ಪರಿಣತಿ ಇರಬೇಕು. ಇವರು ಸೇತುವೆ, ಏಣಿ, ಮರದ ಮೇಲೆ ಗುಡಿಸಲು, ಅಟ್ಟಣೆ, ವೀಕ್ಷಣಾಗೋಪುರ, ಹಗ್ಗದ ದಾರಿ (Rope Way) ಮುಂತಾದವುಗಳನ್ನು ಕಟ್ಟುತ್ತಾ ಎಂತಹ ದುರ್ಗಮವಾದ ಬೆಟ್ಟ, ಗುಡ್ಡ, ಕಾಡುಗಳಲ್ಲು ದಾರಿ ಮಾಡುತ್ತಾ ಸಾಗುತ್ತಾರೆ. ಇವುಗಳಿಗೆ ಬೇಕಾದ ವಿಶಿಷ್ಟ ಗಂಟುಗಳನ್ನು ಮತ್ತು ಕಟ್ಟುಗಳನ್ನು ಕಟ್ಟಲು ಕಲಿಯಬೇಕು. ಈ ಕೌಶಲಗಳು ಹೊರಸಂಚಾರ, ಸಾಹಸಯಾನ, ಅನ್ವೇಷಣಾಯಾನಾ ಮತ್ತು ಶಿಬಿರವಾಸಗಳಲ್ಲಿ ಉಪಯುಕ್ತವಾಗುತ್ತವೆ.

ಹೊರೆಕಟ್ಟು/ದಿಮ್ಮಿಗಂಟು – (Timber Hitch) :



ಈ ಗಂಟನ್ನು ಸೌದೆ ಕಟ್ಟಲು ಉಪಯೋಗಿಸಲಾಗುವುದು. ಸೌದೆ ಮಾರುವವರು ಸಿಕ್ಕರೆ ಅವರು ಹೊರಗೆ ಕಟ್ಟಿರುವ ಗಂಟನ್ನು ಗಮನಿಸಿ. ದಿಮ್ಮಿಗಳಿಗೆ ಈ ಗಂಟು ಕಟ್ಟಿ ಎಳೆಯಲು ಮತ್ತು ಓರೆ ಕಟ್ಟನ್ನು ಆರಂಭಿಸಲು ಉಪಯೋಗಿಸಲಾಗುವುದು.

ಸುರಳಿ ಗಂಟು – (Rolling Hitch) :



ಈ ಗಂಟನ್ನು ಮೂಟೆ ಬಾಯಿ ಕಟ್ಟಲು, ಹಗ್ಗವನ್ನು ಗೂಟಕ್ಕೆ ಕಟ್ಟಲು ಅಥವಾ ಇನ್ನೊಂದು ಹಗ್ಗಕ್ಕೆ ಜೋಡಿಸಲು ಉಪಯೋಗಿಸಲಾಗುವುದು. ಕೊಟ್ಟಿಗೆ ಗಂಟಿಗೆ ಮತ್ತೊಂದು ಸುರಳಿ ಹಾಕಿ ಹಗ್ಗವನ್ನು ತೂರಿಸಿ. ಗಂಟನ್ನು ಬಿಗಿಮಾಡಿ. ಇದು ಸಡಿಲವಾಗುವುದಿಲ್ಲ, ಜಾರುವುದಿಲ್ಲ.

ಅಷ್ಟಕ ಗಂಟು – (Figure of Eight) :

ಹಗ್ಗದ ತುದಿಯನ್ನು ಸುರಕ್ಷಿತವಾಗಿಡಲು ಮತ್ತು ತುದಿಯ ಅಲಂಕಾರಕ್ಕಾಗಿ ಉಪಯೋಗಿಸಲಾಗುವುದು.

ಸನ್ನೆಗಂಟು – (Marline Hitch) :



ಹಗ್ಗದ ತುದಿ ಬಳಸದೆ ಹಗ್ಗದ ಮಧ್ಯೆ ಮಧ್ಯೆ ಗಂಟಗಳನ್ನು ಹಾಕಬಹುದು. ಗಂಟಿನಿಂದ ಉಂಟಾಗುವ ಕುಣಿಕೆಯನ್ನು ಏಣಿಯಂತೆ ಉಪಯೋಗಿಸಬಹುದು. ಕೋಲುಗಳಿಂದ ಏಣಿ ಕಟ್ಟಲು, ಕಟ್ಟಿಗೆ ಹೆಣೆಯಲು ಉಪಯೋಗಿಸಬಹುದು. ಈ ಗಂಟುಗಳು ಜಾರುವುದಿಲ್ಲ.

ಹಗ್ಗ ಕೌಶಲ ಭಾಗ–3

12 ಕಟ್ಟುಗಳು – (Lashings) :

ಇವುಗಳನ್ನು ಗಂಟಿನಿಂದ ಪ್ರಾರಂಭಿಸಿ ವಿವಿಧ ರೀತಿಯಲ್ಲಿ ಅಡ್ಡವಾಗಿ ಮತ್ತು ಲಂಬವಾಗಿ ಸುತ್ತು ಸುತ್ತಿ ಗಂಟಿನಿಂದ ಕೊನೆಗೊಳಿಸಲಾಗುವುದು. ಈ ಕಟ್ಟುಗಳನ್ನು, ಕೋಲು, ದಂಡ, ಕಂಭಗಳನ್ನು ವಿವಿಧ ರೀತಿಯಲ್ಲಿ ಜೋಡಿಸಿ ಕಟ್ಟಲು ಉಪಯೋಗಿಸಲಾಗುವುದು. ಇವುಗಳಲ್ಲಿ 4 ವಿಧದ ಕಟ್ಟುಗಳನ್ನು ಅಭ್ಯಾಸ ಮಾಡುವುದು. 1) ಚೌಕಕಟ್ಟು, 2) ಕರ್ಣಕಟ್ಟು 3) ಸಮಾನಾಂತರಕಟ್ಟು ಮತ್ತು 4) ಪಟಾಲಂಕಟ್ಟು. ಈ ಕಟ್ಟುಗಳ ಸಹಾಯದಿಂದ ಶಿಬಿರದ ಪೀಠೋಪಕರಣ, ವೀಕ್ಷಣಾಗೋಪುರ, ಸೇತುವೆ, ಮರದ ಮೇಲೆ ಅಟ್ಟಣಿಗೆ, ಗುಡಿಸಲು ಮುಂತಾದವುಗಳನ್ನು ಕಟ್ಟಲು ಬಳಸಲಾಗುವುದು.

1. ಚೌಕ ಕಟ್ಟು – (Square Lashing) :



ಎರಡು ಕೋಲುಗಳನ್ನು ಲಂಬ ಕೋನದಲ್ಲಿ ಜೋಡಿಸಲು ಈ ಕಟ್ಟನ್ನು ಉಪಯೋಗಿಸಲಾಗುವುದು. ಈ ಕಟ್ಟಿನಲ್ಲಿ ಕೋನಗಳು

ಸ್ಥಿರವಾಗಿರುತ್ತದೆ. ಈ ಕಟ್ಟನ್ನು ಶಿಬಿರ ಪೀಠೋಪಕರಣ ತಯಾರಿಸಲು ಅಗ್ರಗಾಮಿ ಯೋಜನೆಗಳಾದ ಸೇತುವೆಗಳು, ವೀಕ್ಷಣಾ ಗೋಪುರ, ಅಟ್ಟಣೆಗೆ ಮುಂತಾದವುಗಳನ್ನು ತಯಾರಿಸಲು ಬಳಸಲಾಗುವುದು. ಮನೆ ಕಟ್ಟಲು ರಚಿಸುವ ಸರ್ವೆ ಕಂಬದ ಅಟ್ಟಣಿಗೆ ಗಮನಿಸಿ.

2. ಸಮಾನಾಂತರ ಕಟ್ಟು–1 (Shear Parallel Lashing) :

ದಂಡಗಳನ್ನು ಸಮಾನಾಂತರವಾಗಿ ಇಟ್ಟು ಸಮಾನಾಂತರವಾಗಿ ಕಟ್ಟು ಕಟ್ಟಿ ಉದ್ದ ಹೆಚ್ಚಿಸಲು ಉಪಯೋಗಿಸಲಾಗುವುದು. ಇದನ್ನು ಧ್ವಜಸ್ತಂಭಗಳ ರಚನೆಯಲ್ಲಿ ಬಳಸಲಾಗುವುದು. ಮನೆ ಕಟ್ಟುವವರು ಕಟ್ಟಿರುವ ಸರ್ವೆಕಂಬದ ಅಟ್ಟಣಿಯನ್ನು ಗಮನಿಸಿ. ಇದನ್ನು ಶಿಬಿರ ಪೀಠೋಪಕರಣ ಮತ್ತು ಅಗ್ರಾಗಾಮಿ ಯೋಜನೆಯಲ್ಲಿ ಬಳಸಲಾಗುವುದು.

3. ಸಮಾನಾಂತರ ಕಟ್ಟು–2 (Shear Lashing) :

ಎರಡು ಕೋಲನ್ನು (ದಂಡಗಳನ್ನು) ಸಮಾನಾಂತರವಾಗಿ ಜೋಡಿಸಲು ಉಪಯುಕ್ತವಾದ ಕಟ್ಟು. ಈ ಕಟ್ಟಿನ ಮಧ್ಯೆ ಹಗ್ಗವನ್ನು ಲಂಬವಾಗಿ ಸುತ್ತಲಾಗುವುದು. ಇದನ್ನು ಅಗ್ರಗಾಮಿ ಯೋಜನೆಗಳಲ್ಲಿ ಬಳಸಲಾಗುವುದು.

4. ಕರ್ಣ ಕಟ್ಟು – (Diagonal Lashing) :

ಕೋನದಲ್ಲಿರುವ ಎರಡು ಕೋಲನ್ನು ಜೋಡಿಸಿದಾಗ, ಎರಡರ ಮಧ್ಯೆ ಅಂತರ (gap) ಇದ್ದಾಗ ಎರಡು ಕೋಲನ್ನು ಒಟ್ಟು ಸೇರಿಸಿ ಕಟ್ಟಲಾಗುವುದು. ಈ ಕಟ್ಟಿನಲ್ಲಿ ಕೋನಗಳನ್ನು ಆಕಾರಕ್ಕೆ ತಕ್ಕಂತೆ ಹೊಂದಿಸಬಹುದು. ಇದನ್ನು ಗುಡಾರ, ಆಧಾರಕಗಳನ್ನು, ಊರೆಕಟ್ಟು, (trestle) ಕಟ್ಟಲು ಉಪಯೋಗಿಸಲಾಗುವುದು.



5. ಅಷ್ಟಕ ಕಟ್ಟು – (Figure of Eight Lashing) :



3 ಕೋಲುಗಳನ್ನು ಸಮಾನಾಂತರವಾಗಿಟ್ಟು ಮಧ್ಯದ ಕೋಲನ್ನು ಚಿತ್ರದಲ್ಲಿ ತೋರಿಸಿದಂತೆ ಬಡುಮೇಲು ಮಾಡಿ ಚಿತ್ರದಲ್ಲಿ ತೋರಿಸಿದಂತೆ ಕಟ್ಟಿ, ಇದನ್ನು ತ್ರಿಪದಿ ಆಧಾರಕ ಎನ್ನುವರು. ಕೈ–ತೊಳೆಯುವ ತೊಟ್ಟಿ (Multipurpose Stand) ತಯಾರಿಸಲು ಬಳಸಲಾಗುತ್ತದೆ.

ಗಮನಿಸಿ : ನಿಮ್ಮ ಶಿಕ್ಷಕರಿಂದ ಗಂಟು ಹಾಕುವುದನ್ನು ಕಲಿಯಿರಿ ಚಿತ್ರ ನೋಡಿ, ಅಭ್ಯಾಸ ಮಾಡಬಹುದು. ಕಲಿತ ಗಂಟನ್ನು ಉಪಯೋಗಕ್ಕೆ ಅನುಗುಣವಾಗಿ ಬಳಸಿ ತೋರಿಸಿ.



ಶಿಬಿರ ಸಲಕರಣೆಗಳು (Camp Tools)

ಈ ಕೆಳಕಂಡ ಸಲಕರಣೆಗಳು, ನಿಮಗೆ ಶಿಬಿರದಲ್ಲಿ ಉಪಯೋಗವಾಗುತ್ತದೆ. ಈ ಸಲಕರಣೆಗಳ ಬಳಕೆ ಮತ್ತು ಸುರಕ್ಷತೆಯ ಬಗ್ಗೆ ತಿಳಿದುಕೊಳ್ಳಬೇಕು.

ಗಂಟು ಮತ್ತು ಕಟ್ಟುಗಳಿಂದ ಮಾಡಿದ ಉಪಕರಣಗಳು





ಗುದ್ದಲಿ (Spade), ಕೊಡಲಿ (Axe), ಕೈಗರಗಸ (Handsaw), ಕಬ್ಬಿಣದ ಹಾರೆ (Crowbar), ಮಚ್ಚು (Chopper), ಚಾಕು (Knife), ಸುತ್ತಿಗೆ (Hammer), ಮರದ ಸುತ್ತಿಗೆ (Mallet).

ಸುರಕ್ಷತೆ – (Safety) :

* ಇವುಗಳನ್ನು ಲೋಹದ ಹಾಗೂ ಚೂಪಾದ ಅಲಗುಗಳನ್ನು ಮರಕ್ಕೆ / ಮರದ ತುಂಡಿಗೆ ಕಚ್ಚಿಸಿ ಇಡಬೇಕು. ಇಲ್ಲವೇ ಚರ್ಮದ ಕವಚದಲ್ಲಿ ಇಡಬೇಕು.
* ಈ ಉಪಕರಣಗಳನ್ನು ಬಳಸುವುದರಿಂದ ಸುಸ್ಥಿತಿಯಲ್ಲಿರುತ್ತದೆ. ಇವುಗಳು ಮೊಂಡಾದಾಗ ಸಾಣಿ ಹಿಡಿಸಬೇಕು.
* ಲೋಹದ ಭಾಗಕ್ಕೆ ತುಕ್ಕು ಹಿಡಿಯುವುದನ್ನು ತಡೆಗಟ್ಟಲು ಎಣ್ಣೆ / ಗ್ರೀಸ್ ಸವರಿ ಇಡಬೇಕು ಇಲ್ಲವೇ ಒರೆಸಿ ಒಣಗಿಸಿ ಒರೆಯಲ್ಲಿ (Cover) ಇಡಬೇಕು.

ಎಚ್ಚರಿಕೆಗಳು :

* ಬಳಸುವ ಮುನ್ನ ಹಿಡಿಕೆಗಳು ಭದ್ರವಾಗಿರುವಂತೆ ನೋಡಿಕೊಳ್ಳಬೇಕು.
* ಕೊಡಲಿ, ಮಚ್ಚುಗಳನ್ನು, ಕೆಲಸ ಮಾಡುವಾಗ ಹತ್ತಿರ ಅಥವಾ ಎದುರಿಗೆ ಯಾರು ಇರಬಾರದು.
* ನಿಮಗೆ ಅನುಕೂಲಕರವಾಗುವಷ್ಟು ಮುಂದೆ ವಸ್ತುವನ್ನು ಇಟ್ಟುಕೊಂಡು ಒತ್ತಡವನ್ನು ಮುಂದಕ್ಕೆ ಅದರ ಮೇಲೆ ಹಾಕಬೇಕು.

ಪ್ರವಚನ:20 ಪ್ರಥಮ ಚಿಕಿತ್ಸೆ
(First Aid)
ದ್ವಿತೀಯ ಸೋಪಾನದವರೆಗೆ (Upto Dwitiya Sopan)
ಭಾಗ–1

ಉದ್ದೇಶ : ಪ್ರಶಿಕ್ಷಣಾರ್ಥಿಗಳು :

* ಪ್ರಥಮ ಚಿಕಿತ್ಸಕರ ಇತಿಮಿತಿ ಅರಿಯುವರು. ಪ್ರಥಮ ಚಿಕಿತ್ಸಕರು ವೈದ್ಯರಲ್ಲವೆಂದು ಮನಗಾಣುವರು.
* ವೈಯುಕ್ತಿಕ, ಅಷ್ಟಕ ದಳ ಮತ್ತು ಶಿಬಿರದ ಪ್ರಥಮ ಚಿಕಿತ್ಸೆ ಪೆಟ್ಟಿಗೆಯ ಅವಶ್ಯಕತೆ ತಿಳಿಯುವರು.
* ಆಧುನಿಕ ಪ್ರಥಮ ಚಿಕಿತ್ಸೆಯ ಆಧಾರದ ಮೇಲೆ ಅಪಘಾತದ ತೀವ್ರತೆಯನ್ನು ತಿಳಿಯಲು ಸಮರ್ಥರಾಗುವರು.
* ಆತ್ಮವಿಶ್ವಾಸದಿಂದ ಗಾಯಾಳುವಿಗೆ ಪ್ರಥಮೋಪಚಾರ ನೀಡುವರು.
* ಗಾಯಾಳುಗಳನ್ನು ವೈದ್ಯರಲ್ಲಿ ಸಾಗಿಸುವ ವಿವಿಧ ವಿಧಾನಗಳನ್ನು ತಿಳಿಯುವರು.
* ಗೈಡ್‌ಗಳಿಗೆ ಪ್ರಥಮ ಚಿಕಿತ್ಸೆ ಕೊಡಲು ಪ್ರಾತ್ಯಕ್ಷಿಕ ಜ್ಞಾನವನ್ನು ನೀಡುವರು.

ವಿಧಾನ : ಪ್ರದರ್ಶನ, ಪ್ರಾತ್ಯಕ್ಷಿಕೆ.

ನಾವು ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಧಾನವಾದ ಪ್ರಪಂಚದಲ್ಲಿ ಬದುಕುತ್ತಿದ್ದೇವೆ. ಈ ಪ್ರಪಂಚವು ಅನುಕೂಲತೆ ಮತ್ತು ಆಪತ್ತುಗಳಿಂದ ತುಂಬಿತುಳುಕುತ್ತಿದೆ. ವಿಜ್ಞಾನ ತಂತ್ರಜ್ಞಾನಗಳು ನಮ್ಮ ಮನೆಗಳನ್ನು ಪ್ರವೇಶಿಸಿ, ಸ್ವಾಮ್ಯವನ್ನು ಸ್ಥಾಪಿಸಿವೆ. ಮನೆಯು ಯಂತ್ರ ಜಗತ್ತಾಗಿದೆ. ರಸ್ತೆಗಳು ವಾಹನಗಳಿಂದ ತುಂಬಿವೆ. ನಾವು ನೈಸರ್ಗಿಕ ಮತ್ತು "ನಮ್ಮ ನಿರ್ಮಿತ" (We made) ವಸ್ತುಗಳೊಡನೆ ನಿತ್ಯವು ಪ್ರತಿವರ್ತಿಸುತ್ತೇವೆ. ಆದ್ದರಿಂದ ಅಪಘಾತಗಳು ಸಾಮಾನ್ಯ ಅಪಘಾತಗಳು ಎಲ್ಲಿಯಾದರೂ ಯಾವಾಗಲಾದರೂ, ಯಾರಿಗಾದರೂ ಸಂಭವಿಸಬಹುದು. ಆದ್ದರಿಂದ ಪ್ರಥಮ ಚಿಕಿತ್ಸೆ ಮಾಡುವ ಸಾಮರ್ಥ್ಯ ಪಡೆದುಕೊಳ್ಳಬೇಕು.

ಪ್ರಥಮ ಚಿಕಿತ್ಸೆ ಎಂದರೇನು? ಅಪಘಾತವಾದ ಸ್ಥಳದಲ್ಲಿ ಗಾಯಾಳುಗಳಿಗೆ (ಪ್ರಾಣಿಗಳಿಗೆ) ಸ್ಥಳದಲ್ಲೇ ದೊರೆಯುವ ವಸ್ತುಗಳನ್ನು ಬಳಸಿ ವೈದ್ಯರನ್ನು ಸಂಪರ್ಕಿಸುವ ಮುನ್ನ ನೀಡುವ ಚಿಕಿತ್ಸೆಯೇ ಪ್ರಥಮ ಚಿಕಿತ್ಸೆ.

ಪ್ರಥಮ ಚಿಕಿತ್ಸಕರು ಈ ಮೂರು ಅಂಶಗಳನ್ನು ನೆನಪಿನಲ್ಲಿಡಬೇಕು. ಸಾವು ನೋವಿನಿಂದ ಕೂಡಿದ, ಅಪಘಾತದಲ್ಲಿ ತೀವ್ರ ಗಾಯಾಳುವಾಗಿದ್ದಲ್ಲಿ ಪ್ರಥಮ ಚಿಕಿತ್ಸೆ ನೀಡುವ ಮುನ್ನ ಇವುಗಳನ್ನು ಗಮನಿಸಬೇಕು.

ಎ – ಶ್ವಾಸ ಮಾರ್ಗ (Air passage)

ಬಿ – ರಕ್ತಸ್ರಾವ (Bleeding)

ಸಿ – ರಕ್ತ ಪರಿಚಲನೆ (Circluation)

ಪ್ರಥಮ ಚಿಕಿತ್ಸೆಯ ಉದ್ದೇಶಗಳು : 1. ನೋವು ಶಮನ ಮಾಡುವುದು. 2. ಆಗಬಹುದಾದ ಅನರ್ಥ

ತೀವ್ರಗೊಳ್ಳದಂತೆ ನೋಡಿಕೊಳ್ಳುವುದು. 3. ಪ್ರಾಣಾಪಾಯವಾಗದಂತೆ ನೋಡಿಕೊಳ್ಳುವುದು.

ಪ್ರಥಮ ಚಿಕಿತ್ಸಕರು ಹೊಂದಿರಬೇಕಾದ ಅಂಶಗಳು :

1. ಧೈರ್ಯವಂತರಾಗಿರಬೇಕು, ಚುರುಕಾಗಿರಬೇಕು.
2. ಪ್ರಥಮ ಚಿಕಿತ್ಸಾ ಕೌಶಲ ಮತ್ತು ಜ್ಞಾನದ ಅರಿವು ಚೆನ್ನಾಗಿ ಅಭ್ಯಾಸ ಮಾಡಿರಬೇಕು.
3. ತಮ್ಮನ್ನು ವೈದ್ಯರೆಂದು ಭಾವಿಸಬಾರದು. ತತ್‌ಕ್ಷಣವೇ ವೈದ್ಯರ ಹತ್ತಿರ ಕಳುಹಿಸುವ ಅಥವಾ ವೈದ್ಯರನ್ನು ಕರೆಸುವ ವ್ಯವಸ್ಥೆ ಮಾಡಬೇಕು.
4. ಚಿಕಿತ್ಸೆಯನ್ನು ತಕ್ಷಣ ಸ್ಥಳದಲ್ಲೇ ದೊರಕುವ ವಸ್ತುಗಳಿಂದ ಪ್ರಾರಂಭಿಸಬೇಕು.
5. ಗುಂಪನ್ನು ನಿಯಂತ್ರಿಸಬೇಕು. ಜನಸಹಾಯ ಪಡೆಯಬೇಕು.
6. ಗಾಯಾಳುವಿನ ಪ್ರಜ್ಞೆ, ಇದ್ದರೆ ಅಪಘಾತದ ವಿವರ, ಆರೋಗ್ಯ ಮತ್ತು ತೊಂದರೆಗಳ ಬಗ್ಗೆ ಅವರಿಂದಲೇ ತಿಳಿದುಕೊಳ್ಳಬೇಕು. ಇಲ್ಲದಿದ್ದರೆ ನೋಡಿದವರಿಂದ ವಿವರ ಸಂಗ್ರಹಿಸಬೇಕು.
7. ಗಾಯಾಳುವಿನ ಆತಂಕ ಕಡಿಮೆ ಮಾಡಬೇಕು.
8. ಭಾರಿ ಅಪಘಾತಗಳಲ್ಲಿ ನಾಡಿ ಮತ್ತು ಉಸಿರಾಟ ಗಮನಿಸುತ್ತಿರಬೇಕು. ರಕ್ತಸ್ರಾವ ನಿಲ್ಲಿಸುವ ಪ್ರಯತ್ನ ಮಾಡಬೇಕು.
9. ವಿಳಾಸ ಪತ್ತೇಹಚ್ಚಿ ಸಂಬಂಧಪಟ್ಟವರಿಗೆ ಸುದ್ದಿ ತಿಳಿಸಬೇಕು.

ಪ್ರಥಮ ಚಿಕಿತ್ಸೆ ಪೆಟ್ಟಿಗೆ – (First Aid Box) :

ದಳದಲ್ಲಿ ಒಂದು ಪ್ರಥಮ ಚಿಕಿತ್ಸೆ ಪೆಟ್ಟಿಗೆ ಇರಬೇಕು. ಪಟಾಲಂದಲ್ಲೂ ಒಂದು ಪ್ರಥಮ ಚಿಕಿತ್ಸೆ ಪೆಟ್ಟಿಗೆ ಇರಬೇಕು. ವೈಯಕ್ತಿಕವಾಗಿ ಒಂದು ಪ್ರಥಮ ಚಿಕಿತ್ಸೆ ಸಂಚಿಯನ್ನು ಪ್ರತಿ ಗೈಡ್‌ಗಳು ಹೊಂದಿರಬೇಕು. ಈ ಪೆಟ್ಟಿಗೆ ಪ್ಲಾಸ್ಟಿಕ್ ಆಗಿದ್ದರೆ ಉತ್ತಮ. ಪ್ಲಾಸ್ಟಿಕ್ ಹಗುರವಾಗಿರುತ್ತದೆ. ತುಕ್ಕು ಹಿಡಿಯುವುದಿಲ್ಲ. ಇದರಲ್ಲಿರುವ ಜಾಲರಿ ಪಟ್ಟಿ (Bandages) ಹತ್ತಿ ಔಷಧಿಗಳನ್ನು 3 ತಿಂಗಳಿಗೊಮ್ಮೆಯಾದರೂ ಬದಲಾಯಿಸಬೇಕು.

1. ಮುಮ್ಮೂಲೆ ಪಟ್ಟಿ – ಕನಿಷ್ಠ 2
2. ಕ್ರಿಮಿನಾಶಕ ಜಾಲರಿ ಪಟ್ಟಿ (Sterlised Bandage) = 1" ಮತ್ತು 4"
   ಅಗಲದ 2 ಸುರಳಿ ಅಥವಾ ಅಣುರಂಧ್ರ ಅಂಟುಪಟ್ಟಿ (Micropore Plaster)
3. ಮೆದು ಗಾಯ ಪಟ್ಟಿ (lint) – 6 ಚೂರು
4. ಕ್ರೇಪ್ ಬ್ಯಾಂಡೇಜ್ – 4" 1 ಸುರಳಿ
5. ಕ್ರಿಮಿನಾಶಿತ ಹತ್ತಿ 100 ಗ್ರಾಂ.
6. ಸೇಫ್ಟಿ ಪಿನ್ 1 ಡಜನ್
7. ಕತ್ತರಿ ಚಿಕ್ಕದ್ದು ಮತ್ತು ಮಧ್ಯಮ ಗಾತ್ರದ್ದು
8. ಕೆದಕು ಸೂಜಿ (Teasing Needle)–1
9. ಚಿಮಟ (Forceps)–1
10. ಕ್ರಿಮಿನಾಶಕ ದ್ರವ – ಡೆಟ್ಟಾಲ್ / ಸೇವಲಾನ್ (ಚಿಕ್ಕ ಶೀಸೆ)
11. ಮರ್ಕ್ಯುರಿಕ್ ದ್ರಾವಣ – ಸ್ವಲ್ಪ

12. ಅಡಿಗೆ ಉಪ್ಪು, ಸಕ್ಕರೆ, ಅಡಿಗೆ ಸೋಡಾ – ತಲಾ 25 ಗ್ರಾಂ.

13. ಅಂಟು ಪಟ್ಟಿ (ಪ್ಲಾಸ್ಟರ್)–1

14. ಬ್ಯಾಂಡ್ ಏಡ್ – 6

15. ಬ್ಯಾಟ್ರಿ, ಸಾಬೂನು, ಕರವಸ್ತ್ರ

16. ಚಿಕ್ಕ ಪುಸ್ತಕ – ಪೆನ್ನು (ಗಾಯಾಳುಗಳಿಗೆ ನೀಡಿದ ಚಿಕಿತ್ಸೆಯ ಸಂಕ್ಷಿಪ್ತ ಟಿಪ್ಪಣಿ ಬರೆಯುವುದಕ್ಕಾಗಿ)

ನಿಮಗೆ ಅವಶ್ಯವೆನಿಸಿದ ಇತರೇ ಸಾಮಾನ್ಯ ಔಷಧಿಗಳು ಮತ್ತು ವಸ್ತುಗಳನ್ನು ವೈದ್ಯರ ಸಲಹೆ ಮೇರೆಗೆ ಇಟ್ಟುಕೊಳ್ಳಬಹುದು. ಔಷಧಿ ಶೀಶೆಗಳಿದ್ದರೆ ಅವುಗಳ ಮೇಲೆ ಹೆಸರು ಬರೆದಿರಬೇಕು. ಅತಿಹಳೆಯದಾದ ವಸ್ತುಗಳನ್ನು ಉಪಯೋಗಿಸಬಾರದು.

ಪೆಟ್ಟಿಗೆಯ ಮೇಲೆ ಈ + ಚಿಹ್ನೆಯನ್ನು ಕೆಂಪು ಬಣ್ಣದಲ್ಲಿ ಹಾಕಬೇಕು. ಪ್ರಥಮ ಚಿಕಿತ್ಸೆ ಪೆಟ್ಟಿಗೆ ಸುಲಭವಾಗಿ ಸಿಗುವಂತೆ ಇಡಬೇಕು.

ಗೈಡ್‌ಗಳಾದ ನೀವು ಶಾಲೆಯ ಒಂದು ಮೂಲೆಯಲ್ಲಿ ಪ್ರಥಮ ಚಿಕಿತ್ಸಾ ಕೇಂದ್ರವನ್ನು ತೆರೆದು, ಶಾಲೆಯಲ್ಲಿ ಸಂಭವಿಸುವ ಅಪಘಾತಗಳಿಗೆ ಚಿಕಿತ್ಸೆ ನೀಡಬಹುದು.

ವಿವಿಧ ರೀತಿಯ ಪಟ್ಟಿಗಳು :



1) ಮುಮ್ಮೂಲೆ ಪಟ್ಟಿ : ಇದನ್ನು ಬಿಳಿ ಹತ್ತಿ ಬಟ್ಟೆಯಿಂದ ತಯಾರಿಸಿಕೊಳ್ಳಬೇಕು. 1 1/4 ಮೀಟರ್ ಚಚ್ಚೌಕದಲ್ಲಿ ಎರಡು ತ್ರಿಕೋನ ಪಟ್ಟಿ ತಯಾರಿಸಿಕೊಳ್ಳಬೇಕು. ಇದನ್ನು ಸ್ವಚ್ಛವಾಗಿಡಬೇಕು. ಇದನ್ನು ಸಂದರ್ಭಕ್ಕೆ ತಕ್ಕಂತೆ ಮಡಿಚಿ ಗಾಯದ ಅಳತೆಗೆ ಸರಿಹೊಂದಿಸಿಕೊಂಡು ಉಪಯೋಗಿಸಬೇಕು.

ಉಪಯೋಗಿಸುವಾಗ ತೊಡೆಯ ಮೇಲೆ ಅಥವಾ ಸ್ವಚ್ಛವಾದ ಜಾಗದ ಮೇಲೆ ಇಟ್ಟು ಒಂದು ಇಂಚು ತಳವನ್ನು ಮಡಿಚಿಕೊಂಡು ಕಟ್ಟಲು ಪ್ರಾರಂಭಿಸಬೇಕು. ಇದರಿಂದ ತಲೆಗೆ, ಮುಂಗಾಲಿಗೆ ಮತ್ತು ಅಂಗಾಲಿಗೆ ಪಟ್ಟಿ ಕಟ್ಟಬಹುದು. ಇದನ್ನು ಬಿಗಿ ಕಟ್ಟುಕಟ್ಟಲು, ಗಾಯ ಹೊದಿಸಲು, ಕೈಯಲ್ಲಿ ಮೂಳೆ ಮುರಿದಾಗ ಆ ಭಾಗವನ್ನು ಸ್ಥಿರಗೊಳಿಸಲು, ತೂಗು ಪಟ್ಟಿಯನ್ನು ಕಟ್ಟಬಹುದು. ಪಟ್ಟಿಯನ್ನು ಸುತ್ತಿದ ಮೇಲೆ ಸಮಗಂಟು ಹಾಕಿ ಮುಕ್ತಾಯ ಮಾಡಬೇಕು.

2) ಸುರುಳಿ ಜಾಲರಿ ಪಟ್ಟಿ (Bandage) : ಇದನ್ನು ಗಾಯಗಳ ಮೇಲೆ ಪಟ್ಟಿ ಕಟ್ಟಲು ಉಪಯೋಗಿಸಲಾಗುವುದು. ಇದನ್ನು ನೇರವಾಗಿ ಗಾಯದ ಮೇಲೆ ಕಟ್ಟಬಾರದು ಗಾಯಕ್ಕೆ ಔಷಧಿ ಲೇಪಿಸಿದ ಮೇಲೆ ಮೆದುಪಟ್ಟಿಯನ್ನು ಗಾಯದ ಮೇಲೆ ಇಟ್ಟು ಸುತ್ತಬೇಕು. ಪಟ್ಟಿಯ ಕೊನೆಯಲ್ಲಿ ಎರಡು ಸೀಳುಮಾಡಿ. ಈ ಸೀಳು ಅರೆಗಂಟು ಹಾಕಿ ವಿರುದ್ಧ ದಿಕ್ಕುಗಳಿಂದ ಸೀಳುಗಳನ್ನು ತೆಗೆದು ಒಂದು ಸುತ್ತು ಸುತ್ತಿ ಒಂದು ಸಮಗಂಟು ಹಾಕಬೇಕು. ಮುಂಗಾಲು ಮುಂಗೈ ಗಾಯಕ್ಕೆ ಪಟ್ಟಿಕಟ್ಟುವಾಗ, 4" ಅಗಲಪಟ್ಟಿಯನ್ನು ಒಂದು ಸುತ್ತು ಸುತ್ತಿ ತಿರುಚಿ ಪುನಃ ಸುತ್ತಬೇಕು. ಹೀಗೆ ಪ್ರತಿ ಸುತ್ತು ಮುಗಿದ ಮೇಲೆ ತಿರುಚುವುದರಿಂದ ಪಟ್ಟಿಯು ಜಾರದೆ ಬಿಗಿಯಾಗಿ ಏರಿಳಿವುಗಳ ಮೇಲೆ ಉಳಿಯುತ್ತದೆ.

ಪಟ್ಟಿಗಳು

ಮುಂಗೈಪಟ್ಟಿ

ಮುಂಗಾಲುಪಟ್ಟಿ

ಮೊಣಕೈಪಟ್ಟಿ

ಮುಮ್ಮೂಲೆ ಪಟ್ಟಿ



ಮುಂಗೈಪಟ್ಟಿ

ಮುಂಗಾಲುಪಟ್ಟಿ

ಮೊಣಕೈಪಟ್ಟಿ

ಮೊಣಕೈಪಟ್ಟಿ

ಹಸ್ತಪಟ್ಟಿ

ಪಾದಪಟ್ಟಿ



ತಲೆಪಟ್ಟಿ

ಎದೆಪಟ್ಟಿ

ಚಿತ್ರ ನೋಡಿ ಪರಸ್ಪರ ಅಭ್ಯಾಸ ಮಾಡಿಕೊಳ್ಳಿ

ಗಾಯಗಳು :

1) ಕತ್ತರಿಸಿದ ಗಾಯ : ಲೋಹದ ಅಥವಾ ಯಾವುದಾದರೂ ಹರಿತವಾದ ಅಥವಾ ಚೂಪಾದ ಕೊನೆಗಳಿಂದ ಚರ್ಮದ ಮೇಲೆ ಆಗುವ ಕತ್ತರಿಸಿದ, ಕೊಯ್ದ ಗಾಯ. ಕೆಲವೊಮ್ಮೆ ಗಾಯ ಆಳವಾಗಿಯೂ ಆಗಬಹುದು, ಆಗ ಹೊಲಿಸಬೇಕಾಗುತ್ತದೆ. ಗಾಯ ಮೇಲ್ಮೈಯಲ್ಲಾಗಿದ್ದರೆ, ಹೆಚ್ಚು ರಕ್ತಸ್ರಾವವಿಲ್ಲದಿದ್ದರೆ ಗಾಯವನ್ನು ಕ್ರಿಮಿನಾಶಕ ದ್ರಾವಣದಲ್ಲಿ ಅದ್ದಿದ ಹತ್ತಿಯಿಂದ ಒರೆಸಿ ಶುಚಿ ಮಾಡಿ ನಂತರ ಬೆರಳುಗಳಿಂದ ಒತ್ತಡ ಹಾಕಿ. ರಕ್ತಸ್ರಾವ ನಿಂತಿರುವುದು ಖಾತ್ರಿಯಾದ ಮೇಲೆ ನಿಧಾನವಾಗಿ ಒತ್ತಡವನ್ನು ಸಡಿಲಿಸಿ, ಗಾಯ ದೊಡ್ಡದಾಗಿದ್ದರೆ ವೈದ್ಯರ ಬಳಿ ಕರೆದುಕೊಂಡು ಹೋಗಿ. ಇಲ್ಲದಿದ್ದರೆ ನೆಬಾಸಲ್ಪ / ಪೆನಿಸಿಲಿನ್ ಆಯಿಂಟ್‌ಮೆಂಟ್ ಹಚ್ಚಿ.

ಹಳೆಯ ಮೊಳೆ, ಕತ್ತಿ, ಚೂಪಾದ ಮೊನಚಾದ ಲೋಹದ ಚೂರಿನಿಂದ ಗಾಯವಾಗಿದ್ದರೆ ವೈದ್ಯರ ಬಳಿಗೆ ಕೂಡಲೆ (6 ಗಂಟೆಗಳ ಒಳಗೆ) ಹೋಗಿ ಟೆಟವಾಕ್ (ಟೆಟನಸ್ ನಿರೋಧಕ ಚುಚ್ಚುಮದ್ದು) ಕೊಡಿಸಬೇಕು.

ಕ್ರಿಮಿನಾಶಕ ದ್ರಾವಣ : ಒಂದು ಲೀಟರ್ ನೀರಿಗೆ 6 ರಿಂದ 10 ಹನಿ ಡೆಟಾಲ್ ಸಾವಲಾನ್ ಹಾಕಿ ಕಲಕಿ ದುರ್ಬಲ ದ್ರಾವಣ ಮಾಡಿಕೊಂಡು ಗಾಯವನ್ನು ಒರಿಸಿ.

2) ತರಚು ಗಾಯ : ಚರ್ಮ ಛಿದ್ರವಾಗಿರುತ್ತದೆ. ಈ ಗಾಯ ಒಂದು ನೆಲದ ಮೇಲೆ ಅಥವಾ ಮಣ್ಣಿನ ಮೇಲೆ ಬಿದ್ದಾಗ ಆಗುತ್ತದೆ. ಚರ್ಮದ ಕೆಳಗೆ ಕೆಂಪು ಮಾಂಸದ ಪದರ ಕಾಣುತ್ತದೆ. ಇದು ಮೇಲ್ಮೈಗಾಯ. ಇದನ್ನು ಕ್ರಿಮಿನಾಶಕ ದ್ರಾವಣದಲ್ಲಿ ಹತ್ತಿ ಅದ್ದಿ ಮೃದುವಾಗಿ ಶುದ್ಧಮಾಡಿ, ಕ್ರಿಮಿನಾಶಕ ಪುಡಿ (Nebasulf / Pencilin ointment) ಹಚ್ಚಿ, ಗಾಯಕ್ಕೆ ಪಟ್ಟಿಕಟ್ಟುವ ಅವಶ್ಯಕತೆ ಇಲ್ಲ.

ಗಾಯಕ್ಕೆ ಮಣ್ಣು ಅಂಟಿದ್ದರೆ ವೈದ್ಯರಲ್ಲಿಗೆ ಹೋಗಿ ಧನುರ್ವಾಯು (Tetawak) ನಿರೋಧಕ ಚುಚ್ಚುಮದ್ದನ್ನು ತೆಗೆದುಕೊಳ್ಳಬೇಕು. ಆರು ಘಂಟೆ ಒಳಗೆ ತೆಗೆದುಕೊಳ್ಳಬೇಕೆಂಬುದನ್ನು ಮರೆಯಬೇಡಿ.

ಚಟುವಟಿಕೆ–1 :

ದ್ವಿತೀಯ ಸೋಪಾನದ ಮಿತಿಯಲ್ಲಿ ಗುಟ್ಟಾಗಿ ಒಂದು ಸನ್ನಿವೇಶ ಸೃಷ್ಟಿಸಿ ಅನಿರೀಕ್ಷಿತ ಅಪಾಯದ ಸೀಟಿ ಕರೆ ನೀಡಿ. ಪ್ರಶಿಕ್ಷಣಾರ್ಥಿಗಳು ಗಮನಿಸಿ, ಸನ್ನಿವೇಶದಲ್ಲಿ ನೀಡಿರುವ ಕೃತಕ ಸಂದರ್ಭಗಳಿಗೆ ಪ್ರಥಮ ಚಿಕಿತ್ಸೆ ನೀಡಬೇಕು.

ಚಟುವಟಿಕೆ–2 :

ಪಟಾಲಂದಿಂದ ಒಂದು ಗೈಡನ್ನು ನಿಲ್ಲಿಸಿ, ಅವರಿಗೆ ಇದಿರಾಗಿ 20–30 ಹೆಜ್ಜೆ ಅಂತರದಲ್ಲಿ (ಓಡಿ ಬರಲಿ) ಅಷ್ಟಕವನ್ನು ಸಾಲಾಗಿ ನಿಲ್ಲಿಸಿ. ಒಂದೇ ಹುಡುಗಿಯ ಮೇಲೆ ಒಬ್ಬೊಬ್ಬರು ಬಂದು ಒಂದು ಬ್ಯಾಂಡೇಜ್ ಕಟ್ಟಲಿ. ರಿಲೇ ಆಟದಂತೆ ಆಡಿಸಿ. ಇದು ಸ್ಪರ್ಧೆಯಾಗಿರಲಿ. ಮೌಲ್ಯಮಾಪನವಾಗಿರಲಿ.

ದ್ವಿತೀಯ ಸೋಪಾನ – ಪ್ರಥಮ ಚಿಕಿತ್ಸೆ
ಭಾಗ–2

ಪ್ರಥಮ ಸೋಪಾನದಲ್ಲಿ ಪ್ರಥಮ ಚಿಕಿತ್ಸೆಯ ಕಲಿಕೆ ಆರಂಭವಾಯಿತು. ಈಗ ಮುಂದುವರಿದ ಚಿಕಿತ್ಸೆಯನ್ನು ಪ್ರಾಯೋಗಿಕವಾಗಿ ಅಭ್ಯಾಸ ಮಾಡಿ ಹೆಚ್ಚಿನ ಅನುಭವ ಪಡೆಯಿರಿ. ಇದು ನಿಮಗೂ ಅವಶ್ಯಕ ಹಾಗೂ ಸಮಯದಲ್ಲಿ ನೀವು ಇತರರಿಗೂ ಉಪಯುಕ್ತರಾಗುತ್ತೀರಿ.



ಗಾಯಾಳುಗಳನ್ನು ಸಾಗಿಸುವ ವಿಧಾನ :

1. ತಾತ್ಕಾಲಿಕ ಡೋಲಿ ಅಥವಾ ಕೈಮಂಚ (Stretcher) :



ಗಾಯಾಳುಗಳನ್ನು, ರೋಗಿಗಳನ್ನು ಸುರಕ್ಷಿತವಾಗಿ ಸಾಗಿಸಲು ಕೈಮಂಚ/ಡೋಲಿ ಬಹಳ ಉಪಯುಕ್ತವಾಗುವುದು. ಇದನ್ನು ಸ್ಥಳದಲ್ಲಿ ದೊರೆಯುವ ವಸ್ತುಗಳಿಂದ ತಯಾರಿಸಿಕೊಂಡು ಗಾಯಾಳುಗಳನ್ನು ಸಾಗಿಸಬಹುದು. ಗೈಡಾಗಿ ನೀವು ಶಿಬಿರವಾಸ/ಹೊರಸಂಚಾರಕ್ಕೆ ಹೊರಟಾಗ ಎರಡು ದಂಡಗಳನ್ನು ತುರ್ತುಪರಿಸ್ಥಿತಿಗಾಗಿಯೇ ತೆಗೆದುಕೊಂಡು ಹೋಗಬೇಕು. ಚಿತ್ರಗಳನ್ನು ನೋಡಿ ಡೋಲಿ ತಯಾರಿಸಿ, ಗಾಯಾಳುವನ್ನು ನೆಲದಿಂದ ಡೋಲಿಯ ಮೇಲೆ ಮಲಗಿಸುವುದನ್ನು ಡೋಲಿಯನ್ನು ಎತ್ತಿಕೊಂಡು ನಡೆಯುವುದನ್ನು, ಡೋಲಿಯಿಂದ ಎತ್ತಿ ಮಂಚದ ಮೇಲೆ ಮಲಗಿಸುವುದನ್ನು ಅಭ್ಯಾಸ ಮಾಡಿ.

2. ಗಾಯಾಳುವನ್ನು ಒಬ್ಬರೇ ಸಾಗಿಸುವ ವಿವಿಧ ವಿಧಾನಗಳು :

3. ಗಾಯಾಳುವನ್ನು ಇಬ್ಬರು ಸಾಗಿಸುವ ವಿವಿಧ ವಿಧಾನಗಳು :



ಜೀವರಕ್ಷಕ ಸೂತ್ರ (Life line)

ನೀರಿನಲ್ಲಿ ಮುಳುಗಿದವರನ್ನು ಪ್ರಜ್ಞೆ ಇದ್ದಾಗ ಮಾತ್ರ ಹೊರತರಲು ಉಪಯೋಗಿಸುವ ಸಾಧನ. ಕನಿಷ್ಠ 10 ಮೀಟರ್ ಉದ್ದ ಗಟ್ಟಿಯಾದ ಹಗ್ಗದ (ದೂರಕ್ಕೆ ತಕ್ಕ ಉದ್ದ ಹಗ್ಗ) ಒಂದು ತುದಿಗೆ ಭಾರ ಕಟ್ಟಬೇಕು. ಈ ಭಾರದಿಂದ ಮುಳುಗುತ್ತಿರುವವರಿಗೆ ಪೆಟ್ಟಾಗಬಾರದು.

ಉಳಿದ ಹಗ್ಗವನ್ನು ಬಿಡಿ ಬಿಡಿಯಾಗಿ ಗಂಟಾಗದಂತೆ ಸುರುಳಿ ಸುತ್ತಿ ಕೈಗೆ ಹಾಕಿಕೊಂಡು ಮುಳುಗುತ್ತಿರುವವರಿಗೆ ಗುರಿ ಇಟ್ಟು ಎಸೆಯಿರಿ. ಸುರುಳಿ ಬಿಚ್ಚುತ್ತಾ ಹೋಗುತ್ತದೆ. ಮುಳುಗುವವರು ಇದನ್ನು ಹಿಡಿದುಕೊಂಡ ಮೇಲೆ ನೀವು ಹಿಂದಕ್ಕೆ ಸರಿಯುತ್ತಾ ಭದ್ರವಾದ ಹೆಜ್ಜೆಗಳನ್ನು ಬಿಗಿಯಾಗಿಡುತ್ತಾ ದಡಕ್ಕೆ ಎಳೆಯಿರಿ. ನೀವು ಸ್ವಲ್ಪ ಎಚ್ಚರ ತಪ್ಪಿದರೂ ಅವರ ಸೆಳೆತಕ್ಕೆ ಸಿಕ್ಕುವಿರಿ. ದಡಕ್ಕೆ ಬಂದ ತಕ್ಷಣ ಸಂದರ್ಭಕ್ಕೆ ತಕ್ಕಂತೆ ಪ್ರಥಮೋಪಚಾರ ಮಾಡಿ.

ಚಿತ್ರ ನೋಡಿ, ಗುರಿ ಇಟ್ಟು ಎಸೆಯುವುದನ್ನು ಚೆನ್ನಾಗಿ ಅಭ್ಯಾಸ ಮಾಡಿ.

ಸುಟ್ಟ ಗಾಯ (Burns) : ಕಾದಲೋಹ, ಬಿಸಿಪಾತ್ರೆ, ಕಾದ ವಿದ್ಯುತ್ ಉಪಕರಣ, ಆಮ್ಲ, ಕ್ಷಾರ, ನೇರವಾದ ಬೆಂಕಿಜಾಲ್ವೆ, ಕೆಂಡಗಳಿಂದ ಸುಟ್ಟ ಗಾಯ ಉಂಟಾಗುತ್ತದೆ. ಕೆಲವೊಮ್ಮೆ ಸುಟ್ಟಗಾಯದ ಮೇಲೆ ಹೊಪ್ಪಳೆಗಳೂ ಬರಬಹುದು. ಚರ್ಮ ಮೊದಲು ಕೆಂಪಾಗುವುದು ಕ್ರಮೇಣ ಕಪ್ಪಾಗುವುದು. ಗಾಯ ಉರಿಯಿಂದ ಕೂಡಿರುವುದು.

ಸುಟ್ಟಗಾಯ ಚಿಕ್ಕದಾಗಲಿ, ದೊಡ್ಡದಾಗಲಿ ಅದರ ಮೇಲೆ ಸತತವಾಗಿ ತಣ್ಣೀರು ಹರಿಸಿ, (ಗಾಯದ ಪ್ರಮಾಣ ಅನುಸರಿಸಿ) ನಂತರ ಹೊಪ್ಪಳೆ ಇದ್ದರೆ ಒಡೆಯದಂತೆ ಬರ್ನಾಲ್‌ನ್ನು ಮೃದುವಾಗಿ ಲೇಪಿಸಿ ಸ್ವಚ್ಛ ಬಿಳಿ ಹತ್ತಿ ಬಟ್ಟೆಯಿಂದ ಸಡಿಲವಾಗಿ ಗಾಯವನ್ನು ಸುತ್ತಿ, ವೈದ್ಯರಲ್ಲಿಗೆ ಕರೆದುಕೊಂಡು ಹೋಗಿ, ಗಾಯ ಹೇಗಾಯಿತು ಎಂಬ ಬಗ್ಗೆ ಚರ್ಚಿಸುವುದಕ್ಕಿಂತ ಅವರ ಆತಂಕ ದೂರ ಮಾಡಿ, ಕುಡಿಯಲು ತಂಪು ಪಾನೀಯ ಕೊಡಿ. ಗಾಯಾಳುವಿನ ಗಾಯದ ಮುಂದೆ ಕೆಮ್ಮಬಾರದು. ಸೀನಬಾರದು. ಅನವಶ್ಯಕವಾಗಿ ಗಾಯ ಮುಟ್ಟಬಾರದು. ಹೀಗೆ ಮಾಡಿದರೆ ಗಾಯ ಸೋಂಕಿಗೆ ಒಳಗಾಗುತ್ತದೆ.

ಬೆಂದ ಗಾಯ (Scalds) : ಕುದಿಯುವ ದ್ರವಗಳಿಂದ / ದ್ರವಲೋಹಗಳಿಂದ / ದೊಡ್ಡ ಪ್ರಮಾಣದ ಬೆಂಕಿಯಿಂದ ಬೆಂದ ಗಾಯವಾಗುತ್ತದೆ. ಇದರಲ್ಲಿ ಹೊಪ್ಪಳೆಗಳು ಕಾಣಿಸಿಕೊಳ್ಳುತ್ತದೆ. ಇದರ ಮೇಲೆ ಚೆನ್ನಾಗಿ ತಣ್ಣೀರು ಹಾಯಿಸಿ, ಗಾಯ ತಂಪು ಮಾಡುವುದರಿಂದ ಗಾಯದ ಆಳ ಕಡಿಮೆಯಾಗುತ್ತದೆ. ಹೊಪ್ಪಳೆಗಳನ್ನು ಒಡೆಯಬೇಡಿ. ಏನನ್ನೂ ಹಚ್ಚಬೇಡಿ. ಸ್ವಚ್ಛವಾದ ಬಿಳಿ ಹತ್ತಿ ಬಟ್ಟೆಯನ್ನು ಸಡಿಲವಾಗಿ ಸುತ್ತಿ. ತಂಪು ಪಾನೀಯ ಕೊಟ್ಟು ಆತಂಕ ದೂರಮಾಡುತ್ತಾ ವೈದ್ಯರಲ್ಲಿಗೆ ಕರೆದುಕೊಂಡು ಹೋಗಿ.

ಬೆಂಕಿ ದೇಹದ ಮೇಲೆ ಹತ್ತಿ ಉರಿಯುತ್ತಿದ್ದರೆ, ನೆಲದ ಮೇಲೆ ಬೀಳಿಸಿ (ಮಲಗಿಸಿ) ಉರುಳಾಡಿಸಿ. ಇಲ್ಲವೆ ದಪ್ಪ ಕಂಬಳಿಯನ್ನು ಅವರಿಗೆ ಸುತ್ತಿ ನೆಲದ ಮೇಲೆ ಉರುಳಿಸಬೇಕು. ಅವರನ್ನು ಓಡಲು ಬಿಡಬಾರದು. ಗಾಳಿ ಬೀಸಿದಾಗ ಬೆಂಕಿ ಜೋರಾಗುತ್ತದೆ. ಹೀಗೆ ಮಾಡುವಾಗ ಆತುರಕ್ಕೆ ಒಳಗಾಗದಂತೆ ನಿಮ್ಮನ್ನು ನೀವು ರಕ್ಷಿಸಿಕೊಳ್ಳುವುದನ್ನು ಮರೆಯಬಾರದು.

ಕಡಿತಗಳು (Bites) : ಮನುಷ್ಯರನ್ನು ಪ್ರಾಣಿಗಳು ಕೆಲವೊಮ್ಮೆ ಕಚ್ಚುತ್ತವೆ. ಇದರಿಂದ ಗಾಯ ಉಂಟಾಗುತ್ತದೆ. ಗಾಯ. ತೀವ್ರವಾದರೆ ಮಾಂಸಖಂಡ ಹರಿದು ರಕ್ತಸ್ರಾವವಾಗುತ್ತದೆ. ವಿಷ ಪ್ರಾಣಿಗಳಿಂದಾದ ಗಾಯಕ್ಕೆ ಶಮನಕಾರಿ ಚಿಕಿತ್ಸೆ ಮಾಡಿ ವೈದ್ಯರಲ್ಲಿಗೆ ಕರೆದುಕೊಂಡು ಹೋಗಬೇಕು. ರಕ್ತಸ್ರಾವವಾಗುತ್ತಿದ್ದರೆ ನಿಲ್ಲಿಸುವುದು ಗಾಯಕ್ಕೆ ಕ್ರಿಮಿನಾಶಕ ವಸ್ತು ಹಾಕಿ ಪಟ್ಟಿಕಟ್ಟಿ ವೈದ್ಯರನ್ನು ಸಂಪರ್ಕಿಸುವುದು.

ಹಾವು, ನಾಯಿಯಂತಹ ಅಪಾಯಕಾರಿ ಪ್ರಾಣಿ ಕಚ್ಚಿದಾಗ ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಸಮಯ ವ್ಯರ್ಥ ಮಾಡದಂತೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು.

ಹಾವಿನ ಕಡಿತ : ಎಲ್ಲಾ ಹಾವು ವಿಷಪೂರಿತವಲ್ಲ. ಆದರೆ ಹಾವು ಎಂಬ ಪದವೇ ನಮ್ಮನ್ನು ಆಘಾತಕ್ಕೆ ಈಡುಮಾಡುತ್ತದೆ. ಆದ್ದರಿಂದ ಹಾವಿನ ಬಗ್ಗೆ ತಿಳಿದುಕೊಳ್ಳಬೇಕು. ಅಂತಹ ಸಂದರ್ಭಗಳಲ್ಲಿ ಧೈರ್ಯವಾಗಿರಬೇಕು. ತಕ್ಷಣ ಕ್ರಮಕೈಗೊಳ್ಳಬೇಕು.

ಮೂಗಿನಿಂದ ರಕ್ತಸ್ರಾವ : ಮೂಗಿನಿಂದಾಗುವ ಸಾಮಾನ್ಯ ರಕ್ತಸ್ರಾವವು ಹೆಚ್ಚು ಅಪಯಕಾರಿಯಲ್ಲ. ಆದರೆ ತಲೆಗೆ ಪೆಟ್ಟಾದಾಗ ಮೂಗಿನಿಂದ ಆಗುವ ರಕ್ತಸ್ರಾವ ಅಪಾಯಕಾರಿಯಾಗಿರುತ್ತದೆ.

ಗಾಳಿಯಲ್ಲಿ ಕೂರಿಸಿ, ತಲೆ ತಗ್ಗಿಸಿ ಮೂಗಿನ ಮೇಲ್ಭಾಗ ಒತ್ತಿ ಹಿಡಿಯಿರಿ. ಬಾಯಿಯಿಂದ ಉಸಿರಾಡುವಂತೆ ಹೇಳಿ ಮಂಜುಗಡ್ಡೆ ಅಥವಾ ತಣ್ಣೀರನ್ನು ಮೂಗಿನ ಮೇಲೆ ಬಟ್ಟೆಯಲ್ಲಿ ಸುತ್ತಿಡಿ. ರಕ್ತಸ್ರಾವವು 10 ನಿಮಿಷದಲ್ಲಿ ನಿಲ್ಲದಿದರೆ, ಕೂಡಲೇ ವೈದ್ಯರನ್ನು ಸಂಪರ್ಕಿಸಿ.

ಪ್ರವಚನ:21 ಆರೋಗ್ಯದ ನಿಯಮಗಳು
(Health Rules)

ಉದ್ದೇಶ : ಪ್ರವಚನದ ಕೊನೆಯಲ್ಲಿ ಪ್ರಶಿಕ್ಷಣಾರ್ಥಿಗಳು :

* ಆರೋಗ್ಯದ ನಿಯಮದ ಜೊತೆ ಅಭ್ಯಾಸದ ಮಹತ್ವ ತಿಳಿಯುವರು.
* ಆರೋಗ್ಯದ ನಿರ್ವಹಣೆಯ ಅಗತ್ಯತೆ ಮನಗಾಣುವರು. ಮಕ್ಕಳಿಗೆ, ಇತರರಿಗೆ ಮಾರ್ಗದರ್ಶನ ನೀಡುವರು.
* ಆರೋಗ್ಯಕರ ಅಭ್ಯಾಸ ಮಕ್ಕಳಲ್ಲಿ ಬೆಳೆಸಲು ಸಮರ್ಥರಾಗುವರು.

ವಿಧಾನ : ಪಟಾಲಂ ಚರ್ಚೆ – ಪ್ರಸ್ತುತಿ – ಸಾರಾಂಶೀಕರಣ

1. ಶುದ್ಧಗಾಳಿ :

ಹೀಗೆಂದರೇನು? ಶುದ್ಧಗಾಳಿ ಶೇ.20% ಆಮ್ಲಜನಕದಿಂದ ಕೂಡಿರುತ್ತದೆ. ಇದು ಎಲ್ಲ ಜೀವಿಗಳ ಉಸಿರಾಟಕ್ಕೆ ಅವಶ್ಯಕ. ಜೀವಿಗಳು ಆಮ್ಲಜನಕವನ್ನು ತೆಗೆದುಕೊಂಡು ಇಂಗಾಲದ ಡೈಆಕ್ಸೈಡ್ ಬಿಟ್ಟುಕೊಡುತ್ತವೆ. ಇಂಗಾಲದ ಡೈ ಆಕ್ಸೈಡ್ ಅಂಶ 0.03 ಮಿತಿಗಿಂತ ಗಾಳಿಯಲ್ಲಿ ಹೆಚ್ಚಾದರೆ ಗಾಳಿ ಮಲಿನವಾಗುತ್ತದೆ. ಇದು ಒಂದು ಮುಖ್ಯ ಹಾಗೂ ಸಾಮಾನ್ಯ ಮಲಿನಕಾರಕ. ಮಲಿನವಾಯು ಅನಾರೋಗ್ಯವನ್ನು ಉಂಟು ಮಾಡುತ್ತದೆ. ಗಾಳಿಯನ್ನು ಶುದ್ಧ ಮಾಡುವ ವ್ಯವಸ್ಥೆ ನಿಸರ್ಗದಲ್ಲಿದೆ. ಇಂಗಾಲದ ಡೈಆಕ್ಸೈಡ್‌ನ್ನು ಸಸ್ಯಗಳು ತೆಗೆದುಕೊಂಡು ಆಹಾರ ತಯಾರಿಸುತ್ತವೆ. ಹೀಗೆ ತಯಾರಿಸುವಾಗ ಆಮ್ಲಜನಕ ಬಿಟ್ಟುಕೊಡುತ್ತವೆ. ಹೀಗೆ ಸಸ್ಯಗಳು ಗಾಳಿಯನ್ನು ಶುದ್ಧ ಮಾಡುತ್ತವೆ. ನಾವೇಕೆ ಸಸ್ಯಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಬೇಕೆಂದು ಈಗ ತಿಳಿಯಿತೆ?

ವಾಯು ಮಾಲಿನ್ಯ ನಿಯಂತ್ರಣಕ್ಕೆ ಸಸ್ಯಗಳೇ ಬ್ರಹ್ಮಸ್ತ್ರ –

ಅಭ್ಯಾಸ : ಬೆಳಗಿನ ಗಾಳಿಯಲ್ಲಿ ಬಯಲಿನಲ್ಲಿ ಸಂಚರಿಸಿ, ಬಯಲಿನಲ್ಲಿ ಆಡಿ. ನಿಮ್ಮ ಮನೆ ಮತ್ತು ಶಾಲೆಯಲ್ಲಿ ಸಾಧ್ಯವಾದಷ್ಟು ಸಸ್ಯ ಬೆಳೆಸಿ, ಸಸ್ಯಗಳನ್ನು ಕಾಪಾಡಿ. ಮನೆಯಲ್ಲಿ ಕಿಟಕಿಗಳನ್ನು ತೆರೆದಿಡಿ. ಯಾವಾಗಲೂ ಮೂಗಿನಿಂದ ಉಸಿರಾಡಿ. ಮುಸುಕು ಹಾಕಿಕೊಂಡು ಮಲಗಬೇಡಿ.

2. ವ್ಯಾಯಾಮ :

ವ್ಯಾಯಾಮವು ದೇಹದ ಕ್ರಮಬದ್ಧ ಚಲನೆ. ಇದು ಮಾಂಸಖಂಡಗಳನ್ನು ಸದೃಢಗೊಳಿಸುತ್ತದೆ. ಬೆವರನ್ನು ಹೊರಹಾಕುತ್ತದೆ. ರಕ್ತಪರಿಚಲನೆಯನ್ನು ಸುಸ್ಥಿತಿಯಲ್ಲಿಡುತ್ತದೆ. ಬಿ.ಪಿ.ಯವರು 6 ವ್ಯಾಯಾಮಗಳನ್ನು ರೂಪಿಸಿದ್ದಾರೆ. ಇದನ್ನು ಬಿ.ಪಿ.ಯ ಷಟ್ಕ (B.P. Six) ಎನ್ನುತ್ತೇವೆ. ಇದನ್ನು ಬೆಳಗಿನ ಹೊತ್ತು ಮಾಡುವುದು ಆರೋಗ್ಯಕರ, ಇದಕ್ಕೆ ಪರ್ಯಾಯವಾಗಿ ಸೂರ್ಯ ನಮಸ್ಕಾರ ಅಥವಾ ಯೋಗಾಭ್ಯಾಸಗಳನ್ನು ಮಾಡಬಹುದು.

ಅಭ್ಯಾಸ : ಬಿ.ಪಿ. ಷಟ್ಕ, ವಾಯುವಿಹಾರ, ಓಟ, ಯೋಗ, ಸೂರ್ಯ ನಮಸ್ಕಾರ, ಇವುಗಳಲ್ಲಿ ಯಾವುದಾದರೂ ನಿತ್ಯವೂ ಬೆಳಿಗ್ಗೆ ಮಾಡುವ ಅಭ್ಯಾಸ ಮಾಡಿಕೊಳ್ಳಿ. ಚುರುಕಾಗಿ ಕೆಲಸ ಮಾಡುವುದು ನಡೆದಾಡುವುದೂ ಒಂದು ನೈಜ ವ್ಯಾಯಾಮ. ಆಟವು ಒಂದು ಆನಂದಮಯ ಅನಿಯಂತ್ರಿತ ವ್ಯಾಯಾಯ. ಚೆನ್ನಾಗಿ ಆಡಿ.

3. ಸ್ವಚ್ಛತೆ :

ದೇಹದ ಸ್ವಚ್ಛತೆ : ನಾವು ಸಂತೋಷವಾಗಿ ಆರೋಗ್ಯವಾಗಿರಬೇಕಾದರೆ ಸ್ವಚ್ಛತೆ ಬಹಳ ಮುಖ್ಯ ಹಲ್ಲುಗಳನ್ನು ಚೆನ್ನಾಗಿ ಉಜ್ಜಿ ತೊಳೆಯುವುದು, ದಿನವೂ ಸ್ನಾನ ಮಾಡುವುದು, ಚರ್ಮ, ಉಗುರು, ಮೂಗು ಮತ್ತು ಕೂದಲನ್ನು ಸ್ವಚ್ಛವಾಗಿಟ್ಟುಕೊಳ್ಳಿ. ಸ್ವಚ್ಛವಾದ ಉಡುಪನ್ನು ಧರಿಸಬೇಕು.

ಮಾನಸಿಕ ಸ್ವಚ್ಛತೆ : ಒಳ್ಳೆಯ ಆಲೋಚನೆ ಮಾಡಿ, ಕೆಟ್ಟ ವಿಚಾರವನ್ನು ಮನಸ್ಸಿನಿಂದ ದೂರವಿಡಿ. ಎಲ್ಲದರಲ್ಲೂ ಒಳ್ಳೆಯತನ ಮತ್ತು ಸೌಂದರ್ಯವನ್ನು ಕಾಣಿ. ತಪ್ಪನ್ನು ಒಪ್ಪಿಕೊಳ್ಳಿ. ಪುನಃ ಅದೇ ತಪ್ಪನ್ನು ಮಾಡಬೇಡಿ. ಸೋಮಾರಿಯಾಗಿರಬೇಡಿ. "ಸೋಮಾರಿಯ ತಲೆ ದೆವ್ವದ ಕಾರ್ಖಾನೆ". ದೇವರನ್ನು ಪ್ರಾರ್ಥಿಸಿ, ಧ್ಯಾನವನ್ನು ಮಾಡಿ.

ಸುತ್ತಮುತ್ತಲಿನ ಸ್ವಚ್ಛತೆ : ನಿಮ್ಮ ಸುತ್ತಲನ್ನು ಸ್ವಚ್ಛವಾಗಿಡಿ, ನಿಮ್ಮ ಮನೆ ಶಾಲೆಯನ್ನು ಚೆನ್ನಾಗಿ ಗುಡಿಸಿ, ಒರೆಸಿ, ಧೂಳು ಝಾಡಿಸಿ. ಅಂಗಳಗಳನ್ನು ಸ್ವಚ್ಛಮಾಡಿ, ಕಸಗಳನ್ನು ಅಲ್ಲಿ ಇಲ್ಲಿ ಎಸೆಯಬೇಡಿ. ಕಸವನ್ನು ಸರಿಯಾಗಿ ವಿಲೇವಾರಿ ಮಾಡಿ.

ಅಭ್ಯಾಸ : ಸ್ವಚ್ಛತೆ ಅಚ್ಚುಕಟ್ಟುತನವನ್ನು ಅಭ್ಯಾಸ ಮಾಡಿಕೊಳ್ಳಿ. ಆರೋಗ್ಯ ನಿಮ್ಮ ಭಾಗ್ಯವಾಗುತ್ತದೆ.

ಸೂರ್ಯನ ಬೆಳಕು : ಇದು ಜೀವಿಗಳ ಶಕ್ತಿಯ ಮುಖ್ಯವಾದ ಮೂಲ ಹಾಗೂ ವೆಚ್ಚ ರಹಿತ ಶಕ್ತಿಯ ನೈಸರ್ಗಿಕ ಮೂಲ. ನಮಗೆ ಬದುಕಲು ಮತ್ತು ಕೆಲಸ ಮಾಡಲು ಶಕ್ತಿಬೇಕು. ಇದು ನಮಗೆ ಹೇಗೆ ದೊರೆಯುತ್ತದೆ? ಸಸ್ಯಗಳು ಸೂರ್ಯನ ಬೆಳಕು ಅಥವಾ ಸೌರಶಕ್ತಿಯನ್ನು ಉಪಯೋಗಿಸಿಕೊಂಡು ಆಹಾರ ತಯಾರಿಸುತ್ತವೆ. ನಾವು ಆಹಾರವನ್ನು ಸೇವಿಸುವುದರ ಮೂಲಕ ಸೌರಶಕ್ತಿಯನ್ನು ಪಡೆಯುತ್ತೇವೆ.

ಅಭ್ಯಾಸ : ಸೌರಶಕ್ತಿಯಿಂದ ನೀರು ಕಾಯಿಸುತ್ತೇವೆ, ಸೌರಕುಕ್ಕರ್ ಬಳಸಿ ಅಡಿಗೆ ಮಾಡಬಹುದು, ಧವಸಧಾನ್ಯಗಳನ್ನು ಬಿಸಿಲಿಗೆ ಹರಡಿ, ಕೆಲವು ತರಕಾರಿ–ಹಣ್ಣುಗಳನ್ನು, ಹಪ್ಪಳ ಸಂಡಿಗೆಗಳನ್ನು ಬಿಸಿಲಿಗೆ ಒಣಗಿಸಿ ಸಂಗ್ರಹಿಸುತ್ತೇವೆ. ಸೌರಶಕ್ತಿಯನ್ನು ಉರುವಲಿಗೆ ಬದಲಾಗಿ ಉಪಯೋಗಿಸಬಹುದು.

ಎಳೆಬಿಸಿಲು, ಇಳಿಬಿಸಿಲಿನಲ್ಲಿ ಸಂಚರಿಸಿ ಚೆನ್ನಾಗಿ ಆಟವಾಡಿದರೆ ಸೌರಶಕ್ತಿ ಪಡೆಯುವಿರಿ. ಸೌರ ಶಕ್ತಿ ಮೂಳೆಯ ಬಲವರ್ಧನೆಗೆ ಬೇಕಾದ 'ಡಿ' ಜೀವಸತ್ವವನ್ನು ದೇಹದಲ್ಲಿ ಸಂಸ್ಕರಿಸುತ್ತದೆ. ಸೌರಶಕ್ತಿ ಬಗ್ಗೆ ತಿಳಿದು, ತಿಳಿಸಿ, ಬಳಸಿ. ಹಣ ಮತ್ತು ವಿದ್ಯುಚ್ಛಕ್ತಿ ಉಳಿಸಿ. ಸೂರ್ಯನ ಬೆಳಕು ಕ್ರಿಮಿನಾಶಕ. ಸಾಧ್ಯವಾದಷ್ಟು ಬಿಸಿಲಿಗೆ ದೇಹ ಒಡ್ಡಿ.

4. ಮನರಂಜನೆ :

ಇದು ಎಲ್ಲರಿಗೂ ಆನಂದ ನೀಡುತ್ತದೆ. ಶ್ರಮ, ಆಯಾಸ ಮತ್ತು ಚಿಂತೆಗಳನ್ನು ಸ್ವಲ್ಪ ಸಮಯ ದೂರಮಾಡುತ್ತದೆ. ಒಳ್ಳೆಯ ಸಂದೇಶಗಳನ್ನು ಕೊಡುತ್ತದೆ. ಮನರಂಜನೆ ನೀಡುವ ಪ್ರತಿಭೆಯು ಬೆಳೆಯುತ್ತದೆ.

ಅಭ್ಯಾಸ : ಆಧುನಿಕ ಕಾಲದ ಅವಿಶ್ರಾಂತ ಬದುಕಿನಲ್ಲಿ ಮನರಂಜನೆಗಾಗಿ ಸಮಯ ಗೊತ್ತುಪಡಿಸಿಕೊಳ್ಳಿ. ಇದರಿಂದ ನಿಮ್ಮ ಕಾರ್ಯಸಾಮರ್ಥ್ಯ ಹೆಚ್ಚುತ್ತವೆ. ನಿಮ್ಮ ಪ್ರತಿಭೆ ಮತ್ತು ಮಾತುಗಾರಿಕೆಯಿಂದ ಮನರಂಜನೆ ನೀಡಿ, ಅಗ್ಗದ ಮನರಂಜನೆಗೆ ಬಲಿಯಾಗಬೇಡಿ.

5. ಉಡುಪು :

ಉಡುಪುಗಳು ಸಡಿಲವಾಗಿರಬೇಕು. ಸಡಿಲ ಉಡುಪು ದೇಹದ ಅಂಗಾಗಗಳ ಚಲನೆಗೆ ಮತ್ತು ಬೆವರನ್ನು ಹೊರ ಹಾಕಲು ಅನುಕೂಲವಾಗಿರುತ್ತದೆ. ಋತುಮಾನಕ್ಕೆ ತಕ್ಕಂತೆ ಉಡುಪನ್ನು ಧರಿಸಿ.

ಅಭ್ಯಾಸ : ಬೇಸಿಗೆಯಲ್ಲಿ ತಿಳಿಬಣ್ಣದ ಹತ್ತಿ ಉಡುಪುಗಳನ್ನು ಧರಿಸುವುದು. ದಟ್ಟಬಣ್ಣದ ಉಡುಪುಗಳನ್ನು, ಉಣ್ಣೆ ಬಟ್ಟೆಯನ್ನು ಮಳೆ ಮತ್ತು ಚಳಿಗಾಲದಲ್ಲಿ ಧರಿಸುವುದು. ಚೊಕ್ಕವಾದ ಅಚ್ಚುಕಟ್ಟಾದ ಉಡುಪು ನಿಮ್ಮ ಘನತೆಯನ್ನು ಮತ್ತು ಅಂದವನ್ನು ಹೆಚ್ಚಿಸುತ್ತದೆ.

6. ಆಹಾರ :

ಶ್ರೀಮಂತ ಆಹಾರ ಪೌಷ್ಠಿಕ ಆಹಾರವಲ್ಲ. ನಿಮ್ಮ ನಿತ್ಯ ಊಟದ ಜೊತೆ ಮೊಳಕೆ ಕಾಳು, ಹಸಿ ತರಕಾರಿ, ಆಯಾ ಕಾಲದಲ್ಲಿ ಸಿಗುವ ಹಣ್ಣುಗಳನ್ನು ಸೇರಿಸಿಕೊಳ್ಳಿ. ಕರಿದ ಪದಾರ್ಥಗಳನ್ನು ಕಡಿಮೆ ತಿನ್ನಿ. ಆಹಾರ ಸೇವನೆಯ ಅವಧಿಯ ಅಂತರವನ್ನು ನಿಗದಿಗೊಳಿಸಿಕೊಳ್ಳಿ. ಸಂತೋಷದಿಂದ ಆಹಾರ ಸೇವಿಸಿ, ದೇಹಕ್ಕೆ ಹೆಚ್ಚು ಲಾಭವಾಗುತ್ತದೆ. ಹಳಸಿದ ಆಹಾರ ಮತ್ತು ತೆರೆದಿಟ್ಟ ಆಹಾರವನ್ನು ತಿನ್ನಬೇಡಿ. ಕುಡಿಯುವ ನೀರನ್ನು ಶುದ್ಧವಾದ ಪಾತ್ರೆಯಲ್ಲಿ ಮುಚ್ಚಿಡಿ. ಆಕರ್ಷಕ, ಆಧುನಿಕ ಆಹಾರಕ್ಕೆ (Fast food, Junk food) ದಾಸರಾಗಬೇಡಿ. ಅಪರೂಪವಾಗಿ ಬದಲಾವಣೆಗೆಂದು ಸೇವಿಸಿ.

ವಿಶ್ರಾಂತಿ : ಕೆಲಸದಷ್ಟೇ ವಿಶ್ರಾಂತಿಯು ಮುಖ್ಯ. ಚೆನ್ನಾಗಿ ಚುರುಕಾಗಿ ಕೆಲಸ ಮಾಡಿ, ನಂತರ ವಿಶ್ರಾಂತಿ ಪಡೆಯಿರಿ. ಕೆಲಸ ಬದಲಾಯಿಸಿದಾಗಲೂ ಮನಸ್ಸಿಗೆ ಸಂತಸವಾಗುತ್ತದೆ. ನಿದ್ರಿಸುವಾಗ ಒಳ್ಳೆಯ ಚಿಂತನೆ ಮಾಡಿ. ಮನಸ್ಸು ಶಾಂತಗೊಳಿಸಿ, ರಾತ್ರಿಯಲ್ಲಿ ಸುಮಾರು ಏಳರಿಂದ ಎಂಟು ಗಂಟೆಗಳ ಕಾಲ ಚೆನ್ನಾಗಿ ನಿದ್ರಿಸಿ.

ಚಟುವಟಿಕೆ :

1. ವಸ್ತುಗಳು – ಹಣ್ಣು, ತರಕಾರಿ, ಧಾನ್ಯ, ಕಾಳುಗಳ ಕಾರ್ಡುಗಳಲ್ಲಿ ಚಿತ್ರ ಬಿಡಿಸಿ/ಅಂಟಿಸಿ, ವೃತ್ತ ಹಾಕಿ ಹೆಸರಿಸಿ. ಕಾರ್ಬೋಹೈಡ್ರೆಟ್, ಪ್ರೋಟೀನ್, ಫ್ಯಾಟ್, ಲವಣಾಂಶಗಳು, ಎ, ಬಿ, ಸಿ, ಡಿ. ಆಟಗಾರರು ಒಂದೊಂದು ಕಾರ್ಡು ತಂದು ಸರಿಯಾದ ವೃತ್ತದಲ್ಲಿಡಲಿ.
2. ತಿನ್ನಲು ತಯಾರಿಸಿದ ಊಟದ ಪದಾರ್ಥಗಳು, ತಿಂಡಿ, ಪಾನೀಯಗಳ (ಸಸ್ಯಾಹಾರಿ ಮತ್ತು ಮಾಂಸಾಹಾರಿ ಇರಲಿ) ಕಾರ್ಡುಗಳನ್ನು ಮಾಡಿ. ಪೌಷ್ಠಿಕ ತಿಂಡಿ, ಪೌಷ್ಠಿಕ ಪಾನಿಯಗಳು ಪೌಷ್ಠಿಕ ಊಟ ಎಂದು ವೃತ್ತ ಹಾಕಿ. ಆಟಗಾರರು ಪಟಾಲಂವಾರು ಕಾರ್ಡು ಆರಿಸಿ ವೃತ್ತದಲ್ಲಿ ಜೋಡಿಸಲಿ.
3. **ನಿರ್ದೇಶನಾಟ** – ವೃತ್ತ / ಎದುರು ಬದುರು ಸಾಲು ಮಾಡಿಸಿ ಕೂಡಿಸಬಹುದು / ನಿಲ್ಲಿಸಬಹುದು. ನಾಯಕರು ಕೈಯಲ್ಲಿ ಒಂದು ಚೆಂಡು ಹಿಡಿದು ಬಂದು ಆಹಾರ ಪದಾರ್ಥದ ಹೆಸರು ಹೇಳುವರು. ವೃತ್ತದಲ್ಲಿರುವ ಯಾರಿಗಾದರೂ ಚೆಂಡು ಎಸೆದು ಅವರ ಚೆಂಡು ಹಿಡಿದು ಅದು ಪೌಷ್ಠಿಕವೋ, ಅಪೌಷ್ಠಿಕವೋ ಎಂದು ಆಹಾರದ ಹೆಸರು ಹೇಳಿ. ಇನ್ನೊಂದು ಪದಾರ್ಥ ಹೇಳುತ್ತಾ ಚೆಂಡನ್ನು ಇನ್ನೊಬ್ಬರಿಗೆ ಎಸೆಯುವರು. ಹೇಳಲು ಬಾರದಿದ್ದರೆ ಚೆಂಡನ್ನು ಪಕ್ಕದವರಿಗೆ ನೀಡಿ, ವೃತ್ತದಿಂದ ಹೊರಗೆ ಎರಡು ಹೆಜ್ಜೆ ಹಿಂದೆ ನಿಲ್ಲುವರು. ಆಟವನ್ನು ಸಮಯ ವಿಷಯವಿದ್ದಷ್ಟೂ ಸುತ್ತು ಆಡಿಸಬಹುದು.
4. ಪೌಷ್ಠಿಕ ಉಪಾಹಾರ ಪಟ್ಟಿ ತಯಾರಿಸಿ.
5. ಒಂದು ಪೌಷ್ಠಿಕ ಭೋಜನ ಪಟ್ಟಿ ತಯಾರಿಸಿ.
6. ಆಹಾರ ಪದಾರ್ಥ ಜೋಡಿಸಿ (ಹೆಸರು ಬರೆಯಿರಿ). ಅವುಗಳಲ್ಲಿ ಶರ್ಕರ, ಪಿಷ್ಠ, ಪ್ರೋಟೀನ್, ಮೇಧಸ್ಸು ಎಂದು ವರ್ಗೀಕರಿಸಲು ಹೇಳಿ.
7. ಈ ವಿಟಮಿನ್‌ಗಳಿಗೆ ಸಂಬಂಧಿಸಿದ 2 ಹಣ್ಣುಗಳನ್ನು, 2 ತರಕಾರಿ ಹೆಸರುಗಳನ್ನು ಬರೆಯಿರಿ.

   ಎ –

   ಬಿ –

   ಸಿ –
8. ಆರೋಗ್ಯವಾಗಿರಲು ಬೇಕಾದ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

ಪ್ರವಚನ:21.1 ಬಿ.ಪಿ. ಷಟ್ಕ ವ್ಯಾಯಾಮ
(B.P. Six Exercise)

ಉದ್ದೇಶ : ಪ್ರವಚನದ ಕೊನೆಯಲ್ಲಿ ಪ್ರಶಿಕ್ಷಣಾರ್ಥಿಗಳು :

* ಬಿ.ಪಿ.ಯವರ 6 ವ್ಯಾಯಾಮ ಕಲಿತು ಮಾಡಿಸಲು ಸಿದ್ಧರಾಗುವರು.
* ಅದರ ಸರಳತೆ ಮೆಚ್ಚುವರು
* ನಿತ್ಯ ಮಾಡಬಹುದೆಂಬ ಮನೋಭಾವ ಹೊಂದುವರು.
* ಇದಕ್ಕೆ ಬದಲಾಗಿ ಯೋಗ / ಸೂರ್ಯ ನಮಸ್ಕಾರ ಮಾಡಿಸಲು ತಯಾರಾಗುವರು.

ವಿಧಾನ : ಪ್ರದರ್ಶನ, ಪ್ರಾತ್ಯಕ್ಷಿಕೆ.

ಬಿ.ಪಿ.ಯವರು ಸದೃಢ ದೇಹದಾರ್ಢ್ಯವನ್ನು ಹೊಂದಿದ್ದರು. ಅವರು ಸರ್ವಾಂಗ ಸದೃಢತೆಗಾಗಿ 6 ವ್ಯಾಯಾಮಗಳನ್ನು ರೂಪಿಸಿದರು. ಈ ವ್ಯಾಯಾಮವನ್ನು ಪ್ರತಿದಿನ ಬೆಳಿಗ್ಗೆ ಅಥವಾ ಸಾಯಂಕಾಲ 10 ನಿಮಿಷ ಕಾಲ ಅಂಗಳದಲ್ಲಿ / ಬಯಲಿನಲ್ಲಿ ಮಾಡಬೇಕು. ಬರಿಗಾಲಿನಲ್ಲಿ ಮಾಡಬೇಕು. ಮೂಗಿನಿಂದ ಉಸಿರು ತೆಗೆದುಕೊಂಡು ಬಾಯಿಯಿಂದ ಲಯಬದ್ಧವಾಗಿ ಬಿಡಬೇಕು. ಈ ವ್ಯಾಯಾಮಕ್ಕೆ ಸಾಧನ ಸಲಕರಣೆಗಳ ಅವಶ್ಯಕತೆ ಇಲ್ಲ. ಪ್ರತಿ ವ್ಯಾಯಾಮವನ್ನು 6 ರಿಂದ 12 ಬಾರಿ ಮಾಡಬೇಕು.

1. **ತಲೆ ಮತ್ತು ಕತ್ತಿಗೆ :** ಹಸ್ತ, ಮುಖ, ಕತ್ತನ್ನು ಕೈಗಳಿಂದ ಉಜ್ಜಿ ಬಿಸಿ ಏರಿಸಿ (Warm up) ತಲೆಯ ಎಲ್ಲಾ ಭಾಗವನ್ನು ಮೃದುವಾಗಿ ಅಮುಕಿ. ವ್ಯಾಯಾಮಕ್ಕೆ ದೇಹ ಸಿದ್ಧವಾಗುತ್ತದೆ. ಇದರ ನಂತರ ಒಂದು ಲೋಟ ತಣ್ಣೀರು ಕುಡಿಯಿರಿ.
2. **ಎದೆಗೆ :** ಈ ವ್ಯಾಯಾಮ ಭುಜ, ಎದೆ, ಹೃದಯ ಮತ್ತು ಶ್ವಾಸಕೋಶಗಳನ್ನು ಬಲಗೊಳಿಸಿ ಅವುಗಳ ಸಬಲತೆಗೆ ಸಹಾಯ ಮಾಡುತ್ತದೆ. ಇದರ ವಿಶೇಷವೆಂದರೆ ಕೈ ಮತ್ತು ಮೇಲೆತ್ತಿ ನೋಡುತ್ತಾ (ದೇವರನ್ನು ನೋಡುತ್ತಾ) ಉಸಿರನ್ನು ಬಲವಾಗಿ ಹೊರತಳ್ಳುತ್ತಾ Thanks ಎನ್ನುತ್ತೇವೆ.
3. **ಉದರಕ್ಕೆ :** ಈ ವ್ಯಾಯಾಯ ಯಕೃತ್ ಮತ್ತು ಕರುಳಿನ ಕಾರ್ಯವನ್ನು ತೀವ್ರಗೊಳಿಸುತ್ತದೆ. ಪಕ್ಕೆಲುಬು ಮತ್ತು ಉದರದ ಸ್ವಾಯುಗಳನ್ನು ಬಲಗೊಳಿಸುತ್ತದೆ. ಕೈಗಳನ್ನು ಲಯಬದ್ಧವಾಗಿ ಚಲಿಸುತ್ತಾ ಎಲ್ಲರ ಒಳಿತಿಗಾಗಿ ಪ್ರಾರ್ಥಿಸುತ್ತೇವೆ.
4. **ಸೊಂಟಕ್ಕೆ :** ಹೊಟ್ಟೆ ಮತ್ತು ಸೊಂಟದ ಸ್ನಾಯು ಬಲಗೊಳ್ಳುತ್ತದೆ. ಮೇಲೆ ನೋಡುತ್ತಾ (ಸ್ವರ್ಗ) ಉನ್ನತ ಭಾವ ಪಡೆಯಬೇಕು. ಕೈಗಳನ್ನು ಸುತ್ತಿಸುತ್ತಾ ಉಸಿರು ಬಿಗಿ ಹಿಡಿದಾಗ ಸದ್ಭಾವನೆ ಮೂಡುತ್ತದೆ.
5. ದೇಹದ ಕೆಳಭಾಗ ಮತ್ತು ಕಾಲಿಗೆ : ಈ ವ್ಯಾಯಾಮ ಪ್ರಾರ್ಥಿಸುತ್ತಾ ಮಾಡಿ. 'ಅಡಿಯಿಂದ ಮುಡಿಯುವರೆಗೆ ನಾನು ನಿನ್ನವ' ಎಂದು ದೇವರಿಗೆ ನಿಮ್ಮನ್ನು ಸಮರ್ಪಿಸಿಕೊಳ್ಳಿ.

6. **ಕಾಲುಗಳ ಪಾದ ಮತ್ತು ಬೆರಳುಗಳಿಗೆ :** ಇದು ತೊಡೆ, ಮೀನುಖಂಡ ಮತ್ತು ಬೆರಳುಗಳು ಹಾಗು ಹೊಟ್ಟೆಗೆ ಉತ್ತಮ ವ್ಯಾಯಾಮ. ಈ ವ್ಯಾಯಾಮ ಅಡಿಯಿಂದ ಮುಡಿಯವರೆಗಿನ ಅಂಗಗಳನ್ನು ಒಟ್ಟುಗೂಡಿಸುತ್ತದೆ. ಹೀಗೆಯೇ ಕೆಲಸ ಅಥವಾ ವಿಶ್ರಾಂತಿಯಲ್ಲಿ ನಿಮ್ಮ ಅಂಗಾಂಗಗಳನ್ನು ಒಟ್ಟುಗೂಡಿಸಿಕೊಂಡು ಕೆಲಸ ಮಾಡಿ.

ಈ ವ್ಯಾಯಾಯ ಮಾಡುವಾಗ ಸರಳ ಹಾಗು ಸಡಿಲ ಉಡುಪು ಧರಿಸಬೇಕು. ಈ ವ್ಯಾಯಾಮಕ್ಕೆ ತಮಗೆ ತಾವೇ ಆಜ್ಞೆ ಕೊಟ್ಟುಕೊಂಡು ಕೈಲಾದಷ್ಟು ವೇಗದಲ್ಲಿ ಮಾಡಿಕೊಳ್ಳಬೇಕು. ಹೇಳಿಕೊಡುವಾಗ 'command for me' ಎಂದು ಒಂದು ವ್ಯಾಯಾಮ ತೋರಿಸಿ ವಿವರಣೆ ನಂತರ 'command for you' ಎಂದು ಹೇಳಿ ವ್ಯಾಯಾಯ ಮಾಡಿಸಬೇಕು.

ಪ್ರವಚನ:22 ಶಿಬಿರವಾಸ
(Camping)

ಉದ್ದೇಶ : ಪ್ರವಚನದ ಅಂತ್ಯದಲ್ಲಿ ಪ್ರಶಿಕ್ಷಣಾರ್ಥಿಗಳು :

* ಶಿಬಿರವಾಸದಿಂದ ಚಾರಿತ್ರ್ಯಾಭಿವೃದ್ಧಿ ಮಾಡಲು ಸಾಧ್ಯ ಎಂದು ಅರಿಯುವರು.
* ಪ್ರಕೃತಿ ಸ್ನೇಹ ಬೆಳೆಸಲು ಶಿಬಿರವಾಸ ಅವಶ್ಯಕತೆ ಮನಗಾಣುವರು.
* ಶಿಬಿರವಾಸದಿಂದ ಜೀವನ ಕೌಶಲ ಬೆಳೆಸಲು ಸಮರ್ಥರಾಗುವರು.
* ಶಿಬಿರವಾಸ ಕಾರ್ಯಕ್ರಮ ಗೈಡಗಳಿಗೆ ಏರ್ಪಡಿಸಲು ಸಮರ್ಥರಾಗುವರು.

ವಿಧಾನ : ಕಥನ, ಹೇಳಿ ಕೇಳಿ.

"ಶಿಬಿರವಾಸ ಮಾಡದೇ ಇರುವ ಸ್ಕೌಟ್ ಪರಿಪೂರ್ಣ ಸ್ಕೌಟ್ ಆಗಲಾರ" ಬಿ.ಪಿ. ಇದಕ್ಕೆ ಗೈಡ್‌ಗಳು ಹೊರತಲ್ಲ. ಶಿಬಿರವಾಸ ಗೈಡ್ ಕಾರ್ಯಕ್ರಮದ ಅವಿಭಾಜ್ಯ ಅಂಶ. ದ್ವಿತೀಯ ಸೋಪಾನದ ಮಕ್ಕಳಿಗೆ ಶಿಬಿರವಾಸದ ಪರಿಚಯ ಮಾಡಬೇಕು. ಗೈಡಿಂಗ್‌ನಲ್ಲಿ ಹೊರಸಂಚಾರ, ಪ್ರಕೃತಿ ಅಧ್ಯಯನ, ಸಾಹಸ, ಚಾರಣ, ಪರ್ವತಾರೋಹಣ, ಅನ್ವೇಷಣೆಯಲ್ಲಿ ತೊಡಗಿದಾಗ ಕಾಡುಮೇಡುಗಳಲ್ಲಿ, ಬಯಲುಗಳಲ್ಲಿ ವಾಸ ಮಾಡಬೇಕಾದ ಸಂದರ್ಭ ಒದಗುತ್ತದೆ. ಆಗ ಸಿದ್ಧ ಗುಡಾರ ಹಾಕಿಕೊಂಡು ಅಥವಾ ಗುಡಾರ, ಗುಡಿಸಲು, ಮರದ ಮೇಲೆ ಅಟ್ಟಣಿ ಕಟ್ಟಿಕೊಂಡು ವಾಸ ಮಾಡಬೇಕಾಗುತ್ತದೆ.

ಸಾಧಾರಣವಾಗಿ ಗೈಡ್ ಕಾರ್ಯಕ್ರಮಗಳಲ್ಲಿ, ತರಬೇತಿ, ಪರೀಕ್ಷೆ, ಪ್ರಕೃತಿ ಅಧ್ಯಯನ, ಹೊರಸಂಚಾರ, ಚಾರಣ, ಅನ್ವೇಷಣೆ ಮುಂತಾದವುಗಳಿಗಾಗಿ ಶಿಬಿರವಾಸ ಏರ್ಪಡಿಸಲಾಗುತ್ತದೆ.

ಶಿಬಿರವಾಸ ಏರ್ಪಡಿಸುವಾಗ ಅನುಸರಿಸಬೇಕಾದ ಪ್ರಕ್ರಿಯೆ :

* ಶಿಬಿರವಾಸದ ಉದ್ದೇಶ ಗೊತ್ತುಪಡಿಸಿಕೊಳ್ಳಬೇಕು.
* ಸ್ಥಳ ಗೊತ್ತುಪಡಿಸಬೇಕು, ಅದರ ಪರಿಚಯವಿರಬೇಕು, ಇಲ್ಲವೇ ಪರಿಚಯ ಮಾಡಿಕೊಳ್ಳಬೇಕು.
* ಗೌರವ ನ್ಯಾಯ ಸಭೆಯಲ್ಲಿ ಶಿಬಿರವಾಸದ ಸ್ಥಳ, ದಿನಾಂಕ, ಅವಧಿ, ಉದ್ದೇಶ, ವ್ಯವಸ್ಥೆ, ಹಣಕಾಸಿನ ಬಗ್ಗೆ ಚರ್ಚಿಸಿ ಅನುಮೋದನೆ ಪಡೆಯಬೇಕು. ನಿರ್ಣಯವನ್ನು ದಿನಚರಿ ಪುಸ್ತಕದಲ್ಲಿ ದಾಖಲಿಸಬೇಕು.
* ಗೌರವ ನ್ಯಾಯ ಸಭೆ ಅನುಮೋದನೆ ಪತ್ರ ದಿನಚರಿ ಪುಸ್ತಕದಲ್ಲಿ ಅಂಟಿಸಬೇಕು.
* ಮುಖ್ಯೋಪಾಧ್ಯಾಯರಿಂದ, ಪೋಷಕರಿಂದ, ಶಿಬಿರವಾಸದ ಸ್ಥಳದ ಯಜಮಾನರಿಂದ ಅನುಮತಿ ಪಡೆಯಬೇಕು.
* ಪ್ರಯಾಣ, ವಾಸ, ಶೌಚ, ಸ್ನಾನ, ಅಡುಗೆ ಮತ್ತು ಸುರಕ್ಷತೆ ವ್ಯವಸ್ಥೆ ಮಾಡಿಕೊಳ್ಳಬೇಕು.
* ಶಿಬಿರದ ಸಾಮಾನು ಸಲಕರಣೆ ಊಟೋಪಚಾರ ವೇಳಾಪಟ್ಟಿ, ಅದಕ್ಕೆ ಬೇಕಾದ ಸಾಮಾನು ಸರಂಜಾಮುಗಳನ್ನು ಸಿದ್ಧಪಡಿಸಿಕೊಳ್ಳಬೇಕು.

* ಶಿಬಿರದ ದಿನಚರಿ, ನಿಯಮ, ಕರ್ತವ್ಯ, ಉದ್ದೇಶಗಳು, ಪ್ರವಚನ ಮತ್ತು ಕಾರ್ಯಕ್ರಮಗಳ ಪಟ್ಟಿ ಸಿದ್ಧಮಾಡಿಕೊಳ್ಳಬೇಕು.
* ನಿಮ್ಮ ಜೊತೆಗೆ ಸಹಾಯಕರು ಮತ್ತು ಸಂಪನ್ಮೂಲ ವ್ಯಕ್ತಿಗಳನ್ನು ಗೊತ್ತುಪಡಿಸಿಕೊಳ್ಳಬೇಕು.
* ಪೋಷಕರಿಗೆ ಹೊರಡುವ, ಬರುವ ವೇಳೆ ನಿಖರವಾಗಿ ತಿಳಿಸಬೇಕು, ಅನುಸರಿಸಬೇಕು.
* ಶಿಬಿರ ಧ್ವಜಾರೋಹಣದಿಂದ ಪ್ರಾರಂಭವಾಗಬೇಕು. ಧ್ವಜವು ಗೈಡ್‌ಗಳ ಇರುವಿಕೆಯನ್ನು ಸಾರುತ್ತದೆ.
* ಕಾರ್ಯಕ್ರಮ ಮುಗಿದ ನಂತರ ಸ್ಥಳವನ್ನು ಸ್ವಚ್ಛಗೊಳಿಸಬೇಕು. "ನಾವು ಬಂದ ದಿನಕ್ಕಿಂತ ಸ್ಥಳವನ್ನು ಹೆಚ್ಚು ಸ್ವಚ್ಛವಾಗಿಟ್ಟು ಹೋಗಬೇಕು." – ಬಿ.ಪಿ.
* ಶಿಬಿರವಾಸದ ಸಮಯದಲ್ಲಿ ಮಕ್ಕಳು ಕಾರ್ಯಕ್ರಮ ಟಿಪ್ಪಣಿ ಬರೆಯಬೇಕು, ಚಿತ್ರ ಬಿಡಿಸಬೇಕು. ಛಾಯಾಚಿತ್ರಗಳಿದ್ದರೆ ಅಂಟಿಸಬೇಕು. ಇದೊಂದು ಸಮಗ್ರ ವರದಿಯಾಗಿ ದಿನಚರಿ ಪುಸ್ತಕದಲ್ಲಿ ಸಹಿಯಾಗಬೇಕು. ಸ್ಥಳೀಯರಿಂದ ಸಾಧ್ಯವಾದಲ್ಲಿ ಸಹಿ ಮಾಡಿಸಿ, ನೀವೂ ಬರಹಕ್ಕೆ ಸಹಿ ಮಾಡಬೇಕು. ಶಿಬಿರ ವಾಸದಲ್ಲಿನ ಪ್ರತ್ಯಕ್ಷ ಅನುಭವಗಳು ಜೀವನ ಮೌಲ್ಯಗಳನ್ನು ಅಭಿವೃದ್ಧಿಗೊಳಿಸುತ್ತದೆ.

ಶಿಬಿರ ವಾಸವು ಮಕ್ಕಳಿಗೆ ಪ್ರತಿಜ್ಞೆ, ನಿಯಮ ಮತ್ತು ಶಿಸ್ತನ್ನು ಅಭ್ಯಾಸ ಮಾಡಲು ಅವಕಾಶ ನೀಡುತ್ತದೆ. ಜೀವನ ಕೌಶಲ ಮತ್ತು ಜೀವನ ಶಿಕ್ಷಣ ನೀಡುತ್ತದೆ.

ಬಿ.ಪಿ. ಅವರು ಎಲ್ಲೇ ಇದ್ದರೂ ಅನುಕೂಲಕರವಾಗಿ ಆ ಪರಿಸರವನ್ನು ಹೊಂದಿಸಿಕೊಳ್ಳುತ್ತಿದ್ದರು. ಅಂತೆಯೇ ಗುಡಾರದಲ್ಲಿ ವಾಸ ಮಾಡುವಾಗ ಅಲ್ಲಿ ಸಿಗುವ ಕೋಲು, ಕುಂಟೆ, ಬೊಂಬು, (Staves – ದಂಡ) ಇತ್ಯಾದಿಗಳ ಸಹಾಯದಿಂದ ಸಾಮಾನು, ಸರಂಜಾಮು ಇಡುವ ಆಧಾರಕ (Stand) ಮಂಚ, ಮೇಜು, ಬಟ್ಟೆ ಒಣಗಿಸುವ ವ್ಯವಸ್ಥೆ, ಹಸಿಕಸ ಮತ್ತು ಒಣಕಸದ ಗುಂಡಿ, ಬೇಲಿ ಗೇಟು ಹೀಗೆ ಎಲ್ಲವನ್ನು ಸಿದ್ಧಗೊಳಿಸಿಕೊಂಡು ಆರಾಮವಾಗಿರುತ್ತಿದ್ದರು. ಅವಶ್ಯಕತೆಗೆ ತಕ್ಕಂತೆ ಉರುವಲು ಜೋಡಿಸಿ ಅಡಿಗೆ ಮಾಡುತ್ತಿದ್ದರು.

"ಬೆಲ್ಲದ ಸವಿ ಬಲ್ಲವನೇ ಬಲ್ಲ" ಎಂಬ ನುಡಿಯಂತೆ ಶಿಬಿರವಾಸ ಮಾಡಿದವರಿಗೆ ಗೊತ್ತು ಅದರ ಮೋಜುಮಜ. ಈ ಅನುಭವ ಒಂದು ಅಪೂರ್ವ ಅನುಭವವಾಗಿ ಎಂದೆಂದಿಗೂ ನಮ್ಮಲ್ಲಿ ಉಳಿಯುತ್ತದೆ.



1	**–**	**ತೊಲೆ (Ridge Pole)**
2, 3	**–**	**ಆಧಾರಸ್ತಂಭ (Standng Pole)**
4, 5	**–**	**ಮೂಲೆ ಬಂಧಕ (Corner Guy)**
6, 7, 8	**–**	**ಪಾರ್ಶ್ವ ಬಂಧಕ (Side Guy)**
9	**–**	**ಛಾವಣಿ (Roof)**
10	**–**	**ಪಾರ್ಶ್ವ ಮುಚ್ಚಿಕೆ (Side Flap)**
11	**–**	**ದ್ವಾರ ಮುಚ್ಚಿಕೆ (Door Flap)**

ಪ್ರವಚನ:23 ನಕ್ಷಾ ಕೌಶಲ
(Map Craft)

ಭಾಗ–1
ದಿಕ್ಕು–ಸೂರ್ಯನಿಂದ ದಿಕ್ಕು–ದಿಕ್ಸೂಚಿ (Direction-From Sun-Compass)

ಪ್ರಶಿಕ್ಷಣಾರ್ಥಿಗಳು :

* ದಿಕ್ಕನ್ನು ಗುರುತಿಸುವರು.
* ಅನ್ವೇಷಣೆ, ನಕ್ಷೆ ಓದುವ, ನಕ್ಷೆ ತಯಾರು ಮಾಡುವಾಗಿನ ವಾಯುಮಾರ್ಗ, ಜಲಮಾರ್ಗಗಳಲ್ಲಿ ದಿಕ್ಕಿನ ಮಹತ್ವವನ್ನು ತಿಳಿಯುವರು.
* ಸೂರ್ಯ ಮತ್ತು ನಕ್ಷತ್ರ ಪುಂಜಗಳಿಂದ ಉತ್ತರ ದಿಕ್ಕನ್ನು ಕಂಡು ಹಿಡಿಯುವ ಕೌಶಲವನ್ನು ಪಡೆಯುವರು.
* ದಿಕ್ಕುಗಳ ಸಹಾಯದಿಂದ ಸ್ಥಳ ಮತ್ತು ವಸ್ತುಗಳ ದಿಕ್ಕೋನವನ್ನು ಕಂಡು ಹಿಡಿಯುವ ಸಾಮರ್ಥ್ಯ ಹೊಂದುವರು.
* ಗೈಡ್‌ಗಳಲ್ಲಿ ನಕ್ಷಾ ಕಲೆಯನ್ನು ಬೆಳೆಸಲು ಬೇಕಾದ ಕೌಶಲ ಪಡೆಯುವರು.

ಗೈಡಿಂಗ್ ಒಂದು ಹೊರಾಂಗಣ ಚಟುವಟಿಕೆ. ಪ್ರಕೃತಿ ಪ್ರಧಾನವಾದ ಸಾಹಸಮಯ ಚಟುವಟಿಕೆ. ಕೆಲವು ವೇಳೆ ನಿಮಗೆ ಸ್ವತಂತ್ರವಾಗಿ ಸಂಚಾರ ಮಾಡುವ ಅವಕಾಶ ದೊರೆಯುತ್ತದೆ. ಇಂತಹ ಸಂದರ್ಭಗಳಲ್ಲಿ ದಿಕ್ಕು ಪ್ರಮುಖ ಪಾತ್ರ ವಹಿಸುತ್ತದೆ. ದಾರಿಯನ್ನು ಅನುಸರಿಸಲು, ದಾರಿಯನ್ನು ಅನ್ವೇಷಿಸಲು, ದಾರಿ ತಪ್ಪಿದಾಗಲೂ, ದಿಕ್ಕಿನ ಅರಿವು ಉಪಯೋಗವಾಗುತ್ತದೆ.

ಆದಿಮಾನವ ಹುಟ್ಟಿದ್ದು ಪ್ರಕೃತಿಯಲ್ಲಿ ಆಹಾರಕ್ಕಾಗಿ ಅಲೆದಾಡುವಾಗ ದಿಕ್ಕಿನ ಅವಿಷ್ಕಾರ ಮಾಡಿದನು. ಸೂರ್ಯನ ಚಲನೆಯ ಗುರುತು ಹಗಲಿನಲ್ಲಿ ಇಟ್ಟುಕೊಂಡರೆ, ರಾತ್ರಿ ನಕ್ಷತ್ರಗಳನ್ನು ನೋಡಿ ಗುರುತಿಟ್ಟುಕೊಂಡು, ತನಗೆ ಬೇಕಾದ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಿದ್ದನು ಕ್ರಮೇಣ ಮನೆಯ ಕಲ್ಪನೆ ಆರಂಭವಾದ ಮೇಲೆ ಬಾಗಿಲನ್ನು, ಅಂದಿಗೂ ಇಂದಿಗೂ ದಿಕ್ಕನ್ನು ಅವಲಂಬಿಸುತ್ತಾರೆ. ಸೈನಿಕರು ಕಾಡು–ಮೇಡುಗಳಲ್ಲಿ ಸಂಚರಿಸಲು ದಿಕ್ಕು ಅವಶ್ಯಕ. ವಾಯುಯಾನ, ಜಲಯಾನದಲ್ಲಿ ದಿಕ್ಕಿನ ಪಾತ್ರ ಮಹತ್ವವಾದುದು.

ಸೂರ್ಯನ ಸಹಾಯದಿಂದ ಉತ್ತರ ದಿಕ್ಕನ್ನು ಕಂಡು ಹಿಡಿಯುವುದು :

ಆದಿಮಾನವನಿಗೆ ಸೂರ್ಯನ ಚಲನೆಯೇ ದಿಕ್ಸೂಚಿಯಾಗಿತ್ತು. ಇಂದಿಗೂ ಹಗಲಿನಲ್ಲಿ ಸುಲಭವಾಗಿ ಸೂರ್ಯನನ್ನು ದಿಕ್ಸೂಚಿಯಾಗಿ ಬಳಸುತ್ತೇವೆ. ಸೂರ್ಯ ಹುಟ್ಟಿದ ದಿಕ್ಕನ್ನು ಗುರುತಿಸಿಕೊಂಡು ಉಳಿದ ದಿಕ್ಕನ್ನು ಕಂಡುಕೊಳ್ಳಬಹುದು. ಸೂರ್ಯ ಮತ್ತು ಗಡಿಯಾರದ ಸಹಾಯದಿಂದ ದಿಕ್ಕಗಳನ್ನು ಗುರುತಿಸಬಹುದು.



ನಿಮ್ಮ ಗಡಿಯಾರವನ್ನು ಸೂರ್ಯನಿಗೆ ಮುಖಮಾಡಿ ಸಮತಟ್ಟಿನ

ಮೇಲೆ ಇಡಿ. ಗಂಟೆಯ ಮುಳ್ಳನ್ನು ಸೂರ್ಯನ ಕಡೆಗೆ ತಿರುಗಿಸಿಡಿ. ಒಂದು ಮೊನಚಾದ ಕಡ್ಡಿ / ಪೆನ್ಸಿಲ್‌ನ್ನು ಗಂಟೆಯ ಮುಳ್ಳು ಮತ್ತು ಗಡಿಯಾರದಲ್ಲಿನ ಹನ್ನೆರಡರ ಅಂಕೆಯ ಮಧ್ಯೆ ಇಡಿ. ಇದರಿಂದ ಏರ್ಪಡುವ ಕೋನದ ಮಧ್ಯೆ ಹೊಂದಿಸಿ ಛೇದಕ ಇಡಿ. ಇದರ ತುದಿಯು ದಕ್ಷಿಣವನ್ನು ತೋರಿಸುತ್ತದೆ. ಇದರ ಸಹಾಯದಿಂದ ಉಳಿದ ದಿಕ್ಕಗಳನ್ನು ಕಂಡುಕೊಳ್ಳಬಹುದು. ಈ ಕ್ರಮವನ್ನು ಉತ್ತರಾರ್ಧಗೋಳದಲ್ಲಿ ದಿಕ್ಕು ಕಂಡುಕೊಳ್ಳಲು ಅನುಸರಿಸಲಾಗುವುದು.

ದಕ್ಷಿಣಾರ್ಧಗೋಳದಲ್ಲಿ ಗಡಿಯಾರದ ಹನ್ನೆರಡು ಅಂಕೆಯನ್ನು ಸೂರ್ಯನ ಕಡೆಗೆ ತಿರುಗಿಸಿ ಕಡ್ಡಿ / ಪೆನ್ಸಿಲ್‌ನ್ನು ಹನ್ನೆರಡು ಅಂಕೆ ಮತ್ತು ಗಂಟೆ ಮುಳ್ಳಿನ ಮಧ್ಯೆ ಇಡಿ. ಮೊನಚಾದ ತುದಿಯು ದಕ್ಷಿಣವನ್ನು ಸೂಚಿಸುತ್ತದೆ. ಇದರಿಂದ ಉಳಿದ ದಿಕ್ಕುಗಳನ್ನು ಕಂಡುಕೊಳ್ಳಬಹುದು.

ದಿಕ್ಸೂಚಿ : ಮೋಡ ಕವಿದಾಗ, ಮಳೆ ಸುರಿಯುವಾಗ ದಿಕ್ಕನ್ನು ಕಂಡು ಹಿಡಿಯುವುದು ಕಷ್ಟಕರ. ಕ್ರಮೇಣ ದಿಕ್ಸೂಚಿಯನ್ನು ಆವಿಷ್ಕರಿಸಲಾಯಿತು. ಇದರಿಂದ ಎಲ್ಲಾ ಸಮಯದಲ್ಲೂ ದಿಕ್ಕನ್ನು ನಿಖರವಾಗಿ ಕಂಡುಕೊಳ್ಳಲು ಅನುಕೂಲವಾಯಿತು.

ಇದು ವಾಚಿನಂತೆ ಮುಳ್ಳು ಮತ್ತು ಬಿಲ್ಲೆಯನ್ನು ಹೊಂದಿರುತ್ತದೆ. ದರ್ಶಿನಿ ಕಾಂತಯುತವಾದುದರಿಂದ (Magnetic Needle) ಉತ್ತರ–ದಕ್ಷಿಣವಾಗಿ ನಿಲ್ಲುತ್ತದೆ. ಉತ್ತರವನ್ನು ಸೂಚಿಸುವ ಮುಳ್ಳು ಬಾಣದ ತಲೆಯನ್ನು ಹೊಂದಿರುತ್ತದೆ. 16 ದಿಕ್ಕುಗಳ ಸಂಕ್ಷಿಪ್ತ ಹೆಸರಿನ ಸಂಕೇತಾಕ್ಷರ ಮತ್ತು ಕೋನವನ್ನು ಬಿಲ್ಲೆಯ ಮೇಲೆ ನಮೂದಿಸಲಾಗಿರುತ್ತದೆ. ಇದರ ಸಹಾಯದಿಂದ ದಿಕ್ಕು ಕಂಡು ಹಿಡಿಯುವುದು ಸುಲಭ ಸಾಧ್ಯವಾಗಿದೆ.

ದಿಕ್ಸೂಚಿ ಸ್ಥಿರಗೊಳಿಸುವುದು (Setting of Compass)

ದಿಕ್ಸೂಚಿಯನ್ನು ಅಲುಗಾಡಿಸಿ, ಗಟ್ಟಿಯಾದ ಸಮತಲದ ಮೇಲೆ ಇಡಬೇಕು. ದರ್ಶಿನಿ ತೂಗಿ ನಿಲ್ಲುವವರೆಗೆ ಕಾಯಬೇಕು. ನಂತರ ಬಿಲ್ಲೆಯ ಮೇಲಿನ ಉತ್ತರದ ಬಾಣವನ್ನು ದರ್ಶಿನಿಯ ಉತ್ತರಕ್ಕೆ ಹೊಂದಿಸಿ ಕೆಲಸ ಪ್ರಾರಂಭಿಸಬೇಕು.

ಪ್ರಧಾನ ದಿಕ್ಕುಗಳು (Cardinal Points)

ಭೂಮಿಯು ಒಂದು ಗೋಲ. ಇದನ್ನು ಪ್ರತಿನಿಧಿಸುವ ದಿಕ್ಸೂಚಿಯ ಸಮತಲವೃತ್ತವು 360^0 ಕೋನ ಹೊಂದಿರುತ್ತದೆ. ಇವುಗಳು ಒಟ್ಟು ನಾಲ್ಕು – (1) ಉತ್ತರ = N (2) ಪೂರ್ವ = E (3) ದಕ್ಷಿಣ = S (4) ಪಶ್ಚಿಮ = W ಗಡಿಯಾರ ಕ್ರಮದಲ್ಲಿ N-E-S-W ಎಂದೇ ಓದಬೇಕು. ಇವುಗಳ ಕೋನಾಂತರ 90^0.

ಉಪದಿಕ್ಕುಗಳು (Inter Cardinal Points)

ಇವುಗಳು ಒಟ್ಟು 4

1) ಉತ್ತರ ಮತ್ತು ಪೂರ್ವದ ಮಧ್ಯೆ ಈಶಾನ್ಯ N-E

2) ಪೂರ್ವ ಮತ್ತು ದಕ್ಷಿಣದ ಮಧ್ಯೆ ಆಗ್ನೇಯ S-E

3) ದಕ್ಷಿಣ ಮತ್ತು ಪಶ್ಚಿಮದ ಮಧ್ಯೆ ನೈರುತ್ಯ S-W

4) ಪಶ್ಚಿಮ ಮತ್ತು ಉತ್ತರದ ಮಧ್ಯೆ ವಾಯುವ್ಯ N-W

ಪ್ರಧಾನ ಮತ್ತು ಉಪಪ್ರಧಾನ ದಿಕ್ಕುಗಳ ನಡುವಿನ ಕೋನಾಂತರ 45^0

ಉಪ–ಉಪ–ದಿಕ್ಕುಗಳು

ಇವುಗಳ ಒಟ್ಟು 8

ಉತ್ತರ ಮತ್ತು ಈಶಾನ್ಯದ ಮಧ್ಯೆ – NNE

ಈಶಾನ್ಯ ಮತ್ತು ಪೂರ್ವದ ಮಧ್ಯೆ – ENE

ಆಗ್ನೇಯ ಮತ್ತು ದಕ್ಷಿಣದ ಮಧ್ಯೆ – ESE

ದಕ್ಷಿಣ ಮತ್ತು ನೈರುತ್ಯದ ಮಧ್ಯೆ – SSE

ನೈರುತ್ಯ ಮತ್ತು ಪಶ್ಚಿಮ ಮಧ್ಯೆ – SSW

ಪಶ್ಚಿಮ ಮತ್ತು ನೈರುತ್ಯದ ಮಧ್ಯೆ – SWS

ಪಶ್ಚಿಮ ಮತ್ತು ವಾಯುವ್ಯದ ಮಧ್ಯೆ – WNW

ವಾಯುವ್ಯ ಮತ್ತು ಉತ್ತರದ ಮಧ್ಯೆ – NNW



ಪ್ರಧಾನ, ಉಪ ಪ್ರಧಾನ, ಉಪ–ಉಪಪ್ರಧಾನ ದಿಕ್ಕುಗಳ ಮಧ್ಯದ ಕೋನಾಂತರ 22.50 ಒಟ್ಟು ಸೂಚಿತ ದಿಕ್ಕುಗಳು 16. ಆದರೆ ದಿಕ್ಸೂಚಿಯ 360^0 = 360 ದಿಕ್ಕೋನಗಳು.

ಧೃವನಕ್ಷತ್ರ ಸೂಚಿಸುವ ಉತ್ತರ ದಿಕ್ಕನ್ನು ನಿಜ ಉತ್ತರ ಎಂದು ಪರಿಗಣಿಸಲಾಗುವುದು. ಇದು ಸ್ಥಿರವಾಗಿರುತ್ತದೆ. ಇದಕ್ಕೂ ಕಾಂತೀಯ ಉತ್ತರಕ್ಕೂ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಿರುತ್ತದೆ. ಕಾರಣ ಭೂಮಿ ಕಾಂತೀಯ ಆಕರ್ಷಣೆ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಹಾಗೆಯೇ ನಿಜ ಉತ್ತರಕ್ಕೂ, ಗ್ರಿಡ್ ಉತ್ತರಕ್ಕೂ ವ್ಯತ್ಯಾಸವಿರುತ್ತದೆ.

ನಕ್ಷಾ ಕೌಶಲ (Map Craft)

ಭಾಗ–2

ದಿಕ್ಕೋನ–ಹೆಜ್ಜೆ–ಮಾಪಕ–ಸ್ಥೂಲ–ನಕ್ಷೆ (Bearing - Pace - Scale - ....)

ನಕ್ಷಕೌಶಲದ ಉದ್ದೇಶ : ಪ್ರಶಿಕ್ಷಣಾರ್ಥಿಗಳು :

* ಇದಕ್ಕೆ ಅವಶ್ಯವಾದ ಕೌಶಲ ಮತ್ತು ಮಾಹಿತಿಗಳನ್ನು ತಿಳಿಯುವರು ಹಾಗೂ ಅಭ್ಯಾಸ ಮಾಡಲು ಸಮರ್ಥರಾಗುವರು.
* ದಿಕ್ಕೋನವನ್ನು ಕಂಡು ಹಿಡಿಯಲು ಸಮರ್ಥರಾಗುವರು.
* ಮುಂದಿಕ್ಕೋನದ ಸಹಾಯದಿಂದ ಸೂತ್ರ ಬಳಸಿ ಹಿಂದಿಕ್ಕೋನ ಕಂಡು ಹಿಡಿಯುವರು.
* ತಮ್ಮ ಹೆಜ್ಜೆ ಅಳತೆ ಮಾಡುವರು.
* ಸ್ಥೂಲ ನಕ್ಷೆ ತಯಾರಿಸುವರು.

ವಿಧಾನ : ಪ್ರದರ್ಶನ, ಪ್ರಾತ್ಯಕ್ಷಿಕೆ.

ನಕ್ಷೆ ಓದುವುದು : ಇದು ಒಂದು ಹೊರಾಂಗಣ ಕೌಶಲ, ಇದನ್ನು ಹೊರಾಂಗಣದಲ್ಲಿ ಪ್ರಯೋಗ ಮಾಡುತ್ತಾ ಓದುವುದನ್ನು ಕಲಿಯಬೇಕು. ನಕ್ಷೆಯು ಸಹವರ್ತಿಯಂತೆ ಮಾರ್ಗದರ್ಶನ ನೀಡುತ್ತದೆ. ಈ ಕಲಾ ಕೌಶಲಕ್ಕೆ ತನ್ನದೇ

ಆದ ಭಾಷೆ ಇದೆ. ಹೆಜ್ಜೆ ದಿಕ್ಕೋನ, ಸ್ಥೂಲ ನಕ್ಷೆಗಳ ಅಭ್ಯಾಸ ಮಾಡುವಿರಿ.



ನಕ್ಷಾ ಕೌಶಲ :

ನಕ್ಷೆ : ಒಂದು ಸಮತಲ ಹಾಳೆಯ ಮೇಲೆ ಒಂದು ಕ್ಷೇತ್ರದ ದೇಶದ ಎಲ್ಲಾ ಭೂ-ವಿಶೇಷಗಳನ್ನು ಪ್ರತಿನಿಧಿಸುವ ಸತ್ಯ ಚಿತ್ರಣವೇ ನಕ್ಷೆ ಅಥವಾ ಭೂಪಟ. ಭೂಮಿಯು ಅದರ ಒಂದು ಭಾಗದ ವಿವರವನ್ನು ಪ್ರಮಾಣಬದ್ಧವಾಗಿ ದಿಕ್ಕಿನ ಆಧಾರದ ಮೇಲೆ ಸಂಕ್ಷಿಪ್ತವಾಗಿ ಹಾಳೆಯ ಮೇಲೆ ಆದರ್ಶ ಸಾಂಪ್ರದಾಯಿಕ ಚಿಹ್ನೆಗಳಿಂದ (Conventional Signs). ಪ್ರತಿನಿಧಿಸುವ ಅಭಿವ್ಯಕ್ತಿಯೇ ನಕ್ಷೆ.

ನಕ್ಷಾ ಕೌಶಲವನ್ನು ನಕ್ಷಾ ಶಾಸ್ತ್ರವೆಂದೂ (Cartography) ನಕ್ಷೆಯನ್ನು ರಚಿಸುವವರನ್ನು ನಕ್ಷಾ ಲೇಖಕರೆಂದೂ (Cartographer) ಕರೆಯಲಾಗಿದೆ. ಭಾರತೀಯ ಸರ್ವೇಕ್ಷಣ ಇಲಾಖೆ (Survery of India) ನಕ್ಷಾ ರಚನೆಯ ಅಧಿಕೃತ ಹಾಗೂ ಆಧಾರ ಕೇಂದ್ರವಾಗಿದೆ.

ನಕ್ಷಾ ವೈವಿಧ್ಯತೆ : ಭೌಗೋಳಿಕ ನಕ್ಷೆ, ಸರ್ವೇಕ್ಷಣ ನಕ್ಷೆ, ಪ್ರವಾಸೀ ನಕ್ಷೆ, ಕ್ಷೇತ್ರ ನಕ್ಷೆ, ಮಾರ್ಗ ನಕ್ಷೆ, ಯೋಜನಾ ನಕ್ಷೆ, ಸ್ಥಳಾಕೃತಿ ನಕ್ಷೆ (Topographic Map) ಮುಂತಾದ ವಿಧಗಳಿವೆ.

ಹೆಜ್ಜೆ : ಸಾಮಾನ್ಯ ದೂರದ ಅಂದಾಜು ಅಳತೆಯ ಒಂದು ಮಾನ (Unit). ಒಂದು ಹೆಜ್ಜೆ ಅಂದರೆ, ಒಂದು ನಡೆಯ ಪಾದದ ಹಿಮ್ಮಡಿಯಿಂದ ಇನ್ನೊಂದು ಪಾದದ ಹೆಬ್ಬೆಟ್ಟಿನ ವರೆಗಿನ ಅಂತರ: ದೂರವನ್ನು ಹೆಜ್ಜೆಯಿಂದ ಅಳೆದು ಅಂದಾಜು ಮಾಡಲಾಗುವುದು. ನಿಮ್ಮ ಹೆಜ್ಜೆಯ ಅಂತರವನ್ನು ಅಳೆದು ಗುರುತು ಹಾಕಿಕೊಳ್ಳಿ.

ದಿಕ್ಕೋನ (Bearing) :

ಗಡಿಯಾರದ ಚಲನಾಕ್ರಮದ ಮಾದರಿಯಲ್ಲಿ 0 ಉತ್ತರದಿಂದ 360^0 ಕೋನದಲ್ಲಿ ಗುರುತಿಸುವ ಸ್ಥಳಗಳ / ವಸ್ತುಗಳ ಕೋನವೇ ದಿಕ್ಕೋನ.

ವೀಕ್ಷಕರ OP – ವೀಕ್ಷಣಾ ಬಿಂದುವಿನಿಂದ ಉತ್ತರದಿಂದ ಗುರುತಿಸಲ್ಪಡುವ ವಸ್ತುವಿನ ದಿಕ್ಕೋನವೇ ಮುಂದಿಕೋನ (forward bearing). ಈ ದಿಕ್ಕೋನ ವಸ್ತು / ಸ್ಥಳವನ್ನು ತಲುಪಲು ಸಹಾಯ ಮಾಡುತ್ತದೆ.

ಮುಂದಿಕ್ಕೋನದ ಸಹಾಯದಿಂದ ಹಿಂದಿಕ್ಕೋನವನ್ನು ಕಂಡು ಹಿಡಿಯಬಹುದು.

* ಮುಂದಿಕ್ಕೋನ 180^0 ಗಿಂತ ಕಡಿಮೆ ಇದ್ದರೆ 180^0 ಕೂಡಿ ಹಿಂದಿಕ್ಕೋನ ಲೆಕ್ಕಾಚಾರ ಮಾಡಿ.

ವಸ್ತು / ಸ್ಥಳ = FB - > $180^0 + 180^0$ =BB

* ಹಿಂದಿನಕ್ಕೋನ 180^0 ಗಿಂತ ಹೆಚ್ಚಾಗಿದ್ದರೆ 180^0 ಕಳೆದು ಹಿಂದಿಕ್ಕೋನವನ್ನು ಲೆಕ್ಕಾಚಾರ ಮಾಡಿ. ಇದು ನಕ್ಷೆ ಅನುಸರಿಸಿ ಹಿಂತಿರುಗಲು ಸಹಾಯಕವಾಗುತ್ತದೆ.

ವಸ್ತು / ಸ್ಥಳ = FB 180^0 > - 180^0 = BB

ಇವುಗಳನ್ನು ಪ್ರತ್ಯೇಕವಾಗಿ ಅಭ್ಯಾಸ ಮಾಡಿ. ದಿಕ್ಸೂಚಿ ಸಹಾಯದಿಂದ ಮಾಡಿ. ಇಲ್ಲದಿದ್ದರೆ ಸ್ಥಳ ಗುರುತಿಸಿಕೊಂಡು ಅಭ್ಯಾಸ ಮಾಡಿ. ಗುರುತಿಸಿಕೊಂಡು ದಿಕ್ಕೋನವನ್ನು ಅಭ್ಯಾಸ ಮಾಡಿ.

ಸ್ಥೂಲ ನಕ್ಷೆ (Sketch – ರೇಖಾ ನಕ್ಷೆ)

ನಕ್ಷೆ ತಯಾರಿಸುವ ಮುನ್ನ ಸಿದ್ಧಪಡಿಸುವ ನಕ್ಷೆಯೆ ಸ್ಥೂಲ ನಕ್ಷೆ. ಕೆಲವೊಮ್ಮೆ ರೇಖೆಯಲ್ಲಿ ನಕ್ಷೆಯನ್ನು ಸರಳವಾಗಿ ಬಿಡಿಸಲಾಗುವುದು. ನಾವು ತಯಾರಿಸುವ ಮಾರ್ಗ ನಕ್ಷೆ, ಬಡಾವಣೆ ನಕ್ಷೆಗಳನ್ನು ಸ್ಥೂಲ ನಕ್ಷೆ ಎನ್ನಲಾಗುವುದು.

ಚಟುವಟಿಕೆ :

1. ಪಟಾಲಂವಾರು ಯಾವ ದಿಕ್ಕಿಗಾದರೂ ತಿರುಗಿನಿಲ್ಲಲಿ, ಆಟದ ನಾಯಕಿ .... ದಿಕ್ಕಿಗೆ .... ಹೆಜ್ಜೆ ಹೋಗಿ ಎಂದು ಹೇಳಿ. ನಿಮ್ಮ ಸೂಚನೆಯಂತೆ ಚಲಿಸಲಿ, ತಪ್ಪಿದರೆ ಹೊರಗೆ (Out). ಈ ಆಟವನ್ನು ಚದುರಿಸಿ ನಿಲ್ಲಿಸಿ ಆಡಿಸಬಹುದು.

2. ಅ) ಎರಡು ಕೈಚಾಚಿ ಉತ್ತರ, ದಕ್ಷಿಣವಾಗಿ ಪ್ರತಿಯೊಬ್ಬರೂ ನಿಲ್ಲಲಿ. ಸುತ್ತಲಿರುವ ಕೆಲವು ವಸ್ತುಗಳನ್ನು ಹೇಳಿ. ಕೈ ತಿರುಗಿಸುವ ಮೂಲಕ ವಸ್ತುವಿನ ದಿಕ್ಕೋನ ಹೇಳಿಸಿ, ಹಾಗೆ ವಿರುದ್ಧ ದಿಕ್ಕು ಹಿಂದಿಕ್ಕೋನವಾಗುತ್ತದೆ ಎಂಬ ಕಲ್ಪನೆ ಮೂಡಿಸಿ.

   ಆ) ಅವರು ನಿಂತ ಬಿಂದುವಿನಿಂದ ವಸ್ತುವಿಗೆ ನಡೆದು ಎಷ್ಟು ಹೆಜ್ಜೆ ಇದೆ ಎಂದು ಗುರುತು ಹಾಕಿಕೊಂಡು ಪುನಃ ನಿಂತ ಸ್ಥಳಕ್ಕೆ ಬರಲಿ. ಎಲ್ಲಾ ವಸ್ತುಗಳನ್ನು ಅಳತೆ ಮಾಡಿದ ಮೇಲೆ ಹಾಳೆ ಮೇಲೆ ವೀಕ್ಷಣಾ ಬಿಂದು ಬರೆದು ವಸ್ತುಗಳ ಕೋನ ಬರೆಯಲಿ. ದೂರವನ್ನು ಮಾಪಕ (Scale) ಮಾಡಿ ವಸ್ತುವಿನ ಬಿಂದು ಗುರುತಿಸಲಿ. ಇದರಿಂದ ದಿಕ್ಕೋನ ಮತ್ತು ದೂರದ ಪ್ರತ್ಯಕ್ಷ ಅಭ್ಯಾಸವಾಗುತ್ತದೆ.

3. ನಿಮ್ಮ ಶಿಬಿರದ ಬಯಲಿನ ಉದ್ದ ಮತ್ತು ಅಗಲ ಹೆಜ್ಜೆಯಲ್ಲಿ ಅಳೆದು ಹೆಚ್ಚಿನ ಹೆಜ್ಜೆಗಳ ದೂರ ತೆಗೆದುಕೊಂಡು ನಿಮ್ಮ ಹಾಳೆಗೆ ಸರಿಹೊಂದುವಂತೆ ಮಾಪಕ ಮಾಡಿ 1 ಸೆಂ.ಮೀ. 10/50/100 ಹೆಜ್ಜೆ. ಹಾಳೆಯ ಮೇಲೆ ದೂರ ಗುರುತಿಸಿ ಗೆರೆಹಾಕಿ.

4. * ಬಯಲಿನಲ್ಲಿ ಒಂದು ಬಿಂದುವಿನಲ್ಲಿದ್ದು ಸುತ್ತಲಿನ 5–6 ವಸ್ತುಗಳನ್ನು ಗುರುತು ಮಾಡಿಕೊಳ್ಳಿ. ದಿಕ್ಸೂಚಿ ಅಥವಾ ಉತ್ತರ ಗುರುತಿಸಿಕೊಂಡು ಆ ವಸ್ತುಗಳ ದಿಕ್ಕೋನ ಮತ್ತು ದೂರ ಗುರುತಿಸಿಕೊಳ್ಳಿ. ಹಾಳೆಯ ಮೇಲೆ ಬಿಂದು ಇಟ್ಟು ಈ ವಸ್ತುಗಳ ಕೋನ/ದೂರಾನುಸಾರ ಗೆರೆ ಹಾಕಿ. ವಸ್ತುವಿನ ಚಿಹ್ನೆ ಬರೆಯಿರಿ. ದಿಕ್ಕೋನ ಸಂಖ್ಯೆಯಲ್ಲಿ ಗುರುತಿಸಿ.
   * ಮುಂದಿಕ್ಕೋನ ಬರೆದುಕೊಂಡು ಹಿಂದಿಕ್ಕೋನ ಕಂಡು ಹಿಡಿಯಿರಿ.

5. ಇವುಗಳ ದಿಕ್ಕೋನ (Bearing) ಕಂಡು ಹಿಡಿದು ಸೂತ್ರ ಬಳಸಿ ಹಿಂದಿಕ್ಕೋನ ಕಂಡು ಹಿಡಿಯಿರಿ. ಮಾಪಕಾನುಸಾರ ದೂರ ಕಂಡು ಹಿಡಿದು ಬರೆಯಿರಿ.

ನಕ್ಷಾ ಕೌಶಲ (Map Craft)

ಭಾಗ–3

ನಕ್ಷತ್ರ ಪುಂಜಗಳು – ಉತ್ತರ ದಿಕ್ಕು (Star Constellation & North)

ನಕ್ಷತ್ರ ಪುಂಜದ ಮೂಲಕ ಉತ್ತರ ದಿಕ್ಕನ್ನು ಗುರುತಿಸುವುದು (Finding the North through star Constellations)

ಉದ್ದೇಶ : ಪ್ರಶಿಕ್ಷಣಾರ್ಥಿಗಳು ಪ್ರವಚನದ ಅಂತ್ಯದಲ್ಲಿ :

* ನಕ್ಷತ್ರ ಅಧ್ಯಯನದ ಬಗ್ಗೆ ಅತ್ಯಾಸಕ್ತಿ ಮೂಡುವುದು.
* ನಕ್ಷತ್ರ ಪುಂಜಗಳನ್ನು ನೆಲಹಾಸು ತಂತ್ರ ಬಳಸಿ ಚಿತ್ರಿಸುವರು.
* ರಾತ್ರಿ ಆಕಾಶದಲ್ಲಿ ನಕ್ಷತ್ರ ಪುಂಜವನ್ನು ಗುರುತಿಸುವರು.
* ಈ ಕುರಿತು ಚಟುವಟಿಕೆ, ಆಟ ಆಡಿಸಲು ಉತ್ಸುಕರಾಗುವರು.
* ನಕ್ಷತ್ರ ಪುಂಜದ ಮೂಲಕ ಉತ್ತರ ಕಂಡು ಹಿಡಿಯುವರು

ವಿಧಾನ : ಪ್ರದರ್ಶನ, ನೆಲಹಾಸು (Sand Bed)

ಖಗೋಳ ಶಾಸ್ತ್ರಜ್ಞರು, ನಕ್ಷತ್ರಗಳ ಗುಂಪುಗಳನ್ನು ಗುರುತಿಸಿ ಅವುಗಳಿಗೆ ಊಹಾರೇಖೆಯನ್ನು ಎಳೆದುಕೊಂಡು, ಗುಂಪಿನ ಆಕಾರಕ್ಕೆ ಹೆಸರುಗಳನ್ನು ಕೊಟ್ಟಿರುತ್ತಾರೆ. ಈ ಹೆಸರುಗಳು ದೇಶದಿಂದ ದೇಶಕ್ಕೆ ಬದಲಾಗುವ ಸಾಧ್ಯತೆ ಇದೆ. ನಕ್ಷತ್ರಗಳ ಗುಂಪುಗಳಿಗೆ "ನಕ್ಷತ್ರ ಪುಂಜ" ಅಥವಾ "ರಾಶಿ" ಎಂದು ಕರೆಯಲಾಗಿದೆ. ಇವುಗಳನ್ನು ವೀಕ್ಷಿಸುವ ಕಾರ್ಯಕ್ರಮವನ್ನು ಸರಿಯಾದ ಋತುಮಾನದಲ್ಲಿ ಆಕಾಶವಾಣಿ ಬಿತ್ತರಿಸುತ್ತದೆ. ಇದನ್ನು ಅನುಸರಿಸಿ, ನಕ್ಷತ್ರಗಳನ್ನು ವೀಕ್ಷಿಸಿ. ಬೆಂಗಳೂರಿನಲ್ಲಿರುವ ತಾರಾಲಯವನ್ನು ಸಂದರ್ಶಿಸಿ, ಎಲ್ಲಾ ಪ್ರಮುಖ ನಗರಗಳಲ್ಲೂ ತಾರಾಲಯಗಳನ್ನು ಸ್ಥಾಪಿಸಲಾಗಿದೆ. ಈ ಕುರಿತು ಹವ್ಯಾಸಿ ವೀಕ್ಷಕರಿಗೆ ಸರಳ ಪುಸ್ತಕಗಳೂ ಇವೆ. ನಕ್ಷತ್ರ ಪುಂಜಗಳಲ್ಲಿ ಒಂದು ನಿರ್ದಿಷ್ಟ ನಕ್ಷತ್ರವು ನೇರವಾಗಿ ಉತ್ತರ ದಿಕ್ಕನ್ನು ಸೂಚಿಸುತ್ತದೆ. ಇದನ್ನು ಗುರುತಿಸುವುದನ್ನು ಕಲಿಯಬೇಕು.

ನಕ್ಷತ್ರ ಪುಂಜಗಳು (Star Constellations)

ಈ ಕೆಳಗೆ ಸಾಮಾನ್ಯವಾಗಿ ಸದಾಕಾಲ ರಾತ್ರಿಯಲ್ಲಿ ಕಾಣುವ ನಮ್ಮ ಗೋಳಾರ್ಧದಲ್ಲಿ ಕೆಲವು ನಕ್ಷತ್ರ ಪುಂಜಗಳನ್ನು ಪರಿಚಯಿಸಲಾಗಿದೆ.

1. ಧ್ರುವ ನಕ್ಷತ್ರ :

ಇದು ಉತ್ತರದಲ್ಲಿರುವ ಒಂದು ಒಂಟಿ ನಕ್ಷತ್ರ. ಈ ನಕ್ಷತ್ರವಿರುವ ದಿಕ್ಕನ್ನು ನಿಜ ಉತ್ತರ (True North) ಎಂದು ಪರಿಗಣಿಸಲಾಗಿದೆ.

2. ಶರ್ಮಿಷ್ಟ (Cassiopia)

ರಾಣಿಯ ಕುರ್ಚಿ (Queen's Chair) ಇದು ಐದು ನಕ್ಷತ್ರಗಳನ್ನು ಹೊಂದಿದೆ. ಇದನ್ನು ಕುರ್ಚಿ / W ಆಕಾರದಲ್ಲಿ ಗುರುತಿಸಲಾಗಿದೆ. ಇದಕ್ಕೆ ಎರಡು ಕೋನಗಳಿವೆ. ಇದರ ಅಗಲವಾದ ಕೋನವನ್ನು ಛೇದಿಸಿದರೆ, ಛೇದಕದ ನೇರವೇ ಉತ್ತರ ದಿಕ್ಕು.

3. ಕಾಲಪುರುಷ / ಮೃಗಶಿರ (ORION - Mighty Hunter)

ಇದು 13 ನಕ್ಷತ್ರಗಳನ್ನು ಹೊಂದಿದೆ. 3 ನಕ್ಷತ್ರ ತಲೆ, 2 ಭುಜ, 3 ಸೊಂಟಪಟ್ಟಿ, ಇದಕ್ಕೆ ನೇತಾಡುವಂತಿರುವ 3 ನಕ್ಷತ್ರಗಳ ಕತ್ತಿ, ಎರಡು ನಕ್ಷತ್ರಗಳ ಕಾಲು ಎಂದು ಊಹಿಸಿ ಪುಂಜಕ್ಕೆ ಹೆಸರನ್ನು ಕೊಡಲಾಗಿದೆ. ಇದರ ಸೊಂಟದ ನಕ್ಷತ್ರಗಳು ಹೊಳಪಿನಿಂದ ಕೂಡಿರುತ್ತವೆ. ಕತ್ತಿ ಮತ್ತು ಸೊಂಟದ ಪಟ್ಟಿಯ ಮಧ್ಯ ನಕ್ಷತ್ರ ಸೇರಿಸಿ. ವಿಸ್ತರಿಸಿದ ರೇಖೆಯು ತಲೆಯ ಮಧ್ಯದ ನಕ್ಷತ್ರವನ್ನು ಹಾದು ಹೋಗುವ ನೇರವೇ ಉತ್ತರ ದಿಕ್ಕು.

4. ಸಪ್ತರ್ಷಿ ಮಂಡಲ (Great Bear)

ಈ ನಕ್ಷತ್ರ ಪುಂಜದ 7 ನಕ್ಷತ್ರಗಳನ್ನು ನಾವು ಭಾರತೀಯರು ಸಪ್ತರ್ಷಿಗಳೆಂದು ಕರೆದಿದ್ದೇವೆ. ಹೊರ ದೇಶದವರು, ಇದನ್ನು ದೊಡ್ಡ ಕರಡಿಯಂತೆ ಕಂಡಿದ್ದಾರೆ. ಹಳ್ಳಿಗಳಲ್ಲಿ ಇದರ ಆಕಾರವನ್ನು ನೇಗಿಲಿಗೆ ಹೋಲಿಸಲಾಗಿದೆ. ಇದು ಹಿಡಿ ಬಟ್ಟಲು / ದೊಡ್ಡ ಸೌಟಿನ ಆಕಾರದಲ್ಲಿದೆ. ಹಿಡಿಯಲ್ಲಿ 3, ಬಟ್ಟಲಿನಲ್ಲಿ 4 ನಕ್ಷತ್ರಗಳಿವೆ. ಬಟ್ಟಲಿನ ಆಕೃತಿಯ ಕೊನೆಯ ನಕ್ಷತ್ರದ ನೇರವೇ ಉತ್ತರ ದಿಕ್ಕು.

5. ಲಘು ಸಪ್ತರ್ಷಿ ಮಂಡಲ (Small Bear)

ಏಳು ನಕ್ಷತ್ರಗಳನ್ನು ಹೊಂದಿದೆ. ಇದು ಗಾಳಿ ಪಟದಂತೆ ಕಾಣುತ್ತದೆ. ಇದರ ಬಾಲಂಗೋಚಿಯ ಕೊನೆ ನಕ್ಷತ್ರದ ನೇರವೇ ಉತ್ತರ ದಿಕ್ಕು.

ಚಟುವಟಿಕೆ :

1. ಆಕಾರ ಊಹಿಸಿಕೊಂಡು ಆಕಾಶ ನೋಡಿ ನಕ್ಷತ್ರ ಪುಂಜಗಳನ್ನು ಗುರುತಿಸುವ, ಅದರ ಮೂಲಕ ಉತ್ತರ ದಿಕ್ಕನ್ನು ಕಂಡು ಹಿಡಿಯುವ ಅಭ್ಯಾಸ ಮಾಡಿ ಶಿಬಿರದ ಹೊರಸಂಚಾರ, ಸಾಹಸ ಚಟುವಟಿಕೆಗಳಲ್ಲಿ ಸಹಾಯವಾಗುತ್ತದೆ. ಇದು ಒಂದು ಆನಂದದಾಯಕ ಹವ್ಯಾಸ. ಈ ನಕ್ಷತ್ರ ಪುಂಜಗಳು ಸಾಮಾನ್ಯವಾಗಿ ಉತ್ತರಾರ್ಧ ಗೋಳದಲ್ಲಿ ವರ್ಷಪೂರ್ತಿ ಕಾಣಿಸಿಕೊಳ್ಳುತ್ತವೆ.
2. ಇದರಲ್ಲಿ ನೀವು ಕಲಿತಿರುವ ನಕ್ಷತ್ರ ಪುಂಜ ಬಿಡಿಸಿ. ಉತ್ತರ ತೋರಿಸಿ ಕೆಳಗಿನ ಅಂಕಣದಲ್ಲಿ ಪುಂಜಗಳ ಹೆಸರು ಬರೆಯಿರಿ, ಅಂಕಣ ತುಂಬಿ.



ಕ್ರಸಂ.	ನಕ್ಷತ್ರ ಪುಂಜದ ಹೆಸರು	ನಕ್ಷತ್ರಗಳ ಸಂಖ್ಯೆ	ಆಕಾರ	ಉತ್ತರ ಕಂಡು ಹಿಡಿಯಲು ಸೂಚನೆ

3. ಪ್ರಶಿಕ್ಷಣಾರ್ಥಿಗಳನ್ನು ವೃತ್ತದಲ್ಲಿ ನಿಲ್ಲಿಸಿ. ಓಡಿಸಿ. ಒಂದು ನಕ್ಷತ್ರ ಪುಂಜದ ಸಂಖ್ಯೆ ಹೇಳಿ. ಆ ಗುಂಪು ನಕ್ಷತ್ರದ ಆಕಾರವನ್ನು ಮಾಡಿ ಉತ್ತರವನ್ನು ತೋರಿಸಬೇಕು.

ಪ್ರವಚನ:24 ವನವಿದ್ಯಾ ಸಂಕೇತ
(Wood Craft Sign)

ಪ್ರಶಿಕ್ಷಣಾರ್ಥಿಗಳು :

* ಜಾಡುಗಳನ್ನು ಮತ್ತು ದಾರಿ ಗುರುತುಗಳನ್ನು ಹಾಕುವ ಮತ್ತು ಅನುಸರಿಸುವ ಸಾಮರ್ಥ್ಯ ಪಡೆಯುವರು.
* ಈ ಕೌಶಲವನ್ನು ಹೊರಸಂಚಾರ, ಅನ್ವೇಷಣೆ, ವ್ಯಾಪಕ ಆಟಗಳಲ್ಲಿ ಬಳಸಲು ಸಮರ್ಥರಾಗುವರು

ಹೊರಾಂಗಣ ಚಟುವಟಿಕೆ, ಗೈಡ್ ಚಟುವಟಿಕೆಗಳಲ್ಲಿ ಅನಿವಾರ್ಯ, ಕಾಡನ್ನು ಅನ್ವೇಷಿಸುವುದು, ಪ್ರಕೃತಿಯಲ್ಲಿ ಸಂಚರಿಸುವುದು, ಸಾಹಸಯಾತ್ರೆ ಕೈಗೊಳ್ಳುವುದು ಸಾಮಾನ್ಯ. ಇದಕ್ಕಾಗಿ ಅನೇಕ ರೀತಿಯ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಅದರಲ್ಲಿ ವನವಿದ್ಯಾ ಸಂಕೇತವೂ ಒಂದು.

ವಿಧಾನ : ಕಥನ ಪ್ರದರ್ಶನ

ಜಾಡು ಅಥವಾ ಸುಳಿವು (Trail) : ಕಾಡಿನಲ್ಲಿ ಸಂಚರಿಸುವಾಗ ಅನೇಕ ಸುಳಿವು ಸಿಗುತ್ತದೆ. ಕೆಲವು ದಾರಿ ತೋರಿಸಿದರೆ, ಕೆಲವು ಅಪಾಯ ಸೂಚಿಸುತ್ತವೆ. ಉದಾಹರಣೆಗೆ - ಪ್ರಾಣಿಗಳ ಹೆಜ್ಜೆ ಗುರುತು, ರಕ್ತದ ಹನಿ, ತರಿದ ಪುಕ್ಕ. ಉದುರಿದ ಕೂದಲು, ಚದುರಿಬಿದ್ದ ಮಾಂಸದ ಚೂರು, ಹಸಿ ಮೂಳೆ, ಹಸಿ ಲದ್ದಿ, (ಮಲ) ತುಳಿತಕ್ಕೆ ಸಿಕ್ಕ ಹುಲ್ಲುಗಾವಲು, ಇವುಗಳು ಪ್ರಾಣಿಗಳ ಇರುವಿಕೆಯನ್ನು ಸೂಚಿಸುತ್ತವೆ. ಇವುಗಳಿಂದ ಅಪಾಯದ ಸೂಚನೆ ಕಂಡು ಬಂದರೆ, ದಾರಿಯನ್ನು ಬದಲಾಯಿಸಬೇಕಾಗುತ್ತದೆ. ಹೆಜ್ಜೆ ಗುರುತುಗಳ ಮೂಲಕ ಪ್ರಾಣಿಗಳ ಇರುವಿಕೆ ಮತ್ತು ಯಾವ ಪ್ರಾಣಿಗಳು ಇವೆ ಎಂದು ಕಂಡು ಹಿಡಿಯಬಹುದು. ಕಾಡಿನಲ್ಲಿ ಓಡಾಡುವಾಗ ಕಿವಿಯನ್ನು ಚುರುಕುಗೊಳಿಸಬೇಕು. ಶಬ್ದವೂ ಸಹ ಕಾಡಿನ ಪರಿಸ್ಥಿತಿಯ ಸುಳಿವನ್ನು ನೀಡುತ್ತದೆ. ಹೊಗೆ ಹಾಗೂ ಕೆಲವು ವಿಧದ ವಾಸನೆಗಳೂ ಸುಳಿವು ನೀಡುತ್ತವೆ.

ಜಾಡು : ನಾವೇ ಸುಳಿವು ಅಥವಾ ಜಾಡನ್ನು ಹಾಕುತ್ತಾ ಅನುಸರಿಸುವ ತಂಡಕ್ಕೆ ಮಾರ್ಗದರ್ಶನ ಮಾಡುತ್ತಾ ಮುಂದೆ ಸಾಗಬಹುದು. ಒಂದೇ ಬಣ್ಣದ ಕಾಗದದ ಚೂರು ಅಥವಾ ರಂಗೋಲಿ ಪುಡಿ ಒಂದೇ ರೀತಿಯಲ್ಲಿ ಹಾಕುತ್ತಾ ಹೋಗಬೇಕು. ನಮ್ಮ ಜಾನಪದ ಕಥೆಗಳಲ್ಲಿ ಅಪಹೃತರು ಮಣಿ, ಗುಲಗಂಜಿಗಳನ್ನು ಉದುರಿಸುತ್ತಾ ಅಪಹರಣಕಾರರ ಜೊತೆ ಸಾಗುತ್ತಿದ್ದರು. ಈ ಜಾಡನ್ನು ಅನುಸರಿಸಿ ಅವರನ್ನು ಕಾಪಾಡಿದ ಕಥೆಗಳು ಇವೆ. ರಾಮಾಯಣದಲ್ಲಿ ಸೀತೆಯು ಒಡವೆಗಳನ್ನು ಚೆಲ್ಲುತ್ತಾ ಹೋದುದರಿಂದ ರಾಮನಿಗೆ ಅವಳು ಹೋದ ದಾರಿಯ ಗುರುತು ಸಿಕ್ಕಿತು. ಜಾಡನ್ನು ಅನುಸರಿಸುವುದೊಂದು ಪ್ರಮುಖ ಕೌಶಲ. ಈ ಕೌಶಲವನ್ನು ಅಪರಾಧಗಳನ್ನು ಪತ್ತೆ ಮಾಡಲು ಬಳಸಲಾಗುತ್ತದೆ.

ದಾರಿ ಗುರುತುಗಳು (Tracking Signs) :

ಇವುಗಳು ಚಿತ್ರ ಸಂಕೇತಗಳು. ಇವುಗಳನ್ನು ಹಾಕುವಾಗ ಅನುಸರಿಸಬೇಕಾದ ಕ್ರಮಗಳು-ಮಾರ್ಗದರ್ಶಿ ಮುನ್ನಡೆಯುತ್ತಾ ದಾರಿಗುರುತುಗಳನ್ನು ಹಾಕುತ್ತಾ ಸಾಗುತ್ತಾರೆ. ಯಾವಾಗಲೂ ಗುರುತುಗಳನ್ನು ರಸ್ತೆಯ ಪಕ್ಕಕ್ಕೆ ಹಾಕಬೇಕು. ಗುರುತುಗಳ ಅಂತರ ಕನಿಷ್ಟ 20 ಅಡಿ ಇರಬೇಕು. ಈ ಗುರುತು ಚಿತ್ತಾರಗಳನ್ನು ಕಲ್ಲುಗಳು, ಕಡ್ಡಿ, ರಂಗೋಲಿಪುಡಿ, ಸೀಮೆಸುಣ್ಣ ಮತ್ತು ಹುಲ್ಲುಗಳನ್ನು ಬಳಸಿ ಹಾಕಬಹುದು. ಇವುಗಳನ್ನು ಸ್ಪಷ್ಟವಾಗಿ ಕಾಣುವಂತೆ ಹಾಕಬೇಕು.

ಹೊರ ಸಂಚಾರದಲ್ಲಿ ಗುರುತು ಅನುಸರಣೆ ಮಾತ್ರವಲ್ಲದೆ ಮನರಂಜನೆ / ಪರೀಕ್ಷೆಗಳಿಗೆ ಅವಕಾಶ ನೀಡಿ. ಗೈಡ್ ಕೌಶಲಗಳಾದ ದಿಕ್ಕು ಪ್ರಥಮ ಚಿಕಿತ್ಸೆಗೂ ಅವಕಾಶವಿರಲಿ. ಈ ಸಂಚಾರ ಮುಗಿಸಿದಾಗ ಅವರಲ್ಲಿ ಹೊಸ ಅನುಭವ ಮೂಡಬೇಕು. ಹೋಗುತ್ತಾ ಎಲ್ಲಾ ಗುರುತುಗಳನ್ನು ಪಟ್ಟಿ ಮಾಡಿಕೊಳ್ಳಬೇಕು. ತಂಡದಲ್ಲಿ ಕೊನೆಯಲ್ಲಿ ಬರುವವರು ಗುರುತುಗಳನ್ನು ಅಳಿಸಬೇಕು. ಸಾಧ್ಯವಿದ್ದರೆ ಮಾರ್ಗ ನಕ್ಷೆಯನ್ನು ಸ್ಥೂಲವಾಗಿ ಮಾಡಿರಬೇಕು. ಪ್ರಶಿಕ್ಷಕರನ್ನು ಆಡಿಸಿ, ಆಡಿಸಲು ಸಮರ್ಥರನ್ನಾಗಿ ಮಾಡಿ.

ಸಂದೇಶ

1

1. ಅ) ಮೂರು ಕಲ್ಲು ಮುಂದೆ ಒಂದು ಚಿಕ್ಕಕಲ್ಲು.
   ಆ) ಕಟ್ಟಿ ಬಾಗಿಸಿದ ಹುಲ್ಲು.
   ಇ) ಬಾಣದ ತಲೆ – ಇವುಗಳ ದಿಕ್ಕನ್ನು ಅನುಸರಿಸಿ

2

2. ಅ) ಈ ದಾರಿಯಲ್ಲಿ ಹೋಗಬೇಕು
   ಆ) ಅಪಾಯ

3

3. ಅ) ಎಡಕ್ಕೆ ಸಾಗಿ ಆ) ಬಲಕ್ಕೆ ಸಾಗಿ

4 

4. ಅ) ಕುಡಿಯುವ ನೀರು.
   ಆ) ಕುಡಿಯಲು ಯೋಗ್ಯವಲ್ಲ
   ಇ) ನೀರಿಗೆ ದಾರಿ

5

5. ಶಿಬಿರಕ್ಕೆ ದಾರಿ

6 

6. ಹೆಜ್ಜೆ ದೂರದಲ್ಲಿ ಬಾಣದ ದಿಕ್ಕಿನಲ್ಲಿ ಸುದ್ದಿ ಅಡಗಿಸಿದೆ.

7

7. ಅ) ಮಿತ್ರರು
   ಆ) ಶತ್ರುಗಳು

8 

8. ಅ) ಮನೆಗೆ ಹೋಗಿದ್ದೇನೆ
   ಆ) ಪಟಾಲಂದ ಸಹಿ

ಪ್ರವಚನ:25 ಹೈಕ್ / ಹೊರಸಂಚಾರ

ಹೈಕ್ :

ಉದ್ದೇಶಿತ ಹೊರಸಂಚಾರ, ಪ್ರಕೃತಿ ವೀಕ್ಷಣೆ, ಅಧ್ಯಯನ ನಕ್ಷಾ ಕೌಶಲ, ಗೈಡ್ ಕೌಶಲ, ಬೆಳೆಸಲು ಪರೀಕ್ಷಿಸುವ ಕಾರ್ಯಕ್ರಮದ ಜೊತೆ ಜೊತೆಗೆ ಸವಾಲೆದುರಿಸುವ ರೋಚಕ ಸನ್ನಿವೇಶ ಕಲ್ಪಿಸುವುದು. ಹೈಕ್ ಸಾಧಾರಣವಾಗಿ 1/2 ದಿನ / 1 ದಿನ / 1 ರಾತ್ರಿ ತಂಗುವ ಅವಧಿ ಹೊಂದಿರುತ್ತದೆ. ಹೈಕ್‌ನ್ನು ನಡೆಯಲು ಸಾಧ್ಯವಿರುವಷ್ಟು ದೂರದಲ್ಲಿ (5 ಕಿ.ಮೀ.) ಹಾಕಬೇಕು. ಹೈಕ್‌ನ್ನು ರಸ್ತೆ, ಕಾಲು ರಸ್ತೆ, ಕಾಡು–ಮೇಡು, ಬೆಟ್ಟ–ಗುಡ್ಡಗಳನ್ನು ಕ್ರಮಿಸುತ್ತ, ಪ್ರಕೃತಿ ಅಧ್ಯಯನ ಮಾಡುವಂತೆ ಆಯೋಜಿಸಬೇಕು.

ಅನುಮತಿ :

ಗೌರವ ನ್ಯಾಯಸಭೆ (ಸಿ.ಓ.ಹೆಚ್.) ಪ್ರಾಂಶುಪಾಲರ / ಮುಖ್ಯ ಶಿಕ್ಷಕರ / ಪೋಷಕರ / ಸ್ಥಳದ ಯಜಮಾನರ ಅನುಮತಿ ಪಡೆಯಬೇಕು.

ಸ್ಥಳ :

ಪ್ರಕೃತಿ ಪ್ರಧಾನವಾಗಿರಬೇಕು, ನೆರಳಿರಬೇಕು, ನೀರಿನ ಆಸರೆ ಇರಬೇಕು, ವಿಶಾಲವಾಗಿರಬೇಕು, ಗುಡಾರ ಹಾಕುವುದಾದರೆ ಬಯಲು ಅವಶ್ಯಕ.

ಸೌಲಭ್ಯ :

ಶೌಚ, ಸ್ನಾನ, ನೀರು, ಪಾಠ ಮಾಡಲು ನೆರಳು, ವಿದ್ಯುತ್, ಸುರಕ್ಷತೆ.

ಸಲಕರಣೆಗಳು :

ವೈಯಕ್ತಿಕ ಸಂಚಿ, ಅಷ್ಟಕ ಸಂಚಿ, ದಳದ ಸಂಚಿ, ಪ್ರಥಮ ಚಿಕಿತ್ಸೆ ಗುಡಾರ ಮತ್ತು ಅದನ್ನು ಹಾಕುವ ಸಲಕರಣೆಗಳು.

ಊಟೋಪಚಾರ :

ಅವಧಿಯನ್ನು ಅವಲಂಬಿಸಿ ದೈನಂದಿನ ಅಡುಗೆಗಳ ಪಟ್ಟಿಯನ್ನು ತಯಾರಿಸುವುದು. ಅಡಿಗೆಗೆ ಬೇಕಾದ ಉರುವಲು, ಪಾತ್ರೆ ಹಾಗೂ ದಿನಸಿ, ತರಕಾರಿ, ಹಾಲು, ಮೊಸರಿನ ವ್ಯವಸ್ಥೆ ಮಾಡಿಕೊಳ್ಳುವುದು.

ಕಾರ್ಯಕ್ರಮ :

ದೈನಿಕ ವೇಳಾಪಟ್ಟಿ, ಚಟುವಟಿಕೆಗಳ ವೇಳಾಪಟ್ಟಿ ಹಾಗೂ ಅದಕ್ಕೆ ಬೇಕಾದ ಸಾಧನ, ಸಲಕರಣೆಗಳನ್ನು ಕಪ್ಪು ಹಲಗೆ, ಸೀಮೆಸುಣ್ಣ, ಸೂಚನಾಫಲಕ ಇತ್ಯಾದಿಗಳನ್ನು ವ್ಯವಸ್ಥೆ ಮಾಡುವುದು.

ಮಾನವ ಸಂಪನ್ಮೂಲ :

ಅವಶ್ಯಕವಾದಷ್ಟು ಪರಿಣತರನ್ನು ಗೊತ್ತುಪಡಿಸುವುದು. ಅವರಿಗೆ ಪೂರ್ವ ಸಿದ್ಧತೆಗಾಗಿ ವಿಷಯವನ್ನು ನೀಡುವುದು. ಅವರ ಪ್ರವಚನಕ್ಕೆ ಬೇಕಾದ ಅನುಕೂಲವನ್ನು ಮಾಡಿಕೊಡುವುದು.

ಚಟುವಟಿಕೆ :

1. ಹೊರ ಸಂಚಾರದ ವರದಿ ಅನುಭವ ಸಹಿತ ಬರೆಸಿ, ಛಾಯಾಚಿತ್ರವಿದ್ದರೆ ಅಂಟಿಸಿ.
2. ಪಾಠದ ನಂತರ ಪಟಾಲಂಗಳಿಗೆ ಇರುವಷ್ಟು ಜಾಗದಲ್ಲಿ ಹೊರಡುವ ಸ್ಥಳ ಕೊಟ್ಟು ಬೇರೆ ಬೇರೆ ತಲುಪಬೇಕಾದ ಸ್ಥಳ ನೀಡಿ, ದಾರಿ ಗುರುತು ಹಾಕಲು ಹೇಳಿ. ನಂತರ ಪಟಾಲಂಗಳ ಸ್ಥಳ ಬದಲಾಯಿಸಿ ಅನುಸರಿಸಲು ಹೇಳಿ. ಈ ಚಟುವಟಿಕೆ ಮೂಲಕ ಪಟಾಲಂವಾರು ವರದಿ ಹೇಳಿಸಿ. ನಿಮ್ಮ ವೀಕ್ಷಣೆ ಹೇಳಿ ಮುಕ್ತಾಯಗೊಳಿಸಿ.
3. ವಿಶೇಷ ವಸ್ತುಗಳು ಸಿಕ್ಕಲ್ಲಿ ಪ್ರದರ್ಶಿಸಲು ಹೇಳಿ.

ಪ್ರವಚನ:26 ಕರಕುಶಲತೆ
(Handi Craft)

ಉದ್ದೇಶ : ಪ್ರಶಿಕ್ಷಣಾರ್ಥಿಗಳು ಪ್ರವಚನದ ಕೊನೆಯಲ್ಲಿ :

* ಕರಕುಶಲತೆಯ ಮಹತ್ವ ತಿಳಿದು, ಮಾಡಿಸಲು ಸಮರ್ಥರಾಗುವರು.
* ಕಸವನ್ನು ರಸವನ್ನಾಗಿ ಮಾಡುವರು,
* ಸೃಜನಶೀಲತೆಯನ್ನು ಕರಕುಶಲತೆ ಮೂಲಕ ಬೆಳೆಸಿಕೊಳ್ಳುವರು.
* ಕೈ ಕೆಲಸದಿಂದ ದುಡಿಮೆಯ ಮಾರ್ಗಗಳನ್ನು ಕಂಡುಕೊಳ್ಳಬಹುದು, ತಿಳಿಯುವರು.
* ಭಾರತ ಹಾಗು ಕರ್ನಾಟಕದ ಕರಕುಶಲದ ಬಗ್ಗೆ ತಿಳಿದುಕೊಳ್ಳುವರು.

ವಿಧಾನ : ವಿಚಾರ ವಿನಿಮಯ, ಪ್ರಾತ್ಯಕ್ಷಿಕೆ, ಪ್ರದರ್ಶನ.

ಭಾರತದ ಕರಕೌಶಲ ಜಗತ್ಪ್ರಸಿದ್ಧವಾದುದು. ಹಾಗೆಯೇ ಚೀನಾ, ಜಪಾನ್ ದೇಶಗಳು ಕೂಡ ಕರಕುಶಲತೆಗೆ ಪ್ರಸಿದ್ಧ. ಈ ಪ್ರಾಚೀನ ಕಲೆಗಾರಿಕೆ ಆರ್ಥಿಕ ಮೂಲವೂ ಆಗಿದೆ. ಕರಕುಶಲತೆಯ ಹವ್ಯಾಸವನ್ನು ಎಲ್ಲರೂ ಹೊಂದಿರಬೇಕು. ಆಲೇವ್ ಲೇಡಿ ಬೇಡನ್ ಪೊವೆಲ್ಲರ ತಾಯಿ ಕಸೂತಿಯನ್ನು "ಆಂತರಿಕ ಶಾಂತಿ" ಎಂದು ಕರೆದಿದ್ದಾರೆ. ಈ ಹವ್ಯಾಸ ಮಕ್ಕಳು ಬೆಳೆದಂತೆ ದುಡಿಮೆಯ ಮಾರ್ಗವೂ ಆಗಬಹುದು. ಇತ್ತೀಚೆಗೆ ಕರಕುಶಲತೆ ಮಾಯವಾಗಿ ಎಲ್ಲವೂ ಯಂತ್ರ ರಚಿತವಾಗುತ್ತಿದೆ. ಕರಕೌಶಲ ಮಕ್ಕಳಲ್ಲಿ ತುಂಟತನ ನಿಯಂತ್ರಿಸುತ್ತದೆ, ಸೃಜನಶೀಲತೆ ಬೆಳೆಸುತ್ತದೆ. ಕಂಪ್ಯೂಟರ್ ಯುಗದಲ್ಲಿ ಕೈ ಮತ್ತು ಬೆರಳುಗಳು ಒತ್ತುವ ಸಾಧನವಾಗುತ್ತಿದೆ. ಈ ಕೊರತೆ ನೀಗಲು ಗೈಡಿಂಗ್‌ನಲ್ಲಿ ಅವಕಾಶವಿದೆ.

ನಾವು ಮಾಡಿದ ವಸ್ತು ನಮಗೆ ತೃಪ್ತಿ ನೀಡುತ್ತದೆ. ಸಂತಸ ಉಂಟು ಮಾಡುತ್ತದೆ. ಗೈಡಿಂಗ್‌ನಲ್ಲಿ ಎಲ್ಲ ರೀತಿಯ ಕರಕುಶಲತೆಯನ್ನು ಅಳವಡಿಸುವುದರ ಜೊತೆಗೆ ಶಿಬಿರ ಕೌಶಲವನ್ನು ಅಳವಡಿಸಲಾಗಿದೆ. ಪ್ರಕೃತಿಯಲ್ಲಿ ದೊರೆಯುವ ಕಡ್ಡಿ, ಕೋಲು, ದಂಡಗಳನ್ನು ಹಗ್ಗಗಳಿಂದ ಕಟ್ಟಿ ಪೀಠೋಪಕರಣ ತಯಾರಿಸಿ ಶಿಬಿರದಲ್ಲಿ ಅನುಕೂಲಕರವಾಗಿ ಅಚ್ಚುಕಟ್ಟಾಗಿ ವಾಸಿಸಲಾಗುವುದು.

ಬುದ್ಧಿ ಶಕ್ತಿ ಮತ್ತು ಕಲ್ಪನಾಶಕ್ತಿಯಿಂದ ಕಸವನ್ನು ರಸವನ್ನಾಗಿ ಮಾಡಬಹುದು.

ದಳದಲ್ಲಿ ಗೈಡ್ಸ್‌ಗಳಿಂದ ಕರಕುಶಲ ವಸ್ತುಗಳನ್ನು ಮಾಡಿಸಿ, ಪ್ರದರ್ಶಿಸಿ, ಉತ್ತಮವಾಗಿದ್ದರೆ ಮಾರಾಟ ಮಾಡಿಸಿ. ದಳದ ಕಾರ್ಯಕ್ರಮದಲ್ಲಿ ಹಣ ಬಳಸಿ. ಮಾರಾಟದ ಮುನ್ನ ಮುಖ್ಯ ಶಿಕ್ಷಕರ / ಪ್ರಾಂಶುಪಾಲರ ಅನುಮತಿ ಪಡೆಯಿರಿ.

ಚಟುವಟಿಕೆ :

1. ಒಂದೆರಡು ಕರಕುಶಲ ವಸ್ತುವನ್ನು ತಯಾರಿಸಿ, ಪ್ರದರ್ಶಿಸಿ.
2. ಗುಂಪು ಚರ್ಚೆ ಮಾಡಿ ಕರ್ನಾಟಕದ ಪ್ರಸಿದ್ಧ ಕರಕುಶಲ ವಸ್ತುಗಳ ಪಟ್ಟಿ ಮಾಡಿ.
3. ಗುಂಪು ಚರ್ಚೆ ಮಾಡಿ ಭಾರತದ ಪ್ರಸಿದ್ಧ ಕರಕುಶಲ ವಸ್ತುಗಳ ಪಟ್ಟಿ ಮಾಡಿ.

ಪ್ರವಚನ:27 ಉರುವಲು ಜೋಡಣೆ
(Fire)

ಉರುವಲು ಜೋಡಣೆ ಮತ್ತು ಬೆಂಕಿ ಬಗ್ಗೆ ಎಚ್ಚರಿಕೆ

ಉದ್ದೇಶ : ಪ್ರಶಿಕ್ಷಣಾರ್ಥಿಗಳು – ಪ್ರವಚನದ ಕೊನೆಯಲ್ಲಿ :

* ಬಯಲಿನಲ್ಲಿ ಅವಶ್ಯಕತೆಗೆ ತಕ್ಕಂತೆ ಬೆಂಕಿ ಮಾಡುವ ವಿಧಾನವನ್ನು ತಿಳಿದು ಕಟ್ಟಿಗೆ ಜೋಡಿಸುವ ಕುಶಲತೆ ಹೊಂದುವರು.
* ಶಿಬಿರವಾಸ ಪ್ರಕೃತಿ ಸಂಚಾರದ ಸಮಯದಲ್ಲಿ ಇವುಗಳನ್ನು ಬಳಸಲು ಸಮರ್ಥರಾಗುತ್ತಾರೆ.
* ಬೆಂಕಿಯನ್ನು ಬಯಲಿನಲ್ಲಿ ಹತ್ತಿಸುವ ವಿಧಾನ ತಿಳಿದು, ಕಲಿಸುವರು.
* ದೊಡ್ಡ ಪ್ರಮಾಣದಲ್ಲಿ ಬೆಂಕಿ ಹತ್ತಿದಾಗ ಆರಿಸುವ ವಿವಿಧ ವಿಧಾನಗಳನ್ನು ಮತ್ತು ಕೌಶಲವನ್ನು ಬೆಳೆಸಿಕೊಳ್ಳುವರು.

ವಿಧಾನ : ಪಟಾಲಂ ಚಟುವಟಿಕೆ – ಪ್ರಾತ್ಯಕ್ಷಿಕೆ / ಪ್ರಯೋಗ.

ವಿವಿಧ ಮಾದರಿಯ ಬೆಂಕಿ : ಪಿರಮಿಡ್ / ಗೋಪುರ, ಹೋಮಕುಂಡ, ನಕ್ಷತ್ರ, ಏತಪಾಕ, ಮೇಜು ಜೋಡಣೆ, ಪ್ರತಿಫಲಕ ಜೋಡಣೆ, ಹರಿ ಒಲೆ, ಬೇಡರ ಜೋಡಣೆ.

ಈ ಜೋಡಣೆಗಳಲ್ಲಿ ಬೆಂಕಿ ಹತ್ತಿಸಲು ಮಧ್ಯದಲ್ಲಿ ಪುರಲೆ (ಚಿಕ್ಕ ಚಿಕ್ಕ ಕಟ್ಟಿಗೆ ಚೂರು, ಒಣಹುಲ್ಲು, ಕಾಗದ) ಇಡಲಾಗುವುದು. ಒಂದು ಅಥವಾ ಎರಡು ಕಡ್ಡಿಯಿಂದ ಗಾಳಿಯನ್ನು ತಡೆಗಟ್ಟಿ ಬೆಂಕಿ ಹತ್ತಿಸಬೇಕು.

ಬೆಂಕಿಯ ಬಗ್ಗೆ ಎಚ್ಚರಿಕೆ :

* ಬೆಂಕಿಯ ಹತ್ತಿರ ಹೋಗುವಾಗ ಬಟ್ಟೆ ಮುದುಡಿಕೊಂಡು, ಕೂದಲನ್ನು ಹಿಂದಕ್ಕೆ ಕಟ್ಟಿಕೊಂಡು ಹೋಗಬೇಕು.
* ಕೈ ನಿಲುಕುವ ದೂರದಲ್ಲಿ ಒಂದು ಬಕೇಟ್ ನೀರನ್ನು ಇಟ್ಟುಕೊಂಡಿರಬೇಕು.
* ಬೆಂಕಿಗೆ ಹತ್ತಿರವಾಗಿ ಪೆಟ್ರೋಲ್ ಅಥವಾ ಸೀಮೆ ಎಣ್ಣೆಯ ಡಬ್ಬ / ಶೀಶೆ ಇಡಬಾರದು. ಬೆಂಕಿಯ ಮೇಲೆ ನೇರವಾಗಿ ಸುರಿಯಬಾರದು.
* ಬೆಂಕಿ ಆಕಸ್ಮಿಕವಾಗಿ ಬಟ್ಟೆಗೆ ತಗುಲಿದರೆ ಓಡಲು ಬಿಡದಂತೆ ನೆಲದ ಮೇಲೆ ಮಲಗಿ, ಹೊರಳಾಡಿಸಬೇಕು.
* ಬೆಂಕಿಯಿಂದ ಗಾಯಗಳಾದರೆ ಕೂಡಲೇ ಗಾಯದ ಮೇಲೆ ಸತತವಾಗಿ ನೀರು ಹರಿಸಿ, ಗಾಯವನ್ನು ತಂಪು ಮಾಡಬೇಕು.

ಬಿಂದಿಗೆ ಸರಪಳಿ ವಿಧಾನ (Bucket, Chain, Method) :

ಕಟ್ಟಡಗಳು, ಗುಡಿಸಿಲಿಗೆ ಬೆಂಕಿ ಬಿದ್ದಾಗ ಜನರನ್ನು ಎರಡು ಸಾಲು ಮಾಡಿ ನೀರು ಸಿಗುವ ಸ್ಥಳದಿಂದ (ನಲ್ಲಿ, ಬಾವಿ, ಟ್ಯಾಂಕು, ಕೆರೆಗಳಿಂದ) ಬೆಂಕಿ ಬಿದ್ದ ಸ್ಥಳದವರೆಗೂ ಸಾಲಾಗಿ ನಿಲ್ಲಿಸಬೇಕು. ಮೂಲದಲ್ಲಿ ಒಂದು ಸಾಲಿನವರು

ಒಬ್ಬರು ಇನ್ನೊಬ್ಬರಿಗೆ ನೀರು ತುಂಬಿದ ಬಿಂದಿಗೆ/ಬಕೇಟನ್ನು ಕೊಡುತ್ತಾ ಬೆಂಕಿಯವರೆಗೆ ತಲುಪಿಸಬೇಕು. ಅದರ ಹತ್ತಿರ ನಿಂತಿರುವವರು ರಭಸದಿಂದ ಬೆಂಕಿಯ ಮೇಲೆ ನೀರನ್ನು ರಾಚಬೇಕು. ಖಾಲಿ ಬಿಂದಿಗೆಯನ್ನು ಎರಡನೇ ಸಾಲಿನವರು ನೀರಿನ ಮೂಲದವರೆಗೆ ಸಾಗಿಸಬೇಕು. ನೀರು ತುಂಬಿ ಪುನಃ ಸಾಗಿಸಬೇಕು. ವೇಗವಾಗಿ ಸಾಗಿಸಬೇಕು. ತಡೆ ಇಲ್ಲದೆ ಸತತವಾಗಿ ಸಾಗಿಸಬೇಕು. ಅಗ್ನಿಶಾಮಕ ದಳವನ್ನು ಸಾಧ್ಯವಾದಷ್ಟು ಬೇಗ ಬರಮಾಡಬೇಕು.

ಈ ವಿಧಾನವನ್ನು ಪ್ರತ್ಯಕ್ಷವಾಗಿ ಅಭ್ಯಾಸ ಮಾಡಿಸಿ.

ಅಗ್ನಿಶಾಮಕ ದಳದ ದೂರವಾಣಿ ಸಂಖ್ಯೆ ತಿಳಿದಿರಬೇಕು. ಅಗ್ನಿಶಾಮಕ ನೆರವು ಸಾಧ್ಯವಿಲ್ಲದಿದ್ದಾಗ ನೀರು, ಮಣ್ಣು, ಮರಳನ್ನು ರಭಸವಾಗಿ ಬೆಂಕಿಯ ಮೇಲೆ ರಾಚಬೇಕು. ಗುಡಿಸಲಿನಲ್ಲಿರುವವರನ್ನು, ಅವರ ಆಸ್ತಿ–ಪಾಸ್ತಿಗಳನ್ನು ರಕ್ಷಿಸಲು ಪ್ರಯತ್ನಿಸಬೇಕು. ಬೆಂಕಿ ನಿಮಗೆ ತಗುಲದಂತೆ ಎಚ್ಚರಿಕೆ ವಹಿಸಬೇಕು.

ಒಣಹುಲ್ಲಿಗೆ ಬೆಂಕಿ (Dry Grass Fire) :

ಸುತ್ತಲೂ ಇರುವ ಒಣ ಹುಲ್ಲನ್ನು ಉದ್ದ ಕೋಲು ತೆಗೆದುಕೊಂಡು ದೂರ ಸರಿಸಬೇಕು. ಸುತ್ತಲಿನ ಗಿಡಮರ ಕಡಿದು ಬೆಂಕಿ ಹರಡುವ ಅವಕಾಶವನ್ನು ತಪ್ಪಿಸಬೇಕು. ಅವಶ್ಯವಿದ್ದರೆ ಮಣ್ಣು ಅಥವಾ ನೀರನ್ನು ರಾಚಬೇಕು. ಹುಲ್ಲು ಬೇಗ ಉರಿದು ತಣ್ಣಗಾಗುತ್ತದೆ.

ಅನಿಲ ಸೋರಿಕೆ (Gas Leakage) :

ಅನಿಲದ ವಾಸನೆ ಬಂದಕೂಡಲೇ ಗೋಣಿಚೀಲ ಅಥವಾ ಟರ್ಕಿ ಟವೆಲ್ ಅಥವಾ ಬೆಡ್‌ಷಿಟ್ ಒದ್ದೆ ಮಾಡಿ ತಕ್ಷಣವೇ ರೆಗ್ಯುಲೇಟರ್ ಮೇಲೆ ಹಾಕಬೇಕು. ರೆಗ್ಯುಲೇಟರ್ ಆರಿಸಬೇಕು. ಕಿಟಕಿ, ಬಾಗಿಲು ತಕ್ಷಣವೇ ತೆರೆಯಬೇಕು. ವಿದ್ಯುತ್ ಒಲೆ ಅಥವಾ ಉಪಕರಣಗಳಿದ್ದರೆ ದೂರ ಸರಿಸಬೇಕು. ವಿದ್ಯುತ್ ಮಂಡಲದ ಪ್ರಧಾನ ಗುಂಡಿಯನ್ನು (Main Switch) ಆರಿಸಿ ವಿದ್ಯುತ್ ಸಂಪರ್ಕವನ್ನು ತಪ್ಪಿಸಬೇಕು.

ನಿಮ್ಮ ಮನೆಯ ಬಳಿ ಬಯಲು ಇದ್ದರೆ ಅನಿಲದ ಸಿಲಿಂಡರನ್ನು ಕೂಡಲೇ ಅಲ್ಲಿಗೆ ಸಾಗಿಸಬೇಕು. ಸಿಲಿಂಡರ್‌ಗೆ ಬೆಂಕಿಯ ಕಿಡಿಗಳು ತಟ್ಟದಂತೆ ನೋಡಿಕೊಳ್ಳಬೇಕು. ನಿಮ್ಮ ಅನಿಲದ ಸಿಲಿಂಡರ್ ಹಂಚುವ ಅಧಿಕಾರಿಗಳಿಗೆ ಕೂಡಲೇ ತಿಳಿಸಬೇಕು. ಅನಿಲದ ಅಂಗಡಿಯ ದೂರವಾಣಿ ಸಂಖ್ಯೆ ಅಡಿಗೆ ಮನೆಯಲ್ಲಿಟ್ಟಿರಬೇಕು.

1. ಪಿರಮಿಡ್/ಗೋಪುರ ಜೋಡಣೆ



2. *Star* - ನಕ್ಷತ್ರ ಜೋಡಣೆ



3. *Table* - ಮೇಜು ಜೋಡಣೆ

4. *Hunter* - ಬೇಡರ ಬೆಂಕಿ ಜೋಡಣೆ



5. *Alter* - ಹೋಮ ಕುಂಡ ಜೋಡಣೆ



6. *Crane* - ಏತ ಜೋಡಣೆ



7. *Reflection* - ಪ್ರತಿಫಲನ ಜೋಡಣೆ



8. *Trench* - ಹರಿ ಒಲೆ

ಚಟುವಟಿಕೆ :

1. ಚಿತ್ರ ಕೊಟ್ಟು ಉರುವಲು ಜೋಡಿಸಿ ಬೆಂಕಿ ಹತ್ತಿಸಿ ಬಳಸುವುದು, ಆರಿಸಿ ಸ್ಥಳ ಸ್ವಚ್ಛ ಮಾಡುವುದು.
2. ಬಕೇಟ್ ಸರಪಣಿ ತಂತ್ರ ಅಭ್ಯಾಸ ಮಾಡುವುದು.

ಪ್ರವಚನ:28 ಅಂದಾಜು ಅಳತೆ
(Estimation)

ಉದ್ದೇಶ : ಪ್ರಶಿಕ್ಷಣಾರ್ಥಿಗಳು :

* ತಾವು ಅಂದಾಜು ಮಾಡುವ ಸಂದರ್ಭ ನೆನಪಿಸಿಕೊಂಡು ಅದರ ಅವಶ್ಯಕತೆಯನ್ನು ಮನಗಾಣುವರು.
* ದೂರವನ್ನು ಅಗಲವನ್ನು ಆಂದಾಜು ಮಾಡಲು ಸಮರ್ಥರಾಗುವರು.
* ಅಂದಾಜು ಅಳತೆ ಮಾಡಿಸಲು ಸಮರ್ಥರಾಗುವರು.

ವಿಧಾನ : ಪ್ರದರ್ಶನ, ಪ್ರಾತ್ಯಕ್ಷಿಕೆ

ಗೈಡ್‌ಗಳಾದವರು 1 ಇಂಚಿನಿಂದ 1 ಮೈಲಿಯವರೆಗೂ ಅಂದಾಜು ಮಾಡುವ ಸಾಮರ್ಥ್ಯ ಪಡೆಯಬೇಕು. ಇದು ನಿಮಗೆ ಗೊತ್ತೇ? ನಮ್ಮ ದೇಹವೇ ಒಂದು ಮಾಪಕ...! ದೇಹದ ಎತ್ತರ, ಕೈಕಾಲುಗಳಿಂದ ಚೋಟು, ಗೇಣು, ಮೊಳ, ಗಜ, ಮೀಟರ್, ಮಾರು, ಹೆಜ್ಜೆ ಇವುಗಳ ಅಳತೆಯನ್ನು ತೆಗೆದುಕೊಂಡು ಸಿದ್ಧ ದಾಖಲೆ ತಯಾರಿಸಿಕೊಳ್ಳಿ.

1) ದೂರವನ್ನು ಕಂಡು ಹಿಡಿಯಲು ಹೊರಾಂಗಣದಲ್ಲಿರುವ ಕೆಲವು ಸ್ಥಳಗಳನ್ನು ಗುರುತಿಸಿಕೊಳ್ಳಬೇಕು. ನೀವು ನಿಂತಿರುವ ಸ್ಥಳದಿಂದ ಗುರುತು ಮಾಡಿದ ಸ್ಥಳಕ್ಕೆ ನಡೆದು ಹೆಜ್ಜೆಯನ್ನು ಎಣಿಸಿ ಲೆಕ್ಕಾಚಾರ ಮಾಡಿ. ಈ ಅಂತರದ ನಿಜ ದೂರ ತಿಳಿದಿದ್ದರೆ ನಿಮ್ಮ ಅಂದಾಜನ್ನು ಹೋಲಿಸಿ, ಇಲ್ಲದಿದ್ದರೆ ನಿಮ್ಮ ಪಟಾಲಂನ ಎಲ್ಲರ ಅಂದಾಜು ಕೂಡಿ ಸರಾಸರಿ ಕಂಡು ಹಿಡಿದು ಅದಕ್ಕೆ ಪ್ರತಿಯೊಬ್ಬರ ಅಂದಾಜನ್ನು ಹೋಲಿಸಿ. ನೀವು ಅರ್ಧ ಗಂಟೆಯಲ್ಲಿ ಎಷ್ಟು ನಡೆಯುವಿರೆಂದು ಕಂಡುಹಿಡಿದುಕೊಳ್ಳಿ.

2) ವಾಹನಗಳು ಒಂದು ಗಂಟೆಗೆ ಕ್ರಮಿಸುವ ವೇಗಮಿತಿ ತಿಳಿದುಕೊಳ್ಳಿ. ನಿಮ್ಮ ಪ್ರಯಾಣದ ಸಮಯದಿಂದ ವೇಗ ಮಿತಿಯ ಆಧಾರದ ಮೇಲೆ ದೂರದ ಅಂದಾಜು ಮಾಡಿ

3) ಸ್ಥಿರಗೊಳಿಸಿದ ವಸ್ತುಗಳ ಅಂತರದಿಂದ ದೂರವನ್ನು ಕಂಡು ಹಿಡಿಯಬಹುದು. ಉದಾಹರಣೆಗೆ ರಸ್ತೆಯಲ್ಲಿರುವ ವಿದ್ಯುತ್ ಕಂಬದಿಂದ ಕಂಬಕ್ಕೆ ಇರುವ ಅಂತರ ನಿರ್ದಿಷ್ಟವಾಗಿರುತ್ತದೆ. ನೀವು ಎಷ್ಟು ಕಂಬದ ದೂರ ನಡೆದಿರೆಂದು ತಿಳಿದರೆ ದೂರವನ್ನು ಸುಲಭವಾಗಿ ಅಂದಾಜು ಮಾಡಬಹುದು.

4) ದೂರದ ಅಳತೆಯನ್ನು ಶಬ್ದದ ಸಹಾಯದಿಂದಲೂ ಕಂಡು ಹಿಡಿಯಬಹುದು. ಉದಾಹರಣೆಗೆ ಬಂದೂಕು ಹಾರಿಸಿದರೆ ಮದ್ದಿನಿಂದ ಧಗ್ಗನೆ ಬಂದ ಉರಿಯನ್ನು ಕಂಡ ಕ್ಷಣದಿಂದ ಬಂದೂಕು ಹೊಡೆತದ ಶಬ್ದ ಕೇಳಿ ಬರುವವರೆಗೂ ನಿಮಿಷಗಳನ್ನು ಎಣಿಸಿ. ಆಗ ನೀವು ಬಂದೂಕು ಹಾರಿಸಿದ ಸ್ಥಳದಿಂದ ಎಷ್ಟು ದೂರದಲ್ಲಿ ಇದ್ದೀರೆಂದು ತಿಳಿದು ಬರುತ್ತದೆ. ಬೆಳಕು, ಶಬ್ದಕ್ಕಿಂತ ಅತಿ ವೇಗವಾಗಿ ಚಲಿಸುತ್ತದೆ. ಮೊದಲು ಬೆಳಕು ಕಂಡು ನಂತರ ಶಬ್ದ ಕೇಳಿ ಬರುತ್ತದೆ.

   ಬೆಳಕು ನಿಮಿಕ್ಕೆ : 3 x 10 ಮೀ/ಸೆಂ. ದೂರ, ಶಬ್ದ ನಿಮಿಷಕ್ಕೆ 320 ಮೀ/ಸೆ. ದೂರ ಚಲಿಸುತ್ತದೆ.

5) ಸ್ಕೌಟ್ ದಂಡದ ಅಳತೆ ಗೊತ್ತುಪಡಿಸಿಕೊಂಡು ಅದರ ಸಹಾಯದಿಂದ ದೂರದ ಅಳತೆಯನ್ನು ಅಂದಾಜು ಮಾಡಬಹುದು.

6) ವೀಕ್ಷಣೆಯ ಮೂಲಕ ದೂರದ ಅಂದಾಜು ಮಾಡಬಹುದು.

ಕೆಳಗೆ ಕೊಟ್ಟಿರುವ ವೀಕ್ಷಣಾ ದೂರದ ಅಂದಾಜು ಮಾಡಿ. ನಿಮ್ಮ ಅಂದಾಜು ಸ್ವಲ್ಪ ಹೆಚ್ಚು ಕಡಿಮೆ ಆಗುವ ಸಾಧ್ಯತೆ ಇರುತ್ತದೆ. ಅದನ್ನೇ ಅನುಸರಿಸಿ.

1) 50 ಮೀ.ಗಳ ದೂರದಲ್ಲಿ – ಒಬ್ಬ ವ್ಯಕ್ತಿಯ ಬಾಯಿ ಮತ್ತು ಕಣ್ಣುಗಳು ಸ್ಪಷ್ಟವಾಗಿ ಕಾಣಿಸುತ್ತವೆ.

2) 100 ಮೀ.ಗಳ ದೂರದಲ್ಲಿ – ಕಣ್ಣುಗಳು ಚುಕ್ಕೆಯಂತೆ ಕಾಣಿಸುತ್ತವೆ

3) 200 ಮೀ.ಗಳ ದೂರದಲ್ಲಿ – ಸಮವಸ್ತ್ರಗಳ ಗುಂಡಿಗಳು ಮತ್ತಿತರ ವಿವರಗಳನ್ನು ಕಾಣಬಹುದು.

4) 400 ಮೀ.ಗಳ ದೂರದಲ್ಲಿ – ಕಾಲುಗಳ ಚಲನೆಯನ್ನು ಕಾಣಬಹುದು.

5) 500 ಮೀ.ಗಳ ದೂರದಲ್ಲಿ – ಸಮವಸ್ತ್ರದ ಬಣ್ಣಗಳನ್ನು ಕಾಣಬಹುದು. ಆಕಾರವನ್ನು ಕಾಣಬಹುದು.

ದೂರದ ಅಂದಾಜು ಕೆಳಗಿನ ಸಂದರ್ಭಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

1. ಗುಡ್ಡಗಳ ನಡುವೆ ಇರುವ ಕಣಿವೆಯನ್ನು ವೀಕ್ಷಿಸಿದಾಗ ಅಥವಾ ವಿಕಾರವಾಗಿರುವ ಅಥವಾ ಪಾತಾಳದ ಸ್ಥಳವನ್ನು ವೀಕ್ಷಿಸಿದಾಗ.
2. ದೊಡ್ಡ ದೊಡ್ಡ ರಸ್ತೆಗಳಲ್ಲಿ ನಿಂತು ನೋಡಿದಾಗ.
3. ಮಂಡಿಯೂರಿ ಅಥವಾ ಮಲಗಿಕೊಂಡು ನೋಡಿದಾಗ ದೂರದ ಅಂದಾಜು ಹೆಚ್ಚಾಗಿ ಕಂಡು ಬರುತ್ತದೆ.

ಕೆಳಗಿನ ಸಂದರ್ಭಗಳಲ್ಲಿ ಕಡಿಮೆ ಕಂಡು ಬರುತ್ತದೆ.

1. ದೂರದ ವಸ್ತುವಿನ ಬಣ್ಣವು ಹಿನ್ನೆಲೆಯೊಡನೆ ಬೆರೆತಾಗ ಅಥವಾ ನೆರಳಿನಿಂದ ಮುಚ್ಚಿರುವಾಗ ದೂರದ ಅಂದಾಜು ಕಡಿಮೆಯಾಗುತ್ತದೆ.
2. ಮೇಲೆ ನೋಡಿದಾಗ ಅಥವಾ ಆಳ ನೋಡಿದಾಗ ಮತ್ತು ನೀರಿನ ಮೂಲಕ ನೋಡಿದಾಗ.
3. ಪರಿಸರದಲ್ಲಿ ಇರುವುದಕ್ಕಿಂತ ವಸ್ತು ಹೆಚ್ಚಿನ ಗಾತ್ರದಲ್ಲಿದ್ದಾಗ.
4. ಮಂಜು ಬಿದ್ದಾಗ, ನೆಲ ಸಮನಾಗಿರುವಾಗ.

ಅಗಲದ ಅಂದಾಜು (Estimation Width) :

ನದಿ ಪಾತ್ರ, ಬಯಲಿನ ಅಗಲ, ದೊಡ್ಡ ರಸ್ತೆಯ ಅಗಲಗಳನ್ನು ಅಂದಾಜಿಸಬಹುದು. 100 ಮೀಟರ್ ಅಗಲ ಅಂದಾಜಿಸಿ.



ಚಿತ್ರವನ್ನು ನೋಡಿ ಜ್ಯಾಮಿತಿಯ ಆಧಾರದ ಮೇಲೆ ಓದಿಕೊಳ್ಳಿ.

ನೀವು ಅಂದಾಜಿಸಬೇಕಾದ ಅಗಲದ ಮತ್ತೊಂದು ಭಾಗದಲ್ಲಿರುವ ಸ್ಥಿರವಾದ ವಸ್ತುವನ್ನು ೦ ಎಂದು ಗುರುತಿಸಿ. ಆ ವಸ್ತುವಿನ ಅಭಿಮುಖವಾಗಿ ನಿಲ್ಲುವ ಬಿಂದು A ಯಿಂದ ಅನುಕೂಲಕ್ಕೆ ತಕ್ಕಂತೆ ಎಡ ಅಥವಾ ಬಲಕ್ಕೆ ನೇರವಾಗಿ ನಡೆದು B ಯಲ್ಲಿ ಗುರುತು ಕೋಲು ಇಡಿ. ಅಷ್ಟೇ ಹೆಜ್ಜೆ C ವರೆಗೆ

ನಡೆಯಿರಿ. (AB ಮತ್ತು CB ಯ ಅಂತರ ಸಮನಾಗಿರಬೇಕು) ಈ ಅಳತೆಯನ್ನು ಸ್ಥಳಕ್ಕೆ ತಕ್ಕಂತೆ ಅಂದಾಜಿನಲ್ಲಿ ತೆಗೆದುಕೊಳ್ಳಬಹುದು.

AB = BC

ನಂತರ C ಬಿಂದುವಿನಲ್ಲಿ ವಸ್ತುವಿಗೆ ಅಭಿಮುಖವಾಗಿ 90^0 ಕೋನದಲ್ಲಿ ತಿರುಗಿ ನೇರ ನಡೆಯುತ್ತ ವಸ್ತುವನ್ನು ದಂಡದ ಮೂಲಕ ನೋಡುತ್ತಾ ಸಾಗಿ. ದಂಡ ಮತ್ತು ವಸ್ತು ಒಂದೇ ನೇರದಲ್ಲಿ ಸ್ಪಷ್ಟವಾಗಿ ಕಾಣಿಸಿದ ಬಿಂದುವಿನಲ್ಲಿ ನಿಂತು D ಗುರುತುಮಾಡಿ. CD ಅಳೆಯಿರಿ – ಈ ಅಳತೆಯು ವಸ್ತುವಿನ ಅಗಲಕ್ಕೆ ಸಮನಾಗಿರುತ್ತದೆ.

CD = AO

ಚಿತ್ರವನ್ನು ನೋಡಿ, ಜ್ಯಾಮಿತಿಯ ಕೌಶಲವನ್ನು ಬಳಸಿಕೊಂಡು ಅಗಲದ ಅಂದಾಜು ಅಭ್ಯಾಸ ಮಾಡಿ.

ಪ್ರತಿಸಾರಿ ಅಂದಾಜು ಮಾಡಿದಾಗಲೂ ಪರೀಕ್ಷಿಸಿಕೊಳ್ಳಿ ನಿಮ್ಮ ಅಂದಾಜು ಎಷ್ಟು ಸರಿ?

ಅಂದಾಜು ಅಳತೆ – ನಿಜವಾದ ಅಳತೆ (ಲಭ್ಯವಿದ್ದರೆ) ಅಪ್ಪಕದ ಅಂದಾಜಿನ ಸರಾಸರಿ ಅಳತೆ = ತಪ್ಪು (Error)

ತಪ್ಪನ್ನು ಪ್ರತಿಶತದಲ್ಲಿ % ಲೆಕ್ಕಾಚಾರ ಮಾಡಿ. ನಿಮ್ಮ ಅಂದಾಜು 10% ಕ್ಕಿಂತ ಕಡಿಮೆ ತಪ್ಪಿದ್ದರೆ, ನೀವು ಉತ್ತಮ ಅಂದಾಜುಗಾರರು, ಈ ಮಟ್ಟವನ್ನು ಮುಟ್ಟುವಂತೆ ಅಂದಾಜು ಅಳತೆ ಅಭ್ಯಾಸ ಮಾಡಿ.

ಭಾಗ–4
ಪ್ರವಚನ:29 ಆಟಗಳು
(Games)

ಉದ್ದೇಶ : ಪ್ರವಚನದ ಕೊನೆಯಲ್ಲಿ ಪ್ರಶಿಕ್ಷಣಾರ್ಥಿಗಳು :

* ವಿವಿಧ ರೀತಿಯ ಆಟದ ಮಹತ್ವ ತಿಳಿಯುವರು.
* ಆಟ ಆಡಲು ಆಡಿಸಲು ಸಮರ್ಥರಾಗುವರು.
* ಹೊಸ ಹೊಸ ಆಟ ರಚಿಸುವರು.
* ಆರೋಗ್ಯಕ್ಕಾಗಿ ಆಟದ ಅವಶ್ಯಕತೆ ಮನಗಾಣುವರು.
* ಆಟಗಳನ್ನು ದಳಸಭೆಯ ಮಧ್ಯೆ ಚೇತೋಹಾರಿಯಾಗಿ ಬಳಸುವರು.
* ಪ್ರವಚನ ಆಟಗಳನ್ನು ಆಡಿಸಲು ಸಮರ್ಥರಾಗುವರು.

ವಿಧಾನ : ಗುಂಪು ಚರ್ಚೆ, ಆಟಗಳ ಪಟ್ಟಿ, ಒಂದೆರಡು ವಿವರ, ವರದಿ, ಸಾರಾಂಶೀಕರಣ, ಪ್ರಾಯೋಗಿಕ ಆಟ.

1. ಗೈಡಿಂಗ್‌ನಲ್ಲಿ ಆಟಗಳು :

ಗೈಡಿಂಗ್‌ನಲ್ಲಿ ಎಲ್ಲಾ ಆಟಗಳು ಸಲ್ಲುತ್ತವೆ. ಆಟ ಅನಿಯಮಿತ ವ್ಯಾಯಾಮ. ಆಟದಿಂದ ದೇಹಕ್ಕೆ ವ್ಯಾಯಾಮ, ಮನಸ್ಸಿಗೆ ಹರ್ಷವಾಗುತ್ತದೆ. ಆಟಗಳಲ್ಲಿ ಅನೇಕ ವಿಧಗಳಿವೆ.

1. ವೈಯುಕ್ತಿಕ	2. ತಂಡ	3. ಒಳಾಂಗಣ
4. ಹೊರಾಂಗಣ	5. ಮನರಂಜನೆ	6. ಸ್ಪರ್ಧೆ
7. ಸಾಹಸ	8. ಶೈಕ್ಷಣಿಕ ಆಟ	9. ವ್ಯಾಪಕ ಆಟ
10. ಕತ್ತಲೆ ಆಟ		

* ಗೈಡಿಂಗ್‌ನಲ್ಲಿ ಪ್ರವಚನಗಳ ಮಧ್ಯೆ ಜಡತ್ವ ನೀಗಿಸಲು ಆಸಕ್ತಿ ಕಾಪಾಡಲು ಆಟ ಆಡಿಸುತ್ತೇವೆ. ಸಂಜೆ ಆಟ ಕಡ್ಡಾಯ
* ಗೈಡಿಂಗ್ ಪ್ರವಚನಗಳಲ್ಲಿ ಶೈಕ್ಷಣಿಕ ಆಟ ಆಡಿಸುತ್ತೇವೆ. ಇದು ವಿಷಯಕ್ಕೆ ಮರುಪುಷ್ಠಿ ನೀಡುತ್ತದೆ. ವಿಷಯಗಳಲ್ಲಿ ಆಸಕ್ತಿ ಮೂಡಿಸುತ್ತದೆ. ವಿಷಯ ಮನೋಗತವಾಗುತ್ತದೆ. ಇಷ್ಟೇ ಅಲ್ಲದೆ ಆಟದ ಮೂಲಕ ಮೌಲ್ಯಮಾಪನ ಮಾಡಲಾಗುವುದು.

ಆಟಗಳಿಂದ ಆಗುವ ಅನುಕೂಲತೆಗಳು :

* ನಾಯಕತ್ವ ಬೆಳೆಸುತ್ತದೆ.
* ಆಜ್ಞೆ ನೀಡುವ, ಆಜ್ಞೆ ಪಾಲಿಸುವ ಅಭ್ಯಾಸವಾಗುತ್ತದೆ.

* ಶಿಸ್ತು ಅಭ್ಯಾಸವಾಗುತ್ತದೆ.
* ಆಟವನ್ನು ಖಿನ್ನತೆಗೆ ಚಿಕಿತ್ಸೆಯಾಗಿ ಬಳಸಲಾಗುತ್ತದೆ.
* ಸೋಲು-ಗೆಲುವನ್ನು ಸಮಸ್ಥಿತಿಯಲ್ಲಿ ಸ್ವೀಕರಿಸುವ ಕ್ರೀಡಾ ಮನೋಭಾವ (Sportive Spirit) ಬೆಳೆಯುತ್ತದೆ.
* ಏಕಾಗ್ರತೆ, ತನ್ಮಯತೆ ಬೆಳೆಯುತ್ತದೆ.
* ಸಮಸ್ಯೆ ಪರಿಹರಿಸುವ ಸವಾಲೆದುರಿಸುವ ಕೌಶಲ ಬೆಳೆಯುತ್ತದೆ.
* ಆಟದಿಂದ ಆರೋಗ್ಯ ವೃದ್ಧಿಸುತ್ತದೆ.

ಮಕ್ಕಳಿಗೆ ಆಟವಾಡಿಸಿ ಆಡಲು ಪ್ರೋತ್ಸಾಹಿಸಿ. ಜೀವನವೆಂಬ ಬಯಲಿನಲ್ಲಿ ಜೀವನದಲ್ಲಿ ಆಟ ಆಡಲು ಈ ಆಟಗಳು ಮಕ್ಕಳಿಗೆ ತಯಾರಿ ನೀಡುತ್ತದೆ. ಆಟಕ್ಕೆ ವಯೋಮಿತಿ ಇಲ್ಲ. ನೀವೂ ಆಡಿ, ಮಕ್ಕಳಿಗೂ ಆಡಿಸಿ.

2. ಕಿಮ್ಸ್‌ನ ಆಟ – ಜ್ಞಾನೇಂದ್ರಿಯ ಆಟ (Sense Game) :

ಇದು ಜ್ಞಾನೇಂದ್ರಿಯಗಳ ಸಾಮರ್ಥ್ಯ ಪರೀಕ್ಷಣಾ ಆಟ. ಇದು ವೈಯುಕ್ತಿಕ ಆಟ.

ವಸ್ತುಗಳು-ರುಚಿ : 5 ವಿವಿಧ ರುಚಿಯ (ಏಕ/ಮಿಶ್ರ ರುಚಿಯ) ಪಾನೀಯಗಳನ್ನು 5 ಲೋಟದಲ್ಲಿ ಇಟ್ಟು 5 ಚಮಚ ಹಾಕಿಡಬೇಕು.

ಸ್ಪರ್ಶ : 5 ಪುಟ್ಟ ಚೀಲ ಅಥವಾ ಅಪಾರದರ್ಶಕ ಪ್ಲಾಸ್ಟಿಕ್ ಪೊಟ್ಟಣಗಳಲ್ಲಿ ಸ್ಪರ್ಶ ಪರೀಕ್ಷಿಸುವ ವಸ್ತುಗಳು : ಕಾಳು, ಬೇಳೆ, ಧಾನ್ಯ, ವಿವಿಧ ರೀತಿಯ ಬಟ್ಟೆಚೂರು, ಹತ್ತಿ, ಸ್ಪಂಜು ಇತ್ಯಾದಿ

ಶಬ್ದ : ಕಾಣದಂತೆ ನಿಂತು 5 ಶಬ್ದ ಮಾಡಿ. ಅಥವಾ ಮೊಬೈಲ್‌ನಲ್ಲಿ 5 ಶಬ್ದ ರೆಕಾರ್ಡ್ ಮಾಡಿಕೊಂಡು ಕೇಳಿಸಿ.

ದೃಷ್ಟಿ : ಯಾವುದಾದರೂ ಗೋಡೆ / ಫಲಕ (Board) / ದೊಡ್ಡ ಮರದ ಕಾಂಡದ ಮೇಲೆ ಸುಧಾ / ತರಂಗ / ಇಂಡಿಯಾ ಟು ಡೇ / ನ್ಯೂಸ್ ಪೇಪರ್‌ಗಳಿಂದ ಸ್ಪಷ್ಟವಾಗಿರುವ ಚಿತ್ರ / ಜಾಹೀರಾತುಗಳನ್ನು, ಛಾಯಾಚಿತ್ರಗಳನ್ನು ಕತ್ತರಿಸಿ, 5ನ್ನು ಪ್ರದರ್ಶಿಸಿ, ಗೈಡ್‌ಗಳು 25 ಹೆಜ್ಜೆ ಆಚೆ ನಿಂತು ನೋಡಬೇಕು.

ಒಂದೊಂದು ವಸ್ತುವಿನ ಗುಂಪನ್ನು ಅಂತರ ಬಿಟ್ಟು ಬಿಟ್ಟು ಇಡಿ. ಪಟಾಲಂನ್ನು ಆವೃತ್ತಿಯಲ್ಲಿ ವೀಕ್ಷಿಸಲು ಕಳುಹಿಸಿ. 5 ಗುಂಪು ಮುಗಿದ ಮೇಲೆ ಒಂದು ಕಡೆ ಕುಳಿತು ವೈಯಕ್ತಿಕವಾಗಿ ರುಚಿ ನೋಡಿದ, ಸ್ಪರ್ಶಿಸಿದ, ವಾಸನೆ ನೋಡಿದ. ಶಬ್ದ ಕೇಳಿದ, ನೋಡಿದ ಚಿತ್ರಗಳ ಹೆಸರು ಬರೆಯಲಿ. ಒಂದು ಸರಿಯಾಗಿದ್ದರೆ ಒಂದು ಅಂಕ ನೀಡಿ.

20 + = ಅತ್ಯುತ್ತಮ	10 + = ತೃಪ್ತಿಕರ
15 + = ಉತ್ತಮ	5 + = ಸಾಮಾನ್ಯ

5 ಕ್ಕಿಂತ ಕಡಿಮೆ ಇದ್ದರೆ ನ್ಯೂನತೆ. ಇದನ್ನು ಗುರುತಿಸಿ. ಈ ಆಟ ಪದೇ ಪದೇ ಆಡಿಸಿ ಅವರ ವೀಕ್ಷಣಾ ಹಾಗು ನೆನಪಿನ ಶಕ್ತಿಯನ್ನು ಅಭಿವೃದ್ಧಿಗೊಳಿಸಬಹುದು.

ಜ್ಞಾಪಕ ಪರೀಕ್ಷೆ (Memory Test) :

* ಒಂದು ಮೇಜು ಅಥವಾ ಸಮತಲದ ಮೇಲೆ 25 ರಿಂದ 30 ಗೈಡ್ ಮತ್ತು ಸಾಮಾನ್ಯ ವಸ್ತುಗಳನ್ನು ಹರಡಿ ಬೆಡ್‌ಶೀಟ್ ಮುಚ್ಚಿ.
* ಒಮ್ಮೆಗೆ ಒಂದು ಪಟಾಲಂ ಕರೆಯಿರಿ. ಮುಚ್ಚಿಕೆ ತೆಗೆಯಿರಿ. 1 ನಿಮಿಷ ಅವಕಾಶ ನೀಡಿ. ಪುನಃ ಮುಚ್ಚಿ ಅವರನ್ನು ದೂರ ಕಳುಹಿಸಿ.
* ವೈಯಕ್ತಿಕವಾಗಿ, ನೆನಪಿನ ಶಕ್ತಿಯ ಆಧಾರದ ಮೇಲೆ ವಸ್ತುಗಳನ್ನು ಬರೆಯುವರು.

20 + = ಅತ್ಯುತ್ತಮ   10 + = ತೃಪ್ತಿಕರ

15 + = ಉತ್ತಮ   5 + = ಸಾಮಾನ್ಯ

5 ಕ್ಕಿಂತ ಕಡಿಮೆ ಇದ್ದರೆ ಜ್ಞಾಪಕ ಶಕ್ತಿ ಕೊರತೆ ಇರುತ್ತದೆ. ಇದಕ್ಕೆ ಇಂತಹ ಆಟಗಳನ್ನು ಹಲವು ಬಾರಿ ಆಡಿಸುವುದರಿಂದ ಜ್ಞಾಪಕ ಶಕ್ತಿ ಅಭಿವೃದ್ಧಿಯಾಗುತ್ತದೆ.

ಸೂಚನೆ : ನ್ಯೂನ್ಯತೆ ನಿಮಗೆ ಖಚಿತವಾದರೆ ಪೋಷಕರಿಗೆ ಸೂಕ್ತ ವೈದ್ಯರನ್ನು ಸಂಪರ್ಕಿಸಲು ಸಲಹೆ ನೀಡಿ.

ಆಟವು ಅನಿಯಮಿತ ವ್ಯಾಯಾಮ. ಆಟವು ಮೈಮನಗಳನ್ನು ವಿಕಾಸಗೊಳಿಸುವ ಪ್ರಕ್ರಿಯೆ. ಆಟಗಳಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಅಭಿವೃದ್ಧಿಗೊಳಿಸಿಕೊಳ್ಳಬಹುದು. ಆಬಾಲವೃದ್ಧರು ವಯಸ್ಸು ಪರಿಸರಕ್ಕೆ ತಕ್ಕಂತೆ ಆಡಬಹುದು. ತರಬೇತಿಗೆ ಸ್ಫೂರ್ತಿ ತುಂಬಲು ಆಟಗಳು ಅತ್ಯವಶ್ಯಕ.

ಶೈಕ್ಷಣಿಕ ಆಟಗಳು (Educational Games) :

ಮೂಲ ಆಟಗಳ ಆಧಾರದ ಮೇಲೆ, ಇಲ್ಲವೇ ಹೊಸ ಆಟಗಳನ್ನು ವಿಷಯಾಧಾರಿತವಾಗಿ ರಚಿಸಿ, ಕಲಿಕೆ ಪುನರ್ಬಲಗೊಳಿಸಲು, ಮೌಲ್ಯಮಾಪನ ಮಾಡಲು ಆಡಿಸಲಾಗುವುದು. ಭಾಷೆ ಆಟ. ವೈಜ್ಞಾನಿಕ ಆಟ, ಗಣಿತದಾಟ, ಪರಿಸರದಾಟ. ಹೀಗೆ ಅನೇಕ ವಿಧಗಳಿವೆ. ಗೈಡಿಂಗ್ ವಿಷಯಗಳಿಗೆ ಸಂಬಂಧಿಸಿದಂತೆಯೂ ಆಟಗಳನ್ನು ಆಡಿಸಲಾಗುತ್ತದೆ. ಈ ರೀತಿಯ ಆಟಗಳಿಗೆ ಪುಸ್ತಕಗಳಿವೆ. ದಿನಪತ್ರಿಕೆ ಮತ್ತು ಮಾಸಿಕಗಳ ಮಕ್ಕಳ ಪುಟಗಳು ಒಳ್ಳೆಯ ಸಂಪನ್ಮೂಲ.

ದಳ ಸಭೆಯಲ್ಲಿ ಮಕ್ಕಳಿಗೆ 5 ರಿಂದ 10 ನಿಮಿಷ ಕಡ್ಡಾಯವಾಗಿ ಆಡಿಸಿ. ಆಟ ಮಕ್ಕಳನ್ನು ಆಕರ್ಷಿಸುತ್ತದೆ. ಒಳ್ಳೆಯ ಆಟಗಳನ್ನು ಸಂಗ್ರಹಿಸಿ. ರಚಿಸಿ. ಈ ಕಾರ್ಯದಲ್ಲಿ ದೂರದರ್ಶನದಲ್ಲಿನ ಆಟಗಳು. ಅಂತರಜಾಲವು ನೆರವು ನೀಡುತ್ತದೆ.

ರಿಲೇ, ಪೊಟಾಟೊರೇಸ್, ವೀಕ್ಷಣೆ, ಸಂಗೀತ ಕುರ್ಚಿ, ಜೊತೆ ಆಟ, ನಿರ್ದೇಶನದಾಟ, ಆಕಾರ ರಚನಾ ಆಟ, ಒಂದು ನಿಮಿಷದ ಆಟ, ಜ್ಞಾಪಕ ಆಟ, ನಿಧಿ ಅರಸುವ ಆಟ.....

ಪೂರಕ ಆಟಗಳು :

ಆಟ–1: 1 ಅಥವಾ 2 ನಿಮಿಷ ಆಟ. ಒಂದು ಪ್ರವಚನ ಮುಗಿದ ನಂತರ 2 ನಿಮಿಷ ನಿಗದಿಪಡಿಸಿ ಅವರಿಗೆ ನೆನಪಿರುವ ಆ ಪ್ರವಚನಗಳ ಹೊಸ ಪದ ಬರೆಯಲು ಹೇಳಿ. ಅವರ ನೆನಪಿನಲ್ಲಿ ಉಳಿದ ಹೊಸ ಪದ ಬರೆಸಿ.

ಆಟ–2: ಒಬ್ಬರು ಒಂದು ಹೊಸ ಪದ ಹೇಳಿ ನಿರ್ದೇಶಿಸಲಿ. ಅವರು ಆ ಪದದ ಬಗ್ಗೆ ಒಂದೆರಡು ವಾಕ್ಯ ಹೇಳಲಿ. ನಂತರ ಒಂದು ಪದ ಹೇಳಿ ಮತ್ತೊಬ್ಬರನ್ನು ನಿರ್ದೇಶಿಸಲಿ. ಹೀಗೆ ಆಟ ಮುಂದುವರಿಸಿ. ಈ 'ನಿರ್ದೇಶನ ಆಟ' ಮರು ಪುಷ್ಟಿ ನೀಡುತ್ತದೆ.

ಪ್ರವಚನಗಳ ಕೊನೆಯಲ್ಲಿ ಸೂಕ್ತವಾದ ಆಟಗಳನ್ನು ಕೊಡಲಾಗಿದೆ.

ಆಟಗಳಿಂದ ಸಹಕಾರ, ಸಹಿಷ್ಣುತೆ, ಏಕತೆ, ಹೊಂದಾಣಿಕೆ, ಧೈರ್ಯ, ಆತ್ಮವಿಶ್ವಾಸ, ಸೋಲು–ಗೆಲುವನ್ನು ಸಮಾನವಾಗಿ ತೆಗೆದುಕೊಳ್ಳುವ 'ಕ್ರೀಡಾ ಸ್ಫೂರ್ತಿ' ಮುಂತಾದ ಮೌಲ್ಯಗಳು ಬೆಳೆಯುತ್ತವೆ.

ಗೈಡಿಂಗ್‌ನಲ್ಲಿ ಕೆಲವೊಂದು ವಿಶೇಷ ಆಟ ಆಡಿಸುತ್ತೇವೆ.

ಕಿಮ್ಸ್‌ನ ಆಟಗಳು (ಜ್ಞಾನೇಂದ್ರಿಯ ಆಟ), ವ್ಯಾಪಕ ಆಟ, ಕತ್ತಲೆಯಲ್ಲಿ ಆಟ...

ವ್ಯಾಪಕ ಆಟ (Wide Game) :

ದಳವು ಸೇರಿ ಒಂದು ವ್ಯಾಪಕ ಆಟವನ್ನು ಆಡುವುದು.

ವ್ಯಾಪಕ ಆಟವೆಂದರೆ ಸಾಹಸವಾದ ಕ್ಷೇತ್ರದಲ್ಲಿ ಪ್ರಕೃತಿಯಲ್ಲಿ ಹೆಚ್ಚು ಸಮಯ ತೆಗೆದುಕೊಂಡು ಗೈಡ್ ಕೌಶಲಗಳನ್ನು ಬಳಸಿ ಆಡುವ ಸಾಹಸಮಯ ಆಟ. ಈ ಆಟವನ್ನು ಹಗಲಿನಲ್ಲಾಗಲಿ, ರಾತ್ರಿಯಲ್ಲಾಗಲಿ ಆಡಬಹುದು. ಈ ಆಟಗಳು ಗೈಡ್‌ಗಳಲ್ಲಿ ಸವಾಲನ್ನು ಎದುರಿಸುವ ಧೈರ್ಯವನ್ನು, ಪರಿಹರಿಸುವ ಚಾತುರ್ಯವನ್ನು ಸಹಕಾರ, ಸ್ನೇಹ, ಹೊಂದಾಣಿಕೆ ಮುಂತಾದ ಜೀವನ ಕೌಶಲಗಳನ್ನು ಬೆಳೆಸುತ್ತವೆ. ಈ ಆಟವು ಉಲ್ಲಾಸವನ್ನು ನೀಡುತ್ತದೆ ಮತ್ತು ನೈಜ ರೀತಿಯಲ್ಲಿ ಸಂಸ್ಥಾಪಕರು ಗೊತ್ತುಪಡಿಸಿರುವ ಚಾರಿತ್ರ್ಯ, ಆರೋಗ್ಯ, ಕರಕೌಶಲವನ್ನು ಈ ತಂತ್ರಗಳ ಮೂಲಕ ಅಭಿವೃದ್ಧಿಗೊಳಿಸಬಹುದು.

ಆಟದ ಯೋಜನೆ :

* ಈ ಆಟವನ್ನು ಗೈಡ್ ನಾಯಕಿ ಸಹನಾಯಕಿಯರೊಡನೆ ಗಹನವಾಗಿ, ವಿವರವಾಗಿ ಯೋಚಿಸಿ ಗೌರವ ನ್ಯಾಯ ಸಭೆಯಲ್ಲಿ ವಿಚಾರ ವಿನಿಮಯ ಮಾಡಿ ಅನುಮೋದನೆ ಪಡೆದು ಆಯೋಜಿಸಬೇಕು.
* ಆಟವು ಗೈಡ್‌ಗಳ ವಯೋಮಿತಿಗೆ ಅನುಗುಣವಾಗಿರಬೇಕು.
* ಆಟವನ್ನು ಆಡಿಸುವ ಮೊದಲೇ ಸ್ಥಳವನ್ನು ವೀಕ್ಷಿಸಬೇಕು.
* ಆ ಸ್ಥಳಕ್ಕೆ ಭೇಟಿ ನೀಡಿದಾಗ ಎಲ್ಲೆಲ್ಲಿ ಯಾವ ಕೌಶಲಗಳನ್ನು ಪ್ರದರ್ಶಿಸಬೇಕು, ಆಟವನ್ನು ಹೇಗೆ ವ್ಯವಸ್ಥೆಗೊಳಿಸಬೇಕು.
* ಅವಶ್ಯಕ ವಸ್ತು ಮತ್ತು ಜನಬಲವನ್ನು ಸಿದ್ಧಗೊಳಿಸಿಕೊಳ್ಳಬೇಕು.
* ಬರುವ ಆಪತ್ತುಗಳನ್ನು ಊಹಿಸಿ, ಅವುಗಳನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಬೇಕು.
* ಗೈಡ್‌ಗಳಿಗೆ ಸ್ಪಷ್ಟವಾಗಿ ಸರಿಯಾದ ರೀತಿಯಲ್ಲಿ ಸೂಚನೆಗಳನ್ನು ಕೊಡಬೇಕು.
* ಹಿರಿಯ ನಾಯಕರು ಆಟ ನಡೆಯುವಾಗ ಗೈಡ್‌ಗಳ ಬೆಂಗಾವಲಾಗಿರಬೇಕು.
* ಆಡಿದ ನಂತರ ಸಭೆ ಸೇರಿ ಪರಸ್ಪರರ ಅನುಭವಗಳನ್ನು ಹಂಚಿಕೊಳ್ಳಬೇಕು.
* ಹಿರಿಯ ನಾಯಕಿ ಮತ್ತು ಸಹನಾಯಕಿಯರು ಸಭೆ ಸೇರಿ ತೊಡಕುಗಳ ಪಟ್ಟಿ ಮಾಡಿಕೊಳ್ಳಬೇಕು. ಆಟದ ಯಶಸ್ಸಿನ ಮೌಲ್ಯಮಾಪನ ಮಾಡಿಕೊಳ್ಳಬೇಕು. ಇದರಿಂದ ಮುಂದಿನ ಯೋಜನೆ ಉತ್ತಮಗೊಳ್ಳುತ್ತದೆ.

ಆಡಬಹುದಾದ ಆಟಗಳು :

1. ಅಪಹೃತರನ್ನು ಬಿಡಿಸುವುದು
2. ನಿಧಿ ಅರಸುವುದು
3. ಶತ್ರುಗಳನ್ನು ತಡೆಗಟ್ಟುವುದು.
4. ಅಪಘಾತ : ರೈಲು / ಬಸ್ಸು / ಕಟ್ಟಡ ಕುಸಿತ
5. ಭೂಕಂಪ
6. ಪತ್ತೆದಾರಿಕೆ

ಪ್ರವಚನ:30 ಆಜ್ಞಾಬದ್ಧ ಸಮಾರಂಭ (Ceremonials)

ಉದ್ದೇಶ : ಪ್ರಶಿಕ್ಷಣಾರ್ಥಿಗಳು ಪ್ರವಚನದ ಅಂತ್ಯದಲ್ಲಿ :

* ಆಜ್ಞಾಬದ್ಧ ಸಮಾರಂಭಗಳು ಚಳವಳಿಯ ಗೌರವ, ಘನತೆ ಎಂದು ಅರಿಯುವರು.
* ಇವುಗಳಿಂದ ಶಿಸ್ತನ್ನು ಅಭಿವೃದ್ಧಿಗೊಳಿಸುವರು.
* ಪ್ರತಿಯೊಂದು ವಿಧಿಯನ್ನು ಕಲಿಸಲು ಸಮರ್ಥರಾಗುವರು.

ವಿಧಾನ : ಪ್ರದರ್ಶನ, ಪ್ರಾತ್ಯಕ್ಷಿಕೆ.

ಆಜ್ಞಾಧಾರಿತ ಪ್ರತಿಕ್ರಿಯೆಯಿಂದ ಕೂಡಿದ ಸಮಾರಂಭ. ಇವುಗಳನ್ನು ಶಿಸ್ತಿನಿಂದ ಅಚ್ಚುಕಟ್ಟಾಗಿ ಮಾಡಿದರೆ ಚಳವಳಿಯ ಘನತೆ ಗೌರವ ಹೆಚ್ಚುತ್ತದೆ. ಈ ಸಮಾರಂಭ ಪ್ರಕ್ರಿಯೆಯನ್ನು ಬದಲಾಯಿಸಲು ಸಾಧ್ಯವಿಲ್ಲ. ಚಳವಳಿಯ ಈ ಆಜ್ಞಾವಿಧಿಗಳು ರಾಷ್ಟ್ರಾದ್ಯಂತ ಹಾಗು ವಿಶ್ವದಾದ್ಯಂತ ಏಕರೂಪತೆ ಹೊಂದಿರುತ್ತದೆ.

ಆಜ್ಞೆಯಲ್ಲಿ ಎರಡು ಭಾಗವಿರುತ್ತದೆ. ಮೊದಲನೆಯದು **ಎಚ್ಚರಿಕೆ,** ಎರಡನೆಯದು **ಆಜ್ಞೆ**, ಆಜ್ಞೆ ಎಷ್ಟು ಏರುಧ್ವನಿಯಲ್ಲಿ ಸ್ಪಷ್ಟವಾಗಿ ನೀಡುತ್ತೇವೆಯೋ ಅಷ್ಟೇ ಚುರುಕಾಗಿ ಪ್ರತಿಕ್ರಿಯೆ ವ್ಯಕ್ತಪಡುತ್ತದೆ.

ಉದಾಹರಣೆಗೆ –	ಎಚ್ಚರಿಕೆ (Caution)	ಆಜ್ಞೆ (Order)
	1. ದಲ್	ಸಾವಧಾನ್
	2. ದಲ್ ನಲಾಕಾರ್ ಕೆ ಲಿಯೆ	ಚಲದೊ
	3. ದಲ್	ಸೆಲ್ಯೂಟ್

ಹೀಗೆ ಅಭ್ಯಾಸ ಮಾಡಿಸಬೇಕು. ಆಜ್ಞೆ ನೀಡುವ ನಾಯಕರು ವಿಧಿ ಮುಗಿಯುವ ತನಕ ಸಾವ್‌ಧಾನ್‌ನಲ್ಲಿ ನಿಂತಿರಬೇಕು.

ಸರಳ ವ್ಯಾಯಾಮ	–	Simple Drill
ಲಾಳಾಕೃತಿ ರಚನೆ	–	Horseshoe formation
ಹಾಜರಾತಿ	–	Roll Call
ಪಥಸಂಚಲನ	–	March Past

ಇವುಗಳನ್ನು ಗೈಡ್‌ಗಳಿಗೆ ಮಾಡಿಸುವಷ್ಟು ಸಮರ್ಥವಾಗಿ ತರಬೇತಿಯಲ್ಲಿ ನೀಡಬೇಕು.

ಗಮನಿಸಿ : ಆಜ್ಞಾಬದ್ಧ ವಿಧಿಯನ್ನು ಆಟದ ಸಮಯದಲ್ಲಿ 2ನೇ ದಿನ ಪರಿಚಯಿಸಿ, ಪ್ರತಿದಿನ ಆಟದ ಸಮಯದಲ್ಲಿ 15 ರಿಂದ 20 ನಿಮಿಷ ತೆಗೆದುಕೊಂಡು ಒಂದೊಂದು ವಿಧಿಯನ್ನು ಮಾಡಿಸಿ.

Patrol Leaders Fall in

Roll Call Drill

ಕವಾಯಿತು ಪಟಾಲಂ ಹಾಜರಾತಿ ಕವಾಯಿತು

ಗೈಡ್ ಶಿಕ್ಷಕಿ : ದಲ್ ಸಾವಧಾನ್



ಚಿತ್ರ-1

ಗೈಡ್ ಶಿಕ್ಷಕಿ : ಆಜ್ಞೆ ಕೊಟ್ಟ ತಕ್ಷಣ, ಪಟಾಲಂ ನಾಯಕಿಯರು (PL) ಓಡಿ ಬಂದು ನಿಲ್ಲುವರು. ಮೊದಲು ಬಂದವರು ಗೈಡ್ ಶಿಕ್ಷಕಿಗೆ ಎದುರಾಗಿ ನಿಂತು ಅವರ ಎಡಕ್ಕೆ ಉಳಿದವರು ಸಾವಧಾನದಲ್ಲಿ ನಿಲ್ಲುವರು.

ಗೈಡ್ ಶಿಕ್ಷಕಿ : Leader attention Number

ಅಷ್ಟಕ ನಾಯಕಿ : 1, 2, 3, 4 ಎಂದು ಸಂಖ್ಯೆ ಹೇಳುವರು.

ಗೈಡ್ ಶಿಕ್ಷಕಿ : ನಿಮ್ಮ ನಿಮ್ಮ ಸಂಖ್ಯೆ ದ್ವಿಗುಣ ಮಾಡಿ 2ನ್ನು ಅದರಲ್ಲಿ ಕಳೆಯಿರಿ.

ಅಷ್ಟಕ ನಾಯಕಿ : 0, 2, 4, 6 ಸಂಖ್ಯೆ ಪಡೆಯುವರು.

ಗೈಡ್ ಶಿಕ್ಷಕಿ : ಪಟಾಲಂ ನಾಯಕಿ ನಿಮ್ಮ ಎಡಕ್ಕೆ ಹೆಜ್ಜೆ ವಿಸ್ತರಿಸಿ.

[ಮೊದಲ ಪಟಾಲಂ ನಾಯಕಿ ಬಲಕ್ಕೆ ತಿರುಗಿ ಉಳಿದವರು ಎಡಕ್ಕೆ ತಿರುಗಿ ಅವರ ಸಂಖ್ಯೆ ಅನ್ವಯ ಹೆಜ್ಜೆ ತೆಗೆದುಕೊಳ್ಳುವರು. ಹೀಗೆ ತೆಗೆದುಕೊಳ್ಳುವಾಗ ಮೂರು ಜನರು ಒಟ್ಟಿಗೆ ಚಲಿಸಿ ತಮ್ಮ ಸಂಖ್ಯಾ ಸ್ಥಾನ ಬಂದಾಗ ನಿಲ್ಲುವರು. ಕೊನೆಯವರು ಸ್ಥಳಕ್ಕೆ ಹೋಗಿ ನಿಂತ ಮೇಲೆ ಒಟ್ಟಿಗೆ about turm ಆಗುವರು.]



ಚಿತ್ರ-2

ಗೈಡ್ ಶಿಕ್ಷಕಿ : ಮೊದಲನೇ ಪಟಾಲಂ ನಾಯಕಿ ಎಡಕ್ಕೆ ಅಥವಾ ಬಲಕ್ಕೆ 5 ಹೆಜ್ಜೆ ಅಂತರದಲ್ಲಿ ಪಟಾಲಂ ನಾಯಕಿಗಳು ಬಂದು 4 ಹೆಜ್ಜೆ ಅಂತರದಲ್ಲಿ ನಿಂತು ವರದಿ ಮಾಡಲು ಅನುಕೂಲವಾಗುವಂತೆ ನಿಲ್ಲುವರು.



ಚಿತ್ರ-3

ಗೈಡ್ ಶಿಕ್ಷಕಿ : Patrol fall in to the left of your leader



ಚಿತ್ರ-4



ಚಿತ್ರ–5

ಗೈಡ್ ಶಿಕ್ಷಕಿ : Company Stand at ease
Leaders bring your Rolls



ಚಿತ್ರ–6

ಪಟಾಲಂ ನಾಯಕಿ attension ಗೆ ಬಂದು ಮೊದಲಿನಂತೆ ಹಿಂದಿನವರು ಚಲಿಸಿ 4 3 2 1 ಒಟ್ಟಾಗಿ ಬಂದು ನಾಲ್ಕು ಹೆಜ್ಜೆ ಅಂತರದಲ್ಲಿ ನಿಲ್ಲುವರು.

ಮೊದಲನೇ ಪಟಾಲಂ ನಾಯಕಿ ಒಂದು ಹೆಜ್ಜೆ ಮುಂದೆ ಸರಿದು ಸೆಲ್ಯುಟ್ ಮಾಡಿ ನಾನು ರೋಸ್, ಪಟಾಲಂ ನಾಯಕಿ. ನಾವು ಆರು ಮಂದಿ ಇದ್ದೇವೆ, ಎಲ್ಲರೂ ಬಂದಿದ್ದಾರೆ – ಬಂದಿಲ್ಲ ಎಂದು ವರದಿ ಸಲ್ಲಿಸುವರು. ಪುನಃ ಸೆಲ್ಯೂಟ್ ಮಾಡಿ ತನ್ನ ಸ್ಥಾನಕ್ಕೆ ಸರಿಯುವಳು. ಎಲ್ಲರೂ ಒಬ್ಬೊಬ್ಬರಾಗಿ ಹೀಗೆ ವರದಿ ಸಲ್ಲಿಸುವರು.

ಗೈಡ್ ಶಿಕ್ಷಕಿ : About turn
Back to your place march

ಎಲ್ಲರೂ ಒಟ್ಟಾಗಿ ಹೊರಟು ಕೊನೆಯವಳು ಸ್ಥಾನ ಗ್ರಹಣ ಮಾಡಿದ ಮೇಲೆ ಒಟ್ಟಾಗಿ about turn ಮಾಡುವರು. Stand at ease ನಲ್ಲಿ ನಿಲ್ಲುವರು.

ಗೈಡ್ ಶಿಕ್ಷಕಿ ತನ್ನ ಸ್ಥಳ ಬದಲಾಯಿಸಿ ಪಟಾಲಂ ನಾಯಕಿಗಳ ಎದುರಿಗೆ ಬಂದು ಮುಂದೆ ಮಧ್ಯೆ ನಿಂತು Company fallout ಕೊಡುವರು.

ಚುರುಕುತನಕ್ಕಾಗಿ ಸರಳ ಕವಾಯಿತು (Simple Drill for smartness)

ವ್ಯಕ್ತಿತ್ವದ ಬೆಳವಣಿಗೆಗಾಗಿ ಶಾರೀರಿಕ ಬೆಳವಣಿಗೆಗಾಗಿ, ಆರೋಗ್ಯಕ್ಕಾಗಿ, ವ್ಯಕ್ತಿತ್ವದ ಮನ್ನಣೆಗಾಗಿ ಎಲ್ಲರೂ ವ್ಯಾಯಾಮವನ್ನು ಮಾಡಬೇಕು. ವ್ಯಾಯಾಮದಿಂದ ದೇಹವು ಅಂದಗೊಳ್ಳುವುದು, ಸದೃಢವಾಗುವುದು, ಮಾತ್ರವಲ್ಲದೆ ಚಲನವಲನದಲ್ಲಿ ಚುರುಕುತನ ಮೂಡುತ್ತದೆ. ಮನಸ್ಸು ಆಹ್ಲಾದಕರವಾಗಿರುತ್ತದೆ.

ವ್ಯಾಯಾಮದಿಂದಾಗುವ ಅನುಕೂಲತೆಗಳು :

ಬೌದ್ಧಿಕ ಬೆಳವಣಿಗೆ, ಆಜ್ಞೆಗಳನ್ನು ಅನುಸರಿಸುವ ಅಭ್ಯಾಸ, ವಿಧೇಯರಾಗಿರುವ ಅಭ್ಯಾಸ ಮತ್ತು ಮನೋಭಾವ ಬೆಳೆಯುತ್ತದೆ. ಮುಂದಾಳುತನ, ಶಿಸ್ತು ಮೈಗೂಡುತ್ತದೆ. ಬೌದ್ಧಿಕ ಮತ್ತು ಶಾರೀರಕ ಚಟುವಟಿಕೆಗಳನ್ನು ಸಮನ್ವಯಗೊಳಿಸುತ್ತದೆ. ಚುರುಕುತನದಿಂದ ಕೂಡಿದ ಚಲನವಲನ, ಆಜ್ಞಾಬದ್ಧ ವಿಧಿಗಳು (Ceremonials) ಐಕ್ಯತಾ ಮನೋಭಾವ ಮತ್ತು ನೈತಿಕತೆಯನ್ನು ಬೆಳೆಸುತ್ತವೆ. ಕವಾಯಿತು ಮತ್ತು ಪಥಸಂಚಲನಗಳು ಸಾರ್ವಜನಿಕರ ಪ್ರಶಂಸೆಗೆ ಗೌರವಕ್ಕೆ ಪಾತ್ರವಾಗುವುದಲ್ಲದೆ, ಸಂಸ್ಥೆಯ ಘನತೆಯನ್ನು ಹೆಚ್ಚಿಸುತ್ತದೆ.

ವ್ಯಕ್ತಿ ಗೌರವವನ್ನು ಸುಧಾರಿಸುತ್ತದೆ. ತಮ್ಮ ಕೆಲಸ ಮತ್ತು ಸಾಮರ್ಥ್ಯದ ಬಗ್ಗೆ ಹೆಮ್ಮೆ ಪಡುವಂತಾಗುತ್ತದೆ. ದಳದ ಸದಸ್ಯರಲ್ಲಿ ಐಕ್ಯತೆ, ಸ್ಫೂರ್ತಿ ಮತ್ತು ಸಹಕಾರ ಮನೋಭಾವ ಬೆಳೆಸುತ್ತದೆ. ಒಳ್ಳೆಯ ಶಿಷ್ಟಾಚಾರ ಬೆಳೆಯುತ್ತದೆ. ದೇಹದ ಚಲನೆಯು ಸರಿಯಾದ ಭಂಗಿಯನ್ನು (Posture) ಹೊಂದುತ್ತದೆ. ದೈಹಿಕ ಶಿಕ್ಷಕರು, ಸೈನಿಕ ತರಬೇತಿ ಮತ್ತು ಶಸ್ತ್ರಾಸ್ತ್ರ ತರಬೇತಿ ಪಡೆಯಲು ಸಹಾಯಕವಾಗುತ್ತದೆ.

ಗೈಡಾದ ನೀವು ಪ್ರತಿದಿನವೂ ಸರಳ ವ್ಯಾಯಾಮ ಮಾಡುವ ಅಭ್ಯಾಸ ಮಾಡಿ. ದಳದಲ್ಲಿ ಆಜ್ಞೆ ಕೊಡುವ ಆಜ್ಞೆ ಪಾಲಿಸುವ ಅಭ್ಯಾಸವನ್ನು ಮಾಡಿ.

ಗಮನಿಸಿ : ವ್ಯಾಯಾಮದ ಆಜ್ಞೆಗಳನ್ನು ಹಿಂದಿ ಅಥವಾ ಇಂಗ್ಲಿಷ್ ಯಾವುದಾದರೂ ಒಂದು ಭಾಷೆಯಲ್ಲಿ ಕೊಡುವ ಅಭ್ಯಾಸವನ್ನು ಮಾಡಿ. ಎರಡು ಭಾಷೆ ಮಿಶ್ರ ಮಾಡಿ ಕೊಡಬೇಡಿ.

ಸರಳ ಆಜ್ಞೆಗಳು

1.	Fall in	1.	ಸಜ್‌ದೊ
2.	Attention	2.	ಸಾವಧಾನ್
3.	Stand at Ease	3.	ವಿಶ್ರಾಮ್
4.	Stand easy	4.	ಆರಾಮ್ ಸೆ
5.	Turn to Right (left)	5.	ದಾಹಿನೆ/ಬಾಯೆ ಮುಡೆಗಾ/ಚಲೆಗಾ
6.	Right Turn	6.	ದಾಹಿನೆ ಮುಡ್
7.	Left Turn	7.	ಬಾಯೆ ಮುಡ್
8.	About Turn	8.	ಪೀಛೆ ಮುಡ್
9.	Fall in Single/two/three Ranks	9.	ಏಕ್ / ದೊ / ತೀನ್ ಲೈನ್ ಬನ್
10.	Dress up	10.	ಸಜ್ಜ ಜಾವ್
11.	Number off	11.	ಗನ್ ತಿ ಶುರು
12.	In two's/three's Number off	12.	ದೋ / ತೀನ್ ಮೆ ಗಿನ್ ತಿ ಶುರು
13.	As you were	13.	ಜೈಸೆ ಥೆ
14.	Mark time Mark	14.	ಕದಮ್ ತಾಲ್
15.	Forward March	15.	ಆಗೆ ಚಲ್

16.	Quick March	16.	ತೇಜ್ ಚಲ್
17.	By the Right / Left Quick March	17.	ದಾಯಿನೆ (ಬಾಯೆ) ಸೆ ತೇಜ್ ಚಲ್
18.	Halt	18.	ಥಮ್
19.	Right Wheel	19.	ದಾಯಿನೆ ಘೂಮ್
20.	Left Wheel	20.	ಬಾಯೆ ಘೂಮ್
21.	Salute	21.	ಸೆಲ್ಯೂಟ್ / ಸಲಾಮಿ ಆಮ್ ದೊ
22.	General Salute	22.	ಜನರಲ್ ಸೆಲ್ಯೂಟ್
23.	National Salute	23.	ರಾಷ್ಟ್ರೀಯ ಸಲ್ಯೂಟ್
24.	Eyes Right	24.	ದಾಯಿನೆ ದೇಖ್
25.	Eyes Front	25.	ಸಾಮ್ ನೆ ದೇಖ್
26.	Fall Out	26.	ಸ್ವಸ್ಥಾನ್
27.	Disperse	27.	ವಿಸರ್ಜನ್

ಪ್ರವಚನ:31 ಗೈಡ್ ಸಮಾರಂಭಗಳು

ಧ್ವಜ ಸಮಾರಂಭ

ಪ್ರತಿದಿನ ಶಿಬಿರ, ಸಮಾವೇಶಗಳಲ್ಲಿ ಸಾಧಾರಣವಾಗಿ ಬೆಳಿಗ್ಗೆ 8 ಘಂಟೆಗೆ ಧ್ವಜಾರೋಹಣ ಮಾಡಲಾಗುವುದು. ದಳಗಳಲ್ಲಿ ಹೊಸದಾಗಿ ಬಂದವರು ಚೆನ್ನಾಗಿ ಕಲಿಯುವವರೆಗೂ ಕಡ್ಡಾಯವಾಗಿ ಮಾಡಬೇಕು. ಇದು ಎರಡು ಸಮಾರಂಭಗಳನ್ನು ಒಳಗೊಂಡಿದೆ.

1. **ಧ್ವಜಾರೋಹಣ**

   ಲಾಳಾಕೃತಿ - ಆಜ್ಞಾ ಬದ್ಧ ಸಮಾರಂಭ (Ceremonials)

   ಧ್ವಜಾರೋಹಣ – ವಿಧಿಬದ್ಧ ಸಮಾರಂಭ (Ceremony)

2. **ಧ್ವಜ ಅವರೋಹಣ**

ಲಾಳಾಕೃತಿ ರಚನೆ (Horse shoe formation) :

ಇದು ಆಜ್ಞೆಗೆ ಬದ್ಧವಾದ ವಿಧಿ. ನಾಯಕಿಯು (L) ಧ್ವಜಸ್ತಂಭದ ಎಡಭಾಗಕ್ಕೆ ಒಂದು ಪಾರ್ಶ್ವ ಹೆಜ್ಜೆ ತೆಗೆದುಕೊಂಡು, ಮೂರು ಹೆಜ್ಜೆ ಹಿಂದಕ್ಕೆ ನಿಲ್ಲುವರು. ನಾಯಕಿಯ ಎಡಕ್ಕೆ ಒಂದು ಹೆಜ್ಜೆ ಎಡ ಪಾರ್ಶ್ವದಲ್ಲಿ ಖಾಲಿ ಬಿಟ್ಟು ಉಳಿದ, ಹಿರಿಯ ಹಾಗೂ ಆಹ್ವಾನಿತ ಸದಸ್ಯರು ಸಾಲಾಗಿ ನಿಲ್ಲುವರು. ಖಾಲಿ ಬಿಟ್ಟ ಜಾಗದಲ್ಲಿ ಮುಂದೆ ಸಹನಾಯಕಿ ಬಂದು ನಿಲ್ಲುವರು.

ಸಹನಾಯಕಿ (ಸ.ನಾ. A.L.) ಧ್ವಜಸ್ತಂಭದ ಎಡಪಾರ್ಶ್ವಕ್ಕೆ ಒಂದು ಹೆಜ್ಜೆ ತೆಗೆದುಕೊಂಡು ಒಂದು ಹೆಜ್ಜೆ ಮುಂದಕ್ಕೆ ಬಂದು ನಾಯಕಿಗೆ ಅಭಿಮುಖವಾಗಿ ನಿಂತು ವಂದಿಸುವ ಮೂಲಕ ಲಾಳಾಕೃತಿ ರಚನೆಗೆ ಅನುಮತಿ ಪಡೆದು ಪುನಃ ಹಿಂದಿರುಗಿ (ಎಬೌಟ್ ಟರ್ನ್) ಆಗಿ ಮೂರು ಹೆಜ್ಜೆ ಚಲಿಸಿ ಒಂದು ಹೆಜ್ಜೆ ಬಲಕ್ಕೆ ತೆಗೆದುಕೊಂಡು ಸ್ತಂಭದ ಎದುರಿಗೆ ಬಂದು ಧ್ವಜ ಸ್ತಂಭದಿಂದ ಎರಡು ಹೆಜ್ಜೆ ಅಡ್ಡ ಕಡ್ಡಿ ನೇರದಲ್ಲಿ ದಳಕ್ಕೆ ಎದುರಾಗಿ ನಿಲ್ಲುವರು.

ಸಹನಾಯಕಿ : ಗೈಡ್‌ಗಳ ಸಂಖ್ಯೆಯನ್ನು ಎಣಿಸಿಕೊಂಡು ಎರಡರಿಂದ ಭಾಗಿಸಿ ಭಾಗಲಬ್ಧದಲ್ಲಿ ಎರಡನ್ನು ಕಳೆಯುವರು. ಇದರಿಂದ ಲಾಳಾಕೃತಿಯ ಅಳತೆಯನ್ನು ನಿಗದಿಪಡಿಸಿಕೊಳ್ಳುವರು. ಇದರಲ್ಲಿ ಮೂರು ಹೆಜ್ಜೆ ಸಹನಾಯಕಿ ಮತ್ತು ಧ್ವಜದಳದಿಂದ ಎರಡು ಹೆಜ್ಜೆ ಅಂತರವನ್ನು ಕಳೆಯುವರು.

ಲೆಕ್ಕಾಚಾರ : $\frac{32 \text{ (ಗೈಡ್‌ಗಳ ಸಂಖ್ಯೆ)}}{2} = 16-2=14-3=11$ ಧ್ವಜದಳಕ್ಕೂ ಸಹನಾಯಕಿಗೂ ಇರುವ ಅಂತರ.

ಸಹನಾಯಕಿ : ಲೆಕ್ಕಾಚಾರ ಮಾಡಿದಷ್ಟು ಹೆಜ್ಜೆಗಳನ್ನು ನಡೆದು, ಚದುರಿದ ದಳಕ್ಕೆ ಅಭಿಮುಖವಾಗಿ ಧ್ವಜಸ್ತಂಭದ ನೇರದಲ್ಲಿ ಬಂದು ಸಾವಧಾನ್‌ನಲ್ಲಿ ನಿಲ್ಲುವರು.
(ಲಾಳ ರಚನೆ ಪ್ರಾರಂಭಿಸುವಾಗ ಗೈಡ್ಸ್‌ಗಳು ಚದುರಿ ನಿಂತಿರುವರು)

ಸಹನಾಯಕಿ : ದಲ್ – ಸಾವ್‌ಧಾನ್ / Company - Attention

ಸಹನಾಯಕಿ : ದಲ್ – ವಿಶ್ರಾಮ್ / Company - Stand at Ease

ಸಹನಾಯಕಿ : ಧ್ವಜ ದಲ್ – ಸಜ್ ಜಾವ್ / Colour Party - fall in (ಸಹನಾಯಕಿಗೆ 3 ಹೆಜ್ಜೆ ಅಂತರದಲ್ಲಿ ನಿಲ್ಲುವರು.)

ಸಹನಾಯಕಿ : ದಲ್ – ಧ್ವಜ್ ದಲ್ ರಕ್ಷಕ್ ಕೆ ಪೀಛೆ ದೋ ಕತಾರ್ ಬನ್ / (Company behind the Escorts (E) fall in) ಎರಡು ಸಮ ಸಾಲು ಮಾಡುವರು. [ಧ್ವಜಾರೋಹಕರ (Colour Bearer - CB) ಹಿಂದೆ ಸಾಲು ಮಾಡಬಾರದು.]

ಸಹನಾಯಕಿ : ಕದಂ ತಾಲ್ / Mark time mark (left - right...)
(ಧ್ವಜ ದಳವು ಯಾವ ಆಜ್ಞೆಯನ್ನು ಪಾಲಿಸದೆ ಸಾವಧಾನದಲ್ಲೇ ನಿಂತಿರಬೇಕು. ಸಹನಾಯಕಿ ಕದಂ ತಾಲ್ / Mark time Mark ಹೇಳಿದ ತಕ್ಷಣ about turn ಆಗಿ, ಮೊದಲ ಸ್ಥಾನಕ್ಕೆ ತಕ್ಷಣ ಹಿಂದಿರುಗಿ About turn ಆಗಿ ಸಾವಧಾನದಲ್ಲಿ ನಿಲ್ಲುವರು)

ಸಹನಾಯಕಿ : ದಲ್ – ನಲಾಕಾರ್ ಕೆಲಿಯೆ ಚಲ್‌ದೊ / Company - into the Horse shoe formation Quick March.
(ಸಹನಾಯಕಿ ಲಾಳದ ಆಕಾರವನ್ನು ಹಸ್ತ ಸಂಕೇತದ ಮೂಲಕ ಸರಿಪಡಿಸುವರು.)

ಸಹನಾಯಕಿ : ದಲ್ – ಥಮ್ / Company - Halt

ಸಹನಾಯಕಿ : ದಲ್ – ವಿಶ್ರಾಮ್ / Company - Stand at Ease

ಸಹನಾಯಕಿ : ಸಾವ್‌ಧಾನ್ / Company - Attention



ಚಿತ್ರ : ಲಾಳಾಕೃತಿಯ ರಚನೆಯ ನೋಟ

1. ಸಹನಾಯಕಿ ಧ್ವಜಸ್ತಂಭದಿಂದ 2 ಹೆಜ್ಜೆ ಮುಂದಕ್ಕೆ 1ನೇ ಸ್ಥಾನ
2. ಸಹನಾಯಕಿ 1ನೇ ಸ್ಥಾನದಿಂದ 6 ಹೆಜ್ಜೆ ಮುಂದಕ್ಕೆ 2ನೇ ಸ್ಥಾನ
3. 4 ಹೆಜ್ಜೆ ಅಂತರದಲ್ಲಿ ಧ್ವಜದಳ
4. ದಳವು ಧ್ವಜರಕ್ಷಕರ ಹಿಂದೆ ಸಾಲಿನಲ್ಲಿ ನಿಂತಿರುವುದು
5. ಕದಂ ತಾಲ್ ಕೊಟ್ಟ ತಕ್ಷಣ ಸಹನಾಯಕಿ 1ನೇ ಸ್ಥಾನಕ್ಕೆ
6. ಲಾಳಾಕೃತಿ ರಚನೆ
7. ಸಹನಾಯಕಿ ಸಮಾರಂಭದ ಜವಾಬ್ದಾರಿಯನ್ನು ನಾಯಕಿಗೆ ವಹಿಸುತ್ತಿರುವುದು.

○ ನಾ.	⊙ ಸ.ನಾ.	•• ಹೆಜ್ಜೆ	○ ಧ್ವಜದಳ	○ ಗೈಡ್‌ಗಳು

(ಸಹನಾಯಕಿ ಎಡಪಾರ್ಶ್ವಕ್ಕೆ ಒಂದು ಹೆಜ್ಜೆ ಸರಿದು, ಎಬೌಟ್‌ಟರ್ನ್ ಆಗಿ, ಮೂರು ಹೆಜ್ಜೆ ನಡೆದು ನಾಯಕಿಗೆ ಅಭಿಮುಖವಾಗಿ ಎರಡು ಹೆಜ್ಜೆ ಅಂತರದಲ್ಲಿ ನಿಂತು ಪುನಃ ಎಬೌಟ್‌ಆಗಿ ಲಾಳದ ಆಕಾರವನ್ನು ಗಮನಿಸುವರು. ಸರಿಯಾಗಿದೆ ಎಂದು ಖಚಿತಪಡಿಸಿಕೊಳ್ಳುವರು ನಂತರ ಎಬೌಟ್‌ಟರ್ನ್ ಆಗಿ ನಾಯಕಿಗೆ ವಂದಿಸುವುದರ ಮೂಲಕ ಲಾಳಾಕೃತಿಯ ಜವಾಬ್ದಾರಿಯನ್ನು ವಹಿಸಿಕೊಟ್ಟು ಒಂದು ಹೆಜ್ಜೆ ಬಲಕ್ಕೆ ಸರಿದು ಎರಡು ಹೆಜ್ಜೆ ಮುಂದಕ್ಕೆ ಹೋಗಿ ಕಾದಿರಿಸಿದ ಸ್ಥಳದಲ್ಲಿ ನಿಲ್ಲುವರು. ಇದೇ ಸಮಯದಲ್ಲಿ ನಾಯಕಿ ಎರಡು ಹೆಜ್ಜೆ ಮುಂದೆ ಬಂದು ಸಾವಧಾನ್‌ನಲ್ಲಿ ನಿಲ್ಲುವರು.)

ಧ್ವಜ ಸಮಾರಂಭ (Flag Hoisting Ceremony)

ನಾಯಕಿ : ದಲ್ – ವಿಶ್ರಾಮ್ / Company - Stand at Ease

ನಾಯಕಿ : ದಲ್ – ಸಾವಧಾನ್ / Company - Attection

ನಾಯಕಿ : ಪ್ರಾರ್ಥನಾ ಶುರು / Prayer Begin

ನಾಯಕಿ : ದಲ್ – ವಿಶ್ರಾಮ್ / Company - Stand at Ease

ನಾಯಕಿ : ಆಜ್ ಕ ಸುವಿಚಾರ್ / Thought for the day

(ಇದನ್ನು ಹೇಳುವವರು ಒಂದು ಹೆಜ್ಜೆ ಮುಂದೆ ಬಂದು ಸಾವಧಾನದಲ್ಲಿ ನಿಂತು ಹೇಳಿ ಹಿಂದೆ ಸರಿದು ಲಾಳ ಸೇರಿ ವಿಶ್ರಾಮ್‌ನಲ್ಲಿ ನಿಲ್ಲಬೇಕು.)

ನಾಯಕಿ : ಸಾವಧಾನ್ / Attention

ನಾಯಕಿ : ಧ್ವಜ್ ದಲ್ ಚಲ್ ದೊ / Colour Party Fall in
(CB ಮಧ್ಯದಲ್ಲಿರುವವರು ಪಿಸುಧ್ವನಿಯಲ್ಲಿ ತನ್ನ ತಂಡಕ್ಕೆ ಆಜ್ಞೆ ನೀಡುವಳು)

ಧ್ವಜ ಆ : ಕದಂ ತಾಲ್ / Mark time mark

ಧ್ವಜ ಆ : ತೇಜ ಚಲ್ / Quick March

ಧ್ವಜ ಆ : ಥಮ್ / Halt

(ಧ್ವಜ ದಳವು ಧ್ವಜಸ್ತಂಭಕ್ಕೆ ಅಭಿಮುಖವಾಗಿ ಎರಡು ಹೆಜ್ಜೆ ಅಂತರದಲ್ಲಿ ನಿಲ್ಲುವರು ಧ್ವಜ ದಳದ (CB) ಮಧ್ಯದಲ್ಲಿ ಇರುವವರು ಒಂದು ಹೆಜ್ಜೆ ಮುಂದೆ ಬಂದು ಕೈ ನಿಲುಕುವವರೆಗೂ ಎತ್ತಿ ಧ್ವಜ ಸೂತ್ರವನ್ನು (Halyard) ಹಿಡಿಯುವರು ತಕ್ಷಣವೇ ಹಗ್ಗ ಜಗ್ಗಿ ಧ್ವಜ ಬಿಚ್ಚುವರು. ಧ್ವಜದ ಹಗ್ಗ ಹಿಡಿದು ಜಗ್ಗಲು ಪ್ರಾರಂಭಿಸಿದ ತಕ್ಷಣ ನಾಯಕಿ ಆಜ್ಞೆ ನೀಡುವರು)

ನಾಯಕಿ : ದಲ್ ಸೆಲ್ಯೂಟ್ / Salute
(ಈ ಆಜ್ಞೆಗೆ ಧ್ವಜ ದಳವು ಸೆಲ್ಯೂಟ್ ಮಾಡಬಾರದು)

ಧ್ವಜ ಆ : ಒಂದು ಹೆಜ್ಜೆ ಹಿಂದೆ ಸರಿದು ಧ್ವಜ ತಂಡ ಸೇರಿ. ತಂಡವು ಒಟ್ಟಾಗಿ ಒಂದು ಹೆಜ್ಜೆ ಹಿಂದೆ ಸರಿದು ಧ್ವಜಕ್ಕೆ ಸೆಲ್ಯೂಟ್ ಮಾಡುವರು. ನಂತರ ಎಲ್ಲರಿಗೂ ಒಟ್ಟಾಗಿ ನಾಯಕಿ ಆಜ್ಞೆ ಮಾಡುವರು.

ನಾಯಕಿ : ಜೈಸೆ ಥೆ / Order

ನಾಯಕಿ : ಝುಂಡಾಗೀತ್ ಶುರು / Flag Song Begin

ಧ್ವಜ ಆ : ಆಗೆ ಚಲ್, ಥಮ್, ಪೀಛೆ ಮೂಢ್ / Forward March, Halt, About Turn

ನಾಯಕಿ : ದಲ್ ವಿಶ್ರಾಮ್

ಸೂಚನೆಗಳಿದ್ದರೆ, ಪರಿವೀಕ್ಷಣ ವರದಿ ಇದ್ದರೆ ಹೇಳುವರು. ದಲ್ ವಿಶ್ರಾಮ್ ದೀಕ್ಷಾ ಸಮಾರಂಭ, ಪದಕ ಪ್ರದಾನ ಮಾಡಬಹುದು.

ನಾಯಕಿ : ದಲ್ ಸಾವಧಾನ್
ದಲ್ ಸ್ವಸ್ಥಾನ್
ಧ್ವಜಾರೋಹಣ ಕಾರ್ಯಕ್ರಮ ಮುಕ್ತಾಯಗೊಳ್ಳುವುದು.

ಧ್ವಜಾರೋಹಣ ವ್ಯೂಹ

1. ನಾಯಕಿ ಧ್ವಜಾರೋಹಣದ ವಿಧಿಯನ್ನು ವಹಿಸಿಕೊಳ್ಳುವುದು.
2. ಧ್ವಜ ದಳವು ಬಂದು ಧ್ವಜ ಸ್ತಂಭಕ್ಕೆ 2 ಹೆಜ್ಜೆ ಅಂತರದಲ್ಲಿ ನಿಲ್ಲುವರು.
3. ಧ್ವಜಾರೋಹಕಿ 1 ಹೆಜ್ಜೆ ಮುಂದೆ ಹೋಗಿ ಧ್ವಜವನ್ನು ಹಾರಿಸುವಳು.
4. ಧ್ವಜಾರೋಹಕಿ ಧ್ವಜ ದಳವನ್ನು ಸೇರುವಳು.
5. ಧ್ವಜ ದಳವು ಧ್ವಜ ಗೀತೆಯ ನಂತರ ಲಾಳವನ್ನು ಸೇರುವುದು.

ಸಾಮಾನ್ಯ ಧ್ವಜ ಸಮಾರಂಭ – Common Flag Procedure

ಸ್ಕೌಟ್ಸ್-ಗೈಡ್ಸ್ ಒಟ್ಟಾಗಿ ಸಮಾರಂಭವನ್ನು ಏರ್ಪಡಿಸಿದಾಗ ಧ್ವಜಾರೋಹಣದ ಸಾಮಾನ್ಯ ವಿಧಿಯನ್ನು ಅನುಸರಿಸಲಾಗುವುದು.

- ಲಾಳಾಕೃತಿಯನ್ನು ಆಜ್ಞಾಗಳಲ್ಲಿ ಅನೌಪಚಾರಿಕವಾಗಿ ರಚಿಸಲಾಗುವುದು.
- ಧ್ವಜಾರೋಹಣವನ್ನು ಸ್ಕೌಟ್‌ನ ಕರ್ತವ್ಯ ನಾಯಕರೊಬ್ಬರೆ (Duty Leader) ಧ್ವಜಸ್ತಂಭಕ್ಕೆ ಬಂದು ಧ್ವಜವನ್ನು ಹಾರಿಸುವರು. ಇಲ್ಲಿ ಗೈಡ್‌ನ ಧ್ವಜಾರೋಹಕ ತಂಡದ ವಿಧಾನವನ್ನು ಆಚರಿಸಲಾಗುವುದಿಲ್ಲ.

ಧ್ವಜಾವರೋಹಣ – Lowering Flag

ಇದನ್ನು ಎರಡು ವಿಧದಲ್ಲಿ ಸಂದರ್ಭಕ್ಕೆ ತಕ್ಕಂತೆ ಆಚರಿಸಲಾಗುವುದು. ಧ್ವಜವನ್ನು ಸೂರ್ಯಾಸ್ತದ ಸಮಯಕ್ಕೆ ಸರಿಯಾಗಿ ಇಳಿಸಲಾಗುವುದು.

1. ಶಿಬಿರಾರ್ಥಿಗಳು ಕಾರ್ಯನಿರತರಾಗಿದ್ದಾಗ ಧ್ವಜಾವರೋಹಕಿ / ಧ್ವಜಸ್ತಂಭದ ಬಳಿಗೆ ಬಂದು ಧ್ವಜಸೂತ್ರವನ್ನು ಬಿಚ್ಚಿ ಇಳಿಸಲು ಸಿದ್ಧವಾಗಿ ದೀರ್ಘ ಸೀಟಿ ಸಂಕೇತವನ್ನು ನೀಡುವರು. ಶಿಬಿರಾರ್ಥಿಗಳು ಇದ್ದಲ್ಲೇ ಸಾವಧಾನ ಸ್ಥಿತಿಗೆ ಬರುವರು. ನಿಧಾನವಾಗಿ ಧ್ವಜವನ್ನು ಇಳಿಸಿ ಅಡ್ಡಕಡ್ಡಿ (Cleat) ಮೇಲೆ ಹಾಕಿ ಸೀಟಿ ಊದುವರು. ಶಿಬಿರಾರ್ಥಿಗಳು ಪುನಃ ಕಾರ್ಯನಿರತರಾಗುವರು. ಅವರೋಹಕರು ಧ್ವಜ ಬಿಚ್ಚಿ, ಮಡಿಚಿ, ಶಿಬಿರ ನಾಯಕರಿಗೆ ಒಪ್ಪಿಸುವರು.
2. ಲಾಳಾಕೃತಿ ರಚಿಸಿ ಸಾವಧಾನ್‌ನಲ್ಲಿ ನಿಲ್ಲಿಸುವರು. ಧ್ವಜ ತಂಡ / ಧ್ವಜ ಸ್ತಂಭಕ್ಕೆ ಬಂದು ದಳ ಸಾವಧಾನ್‌ನಲ್ಲಿ ನಿಂತು ಧ್ವಜವನ್ನು ಇಳಿಸಲಾರಂಭಿಸುವರು. ಧ್ವಜವು ಅಡ್ಡಕಡ್ಡಿಯನ್ನು ತಾಕಿದಾಗ ತಕ್ಷಣ ಧ್ವಜವನ್ನು ಅಡ್ಡಕಡ್ಡಿಯ ಮೇಲೆ ಹಾಕುವರು. ಎಲ್ಲರೂ ವಂದಿಸಿ ಈ ಸಮಾರಂಭವನ್ನು ಮುಗಿಸುವರು. ಅವರೋಹಕರು ಧ್ವಜಬಿಚ್ಚಿ ಮಡಿಚಿ ಶಿಬಿರ ನಾಯಕರಿಗೆ ಒಪ್ಪಿಸುವರು. ಶಿಬಿರವನ್ನು ವಿಸರ್ಜಿಸುವಾಗ, ಸಮಾವೇಶಗಳನ್ನು ಮುಗಿಸುವಾಗ ಧ್ವಜವನ್ನು ಇಳಿಸಿದ ಮೇಲೆ ರಾಷ್ಟ್ರಗೀತೆ ಹಾಡುವರು "ಶಿಬಿರದ ಮುಕ್ತಾಯ"ವನ್ನು ನಾಯಕಿಯರು ಘೋಷಿಸುವರು. ನಂತರ ಸಮಾರಂಭವು ಮುಕ್ತಾಯಗೊಳ್ಳುವುದು.

ದೀಕ್ಷಾ ಸಮಾರಂಭ (Investiture Ceremony)

ನೀವು ಗೈಡ್ ಪ್ರವೇಶಿಯಾಗಿ ಪ್ರವೇಶದ ಪರೀಕ್ಷೆಗಳನ್ನು ಮುಗಿಸಿದ ನಂತರ ನಾಯಕಿಯವರಿಗೆ ತೃಪ್ತಿಯಾದರೆ ದೀಕ್ಷಾ ಸಮಾರಂಭವನ್ನು ಏರ್ಪಡಿಸುವರು.

ದೀಕ್ಷೆ ಪಡೆಯಲು ನೀವು ಶುಚಿಯಾಗಿ, ಪುನಃಪೂರ್ವಕವಾಗಿ ಸಿದ್ಧರಾಗಬೇಕು "ನಾನು ಇಂದು ಮಾಡಿದ ಪ್ರತಿಜ್ಞೆಯನ್ನು ಜೀವನ ಪರ್ಯಂತ ಪಾಲಿಸುತ್ತೇನೆ" – ಎಂದು ನಿರ್ಧರಿಸಬೇಕು. ನಾಯಕಿಯವರಿಗೆ ಪ್ರಾಮಾಣಿಕವಾಗಿ ವಚನ ನೀಡಬೇಕು.

ಈ ಸಮಾರಂಭವು ಗೈಡ್ ನಾಯಕಿಯ ನೇತೃತ್ವದಲ್ಲಿ ಧ್ವಜಾರೋಹಣದ ನಂತರ ಆರಂಭವಾಗುವುದು. ಶಾಲೆಯ ಅಧ್ಯಾಪಕವರ್ಗ, ಸಿಬ್ಬಂದಿವರ್ಗ, ಪೋಷಕರು ಮತ್ತು ಹಿತೈಷಿಗಳು ಆಗಮಿಸುವರು. ಗೈಡ್‌ಗಳು ಸಮವಸ್ತ್ರ ಧರಿಸಿ ಸಂತಸದಿಂದ ಪಟಾಲಂ ಪ್ರಕಾರ ಲಾಳಾಕೃತಿಯಲ್ಲಿ ನಿಲ್ಲುವರು.

ಗೈಡ್ ನಾಯಕಿ ಮತ್ತು ಸಹನಾಯಕಿ ಧ್ವಜ ಸ್ತಂಭದ ಎಡಕ್ಕೆ ನಿಲ್ಲಬೇಕು. ಸದಸ್ಯತ್ವದ ಪದಕಗಳನ್ನು ಕಂಠವಸ್ತ್ರಗಳನ್ನು ಸುರುಳಿಸುತ್ತಿ ಕವುಂಗರವನ್ನು ಹಾಕಿ ಸಿದ್ಧವಾಗಿಡಬೇಕು. ಈ ಸಮಾರಂಭ ಸಂತಸದ ಸಮಾರಂಭವಾದ್ದರಿಂದ ಸಿಹಿಯನ್ನು ಹಂಚಬಹುದು. ಪ್ರತಿಗೈಡಿಗೂ ಪ್ರತ್ಯೇಕವಾಗಿ ದೀಕ್ಷೆ ನೀಡಬೇಕು. ಗುಂಪಿನಲ್ಲಿ ಗೋವಿಂದ ಎನ್ನಿಸಬಾರದು.

ಹಿರಿಯ ನಾಯಕಿ ಸಮಾರಂಭವನ್ನು ಪ್ರಾರ್ಥನೆಯೊಡನೆ ಪ್ರಾರಂಭಿಸಿ ಸ್ವಾಗತ ಮಾಡಿ, ಸಂಸ್ಥೆಗೆ ಅಪರಿಚಿತರು ಆಗಮಿಸಿದ್ದರೆ ಸಂಸ್ಥೆಯ ಸಂಕ್ಷಿಪ್ತ ಪರಿಚಯ ಮಾಡಿಸಿ, ಸಭೆಯ ಮಹತ್ವ ಹೇಳಿ, ದೀಕ್ಷೆ ಪಡೆಯುವವರಿಗೆ ಶುಭ ಕೋರುವರು. ಗೈಡ್ ನಾಯಕಿ ಪಟಾಲಂ ನಾಯಕಿಯನ್ನು ದೀಕ್ಷೆಗಾಗಿ ಪ್ರವೇಶಿಯನ್ನು ಕರೆತರಲು ಆದೇಶಿಸುವರು. ಪಟಾಲಂ ನಾಯಕಿ ಪ್ರವೇಶಿಯೊಡನೆ ಪಥಸಂಚಲನ ಮಾಡುತ್ತಾ ಬಂದು ಗೈಡ್ ನಾಯಕಿಗೆ ಎದುರಾಗಿ ಒಂದು ಹೆಜ್ಜೆ ಅಂತರದಲ್ಲಿ ನಿಂತು ವಂದಿಸುವಳು ನಂತರ ಈ ರೀತಿ ಪರಿಚಯಿಸುವಳು.

ದೀಕ್ಷಾ ವಿಧಿ : ಪಟಾಲಂ ನಾಯಕಿ – ಕುಮಾರಿ .... ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾಳೆ. ಗೈಡ್ ಸದಸ್ಯತ್ವ ಪಡೆಯಲು ಆಸಕ್ತಳಾಗಿದ್ದಾಳೆ. (ನಂತರ ಪಟಾಲಂ ನಾಯಕಿ ಒಂದು ಹೆಜ್ಜೆ ಬಲಕ್ಕೆ ಸರಿದು ದೀಕ್ಷೆ ಕೊಟ್ಟು ಮುಗಿಯುವವರೆಗೂ ಅಲ್ಲಿಯೇ ನಿಲ್ಲುವಳು.)

ನಾಯಕಿ : (ಪ್ರವೇಶಿಯನ್ನು ಕುರಿತು) ನಿನ್ನ ಗೌರವ ಎಂದರೇನು ಬಲ್ಲೆಯಾ?

ಪ್ರವೇಶಿ : ಬಲ್ಲೆ, ನನ್ನ ಗೌರವ ಎಂದರೆ ನನ್ನ ವಿಶ್ವಾಸ, ನಿಷ್ಠೆ ಮತ್ತು ಸತ್ಯತೆ.

ನಾಯಕಿ : ನಿನಗೆ ಗೈಡ್ ನಿಯಮದ ಅರ್ಥ ತಿಳಿದಿದೆಯೆ?

ಪ್ರವೇಶಿ : ತಿಳಿದಿದೆ.

ನಾಯಕಿ : ಹಾಗಾದರೆ ನೀನು ಗೌರವ ಸಾಕ್ಷಿಯಾಗಿ ದೇವರಿಗೂ, ದೇಶಕ್ಕೂ ನಿನ್ನ ಕರ್ತವ್ಯವನ್ನು ಮಾಡುತ್ತೀಯಾ ಇತರರಿಗೆ ಸದಾ ಸಹಾಯ ಮಾಡುತ್ತೀಯಾ ಹಾಗೂ ಗೈಡ್ ನಿಯಮವನ್ನು ಪಾಲಿಸುತ್ತೀಯಾ ಎಂದು ನಾನು ನಂಬಬಹುದೆ?

ಪ್ರವೇಶಿ : ನಂಬಬಹುದು.

ನಾಯಕಿ : ಹೀಗೆಂದು ಪ್ರತಿಜ್ಞೆ ಮಾಡುವೆಯಾ? (ಸದಸ್ಯತ್ವವನ್ನು ಪಡೆದವರೆಲ್ಲಾ ಗೈಡ್ ಸಂಕೇತ ಮಾಡುತ್ತಾ ಸಾವಧಾನ್‌ನಲ್ಲಿ ನಿಲ್ಲುವರು. ಪ್ರವೇಶಿಯು ಹೇಳಿಕೊಟ್ಟ ಪ್ರತಿಜ್ಞೆಯನ್ನು ಪುನರುಚ್ಚರಿಸುವಳು).

ನಾಯಕಿ : ನಿನ್ನ ಗೌರವ ಸಾಕ್ಷಿಯಾಗಿ ಪ್ರತಿಜ್ಞೆಯನ್ನು ನೀನು ಪಾಲಿಸುವೆ, ಪ್ರತಿ ದಿನವೂ ತಪ್ಪದೆ ಒಂದು ಸತ್ಕಾರ್ಯವನ್ನು ಮಾಡುವೆ ಎಂದು ನಂಬುತ್ತೇನೆ. ಇಂದು ನೀನು ಈ ವಿಶ್ವವ್ಯಾಪಿ ಸಂಸ್ಥೆಯ ಸೋದರಿ ಬಳಗಕ್ಕೆ ಅಧಿಕೃತ ಸದಸ್ಯಳಾಗಿರುವೆ. ನಿನಗೆ ಅಭಿನಂದನೆಗಳು. (ತರಬೇತಿ ನೀಡಿದ ಗೈಡ್ ನಾಯಕಿಯೆ ಪ್ರತಿಜ್ಞೆಯನ್ನು ಸ್ವೀಕರಿಸಬೇಕು ಪದಕವನ್ನು ನೀಡಬೇಕು. ಕಂಠವಸ್ತ್ರವನ್ನು ಉಪನಾಯಕಿ / ಸದಸ್ಯರು, ಸಂಸ್ಥೆಯ ಸದಸ್ಯರಲ್ಲದ ಮುಖ್ಯ ಅತಿಥಿಗಳು, ಇಲ್ಲವೆ ಹಿತೈಷಿಗಳು ಹಾಕಬಹುದು).

ನಾಯಕಿ : One step backward Salute ಒಂದು ಹೆಜ್ಜೆ ಹಿಂದೆ ಹೋಗಿ ವಂದಿಸುವರು.
(ಸದಸ್ಯತ್ವ ಪಡೆದ ನಂತರ ಸದಸ್ಯಳು ಧ್ವಜಕ್ಕೆ ಅಧಿಕೃತವಾಗಿ ಪ್ರಥಮ ಬಾರಿಗೆ ವಂದನೆ ಸಲ್ಲಿಸುವಳು.)

ನಾಯಕಿ : Order
ಈ ನೂತನ ಸದಸ್ಯರನ್ನು ಅಭಿನಂದಿಸಿ ನಮ್ಮ ಚಳವಳಿಗೆ ಸ್ವಾಗತಿಸೋಣ.

ನಾಯಕಿ : About turn

ನಾಯಕಿ : Attention

ನಾಯಕಿ : Salute

ನಾಯಕಿ : Order
(ದಳದ ಎಲ್ಲಾ ಸದಸ್ಯರೂ ನೂತನ ಸದಸ್ಯರಿಗೆ ವಂದಿಸುವುದರ ಮೂಲಕ ನೂತನ ಸದಸ್ಯಳನ್ನು ಸ್ವಾಗತಿಸುವರು.)

ನಾಯಕಿ : Patrol in to the Horse Shoe Quick March
(ಪಟಾಲಂ ನಾಯಕಿ ಹಾಗೂ ನೂತನ ಗೈಡ್ಸ್ ಲಾಳಾಕೃತಿಯನ್ನು ಸೇರುವರು.)

ನಾಯಕಿ : ವಿಶ್ರಾಮ್, ಆರಾಂ ಸೆ / Stand at Ease, Standease

ಹೀಗೆಯೆ ಅಂದು ನಿಗದಿ ಪಡಿಸಿದಷ್ಟು ಬಾಲಕಿಯರಿಗೆ ಗೈಡ್ ದೀಕ್ಷೆ ನೀಡುವುದು ಸಾಮಾನ್ಯವಾಗಿ ಒಂದು ಪಟಾಲಂಕ್ಕೆ ಒಂದು ದಿನ ದೀಕ್ಷೆ ನೀಡಬಹುದು. ಹೆಚ್ಚು ಬಾಲಕಿಯರಿಗೆ ಒಟ್ಟಿಗೆ ಈ ದೀಕ್ಷೆ ನೀಡಿದರೆ ಬೇಸರವಾಗಿ, ಸಮಾರಂಭವು ಮಹತ್ವವನ್ನು ಕಳೆದುಕೊಳ್ಳುತ್ತದೆ. ನಂತರ ಹಿರಿಯರು ಹಿತವಚನವನ್ನು ಹೇಳಿಸಿ. ಅಭಿನಂದಿಸಿ, ಸಿಹಿ ಹಂಚಿ ಸಮಾರಂಭವನ್ನು ಮುಕ್ತಾಯ ಮಾಡಬಹುದು. (ಈ ಸಮಾರಂಭವನ್ನು ಈ ಚೌಕಟ್ಟಿನಲ್ಲಿ ವೈವಿಧ್ಯಮಯವಾಗಿ ಅರ್ಥಪೂರ್ಣವಾಗಿ ಮಾಡಬಹುದು.)

ಸರ್ವಧರ್ಮ ಪ್ರಾರ್ಥನೆ

ಮೂಲತಃ ಚಳವಳಿಯ ಸಂಸ್ಥಾಪಕರು ದೇವರಲ್ಲಿ ಅಚಲ ನಂಬಿಕೆಯುಳ್ಳವರು. ಇದರ ಮೂಲಭೂತ ತತ್ವಗಳ ಪ್ರಕಾರ (Fundamentals) ದೇವರಲ್ಲಿ ನಂಬಿಕೆಯುಳ್ಳವರು ಮಾತ್ರ ಈ ಸಂಸ್ಥೆಯ ಸದಸ್ಯರಾಗಲು ಸಾಧ್ಯ. ಪ್ರತಿಯೊಬ್ಬ ಸದಸ್ಯರು ದೇವರಿಗೆ ನನ್ನ ಕೈಲಾದ ಕರ್ತವ್ಯವನ್ನು ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತೇವೆ. ಆದ್ದರಿಂದ ಪ್ರಾರ್ಥನೆಗೆ ನಮ್ಮ ಕಾರ್ಯಕ್ರಮದಲ್ಲಿ ಅಗ್ರಸ್ಥಾನವನ್ನು ನೀಡಲಾಗಿದೆ. ಎಲ್ಲಾ ಕಾರ್ಯವನ್ನು ದೇವರಿಗೆ ಅರ್ಪಿಸುತ್ತೇವೆ. ವಿಶ್ವದಾದ್ಯಂತ ಈ ಚಳವಳಿಯಲ್ಲಿ ದಿನದ ಪ್ರಾರಂಭದಲ್ಲಿ, ಸಮಾರಂಭಗಳ ಪ್ರಾರಂಭದಲ್ಲಿ, ಭೋಜನದ ಪ್ರಾರಂಭದಲ್ಲಿ ಮತ್ತು ದಿನದ ಅಂತ್ಯದಲ್ಲಿ ಪ್ರಾರ್ಥನೆಯನ್ನು ಮಾಡಲಾಗುತ್ತದೆ.

ಬಹುಧರ್ಮೀಯರು ಒಟ್ಟಾಗಿ ಬಾಳುತ್ತಿರುವ ವಿಶ್ವದಲ್ಲೇ ಒಂದು ವಿಶಿಷ್ಟ ರಾಷ್ಟ್ರ ನಮ್ಮ ಭಾರತವಾಗಿದೆ. ಹೀಗಿರುವಾಗ ಕೆಲವೊಮ್ಮೆ ಐಕ್ಯತೆಯಲ್ಲೂ ಗೊಂದಲ ಉಂಟಾಗುವ ಸಂದರ್ಭಗಳಿರುತ್ತವೆ.

ಗಾಂಧೀಜಿಯವರು ಸರ್ವಧರ್ಮ ಸಮನ್ವಯಕ್ಕಾಗಿ, ಧಾರ್ಮಿಕ ಸೌಹಾರ್ದತೆಗಾಗಿ ಹಾಗೂ ಭಾವೈಕ್ಯತೆಗಾಗಿ ಸರ್ವಧರ್ಮ ಪ್ರಾರ್ಥನಾ ಸಭೆಯನ್ನು ಆರಂಭಿಸಿದರು. ಎಲ್ಲಾ ಧರ್ಮಿಯರು ಭೇದವನ್ನು, ದ್ವೇಷವನ್ನು ಮರೆತು ಒಂದಾಗಿ ಪ್ರಗತಿಯನ್ನು ಸಾಧಿಸಬೇಕೆಂದು ಕರೆ ನೀಡಿದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯನ್ನು ನಮ್ಮ ರಾಷ್ಟ್ರಕ್ಕೆ ಅಳವಡಿಸಿಕೊಂಡಾಗ ಈ ಪ್ರಾರ್ಥನಾ ಕ್ರಮವನ್ನು ಶ್ರೀಮತಿ ದಿ॥ ಲಕ್ಷ್ಮೀ ಮುಜುಂದಾರ್ ಅಂದಿನ ರಾಷ್ಟ್ರೀಯ ಆಯುಕ್ತರು ನಮ್ಮ ಚಳವಳಿಯಲ್ಲೂ ಸರ್ವಧರ್ಮ ಪ್ರಾರ್ಥನೆಯನ್ನು ಅಳವಡಿಸಿದರು. ಎಲ್ಲಾ ಧರ್ಮದವರೂ ದೇವರ ಮಕ್ಕಳು, ದೇವನೊಬ್ಬ ನಾಮ ಹಲವು ಎಂಬ ಅರಿವು ಮೂಡಿಸುವುದು ಅವಶ್ಯಕ. ಎಳೆಯರಲ್ಲಿ ಈ ಮನೋಭಾವ ಮೂಡಿದರೆ ಮುಂದಿನ ಸಮಾಜ ಸೌಹಾರ್ದತೆಯಿಂದ ಬಾಳಲು ಸಾಧ್ಯ.

ಈ ಚಟುವಟಿಕೆಯನ್ನು ವಿಧಿಬದ್ಧವಾಗಿ ನಡೆಸಲಾಗುವುದು. ಈ ಸಭೆಯನ್ನು ಒಳಾಂಗಣ ಅಥವಾ ಹೊರಾಂಗಣದಲ್ಲಿ ಏರ್ಪಡಿಸಲಾಗುವುದು. ಬೆಳಗಿನ ಅಥವಾ ಸಂಜೆಯ ಸಮಯದಲ್ಲಿ ನಡೆಸಲಾಗುವುದು. ಸಭೆಯಲ್ಲಿ ಭಾಗವಹಿಸುವ ಎಲ್ಲಾ ಧರ್ಮದ ಪ್ರತಿನಿಧಿಗಳು ಮತ್ತು ಪ್ರಾರ್ಥನಾ ತಂಡವು ಗೊತ್ತುಪಡಿಸಿದ ಸಮಯಕ್ಕೆ ಸರಿಯಾಗಿ, ಸರಳವಾಗಿ, ಸುಂದರವಾಗಿ ಸಜ್ಜುಗೊಳಿಸಿದ ವೇದಿಕೆಯ ಮೇಲೆ ಆಸೀನರಾಗುವರು. ನಂತರ ಸದಸ್ಯರು ಸಾಲಾಗಿ ನಿಶ್ಶಬ್ದವಾಗಿ ಬಂದು ಎದುರಾಗಿ ಆಸೀನರಾಗುವರು. ನಾಯಕ/ನಾಯಕಿ ಜ್ಯೋತಿ ಬೆಳಗಿ ಪ್ರಾರ್ಥನೆಯನ್ನು ಪ್ರಾರಂಭಿಸುವರು. ಮೊದಲಿಗೆ ಶ್ಲೋಕಗಳು, ಸರ್ವಧರ್ಮ ಗೀತೆ, ಅಕ್ಷರಾನುಸಾರ ಧರ್ಮಪಠನ, ವಿವಿಧ ಭಾಷೆಗಳಲ್ಲಿ ಸರ್ವಧರ್ಮ ಗೀತೆಗಳು, ರಾಮ್‌ಧುನ್, ಶಾಂತಿಪಾಠ ಹಾಡಿ ನಂತರ ಒಂದು ನಿಮಿಷ ಮೌನ ಪ್ರಾರ್ಥನೆ ಮಾಡಿ. ಸಭಾಂಗಣದ ಪ್ರಶಾಂತತೆಗೆ ಭಂಗ ತರದಂತೆ ಸಾಲಾಗಿ ಸದಸ್ಯರು ನಿರ್ಗಮಿಸಿದ ನಂತರ ವೇದಿಕೆಯ ಮೇಲಿನ ಪ್ರಾರ್ಥನಾ ತಂಡವು ನಿರ್ಗಮಿಸುವುದು.

ಈ ಪ್ರಾರ್ಥನಾ ಸಭೆಯನ್ನು ದಳದಲ್ಲಿ, ಶಿಬಿರದಲ್ಲಿ, ಮೇಳಗಳಲ್ಲಿ ಒಮ್ಮೆಯಾದರೂ ಏರ್ಪಡಿಸಲಾಗುತ್ತದೆ. ನಿಮ್ಮ ದಳದಲ್ಲಿ ಹುತಾತ್ಮರ ದಿನಾಚರಣೆಗಳಲ್ಲಿ ಶ್ರದ್ಧಾಂಜಲಿ ಅರ್ಪಿಸುವಾಗ, ಪರೀಕ್ಷೆಗಾಗಿ ಮಾಡುವ ಪ್ರಾರ್ಥನಾ ಕೂಟಗಳಲ್ಲಿ ಸರ್ವಧರ್ಮ ಪ್ರಾರ್ಥನೆ ಏರ್ಪಡಿಸಬಹುದು.

ಚಿಂತನಾ ದಿನಾಚರಣೆ

ಫೆಬ್ರವರಿ 22ನ್ನು ವಿಶ್ವದಾದ್ಯಂತ ಎಲ್ಲಾ ಗೈಡ್‌ಗಳು ಚಿಂತನಾ ದಿನಾಚರಣೆ ಎಂದು ಆಚರಿಸುತ್ತೇವೆ. ಈ ದಿನದ ಮಹತ್ವ ನೆನಪಿದೆಯೆ? ಲಾರ್ಡ್ ಮತ್ತು ಲೇಡಿ ಬಿ.ಪಿ.ಯವರ ಹುಟ್ಟುಹಬ್ಬ. ಇಬ್ಬರೂ ಹುಟ್ಟಿದ್ದು ಒಂದೇ ದಿನ! ಆದರೆ ಇಸವಿ ಬೇರೆ.

1926ರಲ್ಲಿ ವಿಶ್ವ ಗೈಡ್ಸ್ ಸಂಸ್ಥೆ ಈ ದಿನಾಚರಣೆ ಪ್ರಾರಂಭಿಸಿತು. 1932ರಲ್ಲಿ ಡೆನ್‌ಮಾರ್ಕ್‌ನ ಓರ್ವ ಗೈಡರ್‌ಗೆ ಒಂದು ಅಪರೂಪದ ವಿಚಾರ ಹೊಳೆಯಿತು. ಅದುವೇ "Penny for a thought" 'ಒಂದು ಚಿಂತನೆಗೆ ಒಂದು ಕಾಸು'. ಹನಿ ಹನಿಗಳು ಸೇರಿ ಮಹಾಸಾಗರವಾಗುವಂತೆ ಒಂದು Penny / ಒಂದು ರೂಪಾಯಿ ವಂತಿಕೆ ಸೇರಿ ಚಿಂತನಾ ನಿಧಿಯಾಗಿ WAGGGS ಸಂಸ್ಥೆಗೆ ಪ್ರತಿ ರಾಷ್ಟ್ರವೂ ಪ್ರತಿವರ್ಷವೂ ಸಮರ್ಪಿಸುತ್ತದೆ. WAGGGS ಗೆ ಈ ನಿಧಿ ಒಂದು ಪ್ರಧಾನ ಹಣಕಾಸಿನ ಸಂಪನ್ಮೂಲವಾಗಿ ಪರಿಣಮಿಸಿದೆ. 1976ರಲ್ಲಿ ಈ ದಿನಕ್ಕೆ ಸಾಂಕೇತಿಕವಾಗಿ ಒಂದು ಲಾಂಛನವನ್ನು ತಯಾರಿಸಲಾಯಿತು. ಈ ಲಾಂಛನದಲ್ಲಿ 8 ಬಾಣದ ಗುರುತುಗಳು ಇದ್ದು ವಿಶ್ವ ಗೈಡ್ ಲಾಂಛನವನ್ನು ಸುತ್ತುವರಿದಿದೆ. ವಿಶ್ವದಲ್ಲಿರುವ ಎಲ್ಲಾ ಸದಸ್ಯ ರಾಷ್ಟ್ರಗಳು ಈ ಸಂಸ್ಥೆಗೆ ಸಹಾಯ ಹಸ್ತ ನೀಡಿ ಅದರ ಅಸ್ತಿತ್ವವನ್ನು ಬಲಪಡಿಸುತ್ತಿದೆ ಎಂಬುದು ಇದರ ಸಂಕೇತವಾಗಿದೆ.

ಈ ದಿನಾಚರಣೆಯಂದು ಸರ್ವಧರ್ಮ ಪ್ರಾರ್ಥನೆ, ಶಾಂತಿ ಜ್ಯೋತಿ ಬೆಳಗುವುದು, ಬಿ.ಪಿ. ತ್ರಯರ ಜೀವನದ ಬಗ್ಗೆ ಪ್ರಬಂಧ, ಭಾಷಣ, ರಸಪ್ರಶ್ನೆ ಏರ್ಪಡಿಸುವುದು ಅಂತರವಲೋಕನೆ ಮಾಡಿಕೊಳ್ಳುವುದು, ಹಿಂದಿನ ವರ್ಷ ಮಾಡಿದ ಕಾರ್ಯಕ್ರಮದ ವರದಿ ಮುಂದೆ ಮಾಡಬೇಕೆಂದಿರುವುದನ್ನು ಚರ್ಚಿಸುವುದು, ಮನರಂಜನೆ ಏರ್ಪಡಿಸುವುದು, ತ್ರಯರಿಗೆ ಕೃತಜ್ಞತೆ ಅರ್ಪಿಸುವುದು, ಪ್ರತಿಯೊಬ್ಬರೂ ಕೈಲಾದಷ್ಟು ವಂತಿಕೆ ನೀಡಿ ಚಿಂತನಾ ನಿಧಿ ಸಂಗ್ರಹಿಸಲಾಗುವುದು. ಈ ಕಾರ್ಯಕ್ರಮಕ್ಕೆ ನಿಮ್ಮ ಶಿಕ್ಷಕ ವರ್ಗವನ್ನು ಪೋಷಕರನ್ನು ಮತ್ತು ಗೆಳತಿಯರನ್ನು ಆಹ್ವಾನಿಸಿ.

ಅಂತರಾವಲೋಕನೆ (Introspection)

ಧ್ವಜಾರೋಹಣವಾದ ನಂತರ ಸಭೆ ಸ್ಥಾನ ಗ್ರಹಣ ಮಾಡಿದ ಮೇಲೆ ಸರ್ವಧರ್ಮ ಪ್ರಾರ್ಥನೆಯ ನಂತರ ಈ ಚಟುವಟಿಕೆ ಮಾಡಿಸಿ.

* 2 ನಿಮಿಷ ಮೌನವಾಗಿ ಕುಳಿತುಕೊಳ್ಳಿ. ಮೌನವಾಗಿ ಅಂತರಮುಖಿಯಾಗಿ ನಿಮ್ಮನ್ನು ನೀವು ಅವಲೋಕಿಸಿ. ನಿಮ್ಮಲ್ಲಿರುವ ಪ್ರಬಲ ದೌರ್ಬಲ್ಯ / ಅವಗುಣ ಗುರುತಿಸಿಕೊಳ್ಳಿ. ಇವುಗಳಲ್ಲಿ ನೀವು ಬಿಡಬೇಕೆಂದು ಅಂದುಕೊಳ್ಳುತ್ತಿರುವ ಗುಣವನ್ನು ಗುರುತಿಸಿ.
* ನಿಮಗೆ ನೀಡುವ ಚೀಟಿಯಲ್ಲಿ ಅಂತಹ ಒಂದು ಗುಣ ಬರೆಯಿರಿ. ಗೊತ್ತುಪಡಿಸಿದ ಸ್ಥಳಕ್ಕೆ / ಕೈಗೆ ತಲುಪಿಸಿ.
* ಚಟುವಟಿಕೆಯ ನಾಯಕಿ ಎಲ್ಲರ ಚೀಟಿ ನೋಡಿ ಅವುಗಳ ಪಟ್ಟಿ ಮಾಡುವರು.
* ನಂತರ ಹಿರಿಯರು ಈ ದೌರ್ಬಲ್ಯಗಳನ್ನು ತೊಡೆದು ಹಾಕುವ ಬಗ್ಗೆ ಸಲಹೆ ನೀಡುವರು.

ಭಾಗ–5
ಗೈಡ್ ಗೀತೆಗಳು

1. ಸರ್ವಧರ್ಮ ಪ್ರಾರ್ಥನೆ –

ಪ್ರಾತಃಸ್ಮರಾಮಿ

ಪ್ರಾತಃಸ್ಮರಾಮಿ ಹೃದಿಸಂಸ್ಫುರದಾತ್ಮ ತತ್ತ್ವಂ
ಸಚ್ಚಿತ್ಸುಖಂ ಪರಮಹಂಸ ಗತಿಂ ತುರೀಯಂ ।
ಯತ್ ಸ್ವಪ್ನಜಾಗರ ಸುಷುಪ್ತಮವೈತಿ ನಿತ್ಯಂ
ತದ್ಬ್ರಹ್ಮ ನಿಷ್ಕಲಮಹಂ ನ ಚ ಭೂತಸಂಘಃ ॥
ಪ್ರಾತರ್ಭಜಾಮಿ ಮನಸಾ ವಚಸಾಮಗಮ್ಯಂ
ವಾಚೋ ವಿಭಾಂತಿ ನಿಖಿಲಾ ಯದನುಗ್ರಹೇಣ ।
ಯನ್ನೇತಿನೇತಿ ವಚನೈರ್ನಿಗಮಾ ಅವೋಚುಃ
ತ್ವಂ ದೇವದೇವಮಜಮಚ್ಯುತಮಾಹುರಗ್ರ್ಯಮ್ ॥
ಪ್ರಾತರ್ನಮಾಮಿ ತಮಸಾ ಪರಮಾರ್ಕವರ್ಣಂ
ಪೂರ್ಣಂ ಸನಾತನ ಪದಂ ಪುರುಷೋತ್ತಮಾಖ್ಯಂ ।
ಯಸ್ಮಿನ್ನಿದಂ ಜಗದಶೇಷಮಶೇಷಮೂರ್ತಿಂ
ರಜ್ಜ್ವಾ ಭುಜಂಗಮಮಿವ ಪ್ರತಿಭಾಸಿತಂ ವೈ ॥

2. ಸರಸ್ವತೀ ವಂದನ

ಯಾ ಕುಂದೇಂದು ತುಷಾರ ಹಾರ ಧವಳಾ
ಯಾ ಶುಭ್ರ ವಸ್ತ್ರಾನ್ವಿತಾ
ಯಾ ವೀಣಾ ವರದಂಡ ಮಂಡಿತ ಕರಾ
ಯಾ ಶ್ವೇತ ಪದ್ಮಾಸನಾ
ಯಾ ಬ್ರಹ್ಮಾಚ್ಯುತ ಶಂಕರ ಪ್ರಭೃತಿಭಿಃ
ದೇವೈಸ್ಸದಾ ವಂದಿತಾ
ಸಾ ಮಾಂ ಪಾತು ಸರಸ್ವತೀ ಭಗವತೀ
ನಿಶ್ಶೇಷ ಜಾಡ್ಯಾಪಹಾ ।

3. ಗುರು ವಂದನ

ಗುರುರ್ಬ್ರಹ್ಮಾ ಗುರುರ್ವಿಷ್ಣುಃ
ಗುರುರ್ದೇವೋ ಮಹೇಶ್ವರಃ ।
ಗುರುಸ್ಸಾಕ್ಷಾತ್ ಪರಬ್ರಹ್ಮಾ
ತಸ್ಮೈಶ್ರೀ ಗುರವೇ ನಮಃ ॥

4. ಸ್ವಾಮಿ ದೇವನೆ

ಸ್ವಾಮಿ ದೇವನೆ ಲೋಕಪಾಲನೆ
ತೇ ನಮೋಸ್ತು ನಮೋಸ್ತುತೇ
ಪ್ರೇಮದಿಂದಲಿ ನೋಡು ನಮ್ಮನು
ತೇ ನಮೋಸ್ತು ನಮೋಸ್ತುತೇ ॥ಪ॥

ದೇವ ದೇವನೆ ಹಸ್ತಪಾದ
ಗಳಿಂದಲೂ ಮನದಿಂದಲೂ
ನಾವು ಮಾಡಿದ ಪಾಪವೆಲ್ಲವ
ಹೋಗಲಾಡಿಸು ಬೇಗನೇ ॥1॥

ವಿಜಯ ವಿದ್ಯಾರಣ್ಯ ಕಟ್ಟಿದ
ಚಾಮುಂಡಾಂಬೆಯ ನಾಡಿನ ।
ಮನೆಯ ಮಕ್ಕಳ ಐಕ್ಯಗಾನವ
ಲಾಲಿಸೈ ಪರಿಪಾಲಿಸೈ ॥2॥

5. ಧರ್ಮ ಗ್ರಂಥಗಳಿಂದ ಪಠಣ

ಜಯಬೋಲೋ

ಜಯ ಬೋಲೋ ಸತ್ ಧರ್ಮೋಂಕೀ ।
ಜಯ ಬೋಲೋ ಸತ್ ಕರ್ಮೋಂಕೀ ।
ಜಯ ಬೋಲೋ ಮಾನವತಾಕೀ ।
ಜಯ ಬೋಲೋ ಸಬ್ ಜನತಾಕೀ ॥1॥

ಪಿಛಡಿ ಕೋಯಿನ ಜಾತಿ ಹೋ
ಸಬಸೇ ಸಬಕೀ ಪ್ರೀತಿ ಹೋ ।
ದೇಶ್ ಧರ್ಮಸೇ ನೀತಿ ಹೋ
ಹಮ್ ಸಬ್‌ಕೇ ಹಿ ಸಾಥಿ ಹೋ ॥2॥

ಹಮ್ ಸಬ್ ಕಷ್ಟ ಉಠಾಯೇಂಗೇ
ಸಬ್ ಮಿಲ್‌ಕರ್ ಸುಖ ಪಾಯೇಂಗೇ
ಸಬ್ ಮಿಲ್ ಪ್ರಭು ಗುಣ ಗಾಯೇಂಗೇ
ಸತ್ ಕಾ ಜಸ್ ಫೈಲಾಯೇಂಗೇ ॥3॥

6. ಹರ್ ದೇಶ್ ಮೆ ತೂ ಹರ್ ವೇಷ್ ಮೆ ತೂ

ಹರ್ ದೇಶ್ ಮೆ ತೂ ಹರ್ ವೇಷ್ ಮೆ ತೂ
ತೆರೆ ನಾಮ್ ಅನೇಕ ತೂ ಏಕಹೀ ಹೈ ।
ತೆರೆ ರಂಗ ಭೂಮಿ ಯಹ್ ವಿಶ್ವ ಭರಾ
ಸಬ್ ಖೇಲ್ ಮೇ ಮೇಲ್ ಮೆ ತೂ ಹೀ ತು ಹೈ॥1॥

ಸಾಗರ್ ಸೇ ಉಠಾ ಬಾದಲ್ ಬನ್‌ಕೆ
ಬಾದಲ್ ಸೇ ಫುಟಾ ಜಲ್ ಹೋಕರ ಕೇ ।
ಫಿರ್ ನೆಹರ್ ಬನಾ ನದಿಯಾ ಗೆಹರಿ
ತೆರ ಭಿನ್ನ್ ಪ್ರಕಾರ, ತೂ ಏಕಹೀ ಹೈ ॥2॥

ಚೀಂಟೀ ಸೇ ಭಿ ಅಣು ಪರಮಾಣು ಬನಾ
ಸಬ್ ಜೀವ ಜಗತ್ ಕಾ ರೂಪ್ ಲಿಯಾ ।
ಕಹಿ ಪರ್ವತ್ ವೃಕ್ಷ ವಿಶಾಲ್ ಬನಾ
ಸೌಂದರ್ಯ ತೇರಾ ತೂ ಏಕಹೀ ಹೈ ॥3॥

ಯಹ ದಿವ್ಯ ದಿಖಾಯಾ ಹೈ ಜಿಸ್ ನೆ
ವಹ ಹೈ ಗುರುದೇವ್ ಕಿ ಪೂರ್ಣ ದಯಾ ।
ತುಕಡ್ಯಾ ಕಹೆ ಔರ್ ನ ಕೋಯಿ ದಿಖಾ
ಬಸ್ ಮೈ ಔರ್ ತೂ ಸಬ್ ಏಕ ಹೀ ಹೈ ॥4॥

7. ವಿ ಷಲ್ ಓವರ್‌ಕಮ್ (3) ಸಮ್ ಡೇ ।

ವಿ ಷಲ್ ಓವರ್‌ಕಮ್ (3) ಸಮ್ ಡೇ ।
ಓ ಡೀಪ್ ಇನ್ ಮೈ ಹಾರ್ಟ್ ಐ ಡು ಬಿಲೀವ್
ದಟ್ ವಿ ಷಲ್ ಓವರ್ ಕಮ್ ಸಮ್ ಡೇ ॥

ವೀ ವಾಕ್ ಹ್ಯಾಂಡ್ ಇನ್ ಹ್ಯಾಂಡ್ (3) ಸಮ್ ಡೇ
ಓ ಡೀಪ್ ಇನ್ ಮೈ ಹಾರ್ಟ್ ಐ ಡು ಬಿಲೀವ್ ದಟ್
ವಿಷಲ್ ಓವರ್ ಕಮ್ ಸಮ್ ಡೇ
ದಿ ಟ್ರೂತ್ ವಿಲ್ ಮೇಕ್ ಅಸ್ ಫ್ರೀ (3) ಸಮ್ ಡೇ
ಓ ಡೀಪ್ ಇನ್ ಮೈ ಹಾರ್ಟ್ ಐ ಡು ಬಿಲೀವ್ ದಟ್
ವಿಷಲ್ ಓವರ್ ಕಮ್ ಸಮ್ ಡೇ
ವೀ ಅರ್ ನಾಟ್ ಅಫ್ರೈಡ್ (3) ಟುಡೇ
ಓ ಡೀಪ್ ಇನ್ ಮೈ ಹಾರ್ಟ್ ಐ ಡು ಬಿಲೀವ್ ದಟ್
ವಿಷಲ್ ಓವರ್ ಕಮ್ ಸಮ್ ಡೇ

8. ರಾಮ್‌ಧುನ್

ರಘುಪತಿ ರಾಘವ ರಾಜಾರಾಮ್
ಪತಿತ ಪಾವನ ಸೀತಾರಾಮ್
ಈಶ್ವರ ಅಲ್ಲಾ ತೇರೆ ನಾಮ್
ಸಬಕೋ ಸನ್ಮತಿ ದೇ ಭಗವಾನ್

9. ಶಾಂತಿ ಪಾಠ

ಓಂ ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾ ಅಮೃತಂಗಮಯ
ಓಂ ಶಾಂತಿಃ ಶಾಂತಿಃ ಶಾಂತಿಃ ॥

10. ಮೌನ ಪ್ರಾರ್ಥನೆ

(ಒಂದು ನಿಮಿಷ)

ನಿಶ್ಶಬ್ದ ನಿರ್ಗಮನ

3. SONG ON GUIDING

This little guiding light of mine
I'm going to let it shine, (3)
all the time, let it shine.

1. Hide it under a bush. Oh no!
I'm going to let it shine, (3)

2. Don't you puff this little light out,
I'm going to let it shine, (3)

3. Take this little light round the world
I'm going to let it shine, (3)

4. The chief's song

1. Who opened the gate that leads to the path way over the hill ?
Who whistled the tune that teaches our feet to go with a will ?
Who hoisted the sail that carries the boat across the bay?
And who lighted the fire to give us a song at close of day?
The cheif The chief! A song at close of day
It was he who lighted the fire to give us a song at close of day. || Chorus||

2. His game is for those who have'nt a bat or even a ball
His game is for those with little and those with nothing at all
No matter the time, the weather,
The place or time of day,
For his game is a game for ever that all of us can play.
The chief! The Chief! we all of us can play
For his game is a game for ever that all of us can play. || Chorus ||

3. He gave us a law as old as the stars that shine in the sky.
He gave us a host of friends and a sign to know them by.
He gave us a way to climb and to run and ride and swim,
To dwell at peace in our Father's house and we thank the Lord for him.
|| Chorus ||

5. Rounds

5.1 **Kookuburrah** sits on an old gum tree
Merry merry king of the bushes he,
Laugh Kookuburrah laugh
Kookuburrah gay your life must be
Kookuburrah sits on an old gum tree
Eating all the gum drops he could see
Stop Kookuburrah stop Kookuburrah
Leave some there for me.

5.2 Massa billi, billi, billi
Massa billi Ukampa (2)
Ukampa Sarina puni
Ukampa Sarina pum (3)
Ak na dinna dinna
Ak na dinna ukampa
Ukmpa Sarinapuni
Ukampa Sarinapum pum (3)

5.3 **Ging gang guli guli guli guli voucha (2)**
ging gang go, ging gang go
Hela, hela, shela
hela, shela hela ho (2)
Shally wally (4) Hoompa (4)

6. Camp fire songs

6.1 Come come light up the fire
Come come join in the ring
here find dreams to inspire
Stories tell
Music to sing - Music to sing

6.2 Camp fire's burning (2)
Draw nearer - (2)
in the glooming (2)
Come sing and be merry.

6.3 Sing sing together
Merrily, merrily sing (2)
Sing, sing (2)

ಶಿಬಿರಾಗ್ನಿ ಗೀತೆ

೬.೪ ಒಲಿದು ಬಂದನು ಮುಗಿಲಿಂದಿಳಿದು ಬಂದನು
ಅಗ್ನಿ ಜ್ವಾಲೆಯಾಗಿ ಶಿಬಿರಕ್ಕೆ ಹರಿದು ಬಂದನು
ದ್ವೇಷವ ದಹಿಸುತ, ಮೋಸವ ಅಳಿಸುತ,
ಸ್ನೇಹವ ಬೆಳಗುತ, ಅಗ್ನಿಯು ಬಂದನು ಶಿಬಿರಕ್ಕೆ
ನಮ್ಮ ಸ್ಕೌಟಿನ ಗೈಡಿನ ಶಿಬಿರಕ್ಕೆ – ೧
ಸಂತಸ ಬೀರುತ, ಚೇತನ ನೀಡುತ,
ಶಾಂತಿಯ ನಲಿಸುತ, ಅಗ್ನಿಯು ಬಂದನು ಶಿಬಿರಕ್ಕೆ
ನಮ್ಮ ಸ್ಕೌಟಿನ ಗೈಡಿನ ಶಿಬಿರಕ್ಕೆ – ೨

೬.೫ ಆಗ ಹುಯಿ ಹೈ ರೋಷನ ಆವೊ
ಆವೊ ಆಗಕೆ ಪಾಸ್
ಆಗಸೆ ರೋಷನ ಅಪನಿ ಬಸ್ತಿ
ಕೈಸೆ ಬುಲಂದಿ ಕೈಸೆ ಹಸ್ತಿ
ರಿಂಜೊ ಅಲಮ ಕೊ ಬೂಲು ಬುಲಾವೊ ॥ಆವೊ॥
ಸೂರಜ ಡೂಬಾ ನಿಕಲೆ ತಾರೆ
ಖತಮ ಹುಯೆ ಸಬ ಕಾಮ ಹಮಾರೆ
ಮಿಲಕರ ಆಗ ಜಗಾವೋ ಆವೊ ॥ಆವೊ॥

7. Grace -

7.1 For health and Strength and daily food

We praise thy name O ! Lord
For fellowship and all things good
We praise thy name O ! Lord

7.2 God has created a newday

Silver and green and Gold
Live that the sunshine may find
worth his gifts to hold

7.3 ಸಾಥೇ ರಮಿಯೇ ಸಾಥೇ ಜಮಿಯೇ
ಸಾಥೇ ಕರಿಯೇ ಸಾರಾ ಕಾಮ್
ಕಾಯಂ ರಹುಜೋ, ಅಪಣ ಸಾಥೇ
ಫಟ್ ಫಟ್ ಬನತಾ ಶ್ರೀ ಭಗವಾನ್ (ಗುಜರಾತಿ)

7.4 ಓಂ ಸಹನಾವವತು, ಸಹನೌ ಭುನಕ್ತು
ಸಹ ವೀರ್ಯಂ ಕರವಾವಹೈ,
ತೇಜಸ್ವಿನಾ ಮಧೀತ ಮಸ್ತು
ಮಾವಿದ್ವಿಶಾವಹೈ, ಓಂ ಶಾಂತಿಃ – 3

7.5 ನಹಿ ಯಹ ತೇರಾ, ನಹಿ ಯಹ ಮೇರಾ
ಈಶ್ವರ ಕಾ ಹಿ ರಾಜ್ಯ ಹೈ
ಈಶ್ವರ ಕಾ ಜಲ್, ಈಶ್ವರ ಕಾ ಫಲ್
ಈಶ್ವರ ಕಾ ಹಿ ರಾಜ್ಯ ಹೈ

7.6 ನನ್ನದು ಅಲ್ಲ, ನಿನ್ನದು ಅಲ್ಲ,
ಈಶ್ವರನ ಈ ರಾಜ್ಯವು
ಈಶ್ವರನಾ ಜಲ, ಈಶ್ವರನಾ ಫಲ
ಈಶ್ವರನಾ ಈ ರಾಜ್ಯವು

7.7 ತ್ವಮೇವ ಮಾತಾ
ಪಿತಾ ತ್ವಮೇವ
ತ್ವಮ ಬಂಧುಶ್ಚ
ಸಖಾ ತ್ವಮೇವ
ತ್ವಮೇವ ವಿದ್ಯಾ
ದ್ರವಿಣಂ ತ್ವಮೇವ
ತ್ವಮೇವ ಸರ್ವ ಮಮ ದೇವ ದೇವ

8. Song on Promise

8.1
Whenever you make a promise
Consider well its importance
And when once made
Engrave it upon your hearts

8.2 Keep your Promise

Keep (3) your promise through out the life
Merily (3) serve through all the life

8.3 ಭಾಷೆ ನೀಡಿದಿರಿ ನೀವು ಭಾಷೆ ನೀಡಿದಿರಿ
ಭಾಷೆಯ ನೀಡಿದ ಮೇಲೆ
ಪಾಲಿಸುವಂತರಾಗಿ ನೀವು ||ಪ||
ದೀನರ ಸೇವೆಯ ಮಾಡುವರಾಗಿ
ದೇಶಕ್ಕೆ ಕರ್ತವ್ಯ ಸಲ್ಲಿಪರಾಗಿ
ಸಮಸ್ತ ಸೃಷ್ಟಿಯ ರಕ್ಷಿಪರಾಗಿ
ಅನುದಿನ ದೇವಗೆ ವಂದಿಪರಾಗಿ ||1||

8 ಅಭಿನಯ ಗೀತೆಗಳು

8.1 ಆತೆ ಕಾತೆ ನೋವ –2
ಹೆ ಮಿಸ ದೇಮಿಸ
ದುಲ್ಲಾ ಮಿಸ ದೆ
ಹೆಕ್ಸ್ ಕಲ ಮಿಕ್ಸ್ ಓಟ 2–ಆತೆ

8.2 ದೊ (4) ದೊರ ಮಿರೆದಂ
ರೆ (4) ರೇ ಮಿ ಫಮಿರೆ
ಮಿ (4) ಮಿ ಫ ಸೋ ಫ
ಮೀ...ರೆ...ದೋ
ದೊ=ಕೆಳಗೈ ರೆ=ಮೇಲ್ಗೈ ಮಿ=ಸೊಂಟ
ಫ=ಭುಜ

8.3 ಓ ಮೈ ಚೆ ಚೆ (2)
ಚಕ್ ಚಕ್ ಗೊರೆ (2) ಚೆಕೊರಿಸ್ (2)
ಸರಿಸ ಮಾಂಗ (2)

9. ಮುಕ್ತಾಯ ಗೀತೆ

9.1 ಸಾಫ್ಟ್‌ಲಿ ಎಟ್ ದ ಕ್ಲೋಸ್ ಆಫ್ ಡೇ

ಎಸ್ ದ ಕ್ಯಾಂಪ್ ಫೈರ್ ಫೇಡ್ಸ್ ಅವೇ
ಸೈಲೆಂಟಲಿ ಈಚ್ ಗೈಡ್ ಷುಡ್ ಆಸ್ಕ್
ಹ್ಯಾವ್ ಐ ಡನ್ ಮೈ ಡೇಲಿ ಟಾಸ್ಕ್
ಹ್ಯಾವ್ ಐ ಕೆಪ್ಟ್ ಮೈ ಆನರ್ ಬ್ರೈಟ್
ಕೆನ್ ಐ ಗಿಲ್ಟ್‌ಲೆಸ್ ಸ್ಲೀಪ್ ಟು ನೈಟ್
ಹ್ಯಾವ್ ಐ ಡನ್ ಅಂಡ್ ಹ್ಯಾವ್ ಐ ಡೇರ್ಡ್
ಎವ್ರಿ ಥಿಂಗ್ ಟು ಬಿ ಪ್ರಿಪೇರ್ಡ್

9.2 ಡೆ ಈಸ್ ಡನ್, ಗಾನ್ ದ ಸನ್

ಫ್ರಂ ದ ಸೀ, ಫ್ರಂಮ್ ದಿ ಹಿಲ್ಸ್
ಫ್ರಂ ದ ಸ್ಕೈ, ಆಲ್ ಈಸ್ ವೆಲ್
ಸೇಫ್ ಲಿ ರೆಸ್ಟ್, ಗಾಡ್ ಈಸ್ ನೈ ॥

9.3 ದಿನವಾಯಿತು, ರವಿ ಹೋದನು

ಸಮುದ್ರದಿಂ, ಪರ್ವತದಿಂ
ಆಕಾಶ ದಿಂ, ಎಲ್ಲಾ ತೃಪ್ತಿಕರ
ನಿಶ್ಚಿಂತೆಯಿಂ ನಿದ್ರೈ, ದೇವ ಕಾಯ್ವನು

9.4 ಸಾಂಜ್ ಹುಯೀ, ಸೂರಜ್ ಡೂಬಾ

ಸಾಗರ್ ಸೋಯಾ, ಧರ್ತೀ ಸೋಯೀ
ಅಂಬರ್ ಸೋಯ, ನಿರ್ವಿಘ್ನ ಹೋ
ತುಂಬೀ ಸೋ, ಪ್ರಭು ಹೈ ಪಾಸ್

ತಿರಂಗ ಲೆಹರಾಯೆ

ತಿರಂಗ ಲೆಹರಾಯೇ (3)
ಧರತಿ ಹಮಾರಿ ಹೈ
ಅಂಬರ್ ಹಮಾರ ಹೈ (2)
ನವ ಜೀವನ್ ಹಮಾರ ಹೈ

1. ಆಜ್ ಹಿಂಧಕಿ ಧರತಿ ಪರ್
ಉತರೆ ಚಾಂದ್ ಸಿತಾರೆ
ಮೈ ತುಝುಪೆ ಬಲಿಜಾಊಂ
ಮಸ್ತ ಬದರವಾ ಕರೆ
ಚಮನ್ ದಿವಾನಾ ಹೈ (2) ॥ಧರತಿ॥

2. ಭಾರತ ಮಾಂಕೆ ಲಾಲ್ ವೀರ್ ಹಮ್
ಹೋಂಗೆ ಹರ್‌ದಮ್ ನ್ಯಾರೆ
ಝುನ್ಸಿ ಕಿ ರಾನಿಕೆ ಜೈಸೆ
ಪಕಡಕೆ ದುಷಮನ್ ಮಾರೆ
ಉಸೀ ಪಥ ಜಾನಾ ಹೈ (2) ॥ಧರತಿ॥

ನಾವೆಲ್ಲರೂ ಒಂದಾಗಿ ಬಾಳೋಣ ಬನ್ನಿ

ನಾವೆಲ್ಲರೂ ಒಂದಾಗಿ ಬಾಳೋಣ ಬನ್ನಿ
ನಾವಿಂದು ಹೊಸ ನಾಡ ಕಟ್ಟೋಣ ಬನ್ನಿ

1. ಶಕ್ತಿಯು ಶಾಂತಿಯು ಸದ್ಭಾವದಲ್ಲಿ
ಯುಕ್ತಿಯು ಮುಕ್ತಿಯು ಸೌಹಾರ್ದದಲ್ಲಿ
ನಲಿಯುತ್ತಾ ಮುಂದೆ ಸಾಗೋಣ ಬನ್ನಿ
ನಾವಿಂದು ಹೊಸನಾಡ ಕಟ್ಟೋಣ ಬನ್ನಿ॥ನಾವೆಲ್ಲರು॥

2. ರವಿ ಚಂದ್ರರೊಂದೇ ನೆಲಜಲವು ಒಂದೇ
ಧರ್ಮಾಗಳೊಂದೇ ಜಲಬಲವು ಒಂದೇ
ಏಕತೆಯ ಈ ಹಾಡು ಹಾಡೋಣ
ನಾವಿಂದು ಹೊಸನಾಡ ಕಟ್ಟೋಣ ಬನ್ನಿ
॥ನಾವೆಲ್ಲರು॥

ಸೂಚನೆ : ಇವುಗಳು ಗೈಡ್‌ನ ಅಂತರ್‌ರಾಷ್ಟ್ರೀಯ ಹಾಗೂ ಸಾಂಪ್ರದಾಯಿಕ ಗೀತೆಗಳು. ಇವುಗಳಲ್ಲದೆ ಹೇಳಿಕೊಡಬೇಕಾದ ದೇಶ ಭಕ್ತಿ ಗೀತೆ, ಜಾನಪದ ಗೀತೆ, ಅಭಿನಯ ಗೀತೆಗಳನ್ನು ನಿಮ್ಮ ಆಯ್ಕೆಗೆ ಬಿಡಲಾಗಿದೆ.

ಭಾರತ್ ಸ್ಕೌಟ್ ಮತ್ತು ಗೈಡ್ಸ್, ಕರ್ನಾಟಕ, ಬೆಂಗಳೂರು
ಗೈಡ್ ಶಿಕ್ಷಕಿಯರ ಮೂಲ ತರಬೇತಿ
ರಸಪ್ರಶ್ನೆ ಮಾದರಿ

1. ಗರ್ಲ್ ಗೈಡ್ ಶತಮಾನೋತ್ಸವ ಆಚರಿಸಿದ ದಿನ ....

2. ಗರ್ಲ್ ಸ್ಕೌಟಿಂಗ್ ಅನ್ನು ಪ್ರಾರಂಭಿಸಿದವರು ....

3. ಸ್ಕೌಟಿಂಗ್ ಅನ್ನು ದೇಶ ವಿದೇಶಗಳಲ್ಲಿ ಪ್ರಸಾರ ಮಾಡಿದ್ದು ....

4. ಪ್ರತಿಜ್ಞೆ ಬರೆಯಿರಿ

5. ಸ್ಕೌಟಿಂಗ್‌ನ ಸಂಸ್ಥಾಪಕರು ....

6. ಒಂದು ನಿಯಮದಲ್ಲಿರುವ ಅಂಶಗಳ ಸಂಖ್ಯೆ ....

7. ಎಡಗೈ ಹಸ್ತಲಾಘವವನ್ನು ಬಿ.ಪಿ.ಯವರಿಗೆ ನೀಡಿದವರು ....

8. ಸದಸ್ಯತ್ವ ಪದಕದಲ್ಲಿರುವ (ಪ್ರವೇಶ ಪದಕ) ಚಕ್ರದ ಸಂಕೇತ ....

9. ಸ್ಕೌಟ್-ಗೈಡ್ ಸಂಕೇತ ಮಾಡುವ ಮುಖ್ಯ ಸಂದರ್ಭಗಳು ....

10. ವಿಶ್ವ ಸ್ಕೌಟ್-ಗೈಡ್ ಲಾಂಛನದಲ್ಲಿರುವ ಎರಡು ನಕ್ಷತ್ರಗಳು .... ಪ್ರತಿನಿಧಿಸುವುದು.

11. ಧ್ವಜಾರೋಹಣದಲ್ಲಿ ಧ್ವಜ ಹಾರಿಸುವವರ ಹೆಸರು ....

12. ಪರಸ್ಪರರು ಒಂದಾಗಿ ಬಾಳುವ ಬುದ್ಧಿ ನೀಡು ಎಂಬ ಪ್ರಾರ್ಥನೆಯ ಸಾಲು ....

....

13. ರಾಷ್ಟ್ರಗೀತೆ ಹಾಡುವಾಗ ನಿಲ್ಲುವ ಭಂಗಿ ....

14. ಬಿ.ಪಿ. ಸಿಕ್ಸ್ ವ್ಯಾಯಾಮದಲ್ಲಿ 'ಥ್ಯಾಂಕ್ಸ್' ಹೇಳುವ ವ್ಯಾಯಾಮದ ಸಂಖ್ಯೆ ....

15. ಅಷ್ಟಕ ಸಭೆ ಅಧ್ಯಕ್ಷರು ....

16. ಗೌರವ ದಳ ಸಭೆಯ ಅಧ್ಯಕ್ಷರನ್ನು ಆಯ್ಕೆ ಮಾಡುವವರು ....

17. ಪ್ರಥಮ ಚಿಕಿತ್ಸೆಯಲ್ಲಿ ಬಳಸುವ ಗಂಟುಗಳು ....

18. ಈ ವನ ಕೌಶಲ ಸಂಕೇತದ ಅರ್ಥ ....

19. ಎರಡು ದಂಡ ಜೋಡಿಸುವ ಒಂದು ಮತ್ತು ಎರಡನೆ 1. .... 2. .... ಕಟ್ಟುಗಳು.

20. ಇದುವರೆಗೂ ತರಬೇತಿಯಲ್ಲಿ ನಿಮಗೆ ಬಹಳ ಉಪಯುಕ್ತವೆನಿಸಿದ ಎರಡು ಪ್ರವಚನಗಳು

1. .... 2. ....

21. ರಾಷ್ಟ್ರೀಯ ಭಾವೈಕ್ಯತೆಗಾಗಿ ಸ್ಕೌಟ್-ಗೈಡ್‌ನಲ್ಲಿರುವ ಒಂದು ಕಾರ್ಯಕ್ರಮ ....

22. ಗ್ಯಾಸ್ ಸೋರಿ ಅಡುಗೆ ಮನೆಯಲ್ಲಿ ವಾಸನೆ ಬರುತ್ತಿದ್ದರೆ ತಕ್ಷಣ ನೀವು ಮಾಡಬೇಕಾದುದು ....

....

23. ಶಿಬಿರಾಗ್ನಿಗೆ ಕಟ್ಟಿಗೆ ಜೋಡಿಸುವ ಆಕಾರದ ಹೆಸರು ....

24. ದಿಕ್ಸೂಚಿಯಲ್ಲಿ 22.5% ಅಂತರದಲ್ಲಿ ಇರುವ ದಿಕ್ಕುಗಳ ಒಟ್ಟು ಸಂಖ್ಯೆ ....

25. ವಸ್ತುವಿನ ದಿಕ್ಕೋನ ಅಳೆಯಲು ಪ್ರಾರಂಭಿಸುವ ದಿಕ್ಕು ....

26. ನಾಲ್ಕು ನಕ್ಷತ್ರಗಳು ಪುಂಜದ ಹೆಸರು ....

27. ಹದಿಮೂರು ನಕ್ಷತ್ರಗಳ ಪುಂಜದ ಹೆಸರು ....

28. ಸಪ್ತರ್ಷಿ ಮಂಡಲದಲ್ಲಿ ಇರುವ ನಕ್ಷತ್ರಗಳ ಸಂಖ್ಯೆ ....

29. ದ್ವಿತೀಯ ಸೋಪಾನ ಎಷ್ಟು ಪ್ರಾವೀಣ್ಯತಾ ಪದಕ ಆಯ್ಕೆ ಮಾಡಬೇಕು ....

....

30. ಚಳವಳಿಯ ಧ್ಯೇಯ ....

31. ಇದುವರೆಗೆ ನೀವು ಮಾಡಿದ ಗೈಡಿಂಗ್ ಕಾರ್ಯಕ್ರಮದಲ್ಲಿ ನಿಮಗೆ ಇಷ್ಟವಾದ ಎರಡು ಅಂಶಗಳು.

1. .... 2. ....

32. ಸುನಾಮಿ ದುರಂತಕ್ಕೆ ವಿಶ್ವವೇ ಸ್ಪಂದಿಸಲು ಕಾರಣ ....

33. ಸಾರ್ವಜನಿಕ ಆಸ್ತಿ ಯಾರದ್ದು? ....

34. ನಾವು ವಾಸಿಸುವ ನೆಲಕ್ಕೆ ನನ್ನ ಕರ್ತವ್ಯ ಇದೆ, ಇದರ ಮೇಲೆ ನನ್ನ ಹಕ್ಕು ಇದೆ, ನಾನು ಈ ನೆಲದ ....

....

35. ನನ್ನ ದೇಶಕ್ಕಾಗಿ ನಾನು ಮಾಡಬಯಸುವ ಒಂದು ಕೆಲಸ ....

36. ಹಕ್ಕನ್ನು ಪಡೆಯಬೇಕಾದರೆ .... ನ್ನು ನಿರ್ವಹಿಸಬೇಕು.

37. ಮೂಲ ಗೈಡ್ ಲಾಂಛನದ ವಿನ್ಯಾಸ ನೀಡಿದವರು ....

38. ನೀಲಿ ಬಣ್ಣದ ಅರ್ಥ ....

39. ಸ್ಕೌಟಿಂಗ್ ಗೈಡಿಂಗ್ ಅನ್ನು ವಿಶ್ವದಾದ್ಯಂತ ಅಭಿವೃದ್ಧಿಗೊಳಿಸಿದ ಮಹಿಳೆ ....

40. ಗೈಡಿಂಗ್ ಸದಸ್ಯತ್ವ ಪಡೆಯಲು .... ಕೊಡಬೇಕು .... ಪಡೆಯಬೇಕು.

ಚಟುವಟಿಕೆ: ಒಂದು ಪಟಾಲಂ ಒಂದು ವಿಷಯದ ಮೇಲೆ 10 ರಸಪ್ರಶ್ನೆ ತಯಾರಿಸಿ.

ಸೂಚನೆ : ಇದನ್ನು ಮಾದರಿಯಾಗಿ ಇಟ್ಟುಕೊಂಡು ದಳದಲ್ಲಿ ಪುನರಾವರ್ತನೆ, ಮೌಲ್ಯಮಾಪನ, ಸ್ಪರ್ಧೆಗಳಿಗಾಗಿ ನೀವೇ ರಸಪ್ರಶ್ನೆಗಳನ್ನು ತಯಾರಿಸಿ.

ಚಿತ್ರಾವಳಿ ರಸಪ್ರಶ್ನೆ

1. ಒಂದೊಂದನ್ನು ಮಿಂಚುಫಲಕ ಮಾಡಿ ರಸಪ್ರಶ್ನೆಗೆ ಬಳಸಬಹುದು.
2. ಇದೇ ಹಾಳೆ / ಈ ರೀತಿಯದೇ ಇನ್ನೊಂದು ಮಾಡಿ ತರಬೇತಿಯ ಅಂತಿಮ ಮೌಲ್ಯಮಾಪನ ಮಾಡಬಹುದು.

1.



ಹೆಸರು ....

2.

ಹೆಸರು ....

ಅರ್ಥ ....

3.



ಹೆಸರು ....

ಉಪಯೋಗ ....

4.



ಹೆಸರು ....

ಮೂಲ ....

5.

ಯಾರು? ....

ಯಾರಿಗೆ? ....

ಮೂಲ ....

ಅರ್ಥ ....

6.

ಹೆಸರು ....

ಅರ್ಥ ....

7.

ಏನು? ....

ಅರ್ಥ ....

8.

ಹೆಸರು ....

ಅರ್ಥ ....

9.

ಏನು ....

ಅರ್ಥ ....

10.

ಹೆಸರು ....

ಅರ್ಥ ....

11.



ಹೆಸರು ....

ಅರ್ಥ ....

12.

ಹೆಸರು ....

ಮಾಡುವ ಸಂದರ್ಭ..............................

13.

ಹೆಸರು ....

ಉಪಯೋಗ ....

ಉತ್ತರ : ಮುಂದಿನ ಪುಟದಲ್ಲಿ

ಉತ್ತರ (ಚಿತ್ರಾವಳಿ ರಸಪ್ರಶ್ನೆ)

1. ಏತಪಾಕ ಒಲೆ (Crane Fire)
2. ಸ್ನೇಹಜ್ವಾಲೆ ಎಲ್ಲರಿಗೂ ಮುಕ್ತ ಪ್ರವೇಶ
3. ಪಟಾಲಂ ಗಂಟು ಹಗ್ಗದ ತುದಿ ಸುರಕ್ಷಗೊಳಿಸಲು
4. ಸದಸ್ಯತ್ವ ಪದಕ WAGGGS, WOSM ರಾಷ್ಟ್ರಧ್ವಜ
5. ಫ್ರೆಂಫೆ ಬಿಪಿಯವರಿಗೆ
6. ಬಂಧಕ ಭಾರತ್ ಸ್ಕೌಟ್ ಮತ್ತು ಭಾರತ್ ಗೈಡ್ ವಿಲೀನ
7. ವನವಿದ್ಯಾ ಸಂಕೇತ ಚಿಕ್ಕ ಕಲ್ಲಿನ ದಿಕ್ಕಿಗೆ ಹೋಗಿ
8. ದಿಕ್ಸೂಚಿ ಉತ್ತರ ದರ್ಶಿನಿ ನೇರವಾಗಿ ಗುರಿಯತ್ತ ಸಾಗಿ
9. ವನವಿದ್ಯಾ ಸಂಕೇತ ಮನೆಗೆ ಹೋಗಿದ್ದೇನೆ
10. ಮೋರ್ಸ್ ಸಂಕೇತ (AN)
11. ತ್ರಿದಳ 3 ದಳ ಪ್ರತಿಜ್ಞೆಯ ಮೂರು ಅಂಶ
12. ಗೈಡ್ ಸಂಕೇತ ಪ್ರತಿಜ್ಞೆ ಸಂಕೇತ
13. ದಿಕ್ಸೂಚಿ ದಿಕ್ಕನ್ನು ತೋರಿಸುತ್ತದೆ

ಪ್ರಾತ್ಯಕ್ಷಿಕ ರಸಪ್ರಶ್ನೆ

* ಹಸ್ತ ಸಂಕೇತ, ಸೀಟಿ ಸಂಕೇತ, ಇವುಗಳಿಂದ ಆಯ್ದು ಒಂದೆರಡು ಮಾಡಿ, ಪ್ರಶಿಕ್ಷಣಾರ್ಥಿಗಳು ಹೇಳಲಿ ಅಥವ ಬರೆಯಲಿ.
* ಆಜ್ಞೆಗಳನ್ನು ನೀಡಿ. ಸಹಾಯಿಕಿ / ಪ್ರಶಿಕ್ಷಣಾರ್ಥಿ / ಗೈಡ್ ಅನುಸರಿಸಲಿ, ಅದರಲ್ಲಿ ತಪ್ಪು ಸರಿಗಳು ಇರಲಿ. ಪ್ರಶಿಕ್ಷಣಾರ್ಥಿಗಳು ತಪ್ಪು ಸರಿ ಎಂದು ಹೇಳಲಿ ಅಥವಾ ಬರೆಯಲಿ.
* ಗಂಟು, ಕಟ್ಟು, ಬ್ಯಾಂಡೇಜ್‌ಗಳನ್ನು ಕಟ್ಟುತ್ತಾ ಹೋಗಿ ಅದರ ಹೆಸರು ಹೇಳಲಿ / ಬರೆಯಲಿ.
* ಮುದ್ರಿತ ಚಿತ್ರ ಸಂಗ್ರಹಸಿ. ಬರ / ಸುನಾಮಿ / ಅಪಘಾತ / ಕ್ರೀಡಾ / ಸಾಹಸ / ಪ್ರಾಣಿ ಪಕ್ಷಿ ಕಾಡುಗಳ / ಮಾಲಿನ್ಯತೆ ಮುಂತಾದವುಗಳ ಬಣ್ಣದ ಮುದ್ರಿತ ಚಿತ್ರ ಸಂಗ್ರಹಿಸಿ, ಇವುಗಳನ್ನು ರಟ್ಟಿಗೆ ಅಂಟಿಸಿಕೊಳ್ಳಿ. ಇದನ್ನು ಪ್ರದರ್ಶಿಸಿ ಸಂದರ್ಭ ಹೇಳಿಸಿ / ಶೀರ್ಷಿಕೆ ಹೇಳಲಿ ಅಥವಾ ಬರೆಯಿಸಿ.
* ಕೊನೆಯ ದಿನ ಒಂದೊಂದು ಹಾಳೆಯಲ್ಲಿ ಒಂದು ತರಬೇತಿ ವಿಷಯ ಬರೆಯಿರಿ. ಉದಾಹರಣೆಗೆ ಮೂಲಸಿದ್ಧಾಂತ, ಇತಿಹಾಸ, ಗಂಟುಕಟ್ಟು, ಸಮಾರಂಭ, ಸಂಘಟನೆ ಇತ್ಯಾದಿ ಬರೆದು, ಹಾಳೆ ಪ್ರತಿಯೊಬ್ಬರಿಗೂ ಪಾಸ್ ಮಾಡಿಸಿ, ಒಬ್ಬೊಬ್ಬರು ಈ ವಿಷಯ ಕುರಿತು ಅವರ ನೆನಪಿನಲ್ಲಿರುವ ಒಂದು ಮುಖ್ಯಾಂಶ ಬರೆಯಿರಿ. ಇದು ತರಬೇತಿಯ ಮೌಲ್ಯಮಾಪನವಾಗುತ್ತದೆ. ಇದು ನಮ್ಮ ತರಬೇತಿ ಕೈಗನ್ನಡಿಯು ಆಗುತ್ತದೆ.
* ಹಾಡುಗಳನ್ನು (ಪ್ರಾರ್ಥನೆ, ಧ್ವಜಗೀತೆ, ರಾಷ್ಟ್ರಗೀತೆ, ಸಾಮಾನ್ಯ ಸಮುದಾಯ ಗೀತೆ ಇತ್ಯಾದಿ) ಸಾಹಿತ್ಯವಿಲ್ಲದೆ ಗುನುಗಿಸಿ, ಮೊಬೈಲ್ ರೆಕಾರ್ಡ್ ಮಾಡಿ ಕೇಳಿಸಿ, ರಾಗ ಗುರುತಿಸಿ ಸಾಹಿತ್ಯ ಹೇಳಲಿ.

ಆಧಾರ ಪುಸ್ತಕಗಳು

ರಾಷ್ಟ್ರೀಯ ಸಂಸ್ಥೆ ಪ್ರಕಟಣೆ

* Scouting for Boys
* Girl Guiding in India
* Rules Book
* APRO Part-I
* APRO Part-III
* Life history of B.P.
* Magazine

ರಾಜ್ಯ ಸಂಸ್ಥೆ ಪ್ರಕಟಣೆ

* ಬಾಲಕರಿಗಾಗಿ ಸ್ಕೌಟಿಂಗ್
* ಗರ್ಲ್‌ಗೈಡ್ ಮಾರ್ಗದರ್ಶಿ
* ಮಾಸಿಕ

Internet information & photos

ರಾಷ್ಟ್ರ ಧ್ವಜ

ರಾಷ್ಟ್ರ ಧ್ವಜ ಲಾಂಛನ



ಭಾರತ್ ಸ್ಕೌಟ್ ಮತ್ತು ಗೈಡ್ ಧ್ವಜ

ಭಾರತ್ ಸ್ಕೌಟ್ ಮತ್ತು
ಗೈಡ್ ಲಾಂಛನ



ವಿಶ್ವ ಗೈಡ್ ಧ್ವಜ

ವಿಶ್ವ ಗೈಡ್ ಲಾಂಛನ


SHEEP SHANK
TIMBER HITCH
SINGLE DIAMOND KNOT
MANROPE KNOT
DOUBLE DIAMOND KNOT
FIGURE OF 8 KNOT
OVERHAND KNOT
BOWLINE
DOUBLE SHEET BEND
CROWN KNOT
BOWLINE ON THE BIGHT
FISHERMAN'S BEND
SWAB HITCH
REEF KNOT
CARRICK BEND
DOUBLE BLACKWALL HITCH